ಅಪರಂಜಿ

ತಿಳಿನಗೆಯ ಕಾರಂಜಿ



ವಿಶೇಷ ಸಂಚಿಕೆ

ಜನವರಿ - 2010

ಕ್ರಿಕೆಟಿಗರಿಗೆ ವಿನೂತನ ರಕ್ಷಣೆ






ಬಿಡಿ ಪ್ರತಿ: ರೂ. 20.00

ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 27
ಸಂಚಿಕೆ - 4
ಜನವರಿ - 2010

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

ನಮ್ಮ ನಿಮ್ಮಲ್ಲಿ

ಮೊನ್ನೆ ನನ್ನ ಗೆಳೆಯ ವಾಸು ಸಿಕ್ಕಿದ್ದ. ಚಿಕ್ಕಂದಿನಲ್ಲಿ ನಾವಿಬ್ಬರೂ ಒಂದೇ ಸ್ಕೂಲಿನಲ್ಲಿ ಓದಿದ್ದು. ಆಮೇಲೆ ಅವನು ಅಮೆರಿಕಾ, ಕೆನಡಾ ಅಂತ ವಿಶ್ವ ಪರ್ಯಟನೆ ಮಾಡಿ ಖ್ಯಾತ ವಿಜ್ಞಾನಿಯಾಗಿ, ದೆಹಲಿಯಲ್ಲಿ ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿ ಈಗ ಬೆಂಗಳೂರಿನಲ್ಲಿ ಪ್ರವೃತ್ತಿ ಜೀವನವನ್ನ ನಡೆಸುತ್ತಿದ್ದಾನೆ. ಮೊನ್ನೆ ಅವನೊಂದಿಗೆ ಅದೂ ಇದೂ ಹರಟುತ್ತಿದ್ದಾಗ, ಬೆಂಗಳೂರಿನ ರಸ್ತೆಗಳ ವಿಷಯ ಬಂತು. 'ಏನೋ ವಾಸು ನಮ್ಮ ದೇಶದಲ್ಲಿ ಇಷ್ಟೆಲ್ಲಾ ಟೆಕ್ನಾಲಜಿ ಇದೆ, ಚಂದ್ರನಿಗೆ ಗುರಿಯಿಟ್ಟು ಸ್ಯಾಟಲೈಟ್ ಎಸೀತೀವಿ, ಅಂತೆಲ್ಲಾ ಜಂಭ ಕೊಚ್ಚಿಕ್ಕೋತೀವಲ್ಲಾ, ಪಾಟ್‌ಹೋಲ್ ಇಲ್ಲದೇ ಇರೋ ಒಂದು ರಸ್ತೆ ಮಾಡುಕ್ಕೆ ಬರುಲ್ಲವಲ್ಲಾ ನಮಗೆ?' ಅಂತ ಒಂದು ರ್ಹೆಟಾರಿಕ್ ಪ್ರಶ್ನೆ ಕೇಳಿದೆ.

ವಾಸು ಒಂದು ನಿಮಿಷ ಸುಮ್ಮನಿದ್ದು ಆಮೇಲೆ ನಿಧಾನವಾಗಿ ಹೇಳುಕ್ಕೆ ಶುರು ಮಾಡಿದ.

'ಶಿವು, ಇದು ಟೆಕ್ನಾಲಜಿ ಸಮಸ್ಯೆ ಅಲ್ಲವೇ ಅಲ್ಲ. ಸಮಸ್ಯೆ ಇರೋದು ಇಂಚುಗಳ ವಿತರಣೇಲಿ. ಇಂಚುಗಳ ವಿತರಣೆ ಸರಿಯಾಗಿ ಮಾಡೋದನ್ನ ಕಲಿತರೆ ಪಾಟ್‌ಹೋಲ್ ಗಳೆಲ್ಲಾ ಉದಯರವಿಯ ರಶ್ಮಿಯಲ್ಲಿ ಕರಗುವ ಮಂಜಿನಂತೆ ಕರಗಿಹೋಗುತ್ತವೆ' ಅಂತ ಬಹು ಕಲಾತ್ಮಕವಾಗಿ ಹೇಳಿದ.

'ಇಂಚುಗಳ ವಿತರಣೇನೆ? ಹಾಗೆಂದರೇನೋ?' ಅಂತ ನಾನು ಕೇಳಿದೆ. ಅವ ಹೇಳುಕ್ಕೆ ಪ್ರಾರಂಭಿಸಿದ.

'ಕೆಲವು ವರ್ಷಗಳ ಹಿಂದೆ ನಮ್ಮ ಘನ ಸರ್ಕಾರ ರಸ್ತೆಗಳ ಗುಣಮಟ್ಟದ ಪರಿಶೀಲನೆಗೆ ಒಂದು ಮೂರು ಜನ ತಜ್ಞರ ಸಮಿತಿ ರಚಿಸಿತ್ತು. ಅದಕ್ಕೆ ನಾನೇ ಅಧ್ಯಕ್ಷ. ಸುತ್ತಿ ಬಳಸಿ ಸರ್ಕಾರೀ ಅಧಿಕಾರಿಗಳನ್ನು ಪ್ರಶ್ನಿಸೋ ಬದಲು, ನೇರವಾಗಿ ಒಬ್ಬ ಹಿರಿಯ ಸರ್ಕಾರೀ ಕಂಟ್ರಾಕ್ಟರನ್ನೇ ಕರೆಸಿದೆ. ಅವ ನನಗೆ ಹಳೆಯ ಪರಿಚಯಸ್ಥ ಕೂಡ. ಹಾಗಾಗಿ ನನ್ನ ಬಳಿ ಆತನಿಗೆ ಸಲುಗೆ. 'ಏನಯ್ಯಾ ನೀನು ಮಾಡಿರೋ ರಸ್ತೆಗಳೆಲ್ಲಾ ಕಳಪೆ ಅಂತ ದೂರು ಬಂದಿದೆ. ಏನ್ಹೇಳ್ತೀಯಾ?' ಅಂತ ನೇರವಾಗಿ ಕೇಳಿದೆ. ಅವ ಧೃತಿಗೆಡಲಿಲ್ಲ. 'ಕಳಪೆ ಅಂತ ಹೇಗೆ ಹೇಳ್ತೀರಾ?' ಅಂತ ನನ್ನನ್ನೇ ಕೇಳಿದ.

'ಅಂತರ ರಾಷ್ಟ್ರೀಯ ಗುಣಮಟ್ಟದ ನಿಯಮಗಳ ಪ್ರಕಾರ ರಸ್ತೆಯ ಮೇಲೆ ಹಾಕುವ ಮಕಡಂನ ದಪ್ಪ ಹತ್ತು ಇಂಚು ಇರಬೇಕು. ಮೊನ್ನೆ ನಮ್ಮ ಪರೀಕ್ಷಕರು ರಸ್ತೆ ಮಕಡಂನ ದಪ್ಪವನ್ನ ಅನೇಕ ಕಡೆ ಪರಿಶೀಲಿಸಿದರು. ಎಲ್ಲೂ ಅದು ನಾಲ್ಕು ಇಂಚಿಗೆ ಹೆಚ್ಚಿಗೆ ಇರಲಿಲ್ಲ. ಇಗೋ ನೋಡಿ ಅವರ ಪರಿಶೀಲನಾ ವರದಿ. ಅಂತ ಅವನಿಗೊಂದು ಸವಾಲನ್ನು ಎಸೆದೆ.

ಆವ ಸ್ಥಿತಪ್ರಜ್ಞನಂತೆ ಕುಳಿತಿದ್ದ. ನಾನು ಕೊಟ್ಟ ಪರಿಶೀಲನಾ ವರದಿಯನ್ನು ಬದಿಗೆ ಸರಿಸಿ ತನ್ನ ಲ್ಯಾಪ್‌ಟಾಪ್ ತೆಗೆದ.

ಅದರ ತೆರೆಯ ಮೇಲೆ ಒಂದು ಎಕ್ಸೆಲ್ ವರ್ಕ್‌ಷೀಟ್ ತೆರೆದುಕೊಂಡಿತ್ತು.

'ನೋಡು ವಾಸು ಈ ಷೀಟಿನಲ್ಲಿ ನಿನ್ನ ಹತ್ತು ಇಂಚು ದಪ್ಪದ ಮಕಡಂನ ಸಂಪೂರ್ಣ ಮಾಹಿತಿ ಇದೆ. ನೀನೇ ನೋಡು' ಅಂತ ಹೇಳಿ ಲ್ಯಾಪ್‌ಟಾಪ್ ನ ತೆರೆಯನ್ನು ನನ್ನ ಕಡೆ ತಿರುಗಿಸಿ ಹಿಂದಕ್ಕೆ ಒರಗಿ ಕುಳಿತ.

ನಾನು ನೋಡಿದೆ.

ಷೀಟಿನ ತಲೆಬರಹ 'ಇಂಚುಗಳ ವಿತರಣೆ' ಅಂತ ಇತ್ತು. ಅದರ ಕೆಳಗೆ

ಸರ್ಕಾರೀ ಸೂಪರ್ ವೈಸರ್	ಅರ್ಧ ಇಂಚು
ಅಸಿಸ್ಟೆಂಟ್ ಮ್ಯಾನೇಜರ್	ಮುಕ್ಕಾಲು ಇಂಚು.
ಇಂಜಿನಿಯರ್	ಒಂದು ಇಂಚು
ಚೀಫ್ ಇಂಜಿನಿಯರ್	ಒಂದೂವರೆ ಇಂಚು
ಮಂತ್ರಿಗಳು	ಎರಡು ಇಂಚು
ರಸ್ತೆ ದಪ್ಪ	ನಾಲ್ಕು ಇಂಚು
ಒಟ್ಟು ದಪ್ಪ	ಹತ್ತು ಇಂಚು

ಅವನ ಲೆಕ್ಕದಲ್ಲಿ ಕಾಲು ಇಂಚಿಗೆ ಲೆಕ್ಕ ಇರಲಿಲ್ಲ. ಅದರ ಬಗ್ಗೆ ಕೇಳಿದೆ. ಇಷ್ಟೆಲ್ಲಾ ವಿತರಣೆ ಮಾಡಿದ್ದಕ್ಕೆ ಕೂಲಿ ಬೇಡವೇನಯ್ಯಾ ಅಂತ ನನ್ನನ್ನೇ ದಬಾಯಿಸಿದ. ವಾಸು ಹೇಳಿದ ಇಂಚುಗಳ ವಿತರಣೆ ಬಗ್ಗೆ ವಿವರಣೆ ಕೇಳಿ ದಿಗ್ಮೂಢನಾದೆ.

★★★

ಈ ಸಾಲಿನ ಪ.ರಮಾನಂದರಾವ್ ಹಾಸ್ಯಲೇಖನ ಸ್ಪರ್ಧೆಯ ಮೌಲ್ಯಮಾಪನ ಕಾರ್ಯವನ್ನು ಬಹು ದಕ್ಷತೆಯಿಂದ ನಡೆಸಿಕೊಟ್ಟಿರುವ ಸೋದರಿ ಭುವನೇಶ್ವರಿ ಹೆಗಡೆಯವರಿಗೆ ಅಪರಂಜಿಯ ಪ್ರಥಮ ನಮನ. ಸ್ಪರ್ಧೆಯ ಬಹುಮಾನ ವಿಜೇತರೆಲ್ಲರಿಗೂ ನಮ್ಮ ಅಭಿನಂದನೆಗಳು.

ಈ ಬಾರಿಯ ವಿಶೇಷಾಂಕದ ತಯಾರಿಯ ಜವಾಬ್ದಾರಿಯನ್ನು ಗೆಳೆಯ ಗೋಪಾಲ್ ಹೊತ್ತಿದ್ದಾರೆ. ಅವರ ಕರೆಗೆ ಸ್ಪಂದಿಸಿ ಈ ವಿಶೇಷಾಂಕಕ್ಕೆ ಲೇಖನಗಳ ಮಹಾಪೂರವೇ ಹರಿದುಬಂದಿದೆ. ಸ್ಥಳಾಭಾವದ ಕಾರಣ ಕೆಲವು ಲೇಖನಗಳನ್ನು ಮುಂದಿನ ಸಂಚಿಕೆಗಳಲ್ಲಿ ಬಳಸಿಕೊಳ್ಳುತ್ತೇವೆ. ಲೇಖನಗಳನ್ನು ಕಳುಹಿಸಿರುವ ಎಲ್ಲ ಸಹೃದಯರಿಗೂ ನಮ್ಮ ಕೃತಜ್ಞತೆಗಳು. ಎಂದಿನಂತೆ ಸಂಚಿಕೆಯನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿರುವ ಒಮೇಗಾದ ವಸಂತಾ ಹಾಗೂ ರವಿ ಗ್ರಾಫಿಕ್ಸ್‌ನ ನಾರಾಯಣ್ ಅವರಿಗೆ ಅಪರಂಜಿ ಆಭಾರಿ. ಹೊಸವರುಷ ಎಲ್ಲರಿಗೂ ಶುಭದಾಯಕವಾಗಿರಲೆಂದು ಅಪರಂಜಿ ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ.

• ಶಿವಕುಮಾರ್



○ ಪ್ರಕಾಶ್

ಸಿ.ಬಿ.ಐ. ತನಿಖೆಗೆ ಗಣಿ ಅಕ್ರಮ – ಸುದ್ದಿ

• ಲಂಚದ ಮೋಡ, ನ್ಯಾಯದ ಮಿಂಚು !?

★★★

ಉದ್ಯಾನವನದಲ್ಲಿ ಅಕ್ರಮ ದೇವಸ್ಥಾನ – ಪತ್ರಿಕೆ

• ಅಯ್ಯೋ ದೇವರೆ !!

★★★

ಅಧಿಕಾರದಾಸೆ ಇರುವ ಮುಖಂಡರು ಪಕ್ಷಕ್ಕೆ ಬೇಡ – ಬಿ.ಜೆ.ಪಿ. ಹೇಳಿಕೆ

• ಹಾಗಾದರೆ ಯಾರೂ ಉಳಿಯುವುದಿಲ್ಲ!!

★★★

ಚಿನ್ನದ ಬೆಲೆ ಭಾರಿ ಕುಸಿತ – ವಾಣಿಜ್ಯ ವಾರ್ತೆ

• ನಮಗೇನೂ ಲಾಭವಿಲ್ಲ!?

★★★

ನನ್ನ ಶಾಶ್ವತ ವೃತ್ತಿ ಕೃಷಿ, ರಾಜಕೀಯ ತಾತ್ಕಾಲಿಕ – ಮಾಜೀ ಪ್ರಧಾನಿ

• ನಾವೆಲ್ಲ ಒಂದು ರೀತಿ 'ತಾತ್ಕಾಲಿಕ' ಅಂತ ಅಪರಂಜಿ ಹುಬ್ಬೇರಿಸಿದಳಂತೆ !!

★★★

'ಅಧಿಕಾರ ಶಾಶ್ವತವಲ್ಲ' – ಸಿ.ಎಂ.

• ಹಾಗೇ ಕಾಣುತ್ತೆ !!

★★★

ನಾಳೆ ವಿದ್ಯುತ್ ವ್ಯತ್ಯಯ – ಸುದ್ದಿ

• ಕತ್ತಲಲ್ಲಿ ಸುದ್ದಿ ಓದೋದು ಹೇಗೆ ?!

★★★

ನಿರಂತರ ಆಲೋಚನೆಯ ಆಕ್ರಮಣದ ಎದುರು ಯಾವ ಸಮಸ್ಯೆಯೂ ನಿಲ್ಲಲಾರದು – ವಾಲ್ಟೇರ್


• ಇದನ್ನ ನಮ್ಮ ರಾಜಕಾರಣಿಗಳಿಗೆ ಹೇಳಬೇಕು

★★★

ಬಳ್ಳಾರಿ ವಿಮಾನ ನಿಲ್ದಾಣ ಭೂಸ್ವಾಧೀನಕ್ಕೆ ವಿರೋಧ – ಪತ್ರಿಕೆ

• ಗಣಿಯಲ್ಲಿ ಆದುರಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು !?

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

• ಕೃಷ್ಣ ಸುಬ್ಬರಾವ್

ನಿವೃತ್ತಿ ಅನೇಕರಿಗೆ ದುಃಸ್ವಪ್ನ. ಅಂತಹ ದುಃಸ್ವಪ್ನದ ಕನಸನ್ನೇ ಡಾ|| ಪಿ.ಎಸ್. ರಾಮಾನುಜಂ ಕಾಣುತ್ತಾರೆ, ಅಚ್ಚುಕಟ್ಟಾಗಿ ನಮ್ಮೆಲ್ಲರಿಗೂ ಕಾಣಿಸುತ್ತಾರೆ. ಭವಿಷ್ಯದ ಯೋಜನೆಗಳನ್ನು ರೂಪಿಸುವುದರಲ್ಲಿ ಪೋಲಿಸ್ ದಂಡನಾಯಕರಿಗೆ ಹೇಳಿಕೊಡಬೇಕೆ? ಎಲ್ಲವನ್ನೂ ಮುಂಚಿನಿಂದಲೇ ಪ್ಲಾನ್ ಮಾಡುವ ಪ್ರವೃತ್ತಿ ಸಹಜವಾಗಿ ಬಂದಿರುತ್ತದೆ. ನಿವೃತ್ತರಾದ ನಂತರ ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕೆಂಬ ಜಿಜ್ಞಾಸೆಗೆ ಅವರೂ ಒಳಗಾಗುತ್ತಾರೆ. ಬೇಕಾದಷ್ಟು ಆಪ್ಷನ್ ಕಣ್ಣೆದುರಿಗೆ ಬರುತ್ತೆ ಆದರ ಹಿಂದೆಯೇ ಉಪಜೀವಿಕೆ (ಅವರಿಗಿಷ್ಟವಾದ ಪದ) ಯ ಸಾಧಕ ಭಾದಕಗಳು ಕಾಣಿಸಿಕೊಂಡು, ಅಂತಹ ಕೆಲಸ ತಮ್ಮಂತಹವರಿಗೆ ಅಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಸಾಮಾನ್ಯವಾಗಿ ವೃತ್ತಿಗೆ ಸಂಬಂಧಪಟ್ಟ ಕೆಲಸಗಳಿಗೆ ನಿವೃತ್ತಿ ನಂತರ ಹೋಗುವುದು ವಾಡಿಕೆ. ಹೀಗಾಗಿ ಪೊಲೀಸ್ ಆಗಿದ್ದಕ್ಕೆ ಖಾಸಗೀ ಪತ್ತೇದಾರಿ ಸಂಸ್ಥೆ ಸ್ಥಾಪಿಸುವ ಯೋಚನೆಯೂ ಬರುತ್ತದೆ. ಆದರೆ ಬೇರೆಯವರನ್ನು ಕಾವಲು ಕಾಯುವುದು ಬೇಜಾರಿನ ಕೆಲಸ ಅನಿಸುತ್ತೆ. ಕಡೆಗೆ ಒಪ್ಪಿಗೆಯಾದದ್ದು ಬಹಳ ಅಪರೂಪದ, ಆದಾಯ ದೃಷ್ಟಿಯಿಂದಲೂ ಆಕರ್ಷಕವಾದ ಏಜೆನ್ಸಿ ಕೆಲಸ! ಅದ್ಯಾವುದು ಎಂದು ನಾನು ಹೇಳಿ ನಿಮ್ಮ ಕುತೂಹಲವನ್ನು ಕೆಡಿಸುವುದಿಲ್ಲ, ಅದನ್ನು ಓದಿಯೇ ಸವಿಯಬೇಕು. ಲೇಖನ ಬಳಸಿಕೊಳ್ಳಲು ಪರ್ಮಿಷನ್ ಕೇಳಿದಾಗ "ಫೋನಿನಲ್ಲೇ ಸಾಕಾ ಅಥವಾ ಬರೆದು ಕಳುಹಿಸಬೇಕಾ?" ಎಂದರು ಡಾ|| ರಾಮಾನುಜಂ. ಪೊಲೀಸರು ಕೊಡುವ ಆಯ್ಕೆ ಹೇಗೆ ಸ್ವೀಕರಿಸಬೇಕೊ ತಿಳಿಯಲಿಲ್ಲ. ಆದರೂ ಧೈರ್ಯಮಾಡಿ "ನೀವು ಎಲ್ಲದಕ್ಕೂ ದಾಖಲೆ ಕೇಳುವವರು ಅದಕ್ಕೆ..." ಅಂದಿದ್ದಕ್ಕೆ "ಏನ್ ಪರವಾಗಿಲ್ಲ ನಾನೀಗ ನಿವೃತ್ತನಾಗಿದ್ದೇನೆ ಭಯಬೇಡ" ಅಂದಿದ್ದಾರೆ.

ನಿವೃತ್ತ ಜೀವನದ ಕನಸು

• ಡಾ|| ಪಿ.ಎಸ್. ರಾಮಾನುಜಂ

ನಾನು ನಿವೃತ್ತನಾದ ಮೇಲೆ ಯಾವ ಉಪಜೀವಿಕೆಯನ್ನು ಕೈಗೊಳ್ಳಬಹುದು ಎಂಬ ಯೋಚನೆ ನನ್ನ ಮನಸ್ಸಿನಲ್ಲಿ ಸುಳಿಯುತ್ತಲೇ ಇರುತ್ತದೆ. ಕೆಲವರು 'ಲಾ' ಓದಿದರೆ ನಿವೃತ್ತರಾದೊಡನೆ ಲಾಯರಾಗಿಬಿಡುತ್ತಾರೆ. ನಾನು ಲಾ ಓದಲಿಲ್ಲ, ಹಾಗೆ ನೋಡಿದರೆ 'ಇಹ'ಕ್ಕೆ ಉಪಯೋಗವಾಗುವಂತಹ ಯಾವ ವಿಷಯವನ್ನೂ ಓದಲಿಲ್ಲ. ಅಲ್ಪಸ್ವಲ್ಪ ಜ್ಯೋತಿಷ್ಯ ಗೊತ್ತು. ಆದರೆ ಮರದಡಿಯಲ್ಲಿ ಅಂಗೈ ಚಿತ್ರ ಬರೆದು ಮರದ ಕೆಳಗೆ ಕೂರುವುದಕ್ಕೆ ನನ್ನ ಬೆನ್ನುನೋವು ಬಿಡುವುದಿಲ್ಲ. ಅಷ್ಟೇ ಅಲ್ಲದೆ, ಅಂತಹ ದೊಡ್ಡ ಮರ ಸಿಗುವುದೂ ದುರ್ಲಭವೇ. ಛಾಯಾಶೀತಲವಾದ ತರುಮೂಲ ಈ 'ಮರಭಕ್ಷಕ'ರ ನಡುವೆ ಸಿಗುವುದಾದರೂ ಹೇಗೆ? ಒಂದು ವೇಳೆ ಸಿಕ್ಕಿದರೂ ಅದರಡಿ ವೃತ್ತಿಯನ್ನು ನಡೆಸುವ ಚಾಣಾಕ್ಷತನ ನನಗಿಲ್ಲ. ಹೇಳಿದ ಮಾತು ನಡೆಯದಿದ್ದಾಗ ಜನರು ಬಂದು ಪ್ರಶ್ನಿಸುವುದನ್ನು ಜೀರ್ಣಿಸಿಕೊಳ್ಳುವ ತಾಕತ್ತೂ ಇಲ್ಲ. ನನಗೆ ಆಗಾಗ ನಿವೃತ್ತ ಜೀವನದ ಬಗ್ಗೆ ಹೊಸ ಹೊಸ ಉಪಾಯಗಳು ತೋರುತ್ತಿರುತ್ತವೆ. ಸ್ವಲ್ಪ ಕಾಲದ ನಂತರ ಆ ಉಪಾಯಗಳು ನಿಷ್ಪ್ರಯೋಜಕವೆಂದು ಅನಿಸಿ, ನಾನು ನಿರುಪಾಯನಾಗುತ್ತೇನೆ. ಒಮ್ಮೆ ರಾಗೋಪಥಿ ಎಂಬ ಹೊಸ ವೈದ್ಯಪದ್ಧತಿಯನ್ನು ಕಂಡುಹಿಡಿದು, ರಾಗಗಳಿಂದಲೇ ರೋಗಗಳನ್ನು ವಾಸಿ ಮಾಡುವ ಕ್ಲಿನಿಕ್ ಒಂದನ್ನು ನಿವೃತ್ತನಾದ ಮೇಲೆ ಸ್ಥಾಪಿಸುವುದೆಂದು ಯೋಚಿಸಿಕೊಂಡಿದ್ದೆ. ಆದರೆ, ವೈದ್ಯರ ಮೇಲೆ ಗ್ರಾಹಕರು ಈಗ ವ್ಯಾಜ್ಯ ಹೂಡಬಹುದೆಂಬ ಕಾನೂನು ಬಂದಮೇಲೆ ನಾನು ಆ ಆಲೋಚನೆಯನ್ನು ಕೈಬಿಟ್ಟೆ. ಆದರೆ ಮನಸ್ಸು ಇದರ ಬಗ್ಗೆ ಯೋಚಿಸುವುದನ್ನು ಬಿಟ್ಟಿಲ್ಲ. ನಿವೃತ್ತ ಜೀವನಕ್ಕೆ ಏನಾದರೂ ಆಧಾರವನ್ನು ಹುಡುಕಿಕೊಳ್ಳಬೇಕಲ್ಲ.

ನನ್ನ ಹಿತೈಷಿಗಳಲ್ಲಿ ಕೆಲವರು ಪೊಲೀಸಿನಲ್ಲಿದ್ದು ಅವರ ಅನುಭವದಿಂದ ಖಾಸಗೀ ಪತ್ತೇದಾರಿ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಆದರೆ ಅವರೆಲ್ಲ ಬಹುಪಾಲು ದೊಡ್ಡ ಸಂಸ್ಥೆಗಳಿಗೆ ಕಾವಲುಗಾರರನ್ನು ಕೊಟ್ಟು ಅವರನ್ನೆಲ್ಲ ಆಳುವವರು. ನನಗೋ ನನ್ನ ಮನೆಯನ್ನು ಕಾವಲು ಕಾದರೆ ಅಷ್ಟೇ ಸಾಕಾಗಿದೆ. ಊರವರ ಮನೆಯನ್ನೆಲ್ಲ, ಅದೂ ನಿವೃತ್ತನಾದ ಮೇಲೆ ಕಾಯುವುದು ಬಹಳ ಕಷ್ಟ ಅಷ್ಟೆಲ್ಲ ಛಾತಿ ನನಗಿಲ್ಲ ಸ್ವಾಮಿ. ಮತ್ತೆ ಖಾಸಗೀ ಪತ್ತೇದಾರಿಕೆಯೆಂದರೆ ಜನರು ಚಲನಚಿತ್ರಗಳಲ್ಲಿ ಪಾಶ್ಚಾತ್ಯ ಪತ್ತೇದಾರರನ್ನು ನೋಡಿ ಅವರಂತೆಯೇ ನಾವೂ ಎಂದು ಭ್ರಮಿಸಿ ನಮ್ಮಿಂದ ಪವಾಡಗಳನ್ನು ನಿರೀಕ್ಷಿಸುತ್ತಾರೆ. ನಾವೂ

ಕೂಪ ಅದಕ್ಕೆ ಸರಿಯಾದ ವೇಷವನ್ನೂ, ಅಂದರೆ ಹ್ಯಾಟು, ದೊಡ್ಡಕೋಟು, ತಂಪು ಕನ್ನಡಕಗಳನ್ನು ಹಾಕಿಕೊಂಡು ಸಿಗರೇಟು ಸೇದಬೇಕಾಗುತ್ತದೆ. ದೇವರ ಮುಂದೆ ಕೇವಲ ಊದುಕಡ್ಡಿ ಹಿಡಿದುಕೊಂಡು ನಿಂತು ರೂಢಿಯಾಗಿರುವ ನಮ್ಮಂಥಹವರಿಗೆ ಇದೆಲ್ಲ ಆಗದ ಮಾತು. ಆದುದರಿಂದ ಈ 007 ಕೆಲಸ ನನಗೆ ಆಗದಂತಾಯಿತು.

ನಾನು ಓದಿಕೊಂಡಿರುವ ಸಂಸ್ಕೃತದಿಂದ ನನಗೆ ಪೌರೋಹಿತ್ಯವೂ ಲಭ್ಯವಿಲ್ಲ. ನಾನು ಓದಿರುವುದೇ ದರ್ಶನ, ಕಾವ್ಯ ಮುಂತಾದ ವಿಷಯಗಳು. ಪೌರೋಹಿತ್ಯವು ಪ್ರಾಯೋಗಿಕ ಕ್ಷೇತ್ರ. ಸಂಸ್ಕೃತ ಎಂದ ಮಾತ್ರಕ್ಕೆ ಎಲ್ಲ ವಿಷಯಗಳೂ ಬರುವುದಿಲ್ಲ. ಇಂಗ್ಲೀಷ್ ಬರುತ್ತದೆ ಎಂದ ಮಾತ್ರಕ್ಕೆ ಎಂಜಿನಿಯರಿಂಗ್, ಭೌತಶಾಸ್ತ್ರ ಸಾಹಿತ್ಯಗಳೆಲ್ಲವೂ ತಿಳಿದುಬಿಡುತ್ತದೆಯೇ? ನಾನು ವೇದಾಂತ ವಿಚಾರಗಳನ್ನು ಸಂಸ್ಕೃತದಲ್ಲಿ ಓದಿದ್ದು ಜೀವಾತ್ಮ ಪರಮಾತ್ಮ ಜಡ, ಚೇತನ ಎಂದೆಲ್ಲಾ ಚರ್ಚಿಸುತ್ತಾ ಪ್ರಕೃತಿ ಪುರುಷರ ಸಂಬಂಧಗಳನ್ನು ವಿಶ್ಲೇಷಿಸುತ್ತಾ ಯಾವ ಜೀವಿಕೆಯನ್ನು ನಿರ್ವಹಿಸುವುದು? ಇಹ ಬೇಡ, ಪರಕ್ಕೆ ಗಮನ ಕೊಡಿ ಎಂದು ಹೇಳುತ್ತಾ ಕುಳಿತರೆ ಅದನ್ನು ಕೇಳಲು ಯಾರು ತಾನೇ ನನ್ನನ್ನು ಸಂಬಳಕ್ಕೆ ಇಟ್ಟುಕೊಂಡಾರು?

ನಾನು ಇದರ ಬಗ್ಗೆ ದೀರ್ಘವಾಗಿ ಯೋಚಿಸಿ ಕೊನೆಗೆ ಒಂದು ಖಚಿತವಾದ ನಿರ್ಧಾರಕ್ಕೆ ಬಂದಿದ್ದೇನೆ. ಬಾಡಿಗೆ ಮನೆ ಹುಡುಕಿಕೊಡುವ ಎಸ್ಟೇಟ್ ಏಜೆನ್ಸಿಗಳಂತೆ ಭಾಷಣದ ಏಜನ್ಸಿಯೊಂದನ್ನು ತೆರೆಯುವುದೆಂಬುದೇ ಆ ನಿರ್ಧಾರ.

ಇಂತಹ ಏಜೆನ್ಸಿಯ ಕೆಲಸಗಳೇನು ಎಂದು ನೀವು ತಲೆ ಕೆಡಿಸಿಕೊಳ್ಳುತ್ತಿದ್ದೀರಷ್ಟೇ. ಇದರ ಉದ್ದೇಶವನ್ನು ತಿಳಿದುಕೊಂಡರೆ ಕೆಲಸವೇನೆಂಬುದು ತಾನಾಗಿಯೇ ತಿಳಿಯುತ್ತದೆ. ಭಾಷಣಕಾರರ ಭಾರವನ್ನು ಕಡಿಮೆ ಮಾಡಿ ಕೊಡುವುದೇ ಈ ಸಂಸ್ಥೆಯ ಉದ್ದೇಶ. ಆದರೆ ಭಾಷಣ ಮಾಡುವವರಿಗೆ ಅವರ ಭಾಷಣವನ್ನು ತಯಾರು ಮಾಡಿ ಕೊಡುವುದು, ಅದನ್ನು ಓದಲು ಸಾಧ್ಯವಾಗದವರಿಗೆ ನಾವೇ ಹೋಗಿ ಭಾಷಣ ಮಾಡಿಬಿಡುವುದು.

ಈ ಕೆಲಸಕ್ಕೆ ನನಗಿರುವ ಅರ್ಹತೆಗಳ ಬಗ್ಗೆ ಇಲ್ಲಿ ಸ್ವಲ್ಪ ಉಪೋದ್ಘಾತ ರೂಪದಲ್ಲಿ ಹೇಳಬೇಕಾಗುತ್ತದೆ. ನಾನು ನನ್ನ ವ್ಯಾಪ್ತಿಯಲ್ಲಿ ನನ್ನ ಕೆಲಸದ ಸಂಗಡವೇ ಅಥವಾ ನನ್ನ ಕೆಲಸದ ಅಂಗವಾಗಿಯೇ ಅನೇಕ, ಅಂದರೆ ಸಾವಿರಾರು ಭಾಷಣಗಳನ್ನು ಮಾಡಿರುವವನು ಮತ್ತು ಇನ್ನೂ ಮಾಡುತ್ತಿರುವವನು. ಮೀನುಗಾರಿಕೆಯಿಂದ ಹಿಡಿದು ಮತ್ಸ್ಯಾವತಾರದವರೆಗೆ, ದೂರವಾಣಿ ವ್ಯವಸ್ಥೆಯಿಂದ ಹಿಡಿದು ವಿಶ್ವವಿದ್ಯಾಲಯದಲ್ಲಿ ಶಿಕ್ಷಣದವರೆಗೆ ಎಲ್ಲ ವಿಷಯಗಳ ಮೇಲೂ ನಿಶ್ಶಂಕೆಯಿಂದ ನಿರರ್ಗಳವಾಗಿ ಮಾತನಾಡಿರುವವನು. ವಿದ್ಯುಚ್ಛಕ್ತಿ ಇಲಾಖೆ, ಪೊಲೀಸ್ ಇಲಾಖೆ, ಬ್ಯಾಂಕುಗಳು, ಕಾಲೇಜುಗಳು, ಪ್ರೌಢಶಾಲೆಗಳು, ಸಂಗೀತ ನೃತ್ಯ ಸಂಸ್ಥೆಗಳು, ಅಷ್ಟೇಕೆ, ಕುಸ್ತಿ ಸಂಘಗಳು ಮುಂತಾದ ವಿವಿಧ ಕ್ಷೇತ್ರಗಳು, ಎಲ್ಲ ಇಲಾಖೆಗಳು ಮತ್ತು ಅವುಗಳಲ್ಲಿರುವ ಕನ್ನಡ ಸಂಘಗಳು, ಹೀಗೆ ಎಲ್ಲ ಕಡೆಯೂ ಹೋಗಿ ಕಣ್ಣಿಗೆ ಬಿದ್ದ ಎಲ್ಲ ವಿಷಯಗಳ ಬಗ್ಗೆ ಭಾಷಣಗಳನ್ನು ಕುಟ್ಟಿದ್ದೇನೆ. ಹೀಗೆ ಭಾಷಣದ ಕಲೆಯನ್ನು ಸಿದ್ಧಿಸಿಕೊಂಡಿರುವ ನನಗಿಂತ ಈ ನಿವೃತ್ತ ಜೀವನದ ಉದ್ಯೋಗಕ್ಕೆ ಅರ್ಹರಾದವರು ಯಾರಿದ್ದಾರೆ? ಇದನ್ನೆಲ್ಲ ಯೋಚಿಸಿಯೇ ನಾನು ಭಾಷಣವನ್ನು ತಯಾರು ಮಾಡಿಕೊಡುವುದನ್ನೇ ವೃತ್ತಿಯಾಗಿಟ್ಟುಕೊಳ್ಳಲು ತೀರ್ಮಾನಿಸಿರುವುದು.

ಈ ಕೆಲಸವನ್ನು ನಾನು ಹೇಗೆ ನಿಭಾಯಿಸಬಲ್ಲೆ ಎನ್ನುತ್ತೀರಾ? ಈಗ ಕೇಳಿ. ನಾನು ಕಚೇರಿಯೊಂದನ್ನು ತೆಗೆದರೆ ನನ್ನ ಭಾಷಣ ಸಹಾಯವನ್ನು ಕೋರಿ ಮುಖ್ಯವಾಗಿ ರಾಜಕಾರಣಿಗಳು ಬರಬಹುದು. ಆಗ ನಾನು ಅವರುಗಳ ರಾಜಕೀಯ ಪಕ್ಷಗಳ ಬಗ್ಗೆಯೂ, ಒಲವುಗಳ ಬಗ್ಗೆಯೂ ವಿಚಾರಿಸಿ ಅದಕ್ಕೆ ಅನುಗುಣವಾಗಿ ವೀರಾವೇಶದ ಭಾಷಣವನ್ನು ತಯಾರು ಮಾಡಿಕೊಡುತ್ತೇನೆ. ಭಿನ್ನಮತದವರು ಬಂದರೆ ವಿಭಿನ್ನವಾದ ಭಾಷಣವನ್ನು ಸಿದ್ಧಪಡಿಸಿಕೊಡುತ್ತೇನೆ. ಅದನ್ನು ಅವರಿಗೆ ಕೊಡುವಾಗ ಮಾತ್ರ ಎಚ್ಚರಿಕೆಯಿಂದ ನೋಡಿಕೊಡಬೇಕು. ಸೊಸೆಯ ಕಾಗದ ಅತ್ತೆಗೆ ಹೋದಂತೆ, ಯಾರದೋ ಪಕ್ಷದ ಭಾಷಣ ಯಾವುದೋ ಪಕ್ಷದವರಿಗೆ ಹೋಗಿಬಿಡಬಾರದು.

ರಾಜಕಾರಣಿಗಳು ಮತ್ತು ಇತರರು ಕೇವಲ ರಾಜಕೀಯಕ್ಕೆ ಸಂಬಂಧಿಸಿದ ಭಾಷಣಗಳನ್ನಲ್ಲದೆ ಬೇರೆ ರೀತಿಯ ಭಾಷಣಗಳನ್ನೂ ಮಾಡಬೇಕಾಗುತ್ತದೆ. ವಿವಿಧ ಸಂಘಗಳ ವಾರ್ಷಿಕೋತ್ಸವ, ಅಡಿಗಲ್ಲು ಹಾಕುವುದು, ಮುಂತಾದ ಸಾವಿರಾರು ಸಮಾರಂಭಗಳಿರುತ್ತವೆ. ಅವುಗಳನ್ನೆಲ್ಲ ನಿರ್ವಹಿಸುವುದೂ ನನಗೆ ಗೊತ್ತಿದೆ. ಉದಾಹರಣೆಗೆ, ಸಂಗೀತ ಸಂಸ್ಥೆಯೊಂದರ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡಬೇಕಾದರೆ, ಕರ್ನಾಟಕ ಸಂಗೀತವೋ ಹಿಂದೂಸ್ತಾನಿ ಸಂಗೀತವೋ ಎಂದು ನೋಡಿಕೊಂಡು ಅವುಗಳ ಉಗಮವನ್ನು ಸಾಮವೇದದಿಂದ ಆರಂಭಿಸಿ ಇಲ್ಲಿಯವರೆಗೆ ಬಂದು ನಡುವೆ ಇಂದಿನ ಪಾಶ್ಚಾತ್ಯ ಸಂಗೀತವನ್ನು ಸ್ವಲ್ಪ ಬಯ್ದು ಹೇಳಿಬಿಟ್ಟರಾಯಿತು. ಪಾಶ್ಚಾತ್ಯ ಸಂಗೀತದ ವೇಗ, ಆವೇಗಗಳು ಇಂದಿನ ಯುವ ಜನಾಂಗವನ್ನು ಹಾಳು ಮಾಡುತ್ತಿವೆ ಎಂದೆಲ್ಲ ಹೇಳಿಬಿಡಬೇಕು. ಆದರೆ ಪಾಶ್ಚಾತ್ಯ ಸಂಗೀತದ್ದೇ ಸಮಾರಂಭವಾದರೆ, ಪಾಶ್ಚಾತ್ಯ ಸಂಗೀತವು ವಿಶ್ವವ್ಯಾಪ್ತಿಯಾಗಿದೆ. ಅದರಲ್ಲಿ ಕೆಚ್ಚಿದೆ, ಸ್ವಾತಂತ್ರ್ಯದ ಹುಚ್ಚಿದೆ. ಲಯವಿದೆ, ಮನುಷ್ಯನನ್ನು ಸೋಮಾರಿತನದಿಂದ ಬಡಿದೆಬ್ಬಿಸುತ್ತದೆ ಎಂದೆಲ್ಲ ಹೇಳಿಬಿಟ್ಟರಾಯಿತು.

ರಂಗಪ್ರವೇಶದ ಸಮಾರಂಭವಾದರೆ ನೃತ್ಯದ ಬಗ್ಗೆ ಹಲವಾರು ಪಾರಿಭಾಷಿಕ ಶಬ್ದಗಳನ್ನು ಕೂಡಹಾಕಿ ಅವುಗಳನ್ನೆಲ್ಲ ಉಪಯೋಗಿಸಿ ಯುವ ಪ್ರತಿಭೆಯನ್ನು ಆಶೀರ್ವದಿಸುವಂತಹ ಭಾಷಣ ಕೊಟ್ಟುಬಿಡಬೇಕು. ರಾಜ್ಯೋತ್ಸವದ ಭಾಷಣವಾದರೆ, ವೀರಾವೇಶದ ಮಾತುಗಳನ್ನು ಸೇರಿಸಿ ಇಂಗ್ಲೀಷ್ ಮತ್ತಿತರ ಭಾಷೆಗಳ ಅಪ್ರಬುದ್ಧತೆಯನ್ನು ಹೇಳಿ ನಮ್ಮವರ ಅಭಿಮಾನ ಶೂನ್ಯತೆಯ ಬಗ್ಗೆ ವೈರಾಗ್ಯದಿಂದ ಹೇಳಿ ಬೆವರೊರೆಸಿಕೊಳ್ಳುವಂತೆ ಮಾಡಬೇಕು.

ಕುಸ್ತಿಗಳ ಸಮಾರಂಭದಲ್ಲೂ ಭಾಷಣ ಮಾಡಬೇಕಾಗುತ್ತದೆ. ಅದಕ್ಕಾಗಿ ಕುಸ್ತಿ ಕಲೆಯ ಉಗಮವನ್ನು ಆಂಜನೇಯನಿಂದಾಗಲಿ ಭೀಮನಿಂದಾಗಲಿ ಆರಂಭಿಸಿ ಮೈಸೂರಿನ ದೊಡ್ಡಕೆರೆ ಮೈದಾನದ ಜಂಗೀಕುಸ್ತಿ, ಕಾಟಾಕಾಟೀ ಕುಸ್ತಿಗಳವರೆಗೆ ಬಂದು ಕುಸ್ತಿಯು ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂದೆಲ್ಲ ಹೇಳಿ ಸಾಧ್ಯವಾದರೆ ತೋಳುತಟ್ಟಿ ಅರ್ಭಟಿಸಿ ಮಾತನಾಡಿ ಮುಗಿಸಬೇಕು.

ಹೀಗೆ ನೂರಾರು ವಿಷಯಗಳ ಬಗ್ಗೆ ಅಧಿಕೃತವಾಗಿ ಭಾಷಣ ಮಾಡಬೇಕಾದರೆ ಅವುಗಳ ಬಗ್ಗೆ ಅಧ್ಯಯನ ಮಾಡಬೇಕಾಗುತ್ತದೆ. ಅಂದಿನಿಂದ ಇಂದಿನವರೆಗೆ ವಿಷಯಗಳು ಬೆಳೆದು ಬಂದ ಬಗೆಯನ್ನು ಹೇಳಬೇಕಾಗುತ್ತದೆ. ಅವುಗಳ ಭವಿಷ್ಯದ ಬಗ್ಗೆಯೂ

ಮಾತನಾಡಬೇಕಾಗುತ್ತದೆ. ಇದನ್ನು ಎಲ್ಲರೂ ಮಾಡಲು ಕಾಲಾವಕಾಶ ಇರುವುದಿಲ್ಲ. ಆದ್ದರಿಂದ ನಾನು ಈ ಬಗ್ಗೆ ಒಂದು ಬ್ಯೂರೋ ಸ್ಥಾಪಿಸಿ ಸಮಯೋಚಿತವಾದ ಭಾಷಣಗಳನ್ನು ಸಿದ್ಧಪಡಿಸಿ ಪ್ರತಿಯೊಂದು ಭಾಷಣಕ್ಕೂ ಇಂತಿಷ್ಟು ಶುಲ್ಕವೆಂದು ನಿಗದಿಪಡಿಸಿದಾಗ ಉಭಯತ್ರ ಸಂತೋಷವಾಗುತ್ತದೆ. ಬಂದವರಿಗೆ ಸುಲಭವಾಗಿ ವಿಷಯ ಸಂಗ್ರಹ. ಇಲ್ಲಿ ನಮಗೆ ಸಾಧ್ಯವಾದಷ್ಟು ಅರ್ಥ ಸಂಗ್ರಹ. ಇದರಲ್ಲೇನೂ ವಂಚನೆಯಿಲ್ಲ. ದೀರ್ಘವಾಗಿ ಚಿಂತಿಸಿ ಸಂಶೋಧನೆಯಂತೆಯೇ ಕೆಲಸ ಮಾಡಿ ಭಾಷಣವನ್ನು ಸಿದ್ಧಪಡಿಸುವುದೇನೂ ಸುಲಭದ ಮಾತಲ್ಲ.

ಇನ್ನು ಭಾಷಣದ ಲಿಖಿತ ಪ್ರತಿಯನ್ನು ಸಿದ್ಧಗೊಳಿಸುವುದಲ್ಲದೆ ಭಾಷಣಕಾರರನ್ನೂ ನಾವು ಸಿದ್ಧಗೊಳಿಸಬಹುದು. ಬ್ಯೂಟಿ ಪಾರ್ಲರ್‌ಗಳಲ್ಲಿ ಮದುಮಕ್ಕಳನ್ನು ಅಲಂಕರಿಸಿ ಸಿದ್ಧಮಾಡುವಂತಲ್ಲ ಇದು. ಭಾಷಣ ಮಾಡುವಾಗ ಕೈಕಾಲುಗಳನ್ನು ಹೇಗೆ ಎಷ್ಟು ಆಡಿಸಬೇಕು, ಮುಖ ಭಂಗಿಗಳನ್ನು ಹೇಗೆ ಇಟ್ಟುಕೊಳ್ಳಬೇಕು, ಯಾವ ಯಾವ ರಸಕ್ಕೆ ಯಾವ ಯಾವ ಭಂಗಿ ಮುಂತಾದ ಸಾತ್ವಿಕಾಭಿನಯ ಅಂಶಗಳು, ಧ್ವನಿಯ ಏರುತಗ್ಗುಗಳು, ಮಾತನಾಡುವ ಸ್ಥಾಯಿ ಮುಂತಾದವುಗಳ ಬಗ್ಗೆ ಹೇಳಬೇಕಾಗುತ್ತದೆ. ಯಾರಾದರೂ ವಿಧಿವಶರಾದಾಗ ಅವರ ಬಗ್ಗೆ ಸಂತಾಪ ವ್ಯಕ್ತಪಡಿಸುವ ಭಾಷಣದಲ್ಲಿ ಮಂದ್ರಸ್ಥಾಯಿಯನ್ನೂ, ರಾಜಕಾರಣಿಗಳ ಭಾಷಣದಲ್ಲಿ ತಾರಸ್ಥಾಯಿಯನ್ನೂ ಅವಲಂಬಿಸಬೇಕಾಗುತ್ತದೆ. ಇದು ಅಭ್ಯಾಸದಿಂದ ಮಾತ್ರ ಸಾಧ್ಯ. ದುಃಖದ ಸಂದರ್ಭದಲ್ಲಿ ದುಃಖವಾದಂತೆ ನಟಿಸುವುದು, ಸಂತೋಷದ ಸಂದರ್ಭದಲ್ಲಿ ಹೊಟ್ಟೆಕಿಚ್ಚನ್ನು ತಡೆದುಕೊಂಡು ಸಂತೋಷವನ್ನು ಅಭಿನಯಿಸುವುದು ಮುಂತಾದುವುಗಳನ್ನು ಹೇಳಿಕೊಡುವುದು ಸಾಮಾನ್ಯವಾದ ವಿಚಾರವೇನಲ್ಲ. ಸಭೆಯಲ್ಲಿರುವ ಜನಸಂಖ್ಯೆಯನ್ನು ಅವಲಂಬಿಸಿ ಧ್ವನಿಯ ಗಾತ್ರವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವುದನ್ನೂ ಹೇಳಿಕೊಡಬೇಕಾಗುತ್ತದೆ.

ನಂತರ ನಾವು ಸಿದ್ಧಪಡಿಸಿರುವ ಲಿಖಿತ ಭಾಷಣದ ಪ್ರತಿಯನ್ನು ಪುಟಗಳ ಸಂಖ್ಯೆಯ ಪ್ರಕಾರವೇ ಓದಬೇಕೆಂಬುದನ್ನು ಕೆಲವರಿಗೆ ಹೇಳಬೇಕು. ಕೆಲವು ವೇಳೆ ಪುಟಗಳು ಅಂಟಿಕೊಂಡು ಒಂದೇ ಪುಟದಿಂದ ನಾಲ್ಕನೇ ಪುಟಕ್ಕೆ ಹೋಗಿಬಿಟ್ಟರೆ ಆಭಾಸವಾಗಿಬಿಡುತ್ತದೆ. ಅಂತಹ ಆಭಾಸ ನಡೆದಾಗ ಧೈರ್ಯ ತಂದುಕೊಂಡು ನಾಲ್ಕನೇ ಪುಟ ಓದಿ ಮುಗಿಸಿ ಮತ್ತೆ ಬಿಡದೆ ಎರಡನೇ ಪುಟಕ್ಕೆ ಬರಬೇಕೆಂದೆಲ್ಲ ಪರಿಹಾರೋಪಾಯ ಸೂಚಿಸಿ ಧೈರ್ಯ ತುಂಬಬೇಕಾಗುತ್ತದೆ.

ಇಷ್ಟೆಲ್ಲ ಮಾಡಲು ನಮ್ಮ ತಾರೀಪು, ಎಂದರೆ ಶುಲ್ಕ ಕೂಡ ಆಯಾಯಾ ವಿಷಯದ, ಸಂದರ್ಭದ ಪ್ರಾಮುಖ್ಯಕ್ಕೆ ಸಂಬಂಧಿಸಿಕೊಂಡಂತೆ ಇರುತ್ತದೆ. ಸುಲಭವಾದ ವಿಷಯಕ್ಕೆ ಕಡಿಮೆ ಶುಲ್ಕವೂ, ಕಷ್ಟವಾದ ವಿಷಯಕ್ಕೆ ಹೆಚ್ಚೂ ಇರಬೇಕಾದದ್ದು ತರ್ಕಬದ್ಧ ಹಾಗೂ ನ್ಯಾಯಸಮ್ಮತ. ಹಾಗೆಯೇ ಅರ್ಧಗಂಟೆಯ ಭಾಷಣಕ್ಕೆ ಕಡಿಮೆ. ಒಂದು ಘಂಟೆಯದಕ್ಕೆ ಜಾಸ್ತಿ. ಅಲ್ಲಿಂದ ಮುಂದೆ ಪ್ರತಿ ಅರ್ಧ ಗಂಟೆಗೂ ಇಂತಿಷ್ಟು ಎಂದು ಹೇಳಬೇಕು. ಭಾಷಣದ ವೇಗವನ್ನೂ ನಾನೇ ನಿರ್ಧರಿಸುತ್ತೇನೆ. ಇಲ್ಲದಿದ್ದರೆ ಒಂದು ಗಂಟೆಯ ಭಾಷಣವನ್ನು ಅರ್ಧ ಗಂಟೆಯಲ್ಲೇ ಓದಿ ಮುಗಿಸಿಬಿಟ್ಟರೆ ನಮಗೆ ನಷ್ಟವಾಗಿಬಿಡುತ್ತದೆ.

ಈ ಶುಲ್ಕದಲ್ಲಿ ಕನ್ಸೆಷನ್ ಅಂದರೆ ಕಡಿತವನ್ನೂ ತೋರಿಸಬಹುದು. ಪದೇ ಪದೇ ಬರುವವರಿಗೆ, ಶುಲ್ಕವನ್ನು ತಕರಾರಿಲ್ಲದೆ ಕೊಡುವವರಿಗೆ ಅರವತ್ತು ದಾಟಿದ ಹಿರಿಯ ನಾಗರಿಕರಿಗೆ, ಶಾಲಾ ಮಕ್ಕಳಿಗೆ ಕನ್ಸೆಷನ್ ತೋರುವ ಅವಕಾಶವೂ ನಮ್ಮಲ್ಲಿದೆ. ಅನಾಥಾಲಯ ಮುಂತಾದ ಕಡೆ ಮಾತನಾಡಲು ಉಚಿತವಾಗಿಯೂ ಭಾಷಣ ಸಿದ್ಧಪಡಿಸಿಕೊಡುವ ಉದ್ದೇಶವಿದೆ. ಆದರೆ ರಾಜಕೀಯ ಭಾಷಣಗಳಿಗೆ ಮಾತ್ರ ಶುಲ್ಕ ಹೆಚ್ಚಾಗಿಯೇ ಇರುತ್ತದೆ. ಅದರಲ್ಲಿ ಆರೋಪಗಳನ್ನು ಮಾಡಬೇಕಾಗುವುದರಿಂದ ಹಾಗೂ ಆಶ್ವಾಸನೆಯನ್ನು ಕೊಡಬೇಕಾಗುವುದರಿಂದ ಸರಿಯಾಗಿ ಯೋಚಿಸಿ ಬರೆಯಬೇಕಾಗುತ್ತದೆ.

ಈ ಉದ್ಯೋಗದಲ್ಲಿ ಒಂದು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಅದೆಂದರೆ ಶುಲ್ಕವನ್ನು ಮುಂಗಡವಾಗಿ ತೆಗೆದುಕೊಳ್ಳುವುದು. ಹೀಗೆ ಮುಂಗಡ ತೆಗೆದುಕೊಳ್ಳದಿದ್ದರೆ, 'ಭಾಷಣವನ್ನು ತೆಗೆದುಕೊಂಡ ಮೇಲೆ ನಾವು ಭಾಷಣ ಮಾಡಲೇ ಇಲ್ಲ, ಸಮಾರಂಭಕ್ಕೆ ಹೋಗಲೇ ಇಲ್ಲ' ಎಂದು ದಬಾಯಿಸಿಬಿಟ್ಟರೆ ನಮ್ಮ ಪಾಡು ದಯನೀಯವಾಗಿ ಬಿಡುತ್ತದೆ. ಭಾಷಣ ಮಾಡುವುದೂ ಬಿಡುವುದೂ ಗ್ರಾಹಕರಿಗೆ ಸೇರಿದ್ದು. ಹಣ್ಣನ್ನು ತೆಗೆದುಕೊಂಡು ಹೋಗಿ ನಾನು ತಿನ್ನಲೇ ಇಲ್ಲ ಎಂದು ಹೇಳಿ ದುಡ್ಡುಕೊಡದಿದ್ದರೆ ಅಂಗಡಿಯವನು ಬಿಡುತ್ತಾನೆಯೇ? ಹಾಗೆಯೇ ಭಾಷಣದ ವಿಷಯವೂ. ವ್ಯಾಪಾರವೆಂದರೆ ವ್ಯಾಪಾರ. ಅದರಲ್ಲಿ ತಡವಾಗಲಿ, ಕಡವಾಗಲಿ ಇರಬಾರದು.

ಬಹಳ ಭಾವೋದ್ರೇಕದ ಭಾಷಣವು, ಅದರ ವಿಷಯ ಏನೇ ಆಗಲಿ, ನಮ್ಮಲ್ಲಿ ದುಬಾರಿಯಾಗಿರುತ್ತದೆ. ಅದನ್ನು ಬರೆಯಲು ನಾವೇ ಭಾವಾವೇಶಕ್ಕೆ ಒಳಗಾಗಬೇಕಾಗುತ್ತದೆ. ಹಾಗಾಗಲು ನಾವು ಆ ಸನ್ನಿವೇಶಕ್ಕೆ ಹೋಗಿ, ಅಲ್ಲಿ ಅತ್ತು ಅಥವಾ ಕೋಪಿಸಿಕೊಂಡು ಉದ್ವೇಗಗೊಂಡು ಬರೆಯಬೇಕು. ಇಲ್ಲದಿದ್ದರೆ ನೈಜತೆಯಿರುವುದಿಲ್ಲ. ಈ ರೀತಿ ಪರಾನುಭವವನ್ನು ಸ್ವಾನುಭವವಾಗಿ ಮಾಡಿಕೊಳ್ಳಲು ಪರಮನಃಪ್ರವೇಶ ಮಾಡಬೇಕು. ಈ ಪ್ರತಿಕ್ರಿಯೆಗಾಗಿ ಬೆಲೆ ಹೆಚ್ಚಾಗುತ್ತದೆ.

ನಮ್ಮ ವ್ಯಾಪಾರ ಧರ್ಮವನ್ನು ಇಲ್ಲಿ ನಾನು ಸ್ಪಷ್ಟಪಡಿಸಬಯಸುತ್ತೇನೆ. ನಾವು ಒಮ್ಮೆ ಭಾಷಣ ಬರೆದುಕೊಟ್ಟೆನೆಂದರೆ ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಆದರೆ ಹಕ್ಕು ಭಾಷಣಕಾರರದೇ. ಅವರು ಆ ಭಾಷಣವನ್ನು ಬೇರೆ ಕಡೆ ಬಳಸಿಕೊಳ್ಳಬಹುದು. ಅದಕ್ಕೆ ನಮಗೇನೂ ರಾಯಲ್ಟಿ ಕೊಡಬೇಕಾಗಿಲ್ಲ. ನಾವು ಆ ವಿಷಯದಲ್ಲಿ ಬಹಳ ಉದಾರಿಗಳು. ಆದರೆ ಭಾಷಣಕಾರರು ಅದೇ ಭಾಷಣವನ್ನು ಬೇರೆ ಕಡೆಯಲ್ಲೂ ಉಪಯೋಗಿಸುವ ಸಂದರ್ಭ ಬಂದಾಗ ಅಲ್ಲಿಯ ಸಭಾಸದರು ಬೇರೆಯಾಗಿರಬೇಕೆಂಬುದನ್ನು ನೋಡಿಕೊಳ್ಳಬೇಕು.

ಇನ್ನು ನನ್ನ ಭಾಷಣದಿಂದಾಗಿ ಅನಾಹುತಗಳಾದರೆ ಅದಕ್ಕೆ ನಾನು ಜವಾಬ್ದಾರನಲ್ಲ. ಅದನ್ನೆಲ್ಲ ಭಾಷಣ ಮಾಡುವಾಗ ಭಾಷಣಕಾರರ ಮೇಲೆ ಬೀಳಬಹುದಾದ ಟೊಮ್ಯಾಟೋಗಳೆಲ್ಲ ಅವರಿಗೇ ಸೇರಿದ್ದು. ಅದರಲ್ಲಿ ನಾವು ಪಾಲು ಕೇಳುವುದಿಲ್ಲ.

ಇಂತಹ ಭಾಷಣದ ಏಜೆನ್ಸಿ ನಡೆಸಿದರೆ ಚೆನ್ನಾಗಿ ನಡೆಯಬಹುದೆಂದು ನಿಮಗೆ

ಅನ್ನಿಸುವುದಿಲ್ಲವೇ? ನಮ್ಮ ಭಾಷಣದಿಂದ ಜನರು ಚಪ್ಪಾಳೆ ತಟ್ಟಿದಾಗ ನಮಗೆ ಬೇಡಿಕೆ ಜಾಸ್ತಿಯಾಗುತ್ತದೆ. ಮೊದಮೊದಲು ವ್ಯವಹಾರ ಕುದುರದೆ ಸ್ವಲ್ಪ ಮಂಕಾಗಿದ್ದರೂ ನಮ್ಮ ಭಾಷಣದ ಜನಪ್ರಿಯತೆ ಹೆಚ್ಚಿದಂತೆ ವ್ಯಾಪಾರವೂ ಹೆಚ್ಚಾಗುತ್ತದೆ. ಆದರೆ ಇದರಲ್ಲಿರುವ ಒಂದು ಸಮಸ್ಯೆಯೆಂದರೆ ಭಾಷಣ ಮಾಡಿದವರು ಆ ಭಾಷಣವನ್ನು ನಮ್ಮಿಂದ ತಂದದ್ದೆಂದು ಒಪ್ಪಿಕೊಳ್ಳುವುದಿಲ್ಲ. ಬಾಯಿ ಮಾತಿನಲ್ಲಿ ಒಬ್ಬರಿಂದೊಬ್ಬರಿಗೆ ಪ್ರಚಾರವಾಗಿ ನಮ್ಮ ಬಗ್ಗೆ ಜನರಿಗೆ ಖಂಡಿತವಾಗಿ ಗೊತ್ತಾಗುತ್ತದೆ. ನಾವು ಜಾಹೀರಾತನ್ನೂ ಕೊಡುತ್ತೇವೆ. ಇಂತಹ ಉತ್ತಮ ಭಾಷಣ ಮಾಡಿದವರ ಭಾಷಣ ನಮ್ಮದೇ ಎನ್ನುತ್ತೇವೆ. ಐ.ಪಿ.ಎಸ್. ಮುಂತಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಹುಡುಗರು ನಮ್ಮದೇ ಕೋಚಿಂಗ್ ಸಂಸ್ಥೆಯಲ್ಲಿ ಓದಿದ್ದು ಎಂದು ಜಾಹೀರಾತು ಮಾಡುವಂತೆಯೇ ಇದೂ. ಆದರೆ ಇದರಿಂದ ತಮಗೆ ಅವಮಾನವಾಯಿತೆಂದು ಭಾಷಣಕಾರರು ನಮ್ಮ ಮೇಲೆ ದಾವೆ ಹಾಕುವಂತಿಲ್ಲ. ಭಾಷಣದ ಮೂಲಪ್ರತಿ ನಮ್ಮಲ್ಲೇ ಇದ್ದು ಅದು ನಮ್ಮದೇ ಆಗಿರುವುದರಿಂದ ನಮ್ಮ ಕೈ ಬಲವಾಗಿಯೇ ಇರುತ್ತದೆ. ಅದೂ ಅಲ್ಲದೆ ಮುಂದೆಯೂ ನಮ್ಮ ಸಹಾಯ ಭಾಷಣಕಾರರಿಗೆ ಬೇಕಾಗಿರುವುದರಿಂದ ಅವರು ನಮ್ಮನ್ನು ವಿರೋಧಿಸಿಕೊಳ್ಳುವುದಿಲ್ಲ. ಆದರೆ ನನಗೆ ಈ ಬಗ್ಗೆ ಮುಕ್ತ ಮನಸ್ಸಿದೆ. ಜಾಹೀರಾತು ಕೊಡುವ ಯೋಜನೆಯನ್ನು ನಾನು ಬಿಡಬಲ್ಲೆ. ಭಾಷಣ ನಮ್ಮದೇ ಎಂಬ ವಿಷಯವನ್ನು ರಹಸ್ಯವಾಗಿ ಇರಿಸಿಕೊಳ್ಳಬಲ್ಲ ನಮಗೆ ಗ್ರಾಹಕರು ಭಾಷಣಕಾರರೇ ವಿನಾ ಶ್ರೋತೃಗಳಲ್ಲವಲ್ಲ. ಆದರೆ ಈ ರೀತಿ ರಹಸ್ಯವನ್ನು ಕಾಪಾಡಿಕೊಳ್ಳಬೇಕಾದರೆ ಶುಲ್ಕ ಹೆಚ್ಚಾಗುತ್ತದೆ.

ಬೌದ್ಧಿಕ ವ್ಯಾಪಾರವೂ ಒಂದು ರೀತಿಯ ವಾಣಿಜ್ಯ ವ್ಯವಹಾರವಾಗಿಬಿಡುತ್ತದೆಯಲ್ಲ ಎಂದು ನೀವು ಕೊರಗಬಹುದು. ಎಲ್ಲವೂ ವ್ಯಾಪಾರಮಯವಾಗಿರುವ ಈ ಕಾಲದಲ್ಲಿ ಭಾಷಣವನ್ನು ವ್ಯಾಪಾರದ ಸರಕು ಮಾಡುವುದರಲ್ಲಿ ತಪ್ಪೇನಿದೆ? ವರನನ್ನೇ ದಕ್ಷಿಣೆಗೆ ಮಾರಿಕೊಳ್ಳುತ್ತಿರುವ ಈ ಕಾಲದಲ್ಲಿ ಭಾಷಣದ ಮಾರಾಟಕ್ಕೂ ಅರ್ಥವಿದ್ದೇ ಇರುತ್ತದೆ. ಅರ್ಥವೆಂದರೆ ಹಣವೆಂದೂ ಅರ್ಥವಿರುವುದರಿಂದ ಭಾಷಣ ಸಾರ್ಥಕವಾಗುವುದು ಹೀಗೆ.

ಇದೆಲ್ಲ ನನ್ನ ಯೋಚನೆಯಷ್ಟೇ. ನಿವೃತ್ತ ಜೀವನದಲ್ಲಿ ಬೇರೆ ಏನನ್ನೂ ಮಾಡಲಾಗದ ಭಾಷಣ ಪ್ರಿಯ ಮನಸ್ಸಿನ ದೂರಾಲೋಚನೆ ಇದು. ಅಂತೂ ನಾನು ಮಾಡಬಹುದಾದ ಒಂದೇ ವ್ಯವಹಾರ ಇದು. ನೀವು ಏನಂತೀರಿ? ನಮ್ಮ ನಾಡಿನ ಎಲ್ಲ ಭಾಷಣಕಾರರೇ! ಇಲ್ಲಿ ನಮ್ಮ ಬಳಿಗೆ ಬನ್ನಿ, ನಿಮ್ಮ ನಿಮ್ಮ ಭಾಷಣಗಳು ನಮ್ಮಲ್ಲಿ ಸಿದ್ಧವಾಗುತ್ತವೆ. ಅರ್ಧ ಘಂಟೆಯಲ್ಲೇ ಸಿದ್ಧವಾಗುವ ದಿಢೀರ್ ತುರ್ತು ಭಾಷಣಗಳ ವ್ಯವಸ್ಥೆ ಕೂಡ ನಮ್ಮಲ್ಲಿ ಸಿದ್ಧವಾಗುತ್ತಿದೆ. ಎಲ್ಲರೂ ಆ ಸುದಿನಕ್ಕಾಗಿ ಕಾದುನೋಡಿ. ನಮ್ಮ ಈ ಹೊಸ ಏಜೆನ್ಸಿಯನ್ನು ವಿಶ್ವದ ಅಗ್ರಮಾನ್ಯ ಭಾಷಣಕಾರರು ಉದ್ಘಾಟನೆ ಮಾಡುವವರಿದ್ದಾರೆ. ಅವರ ಉದ್ಘಾಟನಾ ಭಾಷಣವನ್ನು ನಾವು ಈಗಾಗಲೇ ಸಿದ್ಧಮಾಡಿ ಕಳಿಸಿಕೊಟ್ಟಿದ್ದೇವೆ.

ಕಮಲೆ ಮತ್ತೆ ಮರಳಿ ಬಾ!

• ಅಣ್ಣಾಸ್ವಾಮಿ ಮೊದಲಿಯಾರ್

'ತಮಿಳುನಾಡಿನಲ್ಲಿ ಚಂಡಮಾರುತ ಬಂದು ಭೀಕರ ಮಳೆ ಬರುತ್ತದೆ' ಎಂಬ ಸುದ್ದಿ ಪತ್ರಿಕೆಯಲ್ಲಿ ಓದಿದೆ. ಪುದುಚೇರಿ (ಪಾಂಡುಚೇರಿ)ಯ ಹೊರಗೆ ಹದಿನೈದು ಮೈಲಿಗಳ ಆಚೆ ಕಡಲೂರು ರಸ್ತೆಯಲ್ಲಿರುವ 'ಬಿಗ್‌ಬೀಚ್ ರೆಸಾರ್ಟ್' ನಲ್ಲಿ ಒಂದು ವಾರ ವಿಶ್ರಾಂತಿಗೆಂದು ಬಂದಿದ್ದೆ, ಮಹೇಂದ್ರ ಮಹೇಂದ್ರ ಅವರು ಈ ರೆಸಾರ್ಟ್‌ನ ಮಾಲೀಕರಲ್ಲೊಬ್ಬರೆಂದು ತಿಳಿಯಿತು. ತುಸು ಹೆಚ್ಚು ಹಣ ತೆಗೆದುಕೊಂಡರೂ ತುಂಬ ಅನುಕೂಲಗಳನ್ನು ಕಲ್ಪಿಸಿರುವುದಲ್ಲದೆ ಅತ್ಯಂತ ವ್ಯವಸ್ಥಿತವಾಗಿತ್ತು. ನಮ್ಮ ಬಡ್ಜೆಟ್ಟಿನ ರೆಸಾರ್ಟ್ ಹೀಗಿದ್ದರೆ, ಗಣಿದಣಿಗಳ ಕೃಪೆಯಿಂದ ರೆಸಾರ್ಟ್‌ಗಳಲ್ಲಿ ಜನ ನಾಯಕರು ಹತ್ತು ದಿನಗಳು ತಂಗಿದ್ದರಲ್ಲಾ ಅದು ಹೇಗಿರಬಹುದು?! ಇಂದ್ರ ಲೋಕದ ನಂದನವನದಂತಿರಬೇಕು! ನಮ್ಮ ರೆಸಾರ್ಟ್‌ನಲ್ಲಿ ಅನೇಕ ಮಂದಿ ವಿದೇಶಿ ಲಲನೆಯರು, ಬೀಚಿನಲ್ಲಿ, ಸ್ವಿಮಿಂಗ್ ಪೂಲ್‌ನಲ್ಲಿ ಫುಡ್ ಕೋರ್ಟ್‌ನಲ್ಲಿ ಮಿಂಚುತ್ತಿದ್ದರು. ಇನ್ನು ನಂದನವನದಲ್ಲಿ ಮೇನಕೆ, ತಿಲೋತ್ತಮೆ, ರಂಬೆ ಮೊದಲಾದ ಅಪ್ಸರೆಯರೇ ಇದ್ದಿರಬೇಕು! ನಾನಂತೂ ಯಾವ ಸರ್ಕಾರದ ವಿರುದ್ಧವೂ ಭಿನ್ನಮತೀಯನಾಗಿ ರೆಸಾರ್ಟ್‌ಗೆ ಹೋಗಿರಲಿಲ್ಲ; ಅಥವಾ ಯಾವುದಾದರೂ ಸಿನಿಮಾಗೆ ಕಥೆ, ಸಂಭಾಷಣೆ ಬರೆಯಲೋಸುಗವೋ ಇಲ್ಲವೇ ಗೀತೆ ರಚನೆಗಾಗಿಯೋ ಹೋಗಿರಲಿಲ್ಲ. ಬೆಂಗಳೂರಿನ 'ಟ್ರಾಫಿಕ್ ಜಾಮ್' 'ಅವಸರದ ಪರದಾಟ' ' ಒತ್ತಡದ ಕೆಲಸ' 'ವಿಶ್ರಾಂತಿಯಿಲ್ಲದ ಚಟುವಟಿಕೆ' 'ಶಾಂತಿಯಿಲ್ಲದ ಜೀವನ' ಇವುಗಳ ನಡುವೆ ಕ್ರಿಯೇಟಿವಿಟಿ, ಸೃಜನಾತ್ಮಕತೆ ನಿಷ್ಕ್ರಿಯವಾಗಿ, ಬರವಣಿಗೆ ಬರೆಯುವ ಮೂಡ್ ಇಲ್ಲದೆ, ನೀರಿನಿಂದ ಹೊರಗೆ ಬಿದ್ದ ಮೀನಿನಂತೆ ಚಡಪಡಿಸಿದೆ. ಸಮುದ್ರದ ದಡದಲ್ಲಿ, ಪ್ರಕೃತಿ ಮಡಿಲಲ್ಲಿ ಸ್ವಲ್ಪ ದಿನ ಇದ್ದು ಬರೋಣವೆಂದು ಬಂದಿದ್ದೆ, ಅಪರಂಜಿಗೆ ಒಂದು ಲೇಖನ, ಪುಸ್ತಕ ಪ್ರಕಾಶಕರಿಗೊಂದು ಕಾದಂಬರಿ ಬರೆಯುವ ಉದ್ದೇಶ ನನ್ನದಾಗಿತ್ತು' ಬರುವಾಗ ಅಪರಂಜಿ ಪ್ರತಿಗಳು, ಬೇಲೂರು ರಾಮಮೂರ್ತಿ ಎಂ.ಎಸ್. ನರಸಿಂಹಮೂರ್ತಿ, ಮಾಸ್ಟರ್ ಹಿರಣ್ಣಯ್ಯ, ಪ್ರೊ|| ಕೃಷ್ಣೇಗೌಡರು, ದುಂಡಿರಾಜ್ ಮೊದಲಾದವರ ಹಾಸ್ಯ ಲೇಖನ, ಹಾಸ್ಯ ಚುಟುಕಗಳ ಪುಸ್ತಕಗಳನ್ನು ಟೈಂಪಾಸ್‌ಗೆಂದು ಹೊತ್ತು ತಂದಿದ್ದೆ.

'ಅಪರಂಜಿ'ಯನ್ನು ಓದಿ ಹಾಸ್ಯರಸ ಸವಿಯಬೇಕಾದರೆ ಅದರದೇ ಆದ ವಾತಾವರಣ ಇರಬೇಕು. ನಿಶ್ಶಬ್ದತೆಯಿದ್ದು ಪ್ರಕೃತಿ ಮಡಿಲಲ್ಲಿ ಒಂದು ಮರದ ಕೆಳಗೆ ಕುಳಿತು ಖಾರಾ

ಹಾಕಿದ ಗೋಡಂಬಿ ಅಮೂ ತುಪ್ಪದಲ್ಲಿ ಹುರಿದದ್ದು ತಿನ್ನುತ್ತಾ ಓದುತ್ತಾ ಹಾಸ್ಯವನ್ನು ಸವಿಯಬೇಕು. ಸಮಾನ ಮನಸ್ಕರು ಜೊತೆಯಲ್ಲಿದ್ದು ಹಾಸ್ಯದ ಬಗ್ಗೆ ವಿಶ್ಲೇಷಿಸುತ್ತಾ, ತುಪ್ಪದಲ್ಲಿ ಕರೆದ ಪಕೋಡ ತಿನ್ನುತ್ತಾ ಹರಟೆ ಹೊಡೆದರೆ ಅದೆಷ್ಟು ಚೆನ್ನ!

'ಪಕೋಡ' ಅಂದ ಕೂಡಲೇ ದಾಶರಥಿ ದೀಕ್ಷಿತ್ ಅವರ 'ಪಕೋಡ ಪ್ರಿಯ ದಫೇದಾರ್' ಪಾತ್ರ ನೆನಪಿಗೆ ಬರುತ್ತೆ!

ಆದಿನ ಬೀಚಿನಲ್ಲಿ ನಾನು ಮತ್ತು ಮಡದಿ ಮಕ್ಕಳು ಸಮುದ್ರದ ಅಲೆಯ ಜೊತೆ ಮರಳಿನಲ್ಲಿ ಕಾಲು ಹುದುಗಿಸಿ ನಿಂತು ಚೆಲ್ಲಾಟವಾಡುತ್ತಿದ್ದೆವು. ಇದ್ದಕ್ಕಿದ್ದಂತೆ ದೊಡ್ಡ ಅಲೆಗಳು ಬರತೊಡಗಿದವು. ಗೋಲ್ಡನ್ ಬೀಚಿನ ಮರಳಿನ ಬಿಲಗಳಲ್ಲಿ ಅಡಗಿದ್ದ ಹೊಂಬಣ್ಣದ 'ಏಡಿ'ಗಳು ಸರಸರನೆ ಹೊರ ಬಂದು ಬೀಚಿಗಿಂತ ದೂರಕ್ಕೆ ಸಾಲು ಸಾಲಾಗಿ ಹೋಗತೊಡಗಿದವು. ನಾವು ಈ ವಿಚಿತ್ರವನ್ನು ನೋಡುತ್ತಿದ್ದಂತೆ ಬೃಹತ್ ಅಲೆಯೊಂದು ನಮ್ಮನ್ನು ಅಪ್ಪಳಿಸಿತು, ನನ್ನ ಕುತ್ತಿಗೆಯ ಮಟ್ಟಕ್ಕೆ ನೀರು ಬಂತು. ಮಕ್ಕಳು ನೀರಿನಲ್ಲಿ ಮುಳುಗಿದರು. ಮಡದಿ ಗಾಬರಿಯಾದಳು. ಕಾಲಿನಡಿ ಮರಳು ಜರುಗಿ ಕಾಲು ಕುಸಿದು ನೀರಿನ ಸೆಳೆತ ಹೆಚ್ಚಾಯಿತು. ಭಿನ್ನಮತೀಯರ ಪ್ರವಾಹ ಅನಿರೀಕ್ಷಿತವಾಗಿ ಮುಖ್ಯಮಂತ್ರಿಗಳ ಮೇಲೆರಗಿ, ಅವರ ಕುತ್ತಿಗೆವರೆಗೆ ಪ್ರವಾಹ ಬಂದು ಅನಾಮಿಕ ಕಾಲ್ಸೆಳೆತದಿಂದ ಅವರು ತತ್ತರಿಸಿದಂತೆ ನನ್ನ ಸ್ಥಿತಿಯಾಯಿತು. ನೀರಿನ ಅಲೆ ಹಿಂದಕ್ಕೆ ಸರಿದಾಗ ಬೀಚಿನಿಂದ ಹೊರಬಿದ್ದು ಸುರಕ್ಷಿತ ಸ್ಥಳದಲ್ಲಿ ಸೇರಿದೆವು. ಯಾವ ಅನಾಹುತವೂ ಆಗಲಿಲ್ಲ. ಲೈಫ್‌ಗಾರ್ಡ್‌ಗಳು ಬಂದು ಘೋಷಣೆ ಮಾಡಿದರು, ''ಇಂಡೋನೇಷಿಯಾದಲ್ಲಿ ಭೂಕಂಪವಾಗಿ ಸುನಾಮಿ ಬಂದಿದೆ ಅದರ ಎಫೆಕ್ಟ್ ನಮ್ಮ ಸಮುದ್ರದಲ್ಲಿ ಏರು ಪೇರು ಮಾಡಿದೆ. ಎಲ್ಲರೂ ಬೀಚು ಬಿಟ್ಟು ಸುರಕ್ಷಿತ ಸ್ಥಳಕ್ಕೆ ಬನ್ನಿ''. ಈ ಘೋಷಣೆ ಕೇಳಿ ''ಎತ್ತಣ ಮಾಮರ ಎತ್ತಣ ಕೋಗಿಲೆ'' ನೆನಪಾಯಿತು. ಆದಿನ 'ಜಿಟಿಜಿಟಿ' ಮಳೆ ಪ್ರಾರಂಭವಾಗಿ ಕಾಟೇಜಿನಲ್ಲಿಯೇ ಇರಬೇಕಾಯಿತು.

ರೆಸಾರ್ಟ್‌ಗೆ ಬರುವ ಮುನ್ನ ನಡೆದ ಘಟನೆಗಳ ನೆನಪು ಕಾಡಿಸಿತು.

★★★

ಅಂದು ಮಟ ಮಟ ಮಧ್ಯಾಹ್ನ ಶನಿವಾರವಾದ್ದರಿಂದ ಆಫೀಸಿಗೆ ಅರ್ಧ ದಿನ ರಜೆ. ಮನೆಗೆ ಬಂದು ಕೈಕಾಲು ಮುಖ ತೊಳೆದುಕೊಂಡು ಮನೆಯಲ್ಲಿ ಮಾಡಿದ್ದ ಬಿಸಿಬಿಸಿ ಬೇಳೆಬಾತ್, ತುಪ್ಪದ ಹೀರೇಕಾಯಿ ಬೋಂಡ, ಹಾಟ್‌ಚಿಪ್ಸ್ ತಿಂದು ಆರಾಮ ಕುರ್ಚಿಯಲ್ಲಿ ಕುಳಿತು ಏರ್ ಕಂಡೀಷನರ್ 'ಆನ್' ಮಾಡಿ ಪೇಪರ್ ಹಿಡಿದು ಕುಳಿತೆ, ದಪ್ಪ ಅಕ್ಷರಗಳಲ್ಲಿ ಬರೆದಿತ್ತು 'ಹರಟೆ ಕಟ್ಟೆ ಇರಬೇಕು' 'ಅಜ್ಜಿಯ ಕಥೆ ಮಕ್ಕಳು ಕೇಳುವುದು ಆರೋಗ್ಯಕರ ಬೆಳವಣಿಗೆ' ಹೀಗೆಲ್ಲಾ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಯು.ಆರ್. ಅನಂತಮೂರ್ತಿ ಹೇಳಿಕೆ ಕೊಟ್ಟಿದ್ದರು. ಹೊಟ್ಟೆ ಭಾರದಿಂದಿರಬೇಕು ತೂಕಡಿಕೆ ಬಂತು. ಆಗ 'ಡಿಂಡಾಂಗ್' ಅಂತ ಡೋರ್ ಬೆಲ್ ಸದ್ದು ಮಾಡಬೇಕೇ?! ನನ್ನ ಮಡದಿ ಬಾಗಿಲು ತೆಗೆದು, ''ಓಹೋಹೋ ಏನು ಅಪರೂಪ ದರ್ಶನ! ಕಮಲಾ ನಿನ್ನ ನೋಡಿ ಎಷ್ಟು ದಿನವಾಯಿತೇ?

ಬನ್ನಿ ಭಾವ ಚೆನ್ನಾಗಿದ್ದೀರಾ? ಏನೋ ತುಂಟ ಮರಿ ಪಾಪಣ್ಣ ಸ್ಕೂಲಿಗೆ ರಜೆಯೇನೋ?!'' ಹೀಗೆ ಪ್ರಶ್ನೆಗಳ ಸುರಿಮಳೆ ಕೇಳಿ ಗಾಬರಿಯಿಂದ ಎದ್ದು ಕುಳಿತೆ.

ಕಮಲಾ ನನ್ನ ಮಡದಿಯ ಚಿಕ್ಕಮ್ಮನ ಮಗಳು. ತನ್ನ ಮನೆಯಲ್ಲಿ ಅನುಕೂಲ ಸ್ಥಿತಿಯಿಲ್ಲದಿದ್ದರೂ, ಬಂದವರ ಮನೆಯಲ್ಲಿ ಜಂಬದ ಜೋರು ಜಾಸ್ತಿ. ಕಮಲಾ ಗಂಡನೋ ಹೆಸರಿಗೆ ಫಾರೆಸ್ಟ್ ರೇಂಜರ್, ಮನೆಯಲ್ಲಿ ಹೆಂಡತಿ ದಾಸ ಅವನ ಮಗ ಪಾಪಣ್ಣ 'ಮರಿಜಂಗ್ಲಿ' ತರ ಯಾರ ಮನೆಗೆ ಹೋದರೂ ಅವರನ್ನು ಕಾಡಿಸಿ ಪೀಡಿಸಿ ತನ್ನ ಆಸೆಗಳನ್ನು ತೀರಿಸಿಕೊಳ್ತಾನೆ. ಅಮ್ಮನ ಮುದ್ದಿನ ಮಗ ಬೇರೆ!

ಕಮಲಾ ಮತ್ತು ನನ್ನ ಮಡದಿ ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಚಿಕ್ಕ ವಯಸ್ಸಿನಿಂದ ಕಾಲೇಜಿನ ವರೆಗೆ ಒಟ್ಟಿಗೆ ಓದಿದವರು, ಇಬ್ಬರೂ ಆಪ್ತ ಗೆಳತಿಯರು. ಕಮಲಾ ಗಂಡ ಗುಂಡಣ್ಣ ತನ್ನ ಸಂಸಾರವನ್ನು ದೇವರಾಯನ ದುರ್ಗದ ಬಳಿ ಇರುವ 'ಊರ್ಡುಗೆರೆ'ಯಲ್ಲಿ ಹೂಡಿದ್ದ. ಇವನ ಕೆಲಸ ದುರ್ಗದಲ್ಲಿ. ಹೀಗಾಗಿ ಹಳ್ಳಿ ವಾತಾವರಣದಿಂದ ಯಾವಾಗಲಾದರೊಮ್ಮೆ 'ಸಿಟಿ' ಕಡೆ ಬಂದರೆ ಅವರಿಗೆ ಸಂಭ್ರಮವೋ ಸಂಭ್ರಮ! ಹೀಗೆ ಬಂದರೆ ಹದಿನೈದು ದಿವಸ ಕೆಲವೊಮ್ಮೆ ತಿಂಗಳಾದರೂ ಹೋಗುವುದಿಲ್ಲ.

ನಾನು ಎದ್ದು ಬಂದು ಅವರನ್ನು ಸ್ವಾಗತಿಸಿದೆ. ಬಟ್ಟೆ ಹಾಕಿಕೊಂಡು ಶೇಷಪ್ಪನ ಮನೆಕಡೆ ಹೊರಟೆ. ಶೇಷಪ್ಪನೇ ಆಪತ್‌ಬಾಂಧವ. ಅವನ ಬಳಿ ಷೇರು ಹಾಕಿದ್ದೇನೆ. ಆದ್ದರಿಂದ ಬೇಕೆಂದಾಗ ಸಾಲ ಕೊಡುತ್ತಿರುತ್ತಾನೆ.

ಕಮಲಾ ಹೇಳುತ್ತಿದ್ದಳು ''ಬಿಸಿಬೇಳೆ ಬಾತ್, ಮಂಡ್ಯದ ತುಪ್ಪದಲ್ಲಿ ಮಾಡಿದ ಹೀರೇಕಾಯಿ ಬೋಂಡ ಚೆನ್ನ! ಎರಡು ಹೋಳ್ಗೆ ತುಪ್ಪ ಅವರಿಗೆ ಹೆಚ್ಚಿಗೆ ಹಾಕು''. ಗುಂಡಣ್ಣ ಹೇಳುತ್ತಿದ್ದ ''ತುಂಬಾ ಚೆನ್ನಾಗಿ ಮಾಡಿದ್ದೀಯ ತಾಯಿ, ಸೋನಾಮಸೂರಿ ಅಕ್ಕಿ ಬದಲು, ಕೊಹಿನೂರ್ ಅಕ್ಕಿ ಹಾಕಿದ್ರೆ ಇನ್ನೂ ಚೆನ್ನಾಗಿರ್ತಿತ್ತು'' ''ಆಂಟೀ ನನಗೆ ಹೀರೇಕಾಯಿ ಬೋಂಡಾ ತುಂಬಾ ಇಷ್ಟ. ಇನ್ನೊಂದು ಹತ್ತು ಹಾಕಿ ಎಂ.ಟಿ.ಆರ್. ಸಾಸ್ ಬಾಟಲು ಕೊಡಿ ಅವೆರಡು ಕಾಂಬಿನೇಷನ್ ಚೆನ್ನಾಗಿರುತ್ತೆ!'' ಎಂದು ಪಾಪಣ್ಣ ಹೇಳುತ್ತಿದ್ದ. ನಾನು ತಲೆ ಕೊಡವಿಕೊಂಡು ಹೊರಟೆ.

ಕಮಲೆ ಬೆಳಿಗ್ಗೆಯಿಂದ ಸಂಜೆವರೆಗೆ ಎಲ್ಲ ಕನ್ನಡ ಚಾನೆಲ್‌ಗಳ ಧಾರಾವಾಹಿಗಳನ್ನು ನೋಡುತ್ತಿದ್ದಳು. ನನಗೆ ಕ್ರಿಕೆಟ್ ಅಂದರೆ ಪಂಚಪ್ರಾಣ. ಇಂಡಿಯಾ – ಆಸ್ಟ್ರೇಲಿಯಾ ಫೈನಲ್ ಒಂಡೇ ಮ್ಯಾಚ್ ನೋಡೋಣ ಅಂದರೆ ಟಿ.ವಿ.ಗೆ ಬಿಡುವೇ ಇರುತ್ತಿರಲಿಲ್ಲ. ಕಮಲೆ ಸ್ನಾನಕ್ಕೋ ಊಟಕ್ಕೋ ಹೋದಾಗ ಪಾಪಣ್ಣ 'ನಿಕ್' ಚಾನಲ್, ಪೋಗೋ ಚಾನಲ್, ಡಿಸ್ನಿ ಚಾನಲ್, ಸಿ.ಎನ್. ಚಾನಲ್ ಹೀಗೆ ಒಂದರ ನಂತರ ಒಂದು ಕಾರ್ಟೂನ್ ನೋಡುತ್ತಿದ್ದ. ನಾನು ನನ್ನ ಹೆಂಡತಿ ಬಳಿ ''ಇದೇನೇ ಇದು ನಾನು ಮ್ಯಾಚ್ ಯಾವಾಗ ನೋಡೋದು?'' ಅಂದರೆ. 'ಅವರೇನು ಶಾಶ್ವತವಾಗಿ ಇಲ್ಲೇ ಇರ್ತಾರಾ? ಒಂದೆರಡು ದಿನ ಇರ್ತಾರೆ. ನಿಮ್ಮ ಸ್ನೇಹಿತ ಗೋಪಿ ಅವರ ಮನೆಗೆ ಹೋಗಿ ಮ್ಯಾಚ್ ನೋಡಿ!' ಎಂದು ನನಗೇ ಬುದ್ಧಿ ಹೇಳಿದಳು.

ಕಮಲಾ ನನ್ನ ಮಡದಿಗೆ "ಇದೇನೇ ಈ ಹಳೇಕಾಲದ ಟಿ.ವಿ. ಇಟ್ಕೊಂಡಿದ್ದೀರಾ! ಈಗ ಸ್ಯಾಂಸಂಗ್‌ನ 42 ಇಂಚು ಸ್ಕ್ರೀನ್ ಇರೋ ಎಲ್.ಸಿ.ಡಿ. ಹೋಂ ಥಿಯೇಟರ್ ಬಂದಿದೆ. ತಗೋಬಾರದಾ? ಜಾಸ್ತಿ ಬೆಲೇನೂ ಇಲ್ಲ ಒಂದೂ ಕಾಲು ಲಕ್ಷ ಅಷ್ಟೇ" ಎಂದಳು. ನನ್ನ ಹೆಂಡತಿ ನನ್ನ ಮುಖ ನೋಡಿದಳು. ನನಗೆ ಸಿಟ್ಟು ನೆತ್ತಿಗೇರಿತು. ಕಮಲಳ ಮನೆಯಲ್ಲಿ ಹಳೆ ಕಾಲದ ಪಯೋನಾರಾ ಟಿ.ವಿ.ಯಿದೆ. ಮಾರಿದರೆ ಎರಡು ಸಾವಿರವೂ ಬರೋಲ್ಲ. ಹೋಂ ಥಿಯೇಟರ್ ಬಗ್ಗೆ ಯಾವುದೋ ಪತ್ರಿಕೇಲಿ ಜಾಹೀರಾತು ನೋಡಿರಬೇಕು!

ಮಾರನೆಯ ದಿನ... ಬಚ್ಚಲು ಮನೆಯಲ್ಲಿ ಬಟ್ಟೆ ಹಾಕಲು 'ಸ್ಟೀಲ್ ಬಾರ್' ಇತ್ತು. ಅದನ್ನು ನೋಡಿ ಪಾಪಣ್ಣ ಸ್ನಾನಕ್ಕೆ ಮುಂಚೆ ವ್ಯಾಯಾಮ ಮಾಡುವ ಹವಣಿಕೆಯಲ್ಲಿ ಬಾರ್ ಎಕ್ಸರ್‌ಸೈಜ್ ಮಾಡಲು ಸ್ಟೀಲ್ ಬಾರ್ ಹಿಡಿದು ಜಗ್ಗಿದ್ದಾನೆ. ಅದು ಬೆಂಡಾಗಿ ಕಿತ್ತುಹೋಗಿ ನೇತಾಡುತ್ತಿತ್ತು. "ಇದೇನು ಮಾಡಿದೆಯೋ ಮೂರ್ಖ!" ಎಂದು ರೇಗಿದೆ.

"ಪಾಪ, ಮಗು ಏನ್ಮಾಡುತ್ತೆ? ಅವನು ಪ್ರತಿದಿನ ಜಿಮ್‌ಗೆ ಹೋಗಿ ಅಭ್ಯಾಸ. ನಿಮ್ಮ ಮನೆಯಲ್ಲಿ ವ್ಯಾಯಾಮ ಮಾಡೋಕ್ಕೆ ಜಾಗ ಎಲ್ಲಿದೆ?!" ಅಂದ ಗುಂಡಣ್ಣ. ನನಗೆ ಏನು ಹೇಳುವುದು ತೋಚಲಿಲ್ಲ.

ಗುಂಡಣ್ಣ ಮಹಾ ಬೋರ್ ಹೊಡೆಯುವ ಆಸಾಮಿ. ಅವನ ಬಳಿ ಮಾತು ಶುರು ಮಾಡಿದರೆ ಅವನು ಭೂತಕಾಲ – ವರ್ತಮಾನಕಾಲ – ಭವಿಷ್ಯತ್ ಕಾಲ ಎಲ್ಲಾ ಕಾಲಗಳಿಗೂ ಅನ್ವಯಿಸಿ ಮಾತನಾಡುತ್ತಾನೆ. ಹಿಂದೆ ಏನಾಗಿತ್ತು ಈಗ ಏನಾಗುತ್ತಿದೆ ಮುಂದೆ ಏನಾಗಬಹುದು ಇವೆಲ್ಲಾ ಹೇಳಿದರೆ ಅವನ ಮಾತು ಮುಗಿಯೋದು ಜೇಬಿನಲ್ಲಿ ಅಮೃತಾಂಜನ ಬಾಟಲ್ ಅನಾಸಿನ್ ಮಾತ್ರೆ ಇಟ್ಟಿರಬೇಕು.

ಪಾಪಣ್ಣ ಸ್ನಾನ ಮಾಡುವಾಗ ಕೊಳಾಯಿಯನ್ನು ಬಲವಾಗಿ ತಿರುಗಿಸಿದ್ದಾನೆ. ವಾಷರ್ ಹೋಗಿ ನೀರು ಸುರಿಯಲಾರಂಭಿಸಿತು. "ಇದೇನ್ ಅಂಕಲ್ ಜಮಾನಾ ಕಾಲದ ಕೊಳಾಯಿ ಹಾಕ್ಸಿದ್ದೀರಿ! ಮೊದಲು ಬದ್ಲಾಯಿಸಿ" ಎಂದು ಹೇಳಿ, ಏನೂ ಆಗದವನ ಹಾಗೆ ಅಡಿಗೆ ಮನೆ ಕಡೆ ಹೊರಟ.

"ರೀ! ಏನ್ರೀ ಇದು ನೀರು ಸುರೀತಿದೆ? ಮೊದಲು ಹೋಗಿ ಪ್ಲಂಬರ್ ಕರ್ಕೊಂಡು ಬನ್ನಿ" ಎಂದು ಕೂಗಿದಳು ನನ್ನ ಮಡದಿ. ಪಾಪಣ್ಣನನ್ನು ಶಪಿಸುತ್ತಾ ನಾನು ಹೊರಟೆ. ದಾರೀಲಿ ನನ್ನ ಗೆಳೆಯ ಗೋಪಿ ಸಿಕ್ಕಿದ. "ಬೆಳಿಗ್ಗೆ ಎಲ್ಲಿಗೆ ಹೊರಟಿದ್ದೀಯೋ? ಈದಿನ ಆಯುಧ ಪೂಜೆ, ಮನೆಯಲ್ಲಿ ಪೂಜೆ ಆಯ್ತಾ?" ಎಂದು ಅವನು ಕೇಳಿದಾಗ ನನಗೆ ಆಯುಧಪೂಜೆ ನೆನಪಾಯಿತು.

ಅವನಿಗೆ ಮನೆಯ ರಾದ್ಧಾಂತದ ವಿಷಯ ಹೇಳಿದೆ.

"ಸರಿ, ನನ್ನ ಸ್ಕೂಟರ್‌ನಲ್ಲಿ ಕುಳಿತುಕೋ ಪ್ಲಂಬರ್‌ನ ಹುಡುಕೋಣ" ಎಂದ. ಇಬ್ಬರೂ ಹೊರಟೆವು. ಆದಿನ ಆಯುಧ ಪೂಜೆಯಾದ್ದರಿಂದ ಪ್ಲಂಬರ್ ಅಂಗಡಿಗಳು ಮುಚ್ಚಿದ್ದವು. ಹತ್ತಾರು ಕಡೆ ಸುತ್ತಾಡಿದ ಮೇಲೆ ಒಂದು ಅಂಗಡಿ ತೆಗೆದಿರುವುದು ಕಂಡಿತು.

ಮರಳುಗಾಡಿನಲ್ಲಿ ಓಯಸಿಸ್ ಕಂಡಂತೆ ಧಾವಿಸಿದೆವು. ಅಂಗಡಿ ಮಾಲೀಕ ಶಾಸ್ತ್ರಿ ನಮ್ಮಿಬ್ಬರನ್ನು ಸ್ವಾಗತಿಸಿ ಕುರ್ಚಿ ಹಾಕಿ ಕುಳ್ಳಿರಿಸಿದ. ನಾನು ಚಡಪಡಿಸಿದೆ. ಮೆಕಾನಿಕ್ ಉಪಕರಣಗಳಿಟ್ಟು ಭುವನೇಶ್ವರಿ ಫೋಟೋ ಇಟ್ಟು ಮಾವಿನ ತೋರಣ, ಬಾಳೇ ಕಂಬಗಳನ್ನು ಕಟ್ಟಿದ್ದರು. ಬಣ್ಣದ ಸೀರಿಯಲ್ ಲೈಟ್ ಹಾಕಿದ್ದರು. ಪುರೋಹಿತರು ಬಂದವರು ಪೂಜೆ ಮಾಡಿದರು. ಕುಂಬಳಕಾಯಿಯನ್ನು ಕೆಲಸದ ಹುಡುಗರು ಒಡೆದರು, ನನಗೂ ಗೋಪಿಗೂ ಸ್ವೀಟ್ ಪ್ಯಾಕೆಟ್ ಕೊಟ್ಟರು. ಮಾಲೀಕ ಶಾಸ್ತ್ರಿ ನನ್ನ ಕಡೆ ನೋಡಿ ''ಹುಡುಗರಿಗೆ ನಾಲ್ಕು ಬುದ್ಧಿಮಾತು ಹೇಳಿ!'' ಎಂದ. 'ನಾನು ಭಾಷಣ ಮಾಡಲು ಬಂದಿಲ್ಲ' ಎಂದು ಹೇಳಿ ನನ್ನ ಕಷ್ಟ ಹೇಳಿಕೊಂಡೆ.

ಶಾಸ್ತ್ರಿ ನನ್ನ ಕಡೆ ತಿರುಗಿ ''ನಿಮ್ಮ ಕಷ್ಟ ನನಗೆ ಅರ್ಥವಾಗುತ್ತೆ. ಆದರೆ ಈದಿನ ಹಬ್ಬದ ದಿನ ಜೊತೆಗೆ ಹುಡುಗರಿಗೆ ಬೋನಸ್ ಕೊಡ್ತೀವಿ. ಬೋನಸ್ ತೊಗೊಂಡು ಒಂದುವಾರ ಊರುಗಳಿಗೆ ಹೋಗ್ತಾರೆ ಯಾರು ಬರ್ತಾರೆ ಹೇಳಿ? ನಾವು ಹಿಂದೂಗಳು ಸಾರ್ ನಾವೇ ಹಿಂದೂ ಸಂಪ್ರದಾಯ ಆಚಾರ ವಿಚಾರ ಪರಿಪಾಲಿಸ್ದಿದ್ರೆ ಬೇರೆಯವರು ಆಚರಿಸ್ತಾರಾ ಇವತ್ತು ಯಾವ ಉಪಕರಣವನ್ನು ಮುಟ್ಟೋದಿಲ್ಲ. ಅದು ದೇವರ ಸಮಾನ' ಎಂದು ಭಾಷಣವನ್ನೇ ಬಿಗಿದ.

''ಇವರು ದೊಡ್ಡ ಸಾಹಿತಿಗಳು ಶಾಸ್ತ್ರಿಗಳೇ!'' ಅಂತ ಗೋಪಿ ಏನೋ ಹೇಳಲು ಹೊರಟ.

''ಗೊತ್ತು ಗೊತ್ತು, ಇವರು ಹಾಸ್ಯ ಸಾಹಿತಿಗಳಲ್ಲವೇ? ಇವರ ಹಾಸ್ಯ ಕಾರ್ಯಕ್ರಮಗಳಿಗೆ ಬಂದಿದ್ದೀನಿ. ಮೊದಮೊದಲು ತುಂಬಾ ನಗು ಬರ್ತಾಯಿತ್ತು. ಆಮೇಲೆ ಅದೇ ಹಳೇ ಜೋಕುಗಳನ್ನು ಕೇಳಿ ನಗು ಬಾರದೆ ಪೇಚಾಡಿದ್ದೀನಿ. ಆಗಾಗ ನಾವು ಮೆಕಾನಿಕ್‌ಗಳು ಪಾರ್ಟ್ಸ್ ಬದಲಾಯಿಸೋ ಹಾಗೆ ನೀವೂ ಜೋಕುಗಳನ್ನು ಬದಲಾಯಿಸ್ತಾ ಇರಬೇಕು. ಆಗ ಕೇಳೋರ್ಗೆ ಮಜಾ ಸಿಗುತ್ತೆ'' ಅಂದ. ನಾವು ಜಾಗ ಖಾಲಿ ಮಾಡಿದೆವು.

ಅಲ್ಲಿದ್ದವರಲ್ಲಿ ಒಬ್ಬ ಹುಡುಗ ''ನೀವು ಜೋಸೆಫ್ ಹತ್ತಿರ ಹೋಗಿ ಬರ್ತಾನೆ' ಎಂದು ಹೇಳಿ, ಅವನ ಅಡ್ರೆಸ್ಸು ಮೊಬೈಲ್ ನಂಬರ್ ಹೇಳಿದ ಜೋಸೆಫ್‌ನನ್ನು ಹುಡುಕಿಕೊಂಡು ಹೊರಟೆವು. ಊರಾಚೆಯಿದ್ದ ಥಾಮಸ್ ಟೌನ್ಗೆ ಹೋಗಿ ಕಷ್ಟಪಟ್ಟು ಜೋಸೆಫ್ ಮನೆ ಹುಡುಕಿದೆವು. ''ಜೋಸೆಫ್ ಯಾರದೋ ಮನೆಗೆ ಕೊಳಾಯಿ ರಿಪೇರಿಗೆ ಹೋಗಿದ್ದಾರೆ ಬರುವುದು ತಡವಾಗುತ್ತೆ'' ಅಂದರು ಅವನ ಮನೆಯಲ್ಲಿ. ಬಹಳ ಹೊತ್ತು ಹೊರಗೆ ಬಂದು ಅಂಗಡಿ ಬಳಿ ನಿಂತಿದ್ದೆವು. ಫೋನ್ ಮಾಡಿದರೆ ಸ್ವಿಚ್ಡ್ ಆಫ್ ಅಂತ ಬರ್ತಿತ್ತು - ಕೊನೆಗೆ ಜೋಸೆಫ್ ಒಬ್ಬ ಹುಡುಗನ ಜೊತೆಗೆ ಬಂದ. ನಾವು ನಮ್ಮ ವಿಷಯ ಹೇಳಿದೆವು. ''ನಾನು ತುಂಬ ಬಿಸಿ ಸಾರ್. ಇನ್ನು ನಾಲ್ಕು ಕಡೆ ಹೋಗ್ಬೇಕು, ನಿಮಗೋಸ್ಕರ ಬರ್ತೀನಿ. ಐನೂರು ರೂಪಾಯಿ ಆಗುತ್ತೆ'' ಅಂದ ಚೌಕಾಸಿ ಮಾಡಿದರೆ ಕೇಳಲೇ ಇಲ್ಲ. ಕೊನೆಗೆ ಒಪ್ಪಿಕೊಂಡು ಒಂದು ರಿಕ್ಷಾ ಹಿಡಿದು ಕರಕೊಂಡು ಬಂದೆವು. ಕೊಳಾಯಿಯಲ್ಲಿ ನೀರು ಝುಳ ಝುಳ ಎಂದು ಹೋಗ್ತಿತ್ತು. ಎಲ್ಲಾ ನೋಡಿ ಹೊಸ ವಾಷರ್, ಹೊಸ ಕೊಳಾಯಿ ಹಾಕ್ಬೇಕು ಅಂದ.

ವಿಧಿಯಿಲ್ಲದೆ ಹಾರ್ಡ್‌ವೇರ್ ಅಂಗಡಿಗೆ ಹೋಗಿ ತಂದದ್ದಾಯಿತು. ಎಲ್ಲಾ ಸರಿ ಎಂದು ಹೇಳಿ ಕೊಳಾಯಿ ಹತ್ತಿರ ಹೋದವನು ಏನನ್ನೋ ಹುಡುಕಲು ತೊಡಗಿದ. ಅವನ ಜೊತೆಯಲ್ಲಿ ಬಂದ ಹುಡುಗ ''ಏನು ಹುಡುಕ್ತೀರಿ ಗುರು?!'' ಎಂದ.

''ಕೊಳಾಯಿ ರಿಪೇರಿ ಮಾಡಿದ್ವಲ್ಲ ಆ ಮನೇಲಿ ಕಟಿಂಗ್ ಪ್ಲೇಯರ್ ಬಿಟ್ಟು ಬಂದಿದ್ದೇವೆ ಹೋಗಿ ತಗೊಂಡು ಬಾ'' ಎಂದ.

''ಗುರೂ...ऽऽ'' ಎಂದು ಹುಡುಗ ಏನೋ ಹೇಳಲು ಹೊರಟ. ಜೋಸೆಫ್ ರೇಗಿಬಿಟ್ಟು ''ಹೇಳಿದಷ್ಟು ಮಾಡು!'' ಎಂದ.

ಗೋಪಿ, ಆ ಹುಡುಗನನ್ನು ಸ್ಕೂಟರ್‌ನಲ್ಲಿ ಕರ್ಕೊಂಡು ಹೋದ. ಅವರು ಬರುವುದು ಅರ್ಧ ಗಂಟೆ ಆಯಿತು. ಅಷ್ಟರಲ್ಲಿ ಜೋಸೆಫ್ ''ಬೆಳಿಗ್ಗೆಯಿಂದ ಟಿಫನ್ ಮಾಡಿಲ್ಲ'' ಅಂತ ಹೇಳಿ ಮನೆಯಲ್ಲಿ ಮಾಡಿದ್ದ ವೆಜಿಟಬಲ್ ರವೆಬಾತ್, ಕಾಫಿ ಕುಡಿದು ಮುಗಿಸಿ, ಏನೋ ಹುಡುಕುವವನಂತೆ ಜೇಬು ತಡಕಿ ನೋಡಿಕೊಂಡು ''ಸಿಗರೇಟ್ ಪ್ಯಾಕ್ ಮರೆತು ಬಂದೆ, ಒಂದು ಪ್ಯಾಕ್ ಗೋಲ್ಡ್ ನ್ಯಾಷನಲ್ ತಂದುಕೊಡಿ'' ಎಂದ. ಅದೂ ಸರಬರಾಜಾಯಿತು. ನಾನು ಬೆವರಿಹೋದೆ. ಇದೇನು ನೈಸ್ ರಸ್ತೆ ನಿರ್ಮಾಣವೋ ಇಲ್ಲ ಮೆಟ್ರೋ ಕಾಮಗಾರಿನಾ? ಎಂದು ನನಗೇ ಸಂಶಯವಾಯಿತು. ಗೋಪಿ ಮತ್ತು ಹುಡುಗ ಬಂದರು, ಆದರೆ ಕಟಿಂಗ್ ಪ್ಲೇಯರ್ ತರಲಿಲ್ಲ 'ಇಲ್ಲ' ಎಂಬಂತೆ ಕೈಯಾಡಿಸಿದ ಹುಡುಗ. ''ಸಾರಿ ಸಾರ್ ಕಟಿಂಗ್ ಪ್ಲೇಯರಿಲ್ಲದೆ ನಾನು ಏನೂ ಮಾಡಲು ಆಗೋಲ್ಲ'' ಎಂದು ಜೋಸೆಫ್ ಹೊರಡಲು ಸಿದ್ಧನಾದ. ನಾನು ತಬ್ಬಿಬ್ಬಾದೆ. ''ನೀರು ಜೋಗು ಜಲಪಾತದ ತರಹ ಹೋಗ್ತಿದೇರಿ ಇನ್ನು ರಿಪೇರಿ ಆಗ್ಲಿಲ್ವ?'' ನನ್ನಾಕೆ ಕೂಗು ಹಾಕಿದಳು. ''ಜೋಗದ ಗುಂಡೀಲಿ ಈಗೆಲ್ಲಿ ನೀರು ಇರುತ್ತೆ ಬಿಡೇ'' ಎಂದಳು ಕಮಲ. ''ಮಳೆಗಾಲದಲ್ಲಿರುತ್ತಮ್ಮಾ!'' ಎಂದ ಪಾಪಣ್ಣ ''ಪ್ರವಾಹ ಬಂದಾಗ ಉತ್ತರ ಕರ್ನಾಟಕದ ಕಡೆ ಸರ್ಕಾರ ಗಮನ ಹರಿಸೋಹಾಗೇ ಅನ್ನು!'' ಗುಂಡಣ್ಣ ಕಿಸಕ್ಕನೆ ನಕ್ಕು ಪೇಪರ್ ಓದತೊಡಗಿದ. ಜೋಸೆಫ್‌ನ ಅಸಿಸ್ಟೆಂಟ್ 'ಟೋನಿ' ಮಲೆಯಾಳಿ ಹುಡುಗ, ಮುಂದೆ ಬಂದು ''ಗುರೂ, ನಿನಗೆ ವಯಸ್ಸಾಯ್ತು, ಮರೆವು ಜಾಸ್ತಿ ನಾನು ಆಗ್ಳೇ ಹೇಳಕ್ಬಂದ್ರೆ 'ಹೇಳಿದಷ್ಟು ಕೇಳು' ಅಂದ್ಬಿಟ್ಟೆ. ಕಟಿಂಗ್ ಪ್ಲೇಯರು ನಿನ್ನ ಷರಟಿನ ಹಿಂಭಾಗಕ್ಕೆ ಕಾಲರಿಗೆ ಸಿಗಿಸಿಕೊಂಡಿದ್ದೀಯ'' ಅಂದ. ಜೋಸೆಫ್ ತನ್ನ ಕಾಲರ್‌ನಲ್ಲಿ ಕೈಯಾಡಿಸಿ, ಕಟಿಂಗ್ ಪ್ಲೇಯರ್ ತೆಗೆದು ಕೆಲಸ ಆರಂಭಿಸಿದ. ಹೇಗೋ ಹೊಸ ಕೊಳಾಯಿ ಫಿಕ್ಸ್ ಮಾಡಿ, ನೀರು ನಿಲ್ಲಿಸಿ ಹಣ ಪಡೆದು ಹೊರಟುಹೋದ. ಆಯುಧಪೂಜೆ ಮುಗಿದಾಗ ಸಂಜೆಯಾಗಿತ್ತು.

ವಿಜಯದಶಮಿ ದಿನ, ಕಮಲಾ ಬಲವಂತವಾಗಿ ನನ್ನಾಕೆಯನ್ನು ಹೊರಡಿಸಿ ಷಾಪಿಂಗ್‌ಗೆ ಹೋದಳು ಪಾಪಣ್ಣ ಅವರ ಜೊತೆ ಹೋದ. ಸೆಂಟ್ರಲ್, ಗರುಡಾಮಾಲ್, ಪೋರಂ ಎಲ್ಲಾ ಸುತ್ತಿ ಷಾಪಿಂಗ್ ಮುಗಿಸಿ, ಪಿ.ವಿ.ಆರ್. ನಲ್ಲಿ ಪಿಕ್ಚರ್ ನೋಡಿಬರುವುದು ಅವರ ಪ್ರೋಗ್ರಾಂ. ನನ್ನವಳು ನನ್ನ ಬಳಿ ಹಣ ಕೇಳಿದಳು ನಾನು 'ಇಲ್ಲ'ವೆಂದು ಕೈಯಾಡಿಸಿದೆ. ಅವಳು ತನ್ನ ಬರ್ತ್‌ಡೇ ದಿನ ರೇಷ್ಮೆ ಸೀರೆ, ಚಿನ್ನದ ಆಭರಣ ಖರೀದಿಸಲು ಕೊಡಿಟ್ಟ ಹಣ ತೆಗೆದುಕೊಂಡು

ಹೊರಟಳು. "ಅಯ್ಯೋ ಪರ್ಸ್ ತರೋದು ಮರೆತೆ. ಊರಿನಿಂದ ಹೊರಡುವಾಗ ಒಂದೇ ಅವಸರ ಮಾಡಿದರು. ನಾನು ಊರಿಗೆ ಹೋದ ಕೂಡಲೇ ಮನಿ ಆರ್ಡರ್ ಮಾಡ್ತೀನಿ!" ಅಂತ ಕಮಲಾ ಹೇಳುವುದು ನನ್ನಾಕೆಗೆ ಗೊತ್ತು. ಇದು ಹೊಸ ಅನುಭವ ಅಲ್ಲವಲ್ಲ.

"ಅವರೆಲ್ಲಾ ಷಾಪಿಂಗ್‌ಗೆ ಹೋದ್ರು ಸಾವಿತ್ರೇ ಮನೇಲಿ ಕೂತು ಏನ್ಮಾಡೋದು ಬನ್ನಿ ಕಬ್ಬನ್ ಪಾರ್ಕ್ ಎಂ.ಜಿ. ರೋಡು, ಸೆಂಟ್‌ಮಾರ್ಕ್ಸ್ ಕಡೆ ಹೋಗಿ ಬರೋಣ. ಹೇಗಿದ್ರೂ ಅವರು ಬರೋದು ತಡವಾಗುತ್ತೆ" ಎಂದು ಹೇಳಿ ಡ್ರೆಸ್ ಹಾಕಿಕೊಂಡು ಹೊರಟು ನಿಂತ ಗುಂಡಣ್ಣ. ಅವನು ಕತ್ತಲಾಗುವವರೆಗೆ ಅಲ್ಲಿ ಇಲ್ಲಿ ಸುತ್ತಿ, ನಂತರ ಬಾರ್ ಅಟ್ಯಾಚ್ಡ್ ರೆಸ್ಟೋರೆಂಟ್‌ಗೆ ನುಗ್ಗಿ, ಕಂಠಪೂರ್ತಿ ಕುಡಿದು, ಸಾಕೆನಿಸುವಷ್ಟು ಚಿಕನ್, ಮಟನ್, ಫಿಷ್ ಖಾದ್ಯಗಳನ್ನು ತಿಂದು ಮನೆಗೆ ಬಂದು ಹೆಬ್ಬಾವಿನಂತೆ ಬಿದ್ದುಕೊಳ್ಳುತ್ತಿದ್ದ. ಕುಡಿದು ತಿನ್ನುವವರೆಗೆ ನನ್ನ ತಲೆ ಕೊರೆದುಬಿಡುತ್ತಿದ್ದ. ಅವನ ಕಾಡಿನ ಅನುಭವಗಳು ಯಾರಿಗೆ ಬೇಕು? ನಮ್ಮ ಮನೆ ಪಕ್ಕದ ಸೈಟಿನಲ್ಲಿ ಮನೆ ಕಟ್ಟಿಲ್ಲ ನಮ್ಮ ಲೊಕ್ಯಾಲಿಟಿ ಹುಡುಗರು ಪ್ಲೇಗ್ರೌಂಡ್ ಮಾಡಿಕೊಂಡಿದ್ದಾರೆ. ಅವರ ಜೊತೆ ಆಡಲು ಹೋದ ಪಾಪಣ್ಣ ಕ್ರಿಕೆಟ್ ಮ್ಯಾಚ್‌ನಲ್ಲಿ ಸಿಕ್ಸರ್ ಹೊಡೆಯೋದಕ್ಕೆ ಹೋಗಿ ನಮ್ಮ ಮನೆ ಕಿಟಕಿಗೆ ಬಾಲು ತಾಕಿ ಗಾಜು ಪುಡಿಪುಡಿಯಾಯಿತು. "ಏನೇ, ನಿನ್ನ ಮಗ ಇಷ್ಟು ಚೆನ್ನಾಗಿ ಕ್ರಿಕೆಟ್ ಆಡ್ತಾನೆ!" ಎಂದು ಗುಂಡಣ್ಣ ಹೆಂಡತಿ ಬಳಿ ಹೇಳಿಕೊಂಡ. "ಎಷ್ಟಾದರೂ ನನ್ನ ಮಗ ಅಲ್ವೇ!" ಎಂದು ಬಿಂಕ ತೋರಿಸಿದಳು ಕಮಲಾ.

ನಾನು ಕಾದಂಬರಿ ಬರೆಯಬೇಕೆಂದು ತಂದಿಟ್ಟುಕೊಂಡಿದ್ದ ಬಿಳೀ ಹಾಳೆಗಳಲ್ಲಿ ಏನೇನೋ ಗೀಚಿ, ಪೇಪರ್ ಮುದುಡಿ ಡಸ್ಟ್‌ಬಿನ್‌ಗೆ ಹಾಕುತ್ತಿದ್ದ ಗುಂಡಣ್ಣ, ರಾಶಿಯಾಗಿ ಬಿದ್ದಿತ್ತು ಪೇಪರ್‌ಗಳ ಕಸ. ನನಗೆ ಹೊಟ್ಟೆ ಉರಿದು ಹೋಯಿತು.

"ಯಾಕೆ ಗುಂಡಣ್ಣ ಪೇಪರ್‌ಗಳಲ್ಲಿ ಗೀಚಿ ಹಾಕ್ತಿದ್ದೀಯಾ! ಏನಾದರೂ ಪ್ರೇಮಪತ್ರ ಬರೀತಿದ್ಯಾ?" ಎಂದು ಕೇಳಿದೆ. "ಇಲ್ಲಕಣಪ್ಪ, ಊರ್ದುಗೆರೆಯಿಂದ ಬೆಂಗಳೂರಿಗೆ ವರ್ಗಮಾಡಿ ಅಂತ ಮುಖ್ಯಮಂತ್ರಿಗಳಿಗೆ ಅರ್ಜಿ ಬರೀತಿದ್ದೀನಿ" ಅಂದ. "ವರ್ಗ ಅನ್ನಬೇಡ್ರಿ ಫುಟ್‌ಬಾಲ್ ಅನ್ನಿ" ಎಂದಳು ಕಮಲೆ. ಕೊನೆಗೆ ನಾನೇ ಅರ್ಜಿ ಬರೆದು ಕೊಡಬೇಕಾಯಿತು.

ನಾನು ಮನೆಯಲ್ಲಿ ಇಲ್ಲದೇ ಇದ್ದಾಗ, "ಕಾರು ಡ್ರೈವಿಂಗ್ ಕಲೀತೀನಿ" ಅಂತ ಹೇಳಿ ನನ್ನ ಕಾರು ಡ್ರೈವ್ ಮಾಡ್ಕೊಂಡು ಹೋಗಿ, ಕ್ವಾಲೀಸ್ ಗಾಡಿಗೆ ಗುದ್ದಿ, ಗಾಡಿಬಿಟ್ಟು ಓಡಿಬಂದಿದ್ದಳು ಕಮಲೆ. ಕ್ವಾಲೀಸ್‌ನವನು ನಮ್ಮ ಮನೆ ಪತ್ತೆ ಹಚ್ಚಿ ಹುಡುಕಿಕೊಂಡು ಬಂದು ಗಲಾಟೆ ಮಾಡಿ ಹತ್ತುಸಾವಿರ ಹಣ ವಸೂಲಿ ಮಾಡಿಕೊಂಡು ಹೋದ. ಪೊಲೀಸಿನವನು ಬಂದು 'ಹಿಟ್ ಅಂಡ್ ರನ್' ಕೇಸ್ ಹಾಕ್ತೀನಿ ಅಂತ ಬೆದರಿಸಿ ಸಾವಿರಾರು ರೂಪಾಯಿ ಕೈಬಿಟ್ಟು ಹೋಯಿತು. ಇನ್‌ಷ್ಯೂರೆನ್ಸ್ ಕ್ಲೈಂ ಮಾಡಿದಾಗ ಕಾರು ಪೊಲೀಸ್ ಸ್ಟೇಷನ್ ಮುಂದೆ ನಿಲ್ಲಿಸಬೇಕೆಂದು ಗ್ಯಾರೇಜಿನಲ್ಲಿ ಕೇಳಿದಾಗ, "ಇಪ್ಪತ್ತೈದು ಸಾವಿರ ಆಗುತ್ತೆ!" ಎಂದ. ನಾನು ಕೈಚೆಲ್ಲಿ ಕಾರನ್ನು ಮನೆ ಮುಂದೆ ನಿಲ್ಲಿಸಿ ಕೈಕಟ್ಟಿ ಕುಳಿತೆ. ಮಾರನೆ ದಿನವೇ ಗುಂಡಣ್ಣ ತನ್ನ ಸಂಸಾರದೊಂದಿಗೆ ಊರಿಗೆ ಹೊರಟ, ಸ್ಕ್ಯಾಂಡಲ್‌ಗೆ ಸಿಕ್ಕಿಹಾಕಿಕೊಂಡು ರಾಜೀನಾಮೆ

ನೀಡಿದ ನಟಿಪನಂತೆ ಅವನ ಮುಖ ಸಪ್ಪಗಾಗಿತ್ತು. ಗೋಪಿ ಟ್ಯಾಕ್ಸಿ ತಂದು ನಿಲ್ಲಿಸಿದ್ದ. ನನ್ನಾಕೆ ಬಿಕ್ಕಿ ಬಿಕ್ಕಿ ಅಳುತ್ತಾ ಕಮಲೆಯ ಕೈ ಹಿಡಿದು "ಕಮಲೆ ಮತ್ತೆ ಮರಳಿ ಬಾ!" ಎಂದಳು. ಕಮಲೆ ನನ್ನಪಳನ್ನು ಅಪ್ಪಿ ಅತ್ತಳು. ಕೊನೆಗೂ ಟ್ಯಾಕ್ಸಿಯಲ್ಲಿ ಕುಳಿತು ಹೊರಟರು. "ಬಸ್ಸು ಹತ್ತಿಸಿ ಬರ್ತೀನಿ" ಎಂದು ಹೇಳಿ ಗೋಪಿ ಅವರ ಜೊತೆ ಹೊರಟ" ಅವರು ಹೋದ್ರೆ ನೀನ್ಯಾಕೆ ಅತ್ತೀಯಾ ಸಂತೋಷ ಪಡೋದು ಬಿಟ್ಟು" ಎಂದೆ.

"ಹಾಗಲ್ಲರೀ, ಕಮಲೆಗೆ ಏನ್ರೀ ಕಡಿಮೆ? ಚಿಕ್ಕಮ್ಮ ಅನುಕೂಲವಾಗೇ ಇದ್ದಾರೆ. ಕಮಲೆ ನನಗಿಂತ ಚೆನ್ನಾಗಿದ್ದಾಳೆ. ಕಾಲೇಜಿನಲ್ಲಿ ಅವಳು ಚೆನ್ನಾಗಿ ಓದ್ತಾ ಇದ್ದಳು ಗೊತ್ತಾ, ಸ್ಪೋರ್ಟ್ಸ್, ಕಲ್ಚರಲ್ ಆಕ್ಟಿವಿಟೀಸ್‌ನಲ್ಲಿ ಎಷ್ಟೊಂದು ಬಹುಮಾನ ತಗೊಂಡಿದ್ದಾಳೆ. ಕಾಲೇಜಿನ ರಾಣಿಯಾಗಿದ್ಳು. ಅವಳ ಅಪ್ಪ ಅಮ್ಮ ಅವಳ ಇಷ್ಟಕ್ಕೆ ವಿರೋಧವಾಗಿ ಈ ಫಾರೆಸ್ಟ್ ಆಫೀಸರ್ ಜೊತೆ ಮದ್ವೆ ಮಾಡಿದ್ರು. ಗೌರ್ನಮೆಂಟ್ ಕೆಲಸ, ಮೇಲ್ಸಂಪಾದನೆಯಿದೆ ಅಂತ ಜಬರ್ದಸ್ತಿ ಮಾಡಿದ್ರು. ಅವಳು ನಮ್ಮ ಹಾಗೆ ಸಿಟೀಲಿ ಇದ್ದಿದ್ರೆ – ಹೀಗೆಲ್ಲಾ ನಡಕೋತಿದ್ಳ. ಯಾರದೋ ತಪ್ಪಿಗೆ ಅವಳು ಶಿಕ್ಷೆ ಅನುಭವಿಸ್ತಿದ್ದಾಳೆ" ಎಂದಳು. ಅಪರಾಧಿ ಮನೋಭಾವ ನನ್ನನ್ನು ಕಾಡಿಸಿತು.

ಸಾವಿರದ ಮಾತು
ಸಾವಿರದ
ಮನೆಯ ಸಾಸಿವೆಯು
ಮಾತೇಕೆ?
ಆದಿ
ಸಾವಿರದ
ಸಾವಿರದ
ಮಾತು
ಅದು ಬೆಲೆಯುಳ್ಳ ಮಾತು
ಅದು ಹತ್ತು ಲಕ್ಷದ ಮಾತು

– ಎನ್. ಪ್ರಕಾಶ್

ಮೊಬೈಲ್ ಮತ್ತು ನಾನು

• ಲೀಲಾ ಮಿರ್ಲೆ

ಈ ಮೊಬೈಲ್ ಫೋನ್‌ಗೂ, ನನಗೂ ಅದೆಂತಹುದೋ ಒಂದು ತರಹ ವಿಚಿತ್ರ ಸಂಬಂಧ. ಅದು ತರುವ ಮುಜುಗರದಿಂದಾಗಿ ಈಚೆಗೆ ಅದನ್ನು ನೋಡಿದರೆ, ಒಂದು ತರಹ ಭಯವಾಗಲು ಪ್ರಾರಂಭವಾಗಿದೆ.

ನನ್ನ ಮಂಡಿ, ತೊಂದರೆ ಕೊಡಲು ಶುರುವಾದಾಗಿನಿಂದ, ಸ್ವತಃ ಕಾರನ್ನು ನಡೆಸುವುದನ್ನು ನಿಲ್ಲಿಸಿಬಿಟ್ಟಿದ್ದೇನೆ. ಹಾಗಾಗಿ ಡ್ರೈವರುಗಳ ಸಹಾಯ, ಅನಿವಾರ್ಯ, ಮೊದಲು ಬಂದ ಡ್ರೈವರ್ ಸುರೇಶ. ಈಚೆಗೆ ಡ್ರೈವರುಗಳು ಮೊಬೈಲ್ ಹೊಂದಿರುವುದು ಸಾಮಾನ್ಯ. ತುಂಬ ಅವಶ್ಯಕವೂ ಸಹ. ಪಾರ್ಕಿಂಗ್ ತೊಂದರೆ ಇರುವಾಗ ಅವರನ್ನು ಸಂಪರ್ಕಿಸುವುದಕ್ಕೆ ಸುಲಭ. ಸರಿ, ಸುರೇಶನ ಮೊಬೈಲ್ ನಂಬರನ್ನು ಬರೆದುಕೊಂಡೆ. ಬಂದ ಹೊಸದರಲ್ಲಿ ಒಮ್ಮೆ ನನ್ನನ್ನು ಅಂಗಡಿ ಬೀದಿಯಲ್ಲಿ ಬಿಟ್ಟು, ಬೇರೆಲ್ಲೋ ಪಾರ್ಕ್ ಮಾಡಿದ್ದ. ನನ್ನ ಕೆಲಸ ಮುಗಿದ ನಂತರ ಅವನ ನಂಬರಿಗೆ ಡೈಲ್ ಮಾಡಿದೆ. ಹಾಡು ಶುರುವಾಯಿತು. ''ಅನಿಸುತಿದೆ ಏಕೋ ಇಂದು, ನೀನೇ ನನ್ನವಳೆಂದು...'' ಇತ್ಯಾದಿ ಸುಮಧುರವಾದ ಧ್ವನಿ ಭಾವಪೂರ್ವಕ ಗಾನ. ಹಾಡು ಮುಂದುವರಿಯುತ್ತಲೇ ಇದೆ. ಇದೆಲ್ಲಿಯ ಹಣೇಬರಹ! ಸುರೇಶನೊ ಹರೆಯದ ಹುಡುಗ. ನಾನು ಹಣ್ಣು ಹಣ್ಣು ಮುದುಕಿ ಅಲ್ಲದಿದ್ದರೂ, ಸಾಕಷ್ಟು ವಯಸ್ಸಾದ ವೃದ್ಧೆ. ನಮ್ಮಿಬ್ಬರ ಮಧ್ಯೆ ಈ ಪ್ರೇಮಗೀತೆ. ನನಗೇಕೊ ತುಂಬ ಕಸಿವಿಸಿಯಾಯಿತು. ಸುರೇಶನಿಗೆ ಫೋನ್ ಮಾಡಬೇಕಾದಾಗೆಲ್ಲಾ ಧೈರ್ಯ ತಂದುಕೊಂಡು ಡೈಲ್ ಮಾಡಿ, ಒಂದು ನಿಮಿಷ ಆ ಗಾನವನ್ನು ಸಂಕೋಚದಿಂದ ಕೇಳಿ ವದ್ದಾಡುತ್ತಿದ್ದೆ.

ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ, ಎಂದು ತಿಳಿದವರು ಹೇಳುತ್ತಾರೆ. ಈ ಮಾತು ಡ್ರೈವರುಗಳ ವಿಷಯದಲ್ಲಂತೂ ನೂರು ಪರ್ಸೆಂಟ್ ನಿಜ ಎನ್ನುವುದನ್ನು ಅನುಭವದಿಂದ ತಿಳಿಯುತ್ತಿದ್ದೇನೆ.

ಎಂಟು ತಿಂಗಳು ಕೆಲಸ ಮಾಡಿ, ಯಾವುದೊ ಕಂಪನಿ ಕೆಲಸ ಸಿಕ್ಕಿತೆಂದು ದಿಢೀರನೆ ಸುರೇಶ ಕೆಲಸ ಬಿಟ್ಟ, ನನಗೆ ಒಂದು ತರಹ ಖುಷಿ. ಸಧ್ಯ, ಕಂಡ ಕಂಡ ಹೊತ್ತಿನಲ್ಲಿ ''ಏಕೆ ಅನಿಸುತಿದೆ....'' ತಪ್ಪಿತಲ್ಲಾ, ಎಂದು!

ನಂತರ ಬಂದ ಡ್ರೈವರ್ ಜೇಮ್ಸ್. ಆತ ಸುಮಾರು ಅರವತ್ತರ, ವಯಸ್ಸಾದ ಮನುಷ್ಯ.

ಅನುಭವಿ ಡ್ರೈವರ್. ಸರಿ, ಮೊಬೈಲ್ ನಂಬರ್ ತೆಗೆದುಕೊಂಡದ್ದಾಯಿತು. ಈತನ ಮೊಬೈಲ್‌ನಲ್ಲಿ ಬರೀ ರಿಂಗ್ ಟೋನ್ ಬರುವುದು. ಈ ಪಡ್ಡೆ ಹುಡುಗರ ಹಾಗೆ ಯಾವು ಯಾವುದೊ ಸಿನಿಮಾ ಹಾಡು ಹಾಕುವುದಿಲ್ಲ ಎಂದು ಊಹಿಸಿ ಸಮಾಧಾನ ಪಟ್ಟುಕೊಂಡೆ.

ನಂತರ ಮನೆಗೆ ಯಾವುದೊ ಸಮಾರಂಭಕ್ಕೆ ಹೋಗಿದ್ದೆ. ಆಚೆ ಬಂದಾಗ ಕಾರು ಕಾಣಲಿಲ್ಲ. ಸರಿ, ಫೋನ್ ಮಾಡಿದೆ. ""Let's meet in the moon light, to night, to night, in the moon light..." ಅಂತ ಪುರುಷ ಧ್ವನಿಯೊಂದು ಭಾವಪೂರ್ವಕವಾಗಿ ಗುನುಗುತ್ತಿತ್ತು. ಇದೇನಪ್ಪ ದರಿದ್ರ. ಈ ವಯಸ್ಸಿನಲ್ಲಿ ಇಂತಹುದನ್ನೆಲ್ಲಾ ದಿನಾ ಪದೇ ಪದೇ ಕೇಳಬೇಕಲ್ಲ, ಅಂತ ಬೇಜಾರಾಯಿತು.

ನನ್ನ ಅಸಹಾಯಕ ಸ್ಥಿತಿಯನ್ನು ನೋಡಿ, ನನ್ನ ಮೇಲೇ ನನಗೆ ಮರುಕ ಬಂತು. ಇದನ್ನು 'ಕಷ್ಟ'ದ ಗುಂಪಿಗೆ ಸೇರಿಸಲು ಸಾಧ್ಯವಲ್ಲದಿದ್ದರೂ, 'ಮುಜುಗರ'ದ ಗುಂಪಿಗೆ ಸೇರಿಸಬಹುದು.

ಡ್ರೈವರುಗಳ ಮೊಬೈಲಿನ ಗೀತಗಾನಗಳು ತರುವ ಮುಜುಗರದ ಬಗ್ಗೆ ನನ್ನ ಮಗಳ ಹತ್ತಿರ ಹೇಳಿದೆ. ನನ್ನ ಮಗಳು ಸ್ವಲ್ಪ ಫಿಲಾಸಾಫಿಕಲ್ ಟೈಪು. "ನೋಡಿ, ತೃಣಮಪಿ ನ ಚಲತಿ ತೇನವಿನಾ" ಎನ್ನುತ್ತಾರೆ. ನಮ್ಮ ಜೀವನದಲ್ಲಿ ಯಾವುದೊಂದೂ ಸಣ್ಣ, ಕ್ಷುಲ್ಲಕ ವಿಷಯವೂ ಯಾವುದೊ ಕಾರಣಕ್ಕಾಗಿ ನಡೆಯುತ್ತದೆಯಂತೆ. ಕರುಣಾಮಯನಾದ ಭಗವಂತನು, ಒಬ್ಬ Senior citizen ಗೆ ಬಿಟ್ಟಿ ಎಂಟರ್‌ಟೇನ್‌ಮೆಂಟ್ ಒದಗಿಸಲು ಹೀಗೆ ಮಾಡಿರಬಹುದು. ನೀವು ಇದನ್ನು ಪಾಸಿಟಿವ್ ಆಗಿ ತೆಗೆದುಕೊಳ್ಳಿ. ಅಲ್ಲದೆ, ನೀವು ಅದನ್ನು Personal ಆಗಿ ಏಕೆ ತೆಗೆದುಕೋತೀರಾ? ಎಲ್ಲಾ ನಿಮ್ಮ ಅತಿಯಾದ ನೆಗೆಟಿವ್ imagination ನ್ನಿನ ಫಲ" ಎಂದು ಹೇಳಿ ಹೊರಟಳು.

★★★

ಕೆಲವು ದಿನಗಳ ಹಿಂದೆ ಗೆಳತಿ ಪದ್ಮಾ ನನ್ನ ಮೊಬೈಲ್‌ಗೆ ಫೋನ್ ಮಾಡಿದಳು. ತೆಗೆದುಕೊಂಡೆ. "ನಾನು ನಿನಗೆ ಎರಡು ಸಲ ಮಾಡಿದೆ, ಬಂದ ಭಯಂಕರ ಪಾಶ್ಚಾತ್ಯ ಸಂಗೀತ ಕೇಳಿ, ಖಂಡಿತ ಅದು ನಿನ್ನ ನಂಬರ್ ಅಲ್ಲ ಅಂತ disconnect ಮಾಡಿದೆ. ಮೂರನೆ ಸಲ ಮಾಡಿದಾಗ, ನಿನ್ನ ಧ್ವನಿ ಕೇಳಿ ಆಶ್ಚರ್ಯವಾಯಿತು. ಅಲ್ವೆ ಲೀಲಾ, ಅದೇನು ಆ ಹಿಪ್ಪಿಹಾಡು ಹಾಕಿದೀ ನಿನ್ನ ಮೊಬೈಲ್‌ಗೆ. ನಿನ್ನ ವಯಸ್ಸು, ವ್ಯಕ್ತಿತ್ವಕ್ಕೆ ಸ್ವಲ್ಪನೂ ಒಪ್ಪಲ್ಲಮ್ಮ" ಅಂತ ಕಡ್ಡಿ ಮುರಿದ ಹಾಗೆ ಹೇಳಿದಳು.

"ನನ್ನ ಮೊಬೈಲು ನನ್ನ ಮೊಮ್ಮಗನದ್ದು. ಅವನು hi-tech ಮೊಬೈಲನ್ನು ಕೊಂಡಾಗ, ಇದನ್ನು ನನಗೆ ಕೊಟ್ಟ. ಇದರಲ್ಲಿ receiving endನಲ್ಲಿ ಯಾವ ಟ್ಯೂನ್ ಬರುತ್ತೆ ಅಂಥ ನನಗೇನು ಗೊತ್ತು" ಎಂದೆ. "ಮೊದಲು ಟ್ಯೂನ್ ಬದಲಾಯಿಸು. ಗಾಯಿತ್ರಿ ಮಂತ್ರನೊ, ಅಂತಾದು ಏನಾದ್ರು ಹಾಕಿಸು" ಅಂತ ಉಪದೇಶ ಮಾಡಿದಳು.

Land line ಇಂದ ನನ್ನ ಮೊಬೈಲ್‌ಗೆ ಫೋನ್ ಮಾಡಿ ಪದ್ಮಳನ್ನು ಉದ್ರೇಕಿಸಿದ ಟ್ಯೂನ್

ಯಾವುದೆಂದು ಕೇಳಿಸಿಕೊಂಡೆ. ರಾಮ ರಾಮ! ನಿಜವಾಗಲೂ, ಅದು ತೀರ ಭಯಂಕರವಾಗಿತ್ತು. ಹಿಂದಿನ ಕಾಲದಲ್ಲಿ ಯುದ್ಧ ನಡೆಯುತ್ತಿದ್ದಾಗ, ಹೊರ ಹೊಮ್ಮುತ್ತಿದ್ದ ಆ ಘೋರ ಶಬ್ದಗಳನ್ನು ಯಾರಾದರೂ ಟೇಪ್ ರೆಕಾರ್ಡ್ ಮಾಡಿದ್ದರೆ ಯಾವ ರಣಗೀತೆ ಕೇಳಬಹುದಾಗಿತ್ತೊ, ಹಾಗಿತ್ತು ಆ ಟ್ಯೂನು, ಹುಚ್ಚು ಹುಚ್ಚು ಕೂಗಾಟ, ಆರ್ಭಟದ ಸದ್ದುಗಳು, ಜಂಘಾಬಲ ಉಡುಗಿ ಹೋಗುವಂತಹ ಏ ಒನ್ ಕದನ ಗೀತೆ, ನನ್ನ ಮೊಬೈಲ್‌ನಿಂದ ಪ್ರಸಾರವಾಗುತ್ತಿತ್ತು! ಸರಿ ರಿಂಗ್ ಟೋನನ್ನು ಬದಲಾಯಿಸುವ ಪ್ರಾಜೆಕ್ಟನ್ನು ತಕ್ಷಣ ಶುರುಮಾಡಿದೆ.

★★★

ಇದಾದ ಕೆಲವು ದಿನಗಳ ನಂತರ ಒಂದು ಪುಸ್ತಕದ ಅಂಗಡಿಗೆ ಹೋಗಿದ್ದೆ, ವ್ಯಾಪಾರ ಮುಗಿದ ಮೇಲೆ ಹಣ ಕೊಡಲು ಕ್ಯಾಷಿಯರ್ ಹುಡುಗಿ ಮುಂದೆ ನಿಂತೆ. ಅವಳ ಪಕ್ಕದಲ್ಲಿ, ಕೌಂಟರ್ ಹಿಂದೆ ಇನ್ನೊಬ್ಬಳು ಹುಡುಗಿ ಕುಳಿತಿದ್ದಳು. ಸ್ವಲ್ಪ ದೂರದಲ್ಲಿ ಮ್ಯಾನೇಜರು ಕುಳಿತಿದ್ದ. ಯಾರದೊ ಮೊಬೈಲ್ ರಿಂಗ್ ಆಗಲು ಶುರುವಾಯಿತು. ನನಗೆ ಫೋನ್ ರಿಂಗಾದರೆ, ತಕ್ಷಣ ಹೋಗಿ ತೆಗೆದುಕೊಳ್ಳುವ ಅಭ್ಯಾಸ. ಇಲ್ಲಿ ಮೊಬೈಲ್ ಹೊಡೆದುಕೊಳ್ಳುತ್ತಲೇ ಇದೆ, ಯಾರೂ ಎತ್ತುತ್ತಿಲ್ಲ. ಎದುರಿಗಿದ್ದ ಮೂರು ಜನರಲ್ಲಿ ಯಾರದೊ ಒಬ್ಬರದಿರಬೇಕು. ಎಲ್ಲರೂ ಶಾಂತವಾಗಿದ್ದಾರೆ, ನನಗೆ ಮುಜುರವಾಯಿತು. ಆದರೆ ನಾನು ಏನು ಮಾಡಲಿ?

ಎದುರಿಗಿದ್ದ ಕ್ಯಾಷಿಯರ್ ಹುಡುಗಿ ನನ್ನನ್ನು ಉದ್ದೇಶಿಸಿ, ಬಲು ವಿನಯವಾಗಿ, "ಮ್ಯಾಡಂ, ನಿಮ್ಮ ಮೊಬೈಲ್ ರಿಂಗ್ ಆಗ್ತಾ ಇದೆ, ನೋಡ್ತೀರಾ" ಎಂದಳು. ಅಯ್ಯೋ, ಹೌದು, ಅದು ನನ್ನ ಮೊಬೈಲೇ! ನನ್ನ ಮೊಮ್ಮಗಳ ಕೆಲಸ. ಅವಳಿಗೆ ಈ ಮೊಬೈಲ್ ಫೋನ್ ಆಟದ ಸಾಮಾನಿನ ಲೆಕ್ಕ. ಅದರಲ್ಲಿ ರಿಂಗ್ ಟೋನನ್ನು ಬದಲಾಯಿಸಿದ್ದಾಳೆ. ನನಗೆ ಅದರ ಪರಿವೇ ಇಲ್ಲ!

★★★

ಇಷ್ಟೇ ಅಲ್ಲದೆ ಎಡವಟ್ಟು ಹೊತ್ತಿನಲ್ಲಿ, ಮಧ್ಯಾಹ್ನ ನಿದ್ದೆ ಹತ್ತುತ್ತಿರುವಾಗ "ಸಾಲ ತೆಗೆದುಕೊಳ್ಳಿ" "ಇನ್‌ಶೂರೆನ್ಸ್ ಮಾಡಿ" ಅಂತ ಇಲ್ಲದ ಸಲಹೆಗಳು! ಮನುಷ್ಯರು ಮನುಷ್ಯರಿಗೆ ಕಿರುಕುಳ ಕೊಡುವುದು ಸಹಜ. ಆದರೆ ನಿರ್ಜೀವ ವಸ್ತುಗಳೂ ಕಾಟ ಕೊಡುವುದು ಈ ಕಾಲದ ಮಹಿಮೆ ಅಂತ ಕಾಣುತ್ತೆ!

ಆಶ್ಚರ್ಯಾಚಾರ್ಯರು

• ಡಾ॥ ಚಿಂತಾಮಣಿ ಕೊಡ್ಲೆಕೆರೆ

"ಆಶ್ಚರ್ಯ! ಆಶ್ಚರ್ಯ!! ಪರಮಾಶ್ಚರ್ಯ!!"

ಉದ್ಗರಿಸಿದರು ಆಚಾರ್ಯರು. ಅವರ ಆಶ್ಚರ್ಯ ಕಂಡು ನನಗೂ ಆಶ್ಚರ್ಯವಾಯಿತು. ಆಶ್ಚರ್ಯಾಚಾರ್ಯರನ್ನು ಬಹುಕಾಲದಿಂದ ಬಲ್ಲೆನಾದರೂ ಇವರಿಗೆ ಇಷ್ಟೊಂದು ಆಶ್ಚರ್ಯ ಏಕಾಯಿತೆಂದು ದಿಗಿಲಾಯಿತು. ತಾನು ಅವರಿಗೆ ಹೇಳಿದ್ದಿಷ್ಟೆ: "ಈ ಸಲದ ಸಾಪ್ತಾಹಿಕ ಪುರವಣಿಯಲ್ಲಿ ನನ್ನ ಪದ್ಯ ಬಂದಿದೆ". ಇದಕ್ಕೆ ನಾನು ನಿರೀಕ್ಷಿಸಿದ ಪ್ರತಿಕ್ರಿಯೆ ಸುಮಾರಾಗಿ ಹೀಗೆ: "ಹೌದೇನು? ನನಗೂ ಸ್ವಲ್ಪ ತೋರಿಸಪ್ಪಾ" "ಆಗಲಿ, ಭಾಳ ಸಂತೋಷ", "ನೋಡ್ತಾ ಇರ್ತೀನಲ್ಲ, ಆಗಾಗ ನಿನ್ನ ಪದ್ಯ ಪತ್ರಿಕೆಗಳಲ್ಲಿ ಬರುತ್ತವಲ್ಲ", "ಆಗಲೇ ನೋಡಿದೆ ನಾನು, ಭೇಷ್, ಚೆನ್ನಾಗಿ ಬರೆದಿದ್ದೀಯ" "ಓದಿದೆ, ನನಗೇನೂ ಅರ್ಥವಾಗಲಿಲ್ಲ, ಹೊಸಕಾಲದ ಕವಿತೆಗಳು ನನಗೆ ಅರ್ಥವಾಗುವುದಿಲ್ಲ, ಬಿಡು" ಇಂಥ ಸಾಮಾನ್ಯ ಪ್ರತಿಕ್ರಿಯೆಗಳನ್ನು ಮೀರಿ ಆಚಾರ್ಯರು ಮೂರು ಆಶ್ಚರ್ಯದ ಉದ್ಗಾರಗಳನ್ನು ತಮ್ಮ ಶ್ರೀಕಂಠದಿಂದ ಹೊರಡಿಸಿಬಿಟ್ಟರಲ್ಲ! ಏನಾಶ್ಚರ್ಯ! ಅಲ್ಲ, ಏಕಾಶ್ಚರ್ಯ? ನನ್ನ ಪದ್ಯ ಪತ್ರಿಕೆಯಲ್ಲಿ ಪ್ರಕಟವಾದುದು ಆಶ್ಚರ್ಯಕರವೇ? ಆ ಪತ್ರಿಕೆಯ ಈ ವಾರದ ಪುರವಣಿಯಲ್ಲಿ ಕವಿತೆ ಬಂದುದು ಆಶ್ಚರ್ಯಕರವೇ? ನಾನು ಕೈ ಮುಗಿದು "ಆಶ್ಚರ್ಯ ಏಕೆಂದು ಅರ್ಥವಾಗಲಿಲ್ಲ, ಆಚಾರ್ಯರೇ" ಎಂದೆ. ಆಚಾರ್ಯರು ಜಗಿದು ಕೂತರು. "ಏನು, ಆಶ್ಚರ್ಯ ಅಂದೆನೆ? ಆನಂದ ಕಣಪ್ಪಾ ಆನಂದ. ಆನಂದ, ಆನಂದ, ಪರಮಾನಂದ" ಎಂದರು ಕಣ್ಣು ಮುಚ್ಚಿ ತಲೆ ಅಲ್ಲಾಡಿಸಿದರು. ಸ್ವಲ್ಪ ಹೊತ್ತು ಬಿಟ್ಟು ಆನಂದ ಏನು? ಆಶ್ಚರ್ಯ ಏನು? ಆಶ್ಚರ್ಯದಿಂದ ಆನಂದ, ಆನಂದದಿಂದ ಆಶ್ಚರ್ಯ. ಆನಂದವು ಬ್ರಹ್ಮ ಉಪನಿಷತ್ತುಗಳಲ್ಲೇ ಹೇಳಿವೆ ಬ್ರಹ್ಮವು ಆಶ್ಚರ್ಯಕರ. ಆದ್ದರಿಂದ ಆನಂದವೇ ಆಶ್ಚರ್ಯ, ಆಶ್ಚರ್ಯವೇ ಆನಂದ. ಪರಮಾಶ್ಚರ್ಯವು ಪರಮಾನಂದಕರವಾದದ್ದು" ಎಂದು ವಿವರಿಸಿ ಎಲೆ ಅಡಿಕೆ ಹುಡುಕುತ್ತಿದ್ದಂತೆ ಬಸ್ಸು ಬಂದಿತು. ಆಚಾರ್ಯರು 'ಬರುತ್ತೇನೆ' ಎಂದು ಬಸ್ ಹತ್ತಿಬಿಟ್ಟರು. ಆ ಬಸ್ಸು ಅಂದು ಅಷ್ಟು ಬೇಗ ಬಂದುದು ಆಶ್ಚರ್ಯಕರವೇ. ಅದರಿಂದ ಆಚಾರ್ಯರು ಆಶ್ಚರ್ಯದ ಕುರಿತು ಕೊಡಬಹುದಾಗಿದ್ದ ಅತ್ಯಾಶ್ಚರ್ಯಕರ ವ್ಯಾಖ್ಯಾನಗಳಿಗೆ ತಡೆಯುಂಟಾಯಿತು.

"ನೂರು ವರ್ಷ ಬದುಕಿದರೆ ನೂರು ಚೋದ್ಯ ಕಾಣಬಹುದು" ಎಂಬುದು ಹಿರಿಯರ ಒಂದು ಮಾತು. ಸೃಷ್ಟಿಯಲ್ಲಿ ಎಲ್ಲವೂ ವಿಸ್ಮಯಕರವಾದುದೇ. ಶಿಲಾಯುಗದಲ್ಲಿ ಕಾಡಿನಲ್ಲಿ

ಗುಹೆಗಳಲ್ಲಿ ಜೀವನ ನಡೆಸುತ್ತಿದ್ದ ಮಾನವನೆಂಬ ಪ್ರಾಣಿ ಇಡೀ ಸೃಷ್ಟಿಯನ್ನೇ ತನ್ನ ಅಂಕೆಗೆ ತೆಗೆದುಕೊಳ್ಳುವಂತೆ ಬೆಳೆದುದು ಆಶ್ಚರ್ಯಕರ. ಅವನು ನುಡಿ ಕಲಿತದ್ದು ಒಂದು ಆಶ್ಚರ್ಯ. ಅಷ್ಟೊಂದು ಭಾಷೆಗಳು ಒಂದು ಆಶ್ಚರ್ಯ. ಮಾತು ಕಲಿತವನು ಮಾತು ತಪ್ಪಲೂ ಕಲಿತ. ಅದು ಇನ್ನೊಂದು ಆಶ್ಚರ್ಯ. ಬೇಯಿಸಿ ತಿನ್ನುವುದನ್ನು ಕಲಿತ. ಅದೊಂದು ಸೋಜಿಗ. ಹಾರಲು, ಈಜಲು ಕಲಿತ. ಅದೊಂದು ಸೋಜಿಗ. ಭೂಮಿಯ ಮೇಲೆ ಹೊಡೆದಾಡಿ ಸಾಯುತ್ತಾನೆ. ಅದು ಇನ್ನೊಂದು ಸೋಜಿಗ! ಮತಗಳೂ ಅವನವು, ಮತಾಂಧತೆಯೂ ಅವನದು! ಆಶ್ಚರ್ಯಕರವಲ್ಲವೇ ಇದು? ನಾನು ಹೇಗೆ ಕನ್ನಡ ನಾಡಿನಲ್ಲಿ ಹುಟ್ಟಿದೆನೋ! ಅದೇಕೆ ಪದ್ಯ ಬರೆದೆನೋ! ಅದೇಕೆ ಪ್ರಕಟವಾಯಿತೋ! ಅದನ್ನು ನಾನೇಕೆ ಆಚಾರ್ಯರಿಗೆ ಹೇಳಿದೆನೋ! ಯೋಚಿಸುತ್ತ ಹೋದಂತೆ ಎಲ್ಲವೂ ಆಶ್ಚರ್ಯಕರವಾಗಿ ಕಾಣತೊಡಗಿತು. ಆಚಾರ್ಯರು ನನಗೆ ಉತ್ತರಿಸಿದಾಗ ಇಂಥದೇ ಧ್ಯಾನಸ್ಥ ಸ್ಥಿತಿಯಲ್ಲಿದ್ದರೇನೋ ಅನ್ನಿಸಿತು.

ನಾವು ಆಶ್ಚರ್ಯಾಚಾರ್ಯರನ್ನು ಗೋಳು ಹೊಯ್ದುಕೊಂಡಿದ್ದಕ್ಕೊಂದು ಲೆಕ್ಕವೇ ಇಲ್ಲ. ಬಡಪಾಯಿ ಆಚಾರ್ಯರಿಗೋ, ಬೆಳಿಗ್ಗೆ ಎದ್ದರೆ ಮಲಗುವವರೆಗೆ ಎಲ್ಲವೂ ಆಶ್ಚರ್ಯಕರ. 'ಹಾಗೇಕೆ?' ಎಂದರೆ 'ಆನಂದಕರ' ಎಂದು ತಿದ್ದುಪಡಿ ಸೂಚಿಸುವರು. ಆಮೇಲೆ ಆಶ್ಚರ್ಯಕ್ಕೂ, ಆನಂದಕ್ಕೂ ಅಭೇದವೆಂದು ವಾದಿಸುವರು. ಆಶ್ಚರ್ಯದಿಂದ ಆನಂದವುಂಟಾಗುವುದಂತೆ. ಆನಂದವಾಗಿರುವುದು ಆಶ್ಚರ್ಯವೇ ಅಲ್ಲ, ನಾವೆಲ್ಲ ಆನಂದವಾಗಿಲ್ಲ ಎಂಬುದೇ ಆಶ್ಚರ್ಯಕರವಾಗಿದೆ ಎಂದು ನೋವಿನಿಂದ ಹೇಳುವರು. ಆಶ್ಚರ್ಯವು ಬ್ರಹ್ಮ ಎಂದ ಮೇಲೆ ಅಥವಾ ಬ್ರಹ್ಮ ಆಶ್ಚರ್ಯವೆಂದ ಮೇಲೆ ಆನಂದವಾಗಿಲ್ಲವೆಂಬ ಆಶ್ಚರ್ಯಕರ ಸಂಗತಿಯೂ ಬ್ರಹ್ಮವೇ ಆಯಿತಲ್ಲವೆ? ಹೀಗೆಂದ ಕೆಣಕಿದರೆ "ಅನಗತ್ಯವಾಗಿ ವಿಚಾರಗಳನ್ನು ಎಲ್ಲೆಲ್ಲೋ ಕೊಂಡೊಯ್ಯಬಾರದು" ಎಂದು ಬುದ್ಧಿ ಹೇಳುವವರು. "ಪೂರ್ಣಮದಂ ಪೂರ್ಣಮಿದಂ... ಎಲ್ಲವೂ ಪೂರ್ಣವೇ. ಪೂರ್ಣದಲ್ಲಿ ಆ ಅಪೂರ್ಣ ಎಂಬುದೂ ಸೇರಿ ಎಲ್ಲವೂ ಪೂರ್ಣವೇ ಆಯಿತು. ಎಲ್ಲ ಸಂದರ್ಭಗಳಲ್ಲೂ ಪೂರ್ಣವೇ ಆಗಿರುವ ಪೂರ್ಣವು ಆಶ್ಚರ್ಯಕರ ಸಂಗತಿಯಲ್ಲವೆ ಹಾಗೂ ಆನಂದಕರ ಸಂಗತಿಯಲ್ಲವೆ? ಇದು ವಿಚಾರ. ಮರೆತರೆ ವಿಕಾರ" ಇದೀಗ ರಸಗವಳ ಸವಿದು ಆಚಾರ್ಯರು ವ್ಯಾಜ್ಯ ಪದಾರ್ಥ ಉಗುಳಿ ಬರುವ ಹೊತ್ತು.

ಈ ಆಶ್ಚರ್ಯೋದ್ಗಾರದಿಂದ ಆಚಾರ್ಯರು ಪಡುವ ಪಾಡು ಒಂದೆರಡಲ್ಲ. ನಮ್ಮ ಚಿಕ್ಕಪ್ಪನವರು ಆಚಾರ್ಯರ ಮನೆಗೆ ಮಗನೊಟ್ಟಿಗೆ ಹೋಗಿ ಅವರ ಕಾಲುಗಳಿಗೆರಗಿ, ಮಗನಿಗೆ ನೌಕರಿ ಸಿಕ್ಕ ವಿಷಯ ಹೇಳಿದರೆ ಆಚಾರ್ಯರು "ಆಶ್ಚರ್ಯ, ಆಶ್ಚರ್ಯ" ಎಂದು ಹೇಳಿ ಚಿಕ್ಕಪ್ಪನನ್ನು ಕಂಗಾಲು ಮಾಡಿದರು. ನನ್ನ ಅಣ್ಣನಂತೂ ತನ್ನ ಸಾಮರ್ಥ್ಯದಿಂದಲೇ ಈ ನೌಕರಿ ಗಳಿಸಿರುವುದಾಗಿ ಸುದೀರ್ಘವಾಗಿ ವಿವರಿಸಿದನಂತೆ. ಮೆಚ್ಚುಗೆಯಿಂದ ತಲೆ ಅಲ್ಲಾಡಿಸುತ್ತಾ ಎಲ್ಲವನ್ನೂ ಕೇಳಿಸಿಕೊಂಡು, "ನೋಡೇ, ನೋಡೇ, ನಮ್ಮ ಹುಡುಗನ ಸಾಧನೆ ನೋಡೇ" ಎಂದು ಹೆಂಡತಿಯನ್ನು ಕರೆದು ಹೇಳಿ, ಸಿಹಿ ಕೊಡಿಸಿ, ಇವನ ಮಾತೆಲ್ಲಾ ಮುಗಿದ ಮೇಲೆ ಆಚಾರ್ಯರು ಹೇಳಿದರಂತೆ: "ಒಟ್ಟಿನಲ್ಲಿ ಎಲ್ಲವೂ ಆಶ್ಚರ್ಯಕರ". ಕೊಂಚ ಅಸಮಾಧಾನದಿಂದಲೇ ಚಿಕ್ಕಪ್ಪ "ಅಲ್ಲ ಆಚಾರ್ಯರೆ, ಹುಡುಗ ಇಷ್ಟು ಹೇಳಿದ ಮೇಲೂ ಆಶ್ಚರ್ಯಕರ ಎನ್ನುತ್ತೀರಲ್ಲ" ಎಂದು ಆಕ್ಷೇಪಿಸಿದರಂತೆ. "ಹ್ಞೂಂ ಕಣಪ್ಪಾ,

ಆಶ್ಚರ್ಯಕರವಾದ್ದೇ. ಈ ದಿನಗಳಲ್ಲಿ ನಮ್ಮ ಹುಡುಗರು ಇಷ್ಟು ಪ್ರಯತ್ನಶೀಲರಾಗಿರುವುದು ಆಶ್ಚರ್ಯಕರ. ಪ್ರಯತ್ನಕ್ಕೂ, ಪ್ರತಿಭೆಗೂ ಈ ಕಾಲದಲ್ಲಿ ಇನ್ನೂ ಬೆಲೆಯಿದೆಯಲ್ಲ, ಅದೂ ಆಶ್ಚರ್ಯಕರ. ನಮ್ಮೂರಿನಲ್ಲಿ ನಿದ್ಪಂಡಿಗಳ ನಡುವೆ ಇಂಥ ಪ್ರಯತ್ನವಾದಿಯೂ ಒಬ್ಬನಿದ್ದಾನೆ, ಆಚಾರ್ಯರ ಆಶೀರ್ವಾದ ಪಡೆಯಲು ಬಂದಿದ್ದಾನೆ. ಇವೆಲ್ಲ ಆಶ್ಚರ್ಯಕರವಲ್ಲವೇನಪ್ಪಾ?'' ಈ ಪ್ರತಿಪಾದನೆಗೆ ತಲೆದೂಗಿ ಬಂದ ಚಿಕ್ಕಪ್ಪ ನಮ್ಮ ಆಚಾರ್ಯರು ಎಷ್ಟು ಚೆನ್ನಾಗಿ ವಿಷಯ ತಿಳಿದುಕೊಂಡಿದ್ದಾರೆಂದು ಆಶ್ಚರ್ಯ ಪಡತೊಡಗಿದರು!

ಎಲ್ಲ ಸಂದರ್ಭಗಳಲ್ಲೂ ವಿವರಣೆಗಳು ಇಷ್ಟು ಸಮರ್ಪಕವಾಗಿರುತ್ತವೆ ಎಂದು ಹೇಳಲಾಗುವುದಿಲ್ಲ. ''ಇದು ಮಾವಿನ ಹಣ್ಣಿನ ರಸಾಯನ' ಎಂದಾಗಲೂ 'ಆಶ್ಚರ್ಯಕರ' ಎಂದು ನುಡಿದು ವಿವರಿಸಲು ಆಚಾರ್ಯರು ತಿಣುಕಾಡಿದ್ದಿದೆ. ಬಸ್ಸಿನಲ್ಲಿ ಹೋಗುವಾಗ ಇವರು 'ಇದು ಯಾವ ಊರು?' ಎಂದು ಕೇಳಿ, ಪಕ್ಕದಲ್ಲಿ ಕುಳಿತವರು 'ಕುಮಟಾ' ಎಂದಾಗ ಇವರು 'ಆಶ್ಚರ್ಯಕರವಾಗಿದೆ' ಎಂದು ಹೇಳಿ, ಆ ಜನ ''ಏನಿದೆ ಅದರಲ್ಲಿ ಆಶ್ಚರ್ಯ ಆಗೋವಂಥದ್ದು?'' ಎಂದು ಸಿಟ್ಟಿಗೆದ್ದುದ್ದಿದೆ. 'ಆ' ಪತ್ರಿಕೆ ಇದೆಯೇ ಎಂದಾಗ ಅಂಗಡಿಯವನು 'ಈ' ಪತ್ರಿಕೆ ಇದೆ ಎಂದನೆನ್ನಿ, ಆಚಾರ್ಯರು 'ಆಶ್ಚರ್ಯಕರ' ಎಂದುಬಿಡುವರು. ಇವರದೇ ಕನ್ನಡಕ ಮನೆಯಲ್ಲಿ ಒಮ್ಮೆ ಸಿಗಲಿಲ್ಲವೆನ್ನಿ, ಇನ್ನೊಮ್ಮೆ ಸಿಕ್ಕಿತೆನ್ನಿ – ಎರಡೂ 'ಆಶ್ಚರ್ಯಕರ'ವಂತೆ! ದಣಿದಾಗ ನಾವೆಲ್ಲ 'ಹುಶ್' ಎಂದು ನಿಟ್ಟುಸಿರೆಳೆದರೆ ಇವರು 'ಆಶ್ಚರ್ಯ!' ಎನ್ನುತ್ತಾ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವರು. ಮಳೆ ಬಂದರೆ ಆಶ್ಚರ್ಯ, ಚಳಿಗಾಲ ಶುರುವಾದರೆ ಆಶ್ಚರ್ಯ, ಇಬ್ಬನಿಗೂ ಆಶ್ಚರ್ಯ, ಬೆವರ ಹನಿಗೂ ಆಶ್ಚರ್ಯ, ನಿರುದ್ವಿಗ್ನವೂ, ಮುಗ್ಧವೂ, ಸಹಜವೂ, ಸತ್ಯವೂ ಆದ ಆಶ್ಚರ್ಯ...

ಇದರಿಂದಾಗಿ ಅವರಿಗೆ ಆಶ್ಚರ್ಯಾಚಾರ್ಯರೆಂಬ ಬಿರುದು ಅಂಟಿಕೊಂಡಿದೆ. ಒಂದು ದಿನ ಯಾರದೋ ಮನೆಗೆ ಹೋಗಿ ಬಾಗಿಲು ತಟ್ಟಿದಾಗ, ಒಳಗಿದ್ದವರು 'ಯಾರು?' ಎಂದರೆ 'ನಾನಮ್ಮಾ, ಆಶ್ಚರ್ಯಾಚಾರ್ಯ' ಎಂದು ಇವರೇ ಹೇಳಿದರಂತೆ. ಇದು ನಮ್ಮ ಚಿಕ್ಕಪ್ಪನವರು 'ನಿಜವಾಗಿಯೂ ಹೀಗೆ ನಡೆಯಿತು' ಎಂದು ವಾದಿಸಿ, ನಾವೆಲ್ಲ 'ಬರಿದೇ ಸುಳ್ಳು ಹೇಳುತ್ತಿದ್ದೀರಿ' ಎಂದು ಸಾರಿದರೂ ಸಿಕ್ಕಾಪಟ್ಟೆ ನಕ್ಕ ಒಂದು ಜೋಕ್. ನಿಜಕ್ಕೂ ಹಾಗಾಗಿದ್ದರೂ ಆಶ್ಚರ್ಯವೇನಿಲ್ಲ. ತನಗೆ ಆ ಅಡ್ಡ ಹೆಸರಿದೆ ಎಂಬುದು ಅವರಿಗೆ ಚೆನ್ನಾಗಿ ತಿಳಿದಿದೆ.

ಊರಿನ ಯುವಕರು ವಾರ್ಷಿಕ ಕ್ರೀಡಾಕೂಟ, ಹೊನಲು ಬೆಳಕಿನ ಪಂದ್ಯ ಎಂದೆಲ್ಲ ಆಗಾಗ ಕಾರ್ಯಕ್ರಮಗಳನ್ನು ಏರ್ಪಡಿಸುವುದಿದೆ. ಅಂಥದೊಂದು ಕಾರ್ಯಕ್ರಮಕ್ಕೆ ಆಚಾರ್ಯರು ಅತಿಥಿಗಳಾಗಿ ಬರಬೇಕೆಂದು ಯುವಕರ ಒಂದು ಗುಂಪು ಬಂದು ಪ್ರಾರ್ಥನೆ ಮಾಡಿಕೊಂಡಿತು. ''ಇದೇನಪ್ಪಾ ಆಶ್ಚರ್ಯ! ನಾನೇಕೆ ಅತಿಥಿಯಾಗಿ ಬರಬೇಕು? ಈವರೆಗೆ ನಾನು ಯಾವ ಕಾರ್ಯಕ್ರಮದಲ್ಲೂ ಹೀಗೆಲ್ಲ ಬಂದುದಿಲ್ಲ, ನನ್ನ ಜೀವನ ಕ್ರಮವೇ ಬೇರೆ. ಈ ಆಧುನಿಕ ಕಾರ್ಯಕ್ರಮಗಳ ರೀತಿ ರಿವಾಜೇ ಬೇರೆ ಬೇಡ, ಬೇಡ'' ಎಂದು ಆಚಾರ್ಯರು ಪರಿಪರಿಯಾಗಿ ಹೇಳಿದರು. ಆಚಾರ್ಯರು ಹೀಗೆ ಹಿಂದೆ ಸರಿದಷ್ಟೂ ಯುವಕರ ಒತ್ತಾಯ ಹೆಚ್ಚಾಗತೊಡಗಿತು. ಮಾತು ಮಾತಿಗೂ ಆಶ್ಚರ್ಯ ಎನ್ನುವ ಆಚಾರ್ಯರನ್ನು ಸಭೆಯಲ್ಲಿ

ನಿಲ್ಲಿಸಿ ಅವರು ಆಶ್ಚರ್ಯ ಎಂದಾಗಲೆಲ್ಲ ಚಪ್ಪಾಳೆ ಹೊಡೆದು ತಮಾಷೆ ನೋಡಬೇಕೆಂದು ಈ ಯುವಕರ ಮುಂದಾಲೋಚನೆ. ಹಿಂದಿನ ರಾತ್ರಿ ಇವರೆಲ್ಲ ಹೀಗೆ ಯೋಚಿಸಿಕೊಂಡಿದ್ದರಿಂದ ಅದೊಂದು ಬಗೆಯಲ್ಲಿ ಹಿಂದಾಲೋಚನೆಯೂ ಹೌದು. ಈ ಹಿಂದು ಮುಂದನ್ನು ಅರಿಯದ ಆಚಾರ್ಯರು ಅಂತಿಮವಾಗಿ "ಆಯಿತಪ್ಪಾ, ಬರುತ್ತೇವೆ, ಈಗಿನ ಕಾಲದಲ್ಲಿ ಇಷ್ಟು ಸೌಜನ್ಯ, ಇಂಥ ವಿನಯ ಆಶ್ಚರ್ಯಕರವಾದದ್ದು" ಎಂದು ಹೇಳಿ ಹುಡುಗರನ್ನು ಬೀಳ್ಕೊಟ್ಟರು.

ಆ ವರ್ಷದ ಹೊನಲು ಬೆಳಕಿನ ಆಟಕ್ಕಿಂತ ಹೆಚ್ಚು ಸ್ವಾರಸ್ಯವಿದ್ದುದು ಆಚಾರ್ಯರ ಭಾಷಣಕ್ಕೆ ಸಾರ್ವಜನಿಕ ವೇದಿಕೆಗಳಲ್ಲಿ ಎಂದೂ ಕಾಣಿಸಿಕೊಳ್ಳದ ಆಚಾರ್ಯರು ಸಭೆಯಲ್ಲಿ ಏನು ಮಾತನಾಡುವರೋ ಎಂಬ ಕುತೂಹಲ ಎಲ್ಲರ ಒಳ ಮನಸಿನಲ್ಲೂ ಇತ್ತೆನ್ನಬಹುದು. ಯುವಕ ಸಂಘದವರು ಮುದ್ರಿಸಿದ ಆಹ್ವಾನ ಪತ್ರದಲ್ಲಿ 'ಆಶ್ಚರ್ಯಾಚಾರ್ಯ'ರೆಂದು ಸುಪ್ರಸಿದ್ಧರಾಗಿರುವ ನರಸಿಂಹಾಚಾರ್ಯರು ಸಭೆಯ ಅಧ್ಯಕ್ಷತೆ ವಹಿಸುವರೆಂಬ ಒಕ್ಕಣೆಯು ವ್ಯಂಗ್ಯವೋ, ಗೌರವವೋ ಅರ್ಥವಾಗುವಂತಿರಲಿಲ್ಲ. (ಯುವಕರು ಕರೆದುದು ಅತಿಥಿಗಳಾಗಿ ಬರಬೇಕೆಂದು. ಆಹ್ವಾನ ಪತ್ರದ ಪ್ರಕಾರ ಅಧ್ಯಕ್ಷರು. ಈ ಎರಡರಲ್ಲಿ ಅವರ ಪ್ರಕಾರ ಹೆಚ್ಚಿನ ಭೇದವಿಲ್ಲ. ಇದೂ ಒಂದು ಆಶ್ಚರ್ಯಕರ ಸಂಗತಿ!)

ಅಂತೂ ಆ ದಿನ ಬಂತು. ಆಚಾರ್ಯರು ಶುಭ್ರ ಶ್ವೇತ ವಸ್ತ್ರಧಾರಿಗಳಾಗಿ ಸಭೆಗೆ ಚಿತ್ತೈಸಿದರು. ಆಯೋಜಕರು ಆಚಾರ್ಯರನ್ನು ಗೌರವಪೂರ್ವಕ ಬರಮಾಡಿಕೊಂಡರು. ಯಾವ ಕ್ಷಣದಲ್ಲೂ 'ಆಶ್ಚರ್ಯ' ಎಂಬ ಶಬ್ದ ಪ್ರಯೋಗದೊಡನೆ ಚಿಮ್ಮಲು ನಗೆಯ ಹೊನಲು ಎಲ್ಲರ ಹೃದಯ ಕವಾಟಗಳಲ್ಲಿ ತವಕದಿಂದ ಪ್ರವಹಿಸುತ್ತಿತ್ತು. ಕೇವಲ ಅನುಭವ ಸಂವೇದ್ಯವಾದ ಅಂಥದೊಂದು ಕುಚೋದ್ಯಭರಿತ ನವರಸ ಭಾವ ಸಮ್ಮಿಶ್ರಣವನ್ನು ಅರಿಯದ ಮುಗ್ಧ ಶಿಶುವಿನಂತೆ ಆಚಾರ್ಯರು ಪೂರ್ಣಚಂದಿರನೋಪಾದಿಯಲ್ಲಿ ಬೆಳಗುತ್ತಿದ್ದ ಪ್ರಸನ್ನ ಮುಖದಿಂದ ಅಧ್ಯಕ್ಷ ಸ್ಥಾನದಲ್ಲಿ ಆರೂಢರಾದರು. ಬರಲಿರುವ ರಸವರ್ಷಕ್ಕಾಗಿ ಎಲ್ಲರ ಹೃದಯ ಚಾತಕವು ಕಾತರದಿಂದ ಮಿಡಿಯುತ್ತಿತ್ತು.

ಆಚಾರ್ಯರನ್ನು ಸ್ವಾಗತಿಸುವವರು, ಪರಿಚಯಿಸುವವರು, ಗೌರವಿಸುವವರು ಪ್ರತಿಯೊಬ್ಬರೂ ಅವರ 'ಆಶ್ಚರ್ಯಾಚಾರ್ಯ'ತ್ವವನ್ನು ವಿನೋದದಿಂದ ಶ್ಲಾಘಿಸಿದ್ದೂ ಶ್ಲಾಘಿಸಿದ್ದೇ. ಆಚಾರ್ಯರೂ ಎಲ್ಲರೊಡನೆ ಸರಸಮಯವಾಗಿ ನಕ್ಕರು. ಅವರ ಹುಣ್ಣಿಮೆಯಂಥ ನಗು ಕಂಡು ಆಶ್ಚರ್ಯಪಡುವ ಸರದಿ ಸಭಿಕರದಾಯಿತು. ಹಾರ ಹಾಕಿದ್ದೇನು, ಆಚಾರ್ಯರಿಂದ ಬಹುಮಾನ ವಿಜೇತರಿಗೆ ಬಹುಮಾನ, ಫಲಕ ಕೊಡಿಸಿದ್ದೇನು, ಕಾರ್ಯಕ್ರಮಕ್ಕಾಗಿ ದುಡಿದವರಿಗೆ ನೆನಪಿನ ಕಾಣಿಕೆ ಕೊಡಿಸಿದ್ದೇನು – ಎಲ್ಲ ಸಂದರ್ಭಗಳನ್ನೂ ಆಚಾರ್ಯರು ಆಶ್ಚರ್ಯದ ವಿವಿಧ ಚರ್ಯೆಗಳೊಡನೆ, ನಿರ್ವಹಿಸಿದರು. ಕೆಲಸಲ 'ಅಲಾಲಾಲಾ...' ಎಂಬ ಉದ್ಗಾರ, 'ಆಹ್...' ಎಂಬ ನಿಲುಗಡೆಯೇ ಇಲ್ಲದ ಉಚ್ಚಾರದೊಡನೆ ಮುಗಿದಿಲ್ಲದ ಶ್ಲಾಘನೆ. 'ಆಶ್ಚರ್ಯಂ ಪರಮಾಶ್ಚರ್ಯಂ' ಎಂಬ ವೇದಘೋಷ ನೆನಪಿಸುವಂಥ ಸುಸ್ವರ... ಹೀಗೆ ಕೌತುಕಭರಿತ ಆಂಗಿಕ ಅಭಿನಯದ ವಿವಿಧ ವಿಲಾಸಗಳು, ವಿನ್ಯಾಸಗಳಲ್ಲಿ ಆಶ್ಚರ್ಯದ ಹತ್ತು ಹಲವಾರು ಅವತಾರಗಳನ್ನು ಆಚಾರ್ಯರು ಸಭೆಗೆ ಪರಿಚಯಿಸಿದರು.

ಈ ಎಲ್ಲ ಕಾರ್ಯಗಳೂ ಮುಗಿದ ಮೇಲೆ ಸಭೆಯು ಆತುರದಿಂದ ಕಾಯುತ್ತಿದ್ದ ಆಚಾರ್ಯರ ಅಧ್ಯಕ್ಷಾಶ್ಚರ್ಯವಾಣಿ ಮೊದಲಾಯಿತು.

"ಪ್ರಿಯ ಬಂಧುಗಳೇ, ಆಚಾರ್ಯತ್ವದೊಡನೆ ಅಧ್ಯಕ್ಷತ್ವವೂ ಸೇರಿ ನನ್ನ ಜವಾಬ್ದಾರಿ ಹೆಚ್ಚಾಗಿದೆ. ಆಶ್ಚರ್ಯಾಚಾರ್ಯರು ಎಂದು ನನ್ನನ್ನು ತಾವೆಲ್ಲ ಕರೆಯುವಲ್ಲಿ ಗೌರವವೂ ಇದೆ, ವಿನೋದವೂ ಇದೆ. ಈ ಎರಡೂ ನನಗೆ ಒಪ್ಪಿಗೆಯೇ. ಈ ಸಭೆ ಒಂದು ಆಶ್ಚರ್ಯ. ಈ ಸಭೆಗೆ ನನ್ನನ್ನು ಕರೆದದ್ದೊಂದು ಆಶ್ಚರ್ಯ. ತಾವೆಲ್ಲ ಇಷ್ಟೆಲ್ಲ ಸಂಖ್ಯೆಯಲ್ಲಿ ಸೇರಿರುವುದೊಂದು ಆಶ್ಚರ್ಯ. ಹಾಗೆ ನೋಡಿದರೆ ಈ ಪ್ರಪಂಚವೇ ಲೆಕ್ಕವಿಲ್ಲದಷ್ಟು ಆಶ್ಚರ್ಯಗಳಿಂದ ತುಂಬಿದೆ" (ಸಭೆ ನಗಲಾರಂಭಿಸಿತು ಎಂದು ಬೇರೆ ಹೇಳಬೇಕಿಲ್ಲ)

"ಈ ಮಣ್ಣಿನ ದೇಹದಿಂದ ಸ್ವರ ಹೊರಡೋದು ಆಶ್ಚರ್ಯ. ಅದನ್ನ ಈ ಮೈಕ್ ನಾನು ಆಡಿದ್ದಕ್ಕಿಂತ ದೊಡ್ಡದಾಗಿ ನಿಮಗೆ ಕೇಳೋವಂತೆ ಮಾಡೋದು ಇನ್ನೊಂದು ಆಶ್ಚರ್ಯ. ಈ ಧ್ವನಿ ಹೀಗೆ ನಿಮ್ಮನ್ನು ಮುಟ್ಟಲು ಕಾರಣವಾಗಿರುವ ವಾಯು ಕಣ್ಣಿಗೆ ಕಾಣದು. ಆದರೆ ಇದೆ. ಇದ್ದೇ ಇದೆ. ಇಲ್ಲದಂತೆ ಅನ್ನಿಸಿಯೂ 'ಇರೋದು' ಅದು ಅದೂ ಒಂದು ಆಶ್ಚರ್ಯ" (ಆಚಾರ್ಯರು ಆಶ್ಚರ್ಯ ಎಂದಂತೆಲ್ಲ ಚಪ್ಪಾಳೆ, ಸಿಳ್ಳೆ.... ಗದ್ದಲ). ಸಭೆಗೆ ಕೇಳಿಸಲೆಂದು ಇನ್ನೂ ದೊಡ್ಡ ದನಿಯಲ್ಲಿ ಆಚಾರ್ಯರು ಹೇಳಿದರು: "ನಾನು ಹೇಳುತ್ತೇನೆ, ಮನುಷ್ಯನೇ ಒಂದು ಆಶ್ಚರ್ಯ, ಅವನ ಜೀವನ ಒಂದು ಆಶ್ಚರ್ಯ."

"ಬಂಧುಗಳೆ, ನಾನು ಈ ಹಳ್ಳಿಗೆ ಬಂದು ನೆಲೆಸಿ ಹನ್ನೊಂದು ವರ್ಷಗಳಾದವು. ನನ್ನನ್ನು ನನ್ನ ಶ್ರೀಮತಿಯವರನ್ನ ಈ ಹಳ್ಳಿಯ ತಂದೆ, ತಾಯಿ ಎಂಬಂತೆ ನಡೆಸಿಕೊಂಡಿದ್ದೀರ. ಯಾವ ಋಣಾನುಬಂಧವೋ! ಎಲ್ಲಿಯ ಜಮಖಂಡಿ – ಉತ್ತರ ಕರ್ನಾಟಕದ ಅತ್ತ. ಎಲ್ಲಿಯ ಅಘನಾಶಿನಿ–ಕರಾವಳಿಯ ಈ ಪುಟ್ಟ ದ್ವೀಪದಂಥ ಊರು! ಅದು ಹೇಗೆ ಇಲ್ಲಿಗೇ ಬಂದು ನೆಲೆ ನಿಂತೆವೋ! ನಿಷ್ಕಲ್ಮಷ ಪ್ರೀತಿಯಿಂದ ನಮ್ಮನ್ನು ಒಪ್ಪಿಕೊಂಡಿರಿ. ಮಧ್ಯಾಹ್ನ ಮನೆಯಲ್ಲಿ ನಿದ್ದೆ ಮಾಡಿ ಎದ್ದು ಕುಳಿತಾಗ ಇವೆಲ್ಲ ನನಗೆ ತುಂಬಾ ಆಶ್ಚರ್ಯಕರವಾಗಿ ಕಾಣುತ್ತದೆ. ದೇವರು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕಿತ್ತುಕೊಂಡರೆ ತಾನೇ ಏನಂತೆ, ನಮ್ಮನ್ನು ಇಷ್ಟು ಪ್ರೀತಿಯಿಂದ ಕಾಣುವ ಇಷ್ಟೊಂದು ಮಕ್ಕಳನ್ನು ನಮಗೆ ಕೊಟ್ಟುಬಿಟ್ಟಿದ್ದಾನಲ್ಲಾ, ಏನು ಆಶ್ಚರ್ಯಾರೀ ಇದು! ಆಶ್ಚರ್ಯಗಳಲ್ಲೆಲ್ಲ ಆಶ್ಚರ್ಯ ಎಂದರೆ ಈ ಪ್ರೀತಿ, ಈ ಸರಳತೆ, ಈ ನಗೆ, ಈ ಉಲ್ಲಾಸ.... ಆಚಾರ್ಯರು ಅದೆಷ್ಟೋ ಹೊತ್ತು ಮೌನವಾಗಿ ನಿಂತುಬಿಟ್ಟರು.

ಮತ್ತೆ ಮಾತು ಮುಂದುವರಿಸಿದರು: "ಯಕ್ಷಪ್ರಶ್ನೆ ಎಂಬ ಮಹಾಭಾರತದ ಒಂದು ಪ್ರಕರಣ ತಮ್ಮೆಲ್ಲರಿಗೂ ಗೊತ್ತಿದೆ. ಅದರಲ್ಲಿ ಯಕ್ಷ ಧರ್ಮರಾಜನಿಗೆ ಒಂದು ಪ್ರಶ್ನೆ ಹಾಕುತ್ತಾನೆ: "ಈ ಪ್ರಪಂಚದಲ್ಲಿ ಅತ್ಯಂತ ಆಶ್ಚರ್ಯದ ವಿಷಯ ಯಾವುದು?" ಯಾವುದಪ್ಪಾ ಆಶ್ಚರ್ಯದ ಸಂಗತಿ? ಯಾವುದೋ ನದಿಯ ವಿಸ್ತಾರ, ಇನ್ನಾವುದೋ ಪರ್ವತದ ಎತ್ತರ ಆಶ್ಚರ್ಯದ ಸಂಗತಿ ಎಂದು ಹೇಳಲಿಲ್ಲ ಯುಧಿಷ್ಠಿರ. ಆತ ಹೇಳಿದ. "ಪ್ರತಿದಿನವೂ ಈ ಪ್ರಪಂಚದಲ್ಲಿ ಸಾವಿರಾರು, ಲಕ್ಷಾಂತರ ಜನ ಸಾಯುತ್ತಲೇ ಇದ್ದಾರೆ. ಜನರೂ ನೋಡ್ತಾನೇ ಇದ್ದಾರೆ. ಆದರೆ ಇದನ್ನೆಲ್ಲಾ ನೋಡ್ತಾ ಇರೋ ಮನುಷ್ಯ ತಾನು ಸಾಯೋದೇ ಇಲ್ಲ, ಚಿರಂಜೀವಿ ಅಂದ್ಕೊತಾನಲ್ಲ, ಇದು ಅತ್ಯಂತ ಆಶ್ಚರ್ಯದ ಸಂಗತಿ.

ಇದನ್ನು ಯೋಚಿಸಿದಾಗ ನನಗನಿಸುತ್ತೆ, ಆಶ್ಚರ್ಯದಲ್ಲೆಲ್ಲ ಆಶ್ಚರ್ಯವಾದ್ದನ್ನ ಹೇಳಿದೋನು ಯುಧಿಷ್ಠಿರ. ಆದರೆ ನೀವೆಲ್ಲ ಸೇರಿ ನನ್ನನ್ನು ಆಶ್ಚರ್ಯಾಚಾರ್ಯ ಅಂದುಬಿಟ್ಟಿದ್ದೀರಿ!'' ಮೃದುವಾಗಿ ಆಚಾರ್ಯರು ನಕ್ಕರು. ''ನೋಡಿ, ಸಖೇದಾಶ್ಚರ್ಯ ಅಂತ ಒಂದು ಶಬ್ದ ಬಳಸ್ತೀವಿ. ಅನೇಕರು ಒಳ್ಳೇ ವಿಷಯ ಕೇಳಿದಾಗಲೂ ಸಖೇದಾಶ್ಚರ್ಯ ಆಯ್ತು ಅಂತಾರೆ. ಸಖೇದ ಅಂದರೆ ಖೇದ ಸಹಿತವಾದ್ದು ಅಂತ ಗೊತ್ತಿಲ್ಲ ಅವರಿಗೆ. ಪರಮಾನಂದ, ಪರಮಾಶ್ಚರ್ಯ ಎಂಬಂತೆ ಸಖೇದಾಶ್ಚರ್ಯ ಅಂದುಬಿಡ್ತಾರೆ. ನನ್ನ ಪ್ರಕಾರ ಈ ಪ್ರಪಂಚದಲ್ಲಿ ಸಖೇದಾಶ್ಚರ್ಯ ಅಂದರೆ ಇದೇ, ಧರ್ಮರಾಜ ಹೇಳಿದ್ದು, ನಾವು ಸಾಯ್ತೀವಿ ಅನ್ನೋದು ಗೊತ್ತಿದ್ದೂ ಗೊತ್ತಿದ್ದೂ ಮರೀತೀವಿ ಮಕ್ಕಳನ್ನು ಕಳಕೊಂಡೆವು ಅಂತೀವಿ, ನಾವೇನೋ ಇಲ್ಲಿ ಜಹಗೀರಿ ಪಡೆದ ಥರ...

ಸಭೆ ಸಣ್ಣಾಗಿ ತಣ್ಣನೆಯ ಆರ್ದ್ರ ಭಾವನೆಗಳಿಂದ ಕಂಪಿಸತೊಡಗಿತ್ತು. ''ನಮಗೆ ಐದು ಮಕ್ಕಳು ಹುಟ್ಟಿದರು ಹತ್ತು ವರ್ಷ ಬಾಳಿದೋನು ಒಬ್ಬನೇ. ಆ ಒಬ್ಬ ಮಗನನ್ನೂ ಒಂದು ಪ್ರವಾಹದಲ್ಲಿ ಕಳೆದುಕೊಂಡು ಬಿಟ್ವೆವು'' ಆಚಾರ್ಯರು ಆಡುತ್ತಿದ್ದ ಮಾತುಗಳು ಎಲ್ಲಿಂದಲೋ ಬಂದಂತ್ತಿದ್ದವು. ಅವರ ನಿಯಂತ್ರಣ ಮೀರಿ ಮಾತುಗಳು ಹೊರ ಜಾರುತ್ತಿವೆ ಅನಿಸುತ್ತಿತ್ತು. ಕಣ್ಣು ಮುಚ್ಚಿ ಮಾತನಾಡುತ್ತಿದ್ದ ಅವರು ಥಟ್ಟನೆ ಕಣ್ಣು ತೆರೆದು ''ಅರೆರೆ, ಅವೆಲ್ಲಾ ವಿಷಯಗಳು ಈಗೇಕೆ, ಆಶ್ಚರ್ಯಕರವಾದ ರೀತಿಯಲ್ಲಿ ತಾವು ಅದ್ಭುತವಾಗಿ ಕಾರ್ಯಕ್ರಮ ಸಂಯೋಜಿಸಿದ್ದೀರಿ. ಆಶ್ಚರ್ಯಗಳ ಸರಮಾಲೆಯನ್ನೇ ಪ್ರಪಂಚಾದ್ಯಂತ ನಿರ್ಮಿಸಿರುವ ಆ ಘನ ಮಹಿಮನು ತಮ್ಮೆಲ್ಲರಿಗೂ ಒಳ್ಳೆಯದನ್ನುಂಟುಮಾಡಲಿ'' ಎಂದು ಹೇಳಿ ಕುಳಿತುಬಿಟ್ಟರು.

ಅಂದಿನ ಸಭೆ ಮುಗಿವ ಹೊತ್ತಿಗೆ ಅಲ್ಲಿ ಸೇರಿದ್ದವರಲ್ಲಿ ಕಣ್ಣು ತುಂಬಿ ಬಾರದವರೇ ಇಲ್ಲ ಎನ್ನಬೇಕು. ಕೀಟಲೆ ಬುದ್ಧಿಯ ಯುವಕರಂತೂ ನಾಚಿಕೆಯಿಂದ ಕುಸಿದು ಹೋಗಿದ್ದರು. ''ಆಚಾರ್ಯರೇ, ನಮ್ಮ ಹುಡುಗಾಟ ಮನ್ನಿಸಬೇಕು'' ಎಂದು ಎಲ್ಲರೆದುರೇ ಕಾಲಿಗೆ ಬಿದ್ದರು. ''ಇದೇನಪ್ಪಾ, ಇವೆಲ್ಲ ಯಾಕೆ? ಎಲ್ಲರೂ ಮನೆ ಮಕ್ಕಳೇ ಅಲ್ವೆ? ಚಿಕ್ಕ ಮಕ್ಕಳು ತಪ್ಪು ಮಾಡ್ತಾರೆ. ಹಾಗಂತ ದೊಡ್ಡೋರು ಸಿಟ್ಟುಮಾಡಿಕೊಳ್ಳೊದಾ? ಕ್ಷಮಿಸಬೇಕು ದೊಡ್ಡೋರು. ಆಗಲೇ ಅವರು ನಿಜಕ್ಕೂ ದೊಡ್ಡೋರಾಗೋದು. ನಿಮ್ಮೀ ಅಳು, ಕ್ಷಮಾಪಣೆ ಇವೆಲ್ಲ ನನಗೆ ಆಶ್ಚರ್ಯಕರವಾಗಿದೆ'' ಎಂದು ಕೊನೆ ಶಬ್ದವನ್ನು ತಿಳಿನಗೆಯಿಂದ ಕೂಡಿದ ಗಾಂಭೀರ್ಯದಿಂದಲೇ ಹೇಳಿದರು ಆಚಾರ್ಯರು ನೆರೆದವರ ಮುಖದಲ್ಲೆಲ್ಲ ಮಂದಹಾಸದ ಗೆರೆಯೊಂದು ಮೂಡಿ, ಆ ಗೆರೆಯೆಲ್ಲ ಸೇರಿ ಒಂದೇ ಸರಳ ರೇಖೆಯಾಗಿ, ಆ ರೇಖೆ ಮುಗಿಲು ಸೇರಿ ಕಾಮನ ಬಿಲ್ಲಾಗಿ, ಕಾಮನ ಬಿಲ್ಲಿನ ಏಳು ಬಣ್ಣಗಳಾಗಿ...

''ಆಶ್ಚರ್ಯ! ಆಶ್ಚರ್ಯ!! ಪರಮಾಶ್ಚರ್ಯ!!!''

ಉದ್ಗರಿಸಿದರು ಆಚಾರ್ಯರು

ಉದ್ಗರಿಸಿದೆವು ನಾವೂ.

ಕೊರವಂಜಿಯಿಂದ...

ಬೆಂಕಿಯೋ ಭೂಕಂಪವೋ?

• ಕೇಫ಼

ಅಂದು ನಮ್ಮ ವಿರಾಟಭವನಕ್ಕೆ ಅಪರೂಪವಾಗಿ ಒಬ್ಬ ಉತ್ತರದ ಕಡೆ ಸೇಟ್ ಬಂದಿದ್ದ. ನಮ್ಮ ಕೋಣೆಯಲ್ಲಿಯೇ ಒಂದು ಮೂಲೆಯಲ್ಲಿ ಕುಳಿತು – ''ದೋ ಪಾವ್ ದೂದ್ ಔರ್ ದೋ ಪಾವ್ ಜಿಲೇಬಿ'' ತರಲು ಆಜ್ಞೆಯಿತ್ತ. ನಮ್ಮ ಪಕ್ಕಾ ಪರಿಚಾರಕ ಪರಶು ಅವೆರಡನ್ನೂ ಅವನ ಮುಂದೆ ಇಡುತ್ತಲೇ – ದೋ ಪಾವ್ ದೂದಿನಲ್ಲಿ ದೋ ಪಾವ್ ಜಿಲೇಬಿ ನೆನೆಹಾಕಿ ಚಂಚದಿಂದ ಹೀರೋಕೆ ಶುರು ಮಾಡಿದ.

''ಪ್ರಾಯಶಃ ಧಾರವಾಡದವ'' ಅಂದರು ಓಂಪುಡಿ.

''ಛೆ! ಧಾರವಾಡದವನಾಗಿದ್ದಿದ್ದರೆ – ಎಡು ಕಪ್ ಚಹದಾಗೆ ಎರಡು ಬೇಸಿನ್ ಲಡ್ಡೂನ ನೆನೆಹಾಕುತ್ತಿದ್ದರು. ಈತ ಪ್ರಾಯಶಃ ಹೈದರಾಬಾದಿನವನಿರಬೇಕು'' ಅಂದರು ಖಾರಾಬೂಂದಿ.

''ಹೈದರಾಬಾದ್? ಇರಲಾರದು. ನಾನು ಹೈದರಾಬಾದಿನಲ್ಲಿ ನನ್ನ ಅಳಿಯನ ಮನೆಯಲ್ಲಿ ಎರಡು ದಿನಗಳಿದ್ದೆ. ಆದರೆ ಈ ರೀತಿ ಹಾಲಿನಲ್ಲಿ ಜಿಲೇಬಿ ಕಲಸಿ ಮುಕ್ಕೋರನ್ನ ನಾನು ಅಲ್ಲಿ ನೋಡಿಲ್ಲ. ಇವ ಥೇಟ್ ಮಹಾರಾಷ್ಟ್ರದವನೇ ಇರಬೇಕು.'' ಅಂದರು ಬಾಳೇಕಾಯಿ ಬಜೆ.

''ಅವಲಕ್ಕಿ ಮತ್ತು ಸೀಕರ್ಣೆ ತಿನ್ನುವ ಮನುಷ್ಯ, ಎಂದೂ ಮಹಾರಾಷ್ಟ್ರದವನಾಗಿರಲಾರ ಗುಜರಾಥಿಯ ಖಳೆ ಇವನಲ್ಲಿ ತುಂಬಾ ಇದೆ'' ಅಂತ ಮದ್ದೂರೊಡೆ ವಾದಿಸಿದರು.

''ಅಂದರೆ, ಗುಜರಾಥಿನಿಂದ ಬಂದವನೇ?''

ಬಾಳೇಕಾಯಿ ಬಜೆಯ ಈ ಪ್ರಶ್ನೆಗೆ ಯಾವ ಉತ್ತರವೂ ಬರಲಿಲ್ಲ. ಅಷ್ಟರಲ್ಲಿ ಪರಶು ಎಲ್ಲಾ ಊಹೆಗಳಿಗೂ ಕಲ್ಲು ಹಾಕಿದ.

''ನಾನು ಮೊದಲೇ ವಿಚಾರಿಸಿಕೊಂಡೆ ಸರ್ ಆತ ಬಿಹಾರಿನವ. ಊರು ತಿರುಗಲು ಹೊರಟು ಲಾಲ್‌ಬಾಗ್ ತಿರುಗಾಡಿ ಇಲ್ಲಿಗೆ ನುಗ್ಗಿದ್ದಾನೆ'' ಅಂದ.

ಈಶಾನ್ಯ ದಿಕ್ಕಿನಲ್ಲಿ ಕುಳಿತಿದ್ದ ಮಲ್ಹಾರಿರಾಯರು ಕೆಮ್ಮಿದರು.

''ಪಾಪ ಯಾರೇ ಆಗಲಿ, ನಮ್ಮ ಊರಿಗೆ, ಅದರಲ್ಲೂ ನಮ್ಮ ವಿರಾಟ ಭವನಕ್ಕೆ ಅತಿಥಿಯಾಗಿ ಬಂದಿದ್ದಾನೆ; ನಾವು ಅವನನ್ನು ಆದರಿಸಲೇಬೇಕು.

– ಅನ್ನುತ್ತಾ ತಮ್ಮ ಖಾರದ ಗೋಡಂಬಿ, ಮತ್ತು ಸ್ಟ್ರಾಂಗ್ ಕಾಫಿಗಳನ್ನು ಹೊತ್ತು ಆ ಬಿಹಾರಿಯ ಹತ್ತಿರ ಕುಳಿತರು. ನಮ್ಮೆಲ್ಲರ ದೃಷ್ಟಿಗಳೂ ಈ ಸಂಗಮದ ಕಡೆ ತಿರುಗಿದವು.

ನಮ್ಮ ಮಲ್ಹಾರಿರಾಯರು ತುಂಬ ಚೆನ್ನಾಗಿ ಹಿಂದಿಯಲ್ಲಿ ಮಾತನಾಡಬಲ್ಲರು. ಎಷ್ಟು ಚೆನ್ನಾಗಿ ಅಂದರೆ ಹಿಂದಿಯವರಿಗಿಂತಲೂ ಚೆನ್ನಾಗಿ ಹಿಂದಿ ಮಾತನಾಡಬಲ್ಲೆ ಅಂತ ಅವರೇ ಹಿಂದೆ ಹೇಳಿದ್ದರು. ಈಗ ನಮಗೇನೂ ಆಶ್ಚರ್ಯವಾಗಲಿಲ್ಲ. ಅವರು ಆ ಬಿಹಾರಿನವರೊಡನೆ ಎಷ್ಟೋ ದಿನದ ಪರಿಚಯಸ್ಥರ ಹಾಗೆ, ಉತ್ತರ ಭಾರತದಲ್ಲೇ ಹುಟ್ಟಿ ಬೆಳೆದವರ ಹಾಗೆ ಹಿಂದಿಯಲ್ಲೇ ಮಾತನಾಡತೊಡಗಿದರು. ಅವರಿಬ್ಬರ ಸಂಭಾಷಣೆ ಪೂರ್ತಿ ಹಿಂದಿಯಲ್ಲೇ ಆಗಿದ್ದರೂ, ನಮ್ಮ ಕೊರವಂಜಿಗಾಗಿ ನಾನು ಅಕ್ಷರಶಃ ಕನ್ನಡದಲ್ಲೇ ವರದಿ ಮಾಡಿದ್ದೇನೆ.

''ತಾವು ಬಿಹಾರಿನ ಕಡೆಯವರು ಅಂತ ಕಾಣುತ್ತೆ'' ಅಂತ ಶುರು ಮಾಡಿದರು ಮಲ್ಹಾರಿರಾಯರು, ಒಂದು ಖಾರದ ಗೋಡಂಬಿಯನ್ನು ಊದುತ್ತಾ.

''ಹೌದು ನಮ್ಮೂರು ಕಠೋರಗಾವ್. ಪಾಟ್ನಾದಿಂದ 32 ಮೈಲಿ ದೂರ. ಪಾಟ್ನಾದಿಂದ ಪ್ರತಿದಿನ ಬೇಕಾದಷ್ಟು ಬಸ್ಸಿವೆ. ಹತ್ತಾಣೆ ಚಾರ್ಜು.'' ಅಂತ ಹೇಳಿದ ಬಿಹಾರಿನವ.

''ಬಿಹಾರ್ ಅಂದರೆ ಬಹಳ ಪ್ರಸಿದ್ಧವಾದ ಸಂಸ್ಥಾನ. ನಮ್ಮ ಬಾಬು ರಾಜೇಂದ್ರ ಪ್ರಸಾದರ ಸ್ವಂತ ಸಂಸ್ಥಾನ.''

''ಹೌದು ಬೇಕಾದಷ್ಟು ಜನ ದೇಶಭಕ್ತರನ್ನು ಕೊಟ್ಟಿರುವ ಸಂಸ್ಥಾನ. ನೀವು ಎಂದಾದರೂ ಬಿಹಾರಿಗೆ ಭೇಟಿ ಕೊಟ್ಟಿದ್ದೀರಾ?''

''ಇಲ್ಲ. ಆದರೆ ನನ್ನಾಕೆಯ ಸೋದರಳಿಯ ಪ್ರತಾಪ ಬಿಹಾರಿನಲ್ಲಿ ಮೂರೂವರೆ ವರ್ಷ ಕಳೆದಿದ್ದಾನೆ.''

''ಹಾಗಿದ್ದ ಮೇಲೆ ನಿಮಗೆ ನಮ್ಮ ಮತ್ತು ನಮ್ಮ ಊರುಗಳ ಸೌಂದರ್ಯ, ಹವಾಗುಣ, ನಡತೆ ಇವುಗಳ ಬಗ್ಗೆ ಸಾಕಷ್ಟು ಹೇಳಿರಬೇಕು.''

''ಪ್ರತಾಪ ಎಲ್ಲಾ ಹೇಳಿದ್ದಾನೆ. ಅದರಿಂದ ನನಗೆ ಮತ್ತು ನಮ್ಮ ಕುಟುಂಬದವರಿಗೆಲ್ಲಾ ಎಷ್ಟೋ ಸಮಾಧಾನವಾಯ್ತು. ಆದರೆ ಆ ನಿಮ್ಮ ಬಿಹಾರಿನಲ್ಲಿ ಅಲ್ಲಲ್ಲಿ ಆಗಾಗ ಆಗ್ತಾ ಇರೋ ಬೆಂಕಿ ಅನಾಹುತಗಳನ್ನು ಬಿಟ್ಟರೆ ಬಿಹಾರ್ ನಿಜವಾಗಿ ನಮ್ಮ ಭಾರತಕ್ಕೇ ಒಂದು ಶ್ರೇಷ್ಠವಾದ ನಾಡು ಆಗಬಹುದಿತ್ತು. ಈ ಬೆಂಕಿ ಅನಾಹುತಗಳಿಂದಲೇ ನಾನು ಬಿಹಾರಿಗೆ ಒಂದು ಬಾರಿಯೂ ಹೋಗಲಿಕ್ಕೆ ಆಗಲಿಲ್ಲ.''

ಇದನ್ನು ಕೇಳಿ ಬಿಹಾರಿನವ ಚೇಳು ಕುಟುಕಿದವನಂತೆ ಎದ್ದು ನಿಂತು ಕೇಳಿದ.

''ಏನು! ಬಿಹಾರಿನಲ್ಲಿ ಬೆಂಕಿ ಅನಾಹುತ! ಇರಲಾರದು. ಪ್ರಾಯಶಃ ಎಲ್ಲೋ ಒಂದು ಸಣ್ಣ ಭೂಕಂಪ ಎಲ್ಲಾದರೂ ಆಗಾಗ ಆದರೂ ಆಗಬಹುದು. ಆದರೆ ಬೆಂಕಿ ಎಂದೂ ಇಲ್ಲ.''

''ಛೆ, ಪ್ರತಾಪನಿಗೆ ಬೆಂಕಿಗೂ ಭೂಕಂಪಕ್ಕೂ ವ್ಯತ್ಯಾಸ ತಿಳಿಯದೆ? ಅದರ ಕಥೆ ಹೇಳ್ತೇನೆ ಕೇಳಿ. ಈ ಒಂದು ಬೆಂಕಿಯ ಪ್ರಸಂಗದಿಂದಲೇ ನಮ್ಮ ಪ್ರತಾಪನಿಗೆ ಉಮಾ ಹೆಂಡತಿಯಾಗಿದ್ದು.''

ಮಲ್ಹಾರಿರಾಯರು ಪರಶುಕಡೆ ತಿರುಗಿದರು.

''ಪರಶು ಇವರಿಗೆ ಮತ್ತೊಂದು ಎರಡು ಪಾವು ಹಾಲು, ಎರಡು ಪಾವ್ ಜಿಲೇಬಿ, ಚಂಚ ತಂದುಕೊಡು. ಕ್ಷಮಿಸಿ ಸೇಟ್‌ಜೀ ಇದು ನನ್ನ ಖರ್ಚು. ಪರಶು ಹಾಗೇ ನನಗೆ ನನಗೆ ಇನ್ನೊಂದು ಸ್ಟ್ರಾಂಗ್ ಕಾಫಿ ತಾ'' ಅಂದರು.

ನಾವೆಲ್ಲ ಮಲ್ಹಾರಿರಾಯರ ಹತ್ತಿರಕ್ಕೆ ಸರಿದೆವು.

ನನ್ನಾಕೆಯ ಸೋದರಳಿಯ ಪ್ರತಾಪ, (ಮಲ್ಹಾರಿರಾಯರು ಮುಂದುವರಿದರು) ತನ್ನ ಬಿ.ಎಸ್ಸಿ ಮುಗಿಸಿ, ಯಾವುದೋ ಪತ್ರಿಕೆಯಲ್ಲಿ ಒಂದು ಜಾಹಿರಾತು ನೋಡಿ, ಪಾಟ್ನಾದಲ್ಲಿ ಯಾವುದೋ ಸೊಸೈಟಿ ನಡೆಸುತ್ತಿದ್ದ ಹೈಸ್ಕೂಲಿಗೆ ಉಪಾಧ್ಯಾಯನಾಗಿ ಸೇರಿಕೊಂಡ. ಅದೇ ರೀತಿ ರಾಜೇಂದ್ರ ಬಿ.ಎ. ಪಾಸುಮಾಡಿ ಅದೇ ಹೈಸ್ಕೂಲಿನಲ್ಲಿ ಇಂಗ್ಲಿಷ್ ಉಪಾಧ್ಯಾಯನಾಗಿ ಸೇರಿಕೊಂಡಿದ್ದ. ಉಮಾ ರಾಜೇಂದ್ರನ ತಂಗಿ. ಸರಿ, ದೂರದ ನಾಡಿನಲ್ಲಿ ಈ ಕನ್ನಡದ ಜನ ಸೇರಿದರು. ಸ್ನೇಹ ಶುರುವಾಯ್ತು. ನಮ್ಮ ಪ್ರತಾಪ ಬೆಂಗಳೂರು ಕಡೆಯವನು. ರಾಜೇಂದ್ರ ಶುದ್ಧ ಮಲನಾಡು. ತೀರ್ಥಹಳ್ಳಿ ಆಚೆ ಆಗುಂಬೆ ಹತ್ರತ್ರ. ಮೇಗರವಳ್ಳಿ ಫಾಸಲೇಲಿ ಒಂದು ದಾಕ್ಲಾದಿಂದ ಬಂದಿದ್ದ. ಆದರೂ, ಬಿಹಾರಿನಲ್ಲಿ ಒಂದಾಗಿದ್ದರು. ಪ್ರತಾಪನಿಗೂ ಉಮಾಳಿಗೂ ಪ್ರೇಮವೂ ಉದ್ಭವಿಸಿತು. ಪ್ರಾಯಶಃ ಅದೇ ಹೈಸ್ಕೂಲಿನ ವ್ಯಾಯಾಮ ಮತ್ತು ಡ್ರಿಲ್ ಉಪಾಧ್ಯಾಯ ಜ್ಞಾನೇಂದ್ರ, ಈ ಪ್ರೇಮಿಗಳ ಮಧ್ಯೆ ಪ್ರವೇಶಿಸದಿದ್ರೆ, ಪ್ರತಾಪ ಮತ್ತು ಉಮಾ ಎಂದೋ ಮದುವೆಯಾಗುತ್ತಿದ್ದರು. ಆದರೆ ಜ್ಞಾನೇಂದ್ರ ಹೈದರಾಬಾದಿನ ಕಡೆಯವನಂತೆ - ಒಳ್ಳೆ ಧೂಮಕೇತುವಿನ ಹಾಗೆ ನುಗ್ಗಿದ.

ಪ್ರತಿಯೊಂದು ಅಂಶದಲ್ಲಿಯೂ ಜ್ಞಾನೇಂದ್ರ, ನಮ್ಮ ಪ್ರತಾಪನಿಗಿಂತಲೂ ಒಂದು ಕೈ ಮೇಲು ಅನ್ನಿಸಿದ್ದ. ಒಳ್ಳೆಯ ಈಜುಗಾರ ಜ್ಞಾನೇಂದ್ರ. ನಮ್ಮ ಪ್ರತಾಪ ಬಿಸಿನೀರಿನ ಸ್ನಾನ ಬಿಟ್ಟು ಬೇರೆ ಸ್ನಾನ ತಿಳಿಯದವ. ಜ್ಞಾನೇಂದ್ರ ಪ್ರತಿನಿತ್ಯ ಎರಡು ಆಟ ವಾಲಿಬಾಲ್ ಆಡಿ, ಆಮೇಲೆ ಫುಟ್‌ಬಾಲ್ ಆಡುವ. ಪ್ರತಾಪ ಕೇರಮ್‌ನಲ್ಲಿ ಪ್ರವೀಣ. ಆಗತಾನೆ ಬ್ಯಾಡ್‌ಮಿಂಟನ್ ಆಡೋಣ ಅಂತ ಯೋಚಿಸಿದ್ದ ಅಷ್ಟೆ. ಜ್ಞಾನೇಂದ್ರ ಹಿಂದೆ ಎಷ್ಟೋ ಬಾರಿ ಶಿಕಾರಿಗಳಲ್ಲಿ ಭಾಗವಹಿಸಿದ್ದ. ಪ್ರತಾಪನ ಶಿಕಾರಿಯೆಲ್ಲಾ ಮನೆಯಲ್ಲಿ ತಿಗಣೆ ಹುಡುಕುವುದರಲ್ಲೇ ಮುಗಿದಿತ್ತು. ಅಂತೂ ಒಬ್ಬ ಮುಗ್ಧ ತರುಣಿಯ ಹೃದಯವನ್ನು ಸೂರೆಗೊಳ್ಳುವ ಎಲ್ಲಾ ಅನಾಹುತ ಗುಣಗಳನ್ನೂ ಜ್ಞಾನೇಂದ್ರ ಹೊಂದಿದ್ದ. ಉಮಾ ಬರುಬರುತ್ತ ಪ್ರತಾಪನಿಂದ ದೂರವಾಗುತ್ತ ಬಂದಳು.

ಪ್ರತಾಪ, ಜ್ಞಾನೇಂದ್ರ, ರಾಜೇಂದ್ರ ಇವರೆಲ್ಲ ವಾಸ ಮಾಡುತ್ತಿದ್ದುದು ಒಂದೇ ವಠಾರ. ನಾಲ್ಕು ಅಂತಸ್ತಿನ ದೊಡ್ಡ ಕಟ್ಟಡ. ಪ್ರತಿ ಅಂತಸ್ತಿನಲ್ಲಿಯೂ 8-10 ಸಂಸಾರ ಮಧ್ಯೆ ಅಂಗಳ. ಒಬ್ಬರ ಮನೆ ಸಂಸಾರವನ್ನು ಎದುರು ವಠಾರದವರು ಮುಚ್ಚುಮರೆ ಇಲ್ಲದೆ ನೋಡಬಹುದು. ನಮ್ಮ ಪ್ರತಾಪನ ದುರದೃಷ್ಟಕ್ಕೆ ಜ್ಞಾನೇಂದ್ರ ಮೂರನೆಯ ಉಪ್ಪರಿಗೆಯಲ್ಲಿ, ರಾಜೇಂದ್ರ-ಉಮಾ ವಾಸವಾಗಿದ್ದ ಭಾಗದ ಪಕ್ಕದಲ್ಲೇ ವಾಸವಾಗಿದ್ದ. ಹೀಗಾಗಿ ಎರಡನೇ ಅಂತಸ್ತಿನಲ್ಲಿದ್ದ ಪ್ರತಾಪ ಪ್ರತಿನಿತ್ಯ ಜ್ಞಾನೇಂದ್ರ ಉಮಾ ನಗುತ್ತಾ ಚಕ್ಕಂದ ಹೊಡಕೊಂಡು ಮಹಡಿ ಮೆಟ್ಟಲು ಇಳಿದು ತನ್ನ ಕೋಣೆಯ ಮುಂದೆಯೇ ಹಾದು ಹೋಗುವುದನ್ನು

ನೋಡುತ್ತಿದ್ದ. ಒಂದು ದಿನ ತನ್ನ ಮನಸ್ಸಿನ ಬೇಸರ ತಡೆಯಲಾರದೆ ಉಮಾಗೆ ಹೇಳಿಯೇಬಿಟ್ಟ.

''ಉಮಾ ಆ ಜ್ಞಾನೇಂದ್ರನ ಸ್ನೇಹ ಮಾಡಿರೋದು ಒಳ್ಳೆಯದಕ್ಕಲ್ಲ'' ಅಂದ.

''ಏಕೆ?'' ಉಮಾ ಕೇಳಿದಳು.

''ಎಂದಿಗೂ ಈ ವಸ್ತಾದಿಗಳನ್ನ, ಆಟಗಾರರನ್ನ ನಂಬಬೇಡ ಉಮಾ.''

''ನಿಮಗೇಕೆ ಪ್ರತಾಪ್ ಇಷ್ಟು ಯೋಚನೆ? ಪ್ರಾಯಶಃ ನಿಮಗೆ ಹೊಟ್ಟೆಕಿಚ್ಚು ಇರಬೇಕು. ಅವರಲ್ಲಿ ಆಶ್ಚರ್ಯವೇನು ಹೇಳಿ? ಜ್ಞಾನೇಂದ್ರನಿಗೆ ಸಾಧ್ಯವಾದ ಕೆಲಸ ನಿಮ್ಮಿಂದ ಹೇಗೆ ತಾನೆ ಆಗೀತು! ನಿಮಗೆ ಗೊತ್ತೇ ಪ್ರತಾಪ್ ಒಂದೆ ಒಂದು ಬಾರಿ ಜ್ಞಾನೇಂದ್ರ, ಪಹಾಡ್‌ಗಂಜ್ ಹತ್ತಿರ ಶಿಕಾರಿಗೆ ಹೋಗಿದ್ದಾಗ ಒಂದು ದೊಡ್ಡ ಮದ್ದಾನೆ ಅಟ್ಟಿಸಿಕೊಂಡು ಬಂತು ಜ್ಞಾನೇಂದ್ರ ಓಡಿ ಒಂದು ಮರ ಹತ್ತಿದರು. ಮರದ ಮೇಲೆ ಒಂದು ಹೆಬ್ಬಾವು ಬಾಯಿ ಊರಗಲ ತೆರೆದು ಕಾದಿತ್ತು. ಪುನಃ ಸರ್ರಂತ ಇಳಿದು ಆನೆಯ ಸೊಂಡಲಿಂದ ತಪ್ಪಿಸಿಕೊಂಡು ದಿಕ್ಕು ಬದಲಾಯಿಸಿ ಓಡಿದರು. ದಾರೀಲಿ ಮಲಗಿ ನಿದ್ರೆ ಮಾಡ್ತಿದ್ದ ಒಂದು ಹುಲಿ ಮರೀನ ತುಳಿದುಬಿಟ್ಟಿದ್ದಾರೆ! ಅದು ಎದ್ದು ಕಿರ್ರೋ ಅಂತ ಕಿರಿಚಿತ್ತೂ ಅದರ ಅಮ್ಮ ಅಪ್ಪ ಎಲ್ಲಿದ್ದೋ ಜ್ಞಾನೇಂದ್ರನ ಬೆನ್ನು ಹತ್ತಿದವು. ಇವ್ರು ಓಡಿ ಓಡಿ ಒಂದು ಸಣ್ಣ ಹೊಳೆ ಸಿಕ್ಕುತ್ತೂ ಬದುಕಿದೆಯೋ ಬಡಜೀವವೇ ಅಂತ ನೀರಲ್ಲಿ ಹಾರಿದರೆ ಅಲ್ಲಿ ಒಂದು ಮೊಸಳೆ ಕಾದಿರಬೇಕೆ?''

''ಷಹಭಾಸ್!'' ಅಂದನಂತೆ ಪ್ರತಾಪ.

''ಸರಿ – ಜ್ಞಾನೇಂದ್ರ ಏನು ಮಾಡಬೇಕು ಅಂತ ಯೋಚಿಸುವುದರೊಳಗಾಗಿ ಆ ಮೊಸಳೆ ಅವರನ್ನ ನುಂಗೇಬಿಡ್ತು. ಹೇಗೋಮಾಡಿ ಮೊಸಳೆ ಹಲ್ಲುಗಳಿಂದ ತಪ್ಪಿಸಿಕೊಂಡು, ಅದರ ಹೊಟ್ಟೆಯೊಳಗೆ ಹೋದೊಡನೆ ತಮ್ಮ ಹತ್ತಿರವಿದ್ದ ಸ್ಕೌಟ್ ಚಾಕೂನ ಬಿಚ್ಚಿ ಮೊಸಳೆಯ ಹೊಟ್ಟೇನ ಬಗೆದು ಹೊರಗೆ ಬಂದು, ಈಜೀಕೊಂಡು ಆಚೆ ದಡ ಸೇರಿದರು!''

ಇದನ್ನು ಹೇಳಿ ಉಮಾ ಬೆವರೊರೆಸಿಕೊಂಡಳಂತೆ.

''ಉಮಾ – ಇದೆಲ್ಲಾ ಶುದ್ಧ ಸುಳ್ಳು, ಕಟ್ಟುಕಥೆ'' ಅಂದ ಪ್ರತಾಪ.

''ಕಟ್ಟುಕಥೆ? ನನಗೆ ಅದೇ ಚಾಕೂನ ಬಿಚ್ಚಿ ತೋರಿಸಿದ ಸುಳ್ಳಂತೆ ಸುಳ್ಳು!'' ಅನ್ನುತ್ತಾ ತಾತ್ಸಾರ ದೃಷ್ಟಿಬೀರಿ ಉಮಾ ಹೊರಟುಹೋದಳು.

ಇದಾದ ಮೇಲೆ ಪ್ರತಾಪನ ಜೀವನ ಸಂಪೂರ್ಣ ವ್ಯರ್ಥವಾಯಿತು. ಅವನಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿ ತನ್ನ ಕಷ್ಟಗಳನ್ನು ಮರೆಯಲು, ಅದೇ ಶಾಲೆಯಲ್ಲಿ ಜವಾನನಾಗಿದ್ದ ತೋತಾರಾಮನ ಸಲಹೆ ಮತ್ತು ಸಹಾಯದಿಂದ ಸ್ವಲ್ಪ ಸ್ವಲ್ಪ ಹಳಸಿದ ಅಕ್ಕಿ ಭೋಜನದ ಕಷಾಯ ಸೇವಿಸೋಕೆ ಶುರುಮಾಡಿದ. ಕುಡಿತ ಅಂದರೆ ಹೇಸುವ ವಂಶಸ್ಥರು ನಾವು. ಕುಡಿತಕ್ಕೂ ನಮ್ಮ ಜನಾಂಗಕ್ಕೂ ಬಹಳ ದೂರ ನಮ್ಮ ಬುಡಕಟ್ಟಿನ ಮೂಲ ಋಷಿಗಳು ಕೂಡ, ಸೋಮಪಾನದಿಂದ ದೂರವಿಡುತ್ತಿದ್ದರು ಅಂತ ನಮ್ಮಲ್ಲಿ ಇತಿಹಾಸವಿದೆ. ಆದರೆ ಪ್ರತಾಪ ಅದಕ್ಕೆ ವಿರುದ್ಧವಾದ. ಅವನು ಹೇಳೋದು ತನಗೆ ಸಕಾರಣಗಳಿದ್ದವು ಅಂತ. ತನಗೆ ಆ ಕುಡಿತದಿಂದ ತೃಪ್ತಿಯೂ ಸಿಕ್ತು ಅಂತಾನೆ! ಹಳಸಿದ ಅಕ್ಕಿ ಭೋಜನ ಕಷಾಯದಿಂದ

ನೇರವಾಗಿ ಶುದ್ಧ ಕಳ್ಳಭಟ್ಟೀಗೆ ಹಾರಿಯೇಬಿಟ್ಟ ತನಗೆ ಅರಿವೇ ಇಲ್ಲದೆ ಪ್ರತಾಪ್, ಗ್ಯಾಲನ್ ಗಟ್ಟಲೆ ಕುಡಿಯೋಕೆ ಶುರುಮಾಡಿದ.

ಒಂದು ದಿನ ಹೊರಗೆ ಕುಡಿದದ್ದೂ ಅಲ್ಲದೆ, ತನ್ನ ಕೋಣೆಗೂ ಎರಡು ಬಾಟ್ಲಿ ಒಯ್ದು ಮಲಗುಕ್ಕೆ ಮುಂದೆ ಬಸುಕೊಂಡ. ಅದೇ ಅವನ ಕಡೆಯ ಜ್ಞಾಪಕ. ಸುಮಾರು ರಾತ್ರಿ ಎಲ್ಲೆಲ್ಲೂ ನಿಶ್ಯಬ್ದ. ಇದ್ದಕ್ಕಿದ್ದ ಹಾಗೆ ಏನೋ ಸುಟ್ಟ ವಾಸನೆ ಬಂದಂತಾಗಿ ಉಸಿರು ಸಿಕ್ಕಿಕೊಂಡ ಹಾಗಾಯ್ತಂತೆ. ಪ್ರಾಯಶಃ ಅಂದಿನ ವಿಪರೀತದ ಪರಿಣಾಮ ಅಂದುಕೊಂಡು ಎಡದಿಂದ ಬಲ ಪಕ್ಕಕ್ಕೆ ತಿರುಗಿ ಮಲಗಿದ. ಆಗತಾನೆ ಹೌದೋ ಅಲ್ಲವೋ ಅನ್ನುವ ಹಾಗೆ ಎಚ್ಚರವೂ ಆಗುತ್ತಿತ್ತು. ಇದ್ದಕ್ಕಿದ್ದ ಹಾಗೆ ಕೆಮ್ಮು ಬಂತಂತೆ. ಕೆಮ್ಮಿ ತನ್ನ ಉಸಿರು ಸರಿಪಡಿಸಿಕೊಂಡು ಪ್ರತಾಪ ಒಂದು ಕಣ್ಣು ಮಾತ್ರ ತೆರೆದು ನೋಡಿದ. ಎದುರು ಮನೆಯಲ್ಲಿ ಮತ್ತು ಪಕ್ಕದ ಮನೆಯಲ್ಲಿ ಬೆಂಕಿ ಉರಿದ ಹಾಗೆ ಕಂಡಿತು. ತನ್ನ ಅಮಲಿನ ಭ್ರಮೆ ಅಂದುಕೊಂಡು, ತನ್ನ ಅಧೋಗತಿಗೆ ನಾಚಿಕೊಂಡ. ಹಾಗೇ ಮುಸುಕು ಹಾಕಿಕೊಂಡು ನಿದ್ರಿಸಲೆತ್ನಿಸಿದ. ಸುತ್ತಮುತ್ತ ಬಾಗಿಲು ಕಿಟಕಿ, ಇಟ್ಟಿಗೆ, ಕಲ್ಲುಗಳು ಉರುಳಿದ ಶಬ್ದಗಳು ಕೇಳಿಬಂದವು. ತನ್ನ ಮೂಗು, ಕಣ್ಣುಗಳ ಜೊತೆ ಕಿವಿಗಳು ಕೂಡ ನಾಶವಾದವು ಅಂದುಕೊಂಡು ತನ್ನ ಆತ್ಮವನ್ನು ಸಂಪೂರ್ಣವಾಗಿ ಪಿಶಾಚಿಗೆ ಅರ್ಪಿಸಿಬಿಟ್ಟೆನಲ್ಲಾ ಅಂತ ತನ್ನನ್ನೇ ತಾನು ಶಪಿಸಿಕೊಂಡ. ಅಷ್ಟರಲ್ಲಿ ಸುತ್ತಮುತ್ತ ಜನಗಳ ಕೂಗು, ಓಡಾಟ, ಮಿಂಚು ಮಳೆ ಎಲ್ಲಾ ಶುರುವಾದವು. ಪ್ರತಾಪ ತನ್ನ ಜೀವನದ ಆಸೆ ಪೂರ್ತಿಬಿಟ್ಟು ಮುಂದಿನ ಜನ್ಮಕ್ಕಾದರೂ ತನ್ನನ್ನು ಒಬ್ಬ ನಾಗರಿಕನನ್ನಾಗಿ ಮಾಡಲು ದೇವರನ್ನು ಪ್ರಾರ್ಥಿಸಿ ಪುನಃ ನಿದ್ರಿಸಲು ಯತ್ನಿಸಿದ.

ಆಗಲೇ ಎಲ್ಲಿಂದಲೋ ಯಾರೋ ತನ್ನನ್ನು ಕರೆದಂತೆ ಕೇಳಿದ್ದು.

"ಪ್ರತಾಪ್! ಪ್ರತಾಪ್!!"

ಇದು ಪ್ರಾಯಶಃ ಪಿಶಾಚಿಯ ಅಂತ್ಯದ ಕರೆ ಅಂತ ತಿಳಿದು ಪ್ರತಾಪ್ ಅಲುಗಾಡಲಿಲ್ಲ.

"ಪ್ರತಾಪ್ ನಾನು ಉಮಾ!"

ಪ್ರತಾಪ್ ತನ್ನ ಮುಸುಕನ್ನು ನಿಧಾನವಾಗಿ ಸರಿಸಿ ಕಣ್ಣುಬಿಟ್ಟು ನೋಡಿದ.

ಹೌದು ಉಮಾ ಪಕ್ಕದ ಕೋಣೆಯಲ್ಲಿ ಉರಿಯುತ್ತಿರುವ ಬಾಗಿಲ ಹತ್ತಿರದಲ್ಲೇ ನಿಂತಿದ್ದಾಳೆ ಮಧ್ಯದ ಗೋಡೆ ಅರ್ಧಂಬರ್ಧ ಬಿದ್ದಿದೆ. ಸುತ್ತಲೂ ಬೆಂಕಿ ರಂಪ!

ಪ್ರತಾಪ್ ಎದ್ದು ಕುಳಿತ.

ಇದೇನು ಪ್ರತಾಪ್ ಈ ಕಾಡುಗಿಚ್ಚಿನಲ್ಲಿ ನೀವು ಇಷ್ಟು ಶಾಂತವಾಗಿ ಮಲಗಿದ್ದೀರಾ?"

ಪ್ರತಾಪನಿಗೆ ಕೂಡಲೇ ಜ್ಞಾನೋದಯವಾಗಿ ರಕ್ತ ಹೆಪ್ಪು ಕಟ್ಟುವಂತಾಯ್ತಂತೆ. ಇದುವರೆವಿಗೂ ತಾನು ಅನುಭವಿಸಿದ್ದು ಭ್ರಮೆಯಲ್ಲ, ನಿಜವಾದ ಬೆಂಕಿ ಅನಾಹುತದಲ್ಲಿದ್ದೇನೆ ಅಂತ ಆಗತಾನೆ ಅರಿವಾಯ್ತಂತೆ. ಆದರು ಅರೆಕ್ಷಣದಲ್ಲಿ ತನ್ನ ಬುದ್ಧಿಯನ್ನು ಪಲ್ಟೋಟಿಗೆ ತೆಗೆದುಕೊಂಡು ಒಂದು ತರಹ ಧೋರಣೆಯಿಂದ ಹೇಳಿದ.

"ಗೊತ್ತು ಉಮಾ. ಸುತ್ತ ಉರಿಯುತ್ತಿದೆ. ಅದಕ್ಕಾಗಿ ತಲೆ ಏಕೆ ಕೆಡಿಸಿಕೊಳ್ಳಬೇಕು?"

ಉಮಾ ಪೇಚಿನಲ್ಲಿ ಸಿಕ್ಕಿಹಾಕಿಕೊಂಡಳು. ಈ ಪ್ರತಾಪ ಅತೀ ಹುಚ್ಚನೋ ಅಥವಾ ಅತಿ ಜ್ಞಾನಿಯೋ ಯಾವುದೂ ಆಕೆಗೆ ತಿಳಿಯಲಿಲ್ಲ.

"ಅಂದರೆ ಪ್ರತಾಪ್ ಈ ಬೆಂಕಿ ಅನಾಹುತದಲ್ಲಿ ಪೂರ್ತಿ ಇದೇ ರೀತಿ ಮಲಗಿದ್ದೀರಾ?"

"ಮತ್ತೇನು ಬೆಂಕಿ ಅನಾಹುತಗಳಲ್ಲಿ, ನೀರಿನ ಅನಾಹುತಗಳಲ್ಲಿ ನಾವು ತಲೆ ಕೆಡಿಸಿಕೊಂಡು ಒದ್ದಾಡಿದಷ್ಟೂ ಅಪಾಯ ಜಾಸ್ತಿ. ಶಾಂತತೆಯಿಂದ ವರ್ತಿಸೋದೇ ಧೈರ್ಯಸ್ಥರ ಲಕ್ಷಣ. ನಮ್ಮ ಜೀವನದಲ್ಲಿ ಎಷ್ಟೋ ಬಾರಿ ಇಂತಹ ಸನ್ನಿವೇಶ ಬರುತ್ತೆ. ಅದನ್ನೆ ನಾನು ಎದುರಿಸಬಲ್ಲೆ. ಆದರೆ ಮದ್ದಾನೆ, ಕರಡಿ, ಚಿರತೆ ಮೊಸಳೆ ಇವುಗಳನ್ನ ನಾನು ಸೀಳದೇ ಹೋದರೂ ಇಂತಹ ಸಣ್ಣಪುಟ್ಟ ತಾಪತ್ರಯಗಳು ಬಂದರೆ, ನಾನು ಎಂದಿಗೂ ತಲೆ ಹಾಳುಮಾಡಿಕೊಳ್ಳುವುದಿಲ್ಲ. ಅದಿರಲಿ ಉಮಾ ಆ ನಿನ್ನ ಜ್ಞಾನೇಂದ್ರ ಎಲ್ಲಿ?"

ಪ್ರತಾಪನ ಮಾತು ಉಮಾಳ ಎದೆಯನ್ನು ತಿವಿದವು. ಹಲ್ಲು ಕಡಿದಳು.

"ಆ ಉತ್ತರನ ಹೆಸರೆತ್ತಬೇಡಿ ಪ್ರತಾಪ್. ನಾನು ನಮ್ಮ ಅಣ್ಣ ಬೆಂಕಿಯ ಮಧ್ಯೆ ಸಿಕ್ಕಿಕೊಂಡು ಅವನನ್ನು ಕೂಗಿಕೊಂಡರೂ, ತನ್ನ ಹೋಲ್ಡಾಲನ್ನ ತಲೆಮೇಲಿಟ್ಟುಕೊಂಡು, ಫ್ಲಾಸ್ಕನ್ನ ಕೈಲಿ ಹಿಡಿದು ಧಡ ಧಡಾಂತ ಕೆಳಗೆ ಇಳಿದು ಪರಾರಿಯಾದ."

"ಹೌದು ಉಮಾ. ಅಂತಹವರ ಬಗ್ಗೆ ಮೊದಲೇ ಎಚ್ಚರಿಸಿದ್ದೆ. ನೀನು ಇದುವರೆವಿಗೂ ಎಷ್ಟು ಹುಲಿ ನೋಡಿದ್ದಿ? ಎಷ್ಟು ಬಾರಿ ಮೊಸಳೆ ಬಾಯಿಗೆ ಸಿಕ್ಕಿದ್ದಿ?"

"ಸಾಕು ಪ್ರತಾಪ್. ನನಗೆ ಹೊಟ್ಟೆ ಉರಿಸಬೇಡ. ನನಗೀಗ ಅನ್ನಿಸುತ್ತೆ ಆ ಮುಟ್ಠಾಳ ನನಗೆ ತೋರಿಸಿದ ಚಾಕು ಅವನು ಸ್ಕೌಟಾಗಿದ್ದಾಗ ತರಕಾರಿ ಹೆಚ್ಚೋಕೆ ಇಟ್ಟುಕೊಂಡಿದ್ದ ಚಾಕು ಅಷ್ಟೆ ಮೊಸಳೆ ಅಂತೆ! ಅವನ ಮುಖ!"

ಪ್ರತಾಪನ ಹೃದಯ ಹಿಗ್ಗಿತು. ಉಮಾಳನ್ನು ಅಲ್ಲೆ ತಬ್ಬಿಕೊಳ್ಳಲೇ ಅಂತ ಅಂದುಕೊಂಡ. ಆದರೆ ಮಧ್ಯೆ, ಸುತ್ತ, ಮೇಲೆ, ಕೆಳಗೆ ಬೆಂಕಿ.

"ಪರ್ವಾಗಿಲ್ಲ ಉಮಾ. ನಾನಿದ್ದೇನೆ. ಬಾ-ಬೆಂಕಿಯಿಂದ ಪಾರಾಗುವ ನಿಮ್ಮಣ್ಣ ಎಲ್ಲಿ?"....

ಅಂತೂ - ಪ್ರತಾಪ ಉಮಾ ಮದುವೆಯಾದರು. ಈಗ ಅವನು ಹೈದರಾಬಾದಿನಲ್ಲಿ ಒಂದು ದೊಡ್ಡ ಶಾಲೆಗೆ ಮುಖ್ಯೋಪಾಧ್ಯಾಯನಾಗಿದ್ದಾನೆ. ಈಗ ಒಂದು ವಾರಕ್ಕೆ ಹಿಂದೆ ಅವನಿಂದ ನನಗೆ ಕಾಗದವಿತ್ತು - ಕೇವಲ ಎರಡು ವಾರಕ್ಕೆ ಹಿಂದೆ ಒಂದು ಪುಟ್ಟ ಉಮಾ ಹುಟ್ಟಿದಳಂತೆ.

"ಅದಕ್ಕೇ ನಾನು ನಿಮಗೆ ಹೇಳಿದ್ದು" - (ಮಲ್ಹಾರಿ ರಾಯರು ಕಥೆ ಮುಗಿಸುತ್ತಾ ಹೇಳಿದರು)- "ಬಿಹಾರಿನಲ್ಲಿ ಬೆಂಕಿ ಅನಾಹುತಗಳನ್ನ ಬಿಟ್ಟರೆ - ಬೇರೆ ಯಾವ ತೊಂದರೆಯೂ ಇಲ್ಲ ಅಂತ!"

"ಪ್ರಾಯಶಃ ಅದು ಒಂದು ಸಣ್ಣ ಭೂಕಂಪವಿದ್ದರೂ ಇರಬಹುದು ಬೆಂಕಿ ಅನಾಹುತ ಇರಲಾರದು" ಅಂದ ಬಿಹಾರಿನವ.

ಗಂಗಾವತರಣ

• ಹ.ನ. ವೇಣುಗೋಪಾಲ

ಇಳಿದು ಬಾ ತಾಯಿ ಇಳಿದು ಬಾ
ಮೇಲಿನ ಟ್ಯಾನ್ಕಿಂದ, ಕೆಳಗಿನ ಪೈಪಿನಲ್ಲಿ ನುಗ್ಗಿ ಬಾ
ಪಕ್ಕದ ಮನೆಯನ್ನು ಬಳಸಿ ಬಾ
ನಮ್ಮ ಗಿಡಗಳನು ಉಳಿಸಲು ಬಾ
ಸಂಪನ್ನ ತುಂಬು ಬಾ
ತಂಪನ್ನು ಕೊಡು ಬಾ
ಸಂಪಿನಿಂದ ಎದ್ದು ಬಾ
ಪಂಪಿನಲಿ ಸುತ್ತಿ ಬಾ
ಫಿಲ್ಟರನು ತೂರಿ ಬಾ
ಪೈಪಿನಲಿ ಏರಿ ಬಾ
ಸಂಪು, ಟ್ಯಾಂಕುಗಳು ನಿನಗಾಗಿ ಹಾತೊರೆಯುತ್ತಿವೆ
ಗಿಡ ಮರಗಳು ಒಣಗಿ ನಿನ್ನ ಬೆಸುಗೆಗೆ ಕಾದಿವೆ
ಪ್ರೆಶರ್ ಕುಕ್ಕರ್ ನೀನಿಲ್ಲದೆ ಉಸಿರಿಲ್ಲದೆ ಚುಪ್ಪಂತ ಕೂತಿದೆ
ಗೀಸರ್ ನಿನ್ನ ಬರುವಿಕೆಗೆ ಹಂಬಲಿಸುತ್ತಿದೆ
ಬಾಳೆ ಎಳೆಗಳು ಕೈ ಬೀಸಿ ಕರೆಯುತ್ತಿವೆ
ದಾಸವಾಳ ಹೂಗಳು, ಶಾವಂತಿಗೆ ಹೂಗಳು ನಿನ್ನ ಪೂಜೆಗೆ ಸಿದ್ಧವಾಗಿವೆ
ದೇವದೇವರನು ಸ್ಮರಿಸಿ ಬಾ
ದಿಗ್ದಿಗಂತಗಳನು ತಣಿಸು ಬಾ
ಬಾರೆ ಬಾ ತಾಯಿ ಇಳಿದು ಬಾ
ವೇಣುವನು ನುಡಿಸಿ ಬಾ
ಎಮ್ಮ ತನುವನು ನೆನಸು ಬಾ
ಬಾ ತಾಯಿ ಬಾ

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಗೆ ತೀರ್ಪುಗಾರರ ಎರಡು ಮಾತು

ರಾಜ್ಯದ ಪ್ರತಿಷ್ಠಿತ ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಗೆ ನಮ್ಮ ಹಾಸ್ಯ ಸಾಹಿತಿಗಳು ಸ್ಪಂದಿಸಿರುವ ರೀತಿ ಅಭೂತಪೂರ್ವ (ಪರಿಣಾಮವಾಗಿ ತೀರ್ಪುಗಾರರ ಸಂಕಷ್ಟವೂ ಅಪಾರ!) ಕೊನೆಯ ಸುತ್ತಿನಲ್ಲಿ ನಮ್ಮ ಕೈಸೇರಿದ ಲೇಖನಗಳೆಲ್ಲವೂ ಸುಸಂಸ್ಕೃತ ಹಾಸ್ಯಪ್ರಜ್ಞೆಯನ್ನು ಮೈಗೂಡಿಸಿಕೊಂಡು ಮೂಡಿ ಬಂದವುಗಳಾಗಿದ್ದವು. ಲೇಖಕಿಯರು ಪುರುಷರು... ವಿವಿಧ ವಯೋಮಾನದ ಲೇಖನಗಳು ಸ್ಪರ್ಧೆಗೆ ಬಂದ ಲೇಖನಗಳ ವಸ್ತು ವೈವಿಧ್ಯ, ವ್ಯಾಪ್ತಿಗಳನ್ನು ವಿಸ್ತರಿಸಿದ್ದ ನಮ್ಮ ಕನ್ನಡದ ಹಾಸ್ಯ ಸಾಹಿತ್ಯ ಬಡವಾಗಲಾರದು ಎಂಬ ಆಶಾವಾದವನ್ನು ಹುಟ್ಟುಹಾಕುವಂತಿದ್ದವು.

ನನ್ನ ಕೈಗೆ ಬಂದ ಇಪ್ಪತ್ಮೂರು ಲೇಖನಗಳಲ್ಲಿ ಕಾಗುಣಿತ ದೋಷಗಳು, ತಪ್ಪು ಭಾಷಾ ಪ್ರಯೋಗ ಇತ್ಯಾದಿ ಕಾರಣಕ್ಕೆ ಅನರ್ಹಗೊಂಡ ಲೇಖನಗಳು ಕೇವಲ ಮೂರು. (ನಮ್ಮ ಕೆಲವು ಕಾಲೇಜು ಮಟ್ಟದ ಸ್ಪರ್ಧೆಗಳಲ್ಲಿ ಈ ಕಾರಣಕ್ಕಾಗಿ ಎಲ್ಲ ಲೇಖನಗಳೂ ಅನರ್ಹವಾಗುವದೂ ಉಂಟು)

ಉಳಿದಂತೆ ಲೇಖನಗಳ ವಸ್ತುವಿಷಯ, ಸಾರಸ್ಯಕರ ನಿರೂಪಣೆ, ಮೂಲದಲ್ಲಿ ಹುದುಗಿರುವ ಒಂದು ಆರೋಗ್ಯಕರ ಸಂದೇಶ ಮತ್ತು ಲೇಖಕರು ಈ ಪ್ರಕಾರದ ಬರವಣಿಗೆಯನ್ನು ಪುಷ್ಟಗೊಳಿಸಿಕೊಳ್ಳಲು ಮಾಡಿರಬಹುದಾದ ಶ್ರಮ, ಪ್ರಯತ್ನ ಓದಿಕೊಂಡಿರುವ ಹರಹು... ಇಂತಹ ಕೆಲವು ಮಾನದಂಡಗಳನ್ನು ಇಟ್ಟುಕೊಂಡು ಲೇಖನಗಳನ್ನು ಬಹುಮಾನಕ್ಕೆ ಆರಿಸಲಾಗಿದೆ. ಕೇವಲ ಘಟನೆಯೊಂದನ್ನು ನಗೆಬರಹವನ್ನಾಗಿಸುವ ಆತುರ ನಮ್ಮ ಹಾಸ್ಯ ಬರಹಗಾರರನ್ನು ಕೆಲ ಮಟ್ಟಿಗೆ ಬಾಧಿಸಿದೆ. ಘಟನೆಯನ್ನಾಧರಿಸಿ ಬರೆದ ಹಾಸ್ಯ ಲೇಖನಗಳು ಹಾಗೂ ವಿಚಾರಭರಿತ ಪ್ರಬಂಧಗಳಿಗೆ ಮೂಲ ಅಡಿಪಾಯ ಹಾಸ್ಯವೇ ಆದರೂ ಸಾಹಿತ್ಯಿಕ ತೂಕ ಪ್ರಾಪ್ತವಾಗುವುದು ಎರಡನೆಯ ಪ್ರಕಾರದ ಬರಹಗಳಿಗೇ. ವಿಚಾರ ಪ್ರಚೋದಕ ಬರಹಗಳೂ ಇಲ್ಲಿವೆ ಎಂಬುದು ಸಂತಸದ ಸಂಗತಿ.

ಅಪರಂಜಿ ಬಳಗದ ಬರಹಗಾರರು ಹಾಗೂ ಓದುಗರು ವಾಣಿಜ್ಯದ ಸೀಮಿತ ಚೌಕಟ್ಟಿಗೆ ಬಂಧಿಸಲ್ಪಟ್ಟವರಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. 'ಹಾಸ್ಯ ಸಂಸ್ಕೃತಿ'ಯ ಹರಿಕಾರಗಳಂತಿರುವ ಅಪರಂಜಿ ಪತ್ರಿಕೆಯ ಹಾಸ್ಯ ಲೇಖನ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಕೂಡ ಹಾಸ್ಯ ಸೇವೆಯ ಒಂದು ಅನುಭವ. ಈ ಎಲ್ಲ ಲೇಖನಗಳನ್ನು ಈ ಸಂದರ್ಭದಲ್ಲಿ ಓದುವ ಅವಕಾಶ ಈ ಮೂಲಕ ನನಗೆ ಪ್ರಾಪ್ತವಾದುದು ನನ್ನ ಅದೃಷ್ಟ. ಅಪರಂಜಿಯ ವಿಶ್ವಾಸಕ್ಕೆ ನಾನು ಋಣಿ. ವಿಜೇತರಿಗೂ ಭಾಗವಹಿಸಿದ ಎಲ್ಲ ಲೇಖಕ ಲೇಖಕಿಯರಿಗೂ ನನ್ನ ಏಕಪ್ರಕಾರದ ಶುಭ ಹಾರೈಕೆಗಳು

• ಭುವನೇಶ್ವರಿ ಹೆಗಡೆ

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ
ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ – 2009ರಲ್ಲಿ
ಮೊದಲನೇ ಬಹುಮಾನ ಪಡೆದ ಲೇಖನ

ನಾನು, ನನ್ನ ರೂಂಮೇಟುಗಳು ಮತ್ತು ಭಾಷೆ

• ಗುರುರಾಜ್ ಕುಲಕರ್ಣಿ

"ಮಾತು ಬಲ್ಲವನಿಗೆ ಜಗಳವಿಲ್ಲ", "ಮಾತು ಮನೆ ಕೆಡಿಸಿತು", "ಮಾತೇ ಮಾಣಿಕ್ಯ", "ಮಾತೇ ಜ್ಯೋತಿರ್ಲಿಂಗ" ಕೊನೆಗೆ "ಮಾತೇ ಮಹಾದೇವಿ(!)" ಎಂದೆಲ್ಲಾ ನಮ್ಮ ಹಿರಿಯರು ಮಾತಿನ ಮಹತ್ವವನ್ನು ಸಾರಿದ್ದಾರೆ. ವಿವಿಧ ಹಿನ್ನೆಲೆಯ ಜನಗಳ ಸಂಗಮವಾದ ನಮ್ಮ ರೂಮಿನಲ್ಲಿ ಮಾತಿನ ದೆಸೆಯಿಂದಾದ ಪ್ರಸಂಗಗಳಿಗೆ ಲೆಕ್ಕ ಇಲ್ಲ.

ನಮ್ಮ ರೂಂಮೇಟು ನಿರ್ಮಲಕುಮಾರನದು ಅರ್ಧ ಕನ್ನಡ, ಅರ್ಧ ತೆಲುಗು ಮನೆಮಾತು. ಆದರೆ ಆತ ಹುಟ್ಟಿ ಬೆಳೆದದ್ದು ತಮಿಳುನಾಡಿನಲ್ಲಿ, ಓದಿದ್ದು ಇಂಗ್ಲೀಷು ಮೀಡಿಯಮ್ಮು, ಆದರೆ ಪ್ರಥಮ ಭಾಷೆಯಾಗಿ ಕಲಿತದ್ದು ಸಂಸ್ಕೃತ. ಹೀಗಾಗಿ ನಿರ್ಮಲಕುಮಾರನ ಶಬ್ದಕೋಶದಲ್ಲಿ ಈ ಎಲ್ಲಾ ಭಾಷೆಗಳ ಶಬ್ದಗಳಿದ್ದವು. ಆದರೆ ಒಂದು ಭಾಷೆಯನ್ನು ಮಾತನಾಡುವಾಗ ಇನ್ನೊಂದು ಭಾಷೆಯ ಶಬ್ದಗಳು ಬಾಯಿಗೆ ಬಂದು ಭಯಂಕರ ಗಲಿಬಿಲಿ ಉಂಟು ಮಾಡಿಬಿಡುತ್ತಿದ್ದವು. ಒಮ್ಮೊಮ್ಮೆಯಂತೂ ಭಾಷೆಗಳ ಈ ಗಿರ್‌ಮಿಟ್ಟು ಅವಾಂತರವನ್ನೇ ಉಂಟು ಮಾಡಿಬಿಡುತ್ತಿತ್ತು.

ಒಂದು ಸಲ ನಿರ್ಮಲಕುಮಾರನಿಗೆ ಕಣ್ಣು ನೋವು ಬಂದಿತ್ತು. ಕಣ್ಣಿನ ತಜ್ಞರ ಹತ್ತಿರ ಕರೆದುಕೊಂಡು ಹೋಗಿದ್ದೆ. ಅವರು ಸಮಸ್ಯೆ ಏನು ಎಂದು ಕೇಳಿದಾಗ ನಿರ್ಮಲಕುಮಾರ "ಎರಡೂ ಕಣ್ಣೂ ಏಕ ಆಗಿವೆ" ಎಂದು ಹೇಳಿದ. ಡಾಕ್ಟರಿಗೂ, ನನಗೂ ಏನು ಎಂತ ಅರ್ಥವಾಗಲಿಲ್ಲ. ಕಣ್ಣು-ಕಣ್ಣೂ ಸೇರಿ ಏಕ ಆಗಿವೆ" ಎಂದು ಮತ್ತೆ ಹೇಳಿದ. ಡಾಕ್ಟರಿಗೂ, ನನಗೂ ಏನು ಎಂತ ಅರ್ಥವಾಗಲಿಲ್ಲ. ಕಣ್ಣು-ಕಣ್ಣೂ ಸೇರಿ ಏಕಾದಾಗ ಪ್ರೀತಿ ಹುಟ್ಟುತ್ತೆ ಅಂತ ಗೊತ್ತು. ಆದರೆ ಅವೆರಡು ಬೇರೆ-ಬೇರೆ ವ್ಯಕ್ತಿಗಳ ಕಣ್ಣುಗಳಾಗಿರಬೇಕಲ್ಲಾ! ಇನ್ನು ನಾರ್ಸಿಸಮ್ ಎಂದು ಕರೆಸಿಕೊಳ್ಳುವ ಸ್ವಮೋಹದ ರೋಗಕ್ಕೊಳಗಾದಾಗ ಹಿಂಗಾಗುತ್ತೋ ಏನೋ ಎಂದು ನಾನು ವಿಚಾರ ಮಾಡುತ್ತಾ ಇದ್ದೆ. ನಮ್ಮ ಮುಖದ ಮೇಲೆ ಮೂಡಿದ ಪ್ರಶ್ನಾರ್ಥಕ ಚಿಹ್ನೆಯನ್ನು ಕಂಡು, ನಿರ್ಮಲಕುಮಾರ "ಕಣ್ಣುಗಳಲ್ಲಿ ಏಕ್ – ಅಂದರೆ A-c-h-e" ಎಂದು ಸ್ಪೆಲಿಂಗ್ ಸಹಿತವಾಗಿ ಹೇಳಿದಾಗ, ನಾನೂ ಡಾಕ್ಟರರೂ ಜ್ಞಾನೋದಯವಾಗಿ ನಿಟ್ಟುಸಿರು ಬಿಟ್ಟಿದ್ದೆವು.

ತಮಿಳು ಸ್ವಲ್ಪ ಆಕ್ರಮಣಕಾರಿ ಭಾಷೆ ಅನಿಸುತ್ತೆ, ನಿರ್ಮಲ್ ಕುಮಾರನ ಜಿಹ್ವಾ ಸಾಮ್ರಾಜ್ಯದಲ್ಲಿ ಅದು ಆಗಾಗ ಉಳಿದ ಭಾಷೆಗಳ ಮೇಲೆ ಅತಿಕ್ರಮಣ ಮಾಡುತ್ತಿತ್ತು.

ತಮಿಳಿನಲ್ಲಿ 'ಕ'-'ಗ' ಗಳು ಒಂದೇ, 'ಚ'-'ಸ'ಗಳು ಬೇರೆಯಲ್ಲ, 'ತ'-'ದ'ಗಳು ಅದ್ವೈತ. ಹೀಗಾಗಿ ನಿರ್ಮಲನ ಬಾಯಲ್ಲಿ ಕವಿರಾಜ, ಗವಿರಾಜನಾಗಿ, ಗುರುರಾಜ-ಕುರುರಾಜನಾಗಿ ಹೆಸರು ಕೆಡಿಸಿಕೊಳ್ಳುತ್ತಿದ್ದರು. ಹಾಗೆಯೇ ಚಾಮರಾಜ - ಸಾಮರಾಜನಾಗಿ, ಶೀಲಾ-ಚೀಲಾ ಆಗಿ ಬದನಾಮಾಗುತ್ತಿದ್ದರು. ಒಮ್ಮೆ ವೀರಪ್ಪನ್ ಬಗ್ಗೆ ಮಾತಾಡ್ತಾ ಇದ್ದಾಗ ನಿರ್ಮಲಕುಮಾರ "ಅವನು ಕೌಂಟರ್ ಜಾತಿಯವನು, ಅವನ ಜಾತಿಯ ಓಟುಗಳ ಮೇಲೆ ಕಣ್ಣಿಟ್ಟಿರುವ ರಾಜಕಾರಣಿಗಳು ಅವನ ಬಗ್ಗೆ ಮೃದುವಾಗಿದ್ದಾರೆ" ಎಂದು ತನ್ನದೊಂದು ಸಿದ್ಧಾಂತವನ್ನು ಮುಂದಿಟ್ಟಿದ್ದ. ನಮಗೆ ಕ್ಯಾಷ್ - ಕೌಂಟರ್ ಗೊತ್ತು, ಫುಡ್ ಕೌಂಟರ್ ಗೊತ್ತು, ಇದೇನಿದು ಕೌಂಟರ್ ಜಾತಿ ಎಂದು ವಿಸ್ಮಯಿಸಿ, ವೀರಪ್ಪನ್‌ದು ಕೌಂಟರ್ ಜಾತಿಯಾದರೆ, ಪೋಲೀಸರದು ಎನ್-ಕೌಂಟರ್ ಜಾತಿಯೇ ಸರಿ ಎಂದು ನಾವು ಲೆಕ್ಕ ಹಾಕಿದ್ದೆವು. ನಂತರ ತಿಳಿದಿದ್ದೇನೆಂದರೆ ವೀರಪ್ಪನದು ಗೌಂಡರ್ ಜಾತಿ. ನಿರ್ಮಲನ ನಾಲಿಗೆ 'ಕೌ-ಗೌ' ಮತ್ತು 'ಡ-ಟ'ಗಳ ಮಧ್ಯೆ ಅಭೇದ ಕಲ್ಪಿಸಿ ನಮ್ಮನ್ನು ಬೇಸ್ತು ಬೀಳಿಸಿತ್ತು.

ನಾನು, ನನ್ನ ಇನ್ನೊಬ್ಬ ರೂಂಮೇಟು ವಿನಾಯಕ ಮತ್ತು ನಮ್ಮ ರೂಂನಲ್ಲಿ ಆಗಾಗ ಝುಂಡಾ ಹಾಕುತ್ತಿದ್ದ ಬಹುತೇಕ ಸ್ನೇಹಿತರೆಲ್ಲರೂ ಬಿಳಿಜೋಳದ ಖಡಕ ರೊಟ್ಟಿಯಂತಹ ಮಾತಿನವರು. ನಾನು, ವಿನಾಯಕ ತಕ್ಕ ಮಟ್ಟಿಗೆ ಈ ಹಳೇ ಮೈಸೂರು ಕನ್ನಡವನ್ನು ಕಲಿತು, ಅಲ್ಲಿಯೂ ಸಲ್ಲುತ್ತಾ, ಇಲ್ಲಿಯೂ ಸಲ್ಲುತ್ತಿದ್ದೆವು. ಆದರೆ ನಮ್ಮ ರೂಮಿನ ಕಾಯಂ ಅತಿಥಿ ಈರಣ್ಣನಿಗೆ ಎರೆಮಣ್ಣಿನ ವಾಸನೆಯ ಕನ್ನಡವನ್ನು ಒಂದು ಗಾಲಿಯಾಗಿಸಿ, ಮಲ್ಲಿಗೆಯ ಘಮದ ಕನ್ನಡಕವನ್ನು ಇನ್ನೊಂದು ಗಾಲಿಯಾಗಿಸಿ, ಸೈಕಲ್ಲು ಹೊಡೆಯುವ ಕಲೆ ಕೊನೆಗೂ ಸಾಧ್ಯವೇ ಆಗಿರಲಿಲ್ಲ. "ಚುರುಮುರಿಗೆ ಪುರಿ ಯಾಕೆ ಅನ್ನಬೇಕು? ಚುರುಮುರಿಗೆ ಪುರಿ ಅಂದರ ಎಣ್ಣ್ಯಾಗ ಕರದು ಮಾಡುವ ಪುರೆಕ್ಕ ಏನ್ ಅನಬೇಕು? ನೆಲದ ಕೆಳಗ ಬೆಳೆಯುವ ಶೇಂಗಾಕ್ಕ ಕಡಲೆ ಅಂದರ ನೆಲದ ಮ್ಯಾಗ ಬೆಳೆಯುವ ಕಡಲೆ – the grams - ಅವಕ್ಕ ಏನನ್ನಬೇಕು? ಅನ್ನಕ್ಕ ಸಕ್ಕರಿ ಹಾಕಿ ಮಾಡುವ ಅಡಿಗಿ ಕೇಸರಿ ಭಾತು. ಶಿರಾಕ್ಕೂ ಕೇಸರಿಭಾತು ಅಂದರ ಮೊದಲಿಂಗಕ್ಕ ಏನನ್ನಬೇಕು?" ಎಂಬ ಅವನ ಮೂಲಭೂತ ಪ್ರಶ್ನೆಗಳಿಗೆ ನಮ್ಮಲ್ಲಿ ಉತ್ತರವಿರಲಿಲ್ಲ.

ನಮ್ಮ ಇನ್ನೊಬ್ಬ ಸ್ನೇಹಿತ ಖಾನನದು ಈರಣ್ಣನ ಉಲ್ಟಾ ಕೇಸು. ನಮ್ಮ ಹಾಗೆ ಈ ಖಾನನೂ ರೊಟ್ಟಿ ಖಾರಬ್ಯಾಳಿ ತಿಂದೇ, ತುಂಗಭದ್ರೆ-ಕೃಷ್ಣೆ-ಮಲಪ್ರಭೆಯರ ನೀರು ಕುಡಿದೇ ಬೆಳೆದವನು. ಆದರೆ ಬೆಂಗಳೂರಿಗೆ ಬಂದು ಕಾವೇರಿ ನೀರು ಸೋಕಿದ ತಕ್ಷಣ "ನಾನು ಕಣೋ ಖಾನು" ಎನ್ನುವಷ್ಟು ಬದಲಾಗಿದ್ದ. "ಏನ್ಲೇ ಮಗನ" ಎಂಬ ಆತ್ಮೀಯ ಸಂಬೋಧನೆ "ಏನ್ ಕಣೋ" ಎಂದು, "ಅಕ್ಕಾವರ, ಅಪ್ಪಾವರ" ಅನ್ನುವ ಗೌರವ ಪೂರ್ವಕ ಸಂಬೋಧನೆಗಳು "ಅಮ್ಮೌ" ಎಂದು ಬದಲಾಗಿ ಖಾನನ ಮಾತನಾಡುವ ಶೈಲಿ ಸಂಪೂರ್ಣ ಪರಿವರ್ತನೆ ಹೊಂದಿತ್ತು. ಒಮ್ಮೆ ನಮ್ಮ ಖಾನು ಊರಿಗೆ ಹೋಗಿದ್ದಾಗ ಅವರ ಕೋಳಿ ಅಂಗಳದಲ್ಲಿ ತತ್ತಿ ಇಟ್ಟಿತ್ತಂತೆ. ಅದನ್ನು ತನ್ನ ತಾಯಿಗೆ ಹೇಳಲು ಖಾನ್ ಸಾಹೇಬರು "ಯವ್ವಾ ಬೇ, ಕೋಳಿ ತತ್ತಿ ಇಟ್ಟೈತಿ" ಎಂದು ಹೇಳದೇ "ಅಮ್ಮಾ ಕೋಳಿ ಮೊಟ್ಟೆ ಇಟ್ಟಿದೆ" ಎಂದು ಕೂಗಿ ಹೇಳಿದರಂತೆ. ಅದನ್ನು ಕೇಳಿದ ಖಾನ ಸಾಹೇಬರ ಮತೋಶ್ರೀಯವರು ಮೊದಲು ದಿಙ್ಮೂಢರಾಗಿ, ನಂತರ

ಸುಧಾರಿಸಿಕೊಂಡು ಇಂತಹ ಭಾಷಾ - ಪ್ರಯೋಗ ಬೆಂಗಳೂರು ಹುಡುಗಿಯೊಬ್ಬಳು ತನ್ನ ಮಗನನ್ನು ಮಾಯಾಜಾಲದಲ್ಲಿ ಸಿಕ್ಕಿಸಿದರ ಪರಿಣಾಮವೇ ಎಂದು ತೀರ್ಮಾನಿಸಿದರಂತೆ. ಅಂಗಳದಲ್ಲಿ ಬಿದ್ದಿದ್ದ ಮಂಡ ಮಚ್ಚೆ (ಹರಿದ ಚಪ್ಪಲಿ)ಗಳನ್ನು ತೆಗೆದುಕೊಂಡು ರಪರಪ ಎಂದು ಹೊಡೆಯುತ್ತ "ಯಾವ ಮಿಟುಕಲಾಡಿ ನಿನಗಿಂತಾ ಮಾತ್ ಕಲಿಸಿದಾಕಿ? ಯಾವೂರ ಲೌಡಿ ಆಕೀ?" ಎಂದು ಖಾನ ಸಾಹೇಬರಿಗೆ ಸನ್ಮಾನ ಮಾಡಿದ್ದರಂತೆ!

ಇತ್ತೀಚಿನ ವರದಿಗಳ ಪ್ರಕಾರ ಮಂಡ ಮಚ್ಚೆಗಳ ಸನ್ಮಾನದಿಂದಾಗಿ ಸ್ವಲ್ಪ ದಿನ ಎಲ್ಲರಂತಿದ್ದ ಖಾನ್ ಸಾಹೇಬರು ಈ ಸಲ 'ಚಮಕಾಯಿಸಿ, ಚಿಂದಿ ಉಡಾಯಿಸಿ' ಭಾಷೆಯ ದೀಕ್ಷೆ ತೊಟ್ಟಿದ್ದಾರೆ. ಆದ್ದರಿಂದ "ಏನು ಕಣೋ" ಸಂಬೋಧನೆ "ಏನ್ ಮಚ್ಚಾ" ಎಂದು ಬದಲಾಗಿದೆ ಅಂತೆ!

ಅಂದ ಹಾಗೆ 'ಹಕೂನ ಮಟಾಟ' ಎಂಬ ನುಡಿಗಟ್ಟು ನಿಮಗೆ ಗೊತ್ತಿರಬೇಕಲ್ಲಾ? ಆಫ್ರಿಕದ ಭಾಷೆಯೊಂದರಲ್ಲಿ ಅದರ ಅರ್ಥ 'ನೋ ಪ್ರಾಬ್ಲಂ' ಅಂತ. 'ನಿರ್ಲಜ್ಜಂ ಸದಾಸುಖಿ' ಎಂದು ನಂಬಿ, ನಡೆಯುವವರ ಮನೋಭಾವವನ್ನು 'ಹಕೂನ ಮಟಾಟ' ನುಡಿಗಟ್ಟು ಪ್ರತಿನಿಧಿಸುತ್ತದೆ. ನಮ್ಮ ಖಾನ ಸಾಹೇಬರ ಕೋಳಿ ಮೊಟ್ಟೆ ಪ್ರಸಂಗದ ದೆಸೆಯಿಂದಾಗಿ, ಯಾರಾದರೂ ನಮ್ಮ ಸ್ನೇಹಿತರು ಸಂಪೂರ್ಣ ಬೆಂಗಳೂರಿಗರಿಗಾಗಿ ಪರಿವರ್ತಿತರಾಗಿದ್ದಾರೆ ಎಂದು ಹೇಳಲು 'ಅವರ ಕೋಳಿ ಮೊಟ್ಟೆ ಇಡ್ತಾ ಇದೆ ಕಣೋ' ಎಂದು ಹೇಳುವುದು ಚಾಲ್ತಿಗೆ ಬಂತು. ಉದಾಹರಣೆಗೆ ಗಿರಿ ಸಂಪೂರ್ಣ ಬೆಂಗಳೂರಿಗನಾಗಿ ಪರಿವರ್ತಿತನಾಗಿದ್ದರೆ, "ಗಿರಿಯ ಕೋಳಿ ಮೊಟ್ಟೆ ಇಡ್ತಾ ಇದೆ ಕಣೋ" ಎನ್ನುವುದು. ನಮ್ಮ ಸ್ನೇಹಿತರ ವಲಯದಲ್ಲಿ "...ರ ಕೋಳಿ ಮೊಟ್ಟೆ ಇಡ್ತಾ ಇದೆ ಕಣೋ" ನುಡಿಗಟ್ಟು "ಹಕೂನ ಮಟಾಟ" ದಷ್ಟೇ ಜನಪ್ರಿಯವಾಯಿತು!!

ನಿರಾಶಾವಾದಿಗಳು "ಕನ್ನಡ ಕೆಲವೇ ದಿನಗಳಲ್ಲಿ ಕಣ್ಮರೆಯಾಗಿ, ಅಡಿಗೆ ಮನೆಯ ಭಾಷೆಯಾಗಲಿದೆ" ಎಂದು ಹೇಳುತ್ತಿರುತ್ತಾರೆ. ಆ ಹೇಳಿಕೆಯ ಎರಡೂ ಭಾಗಗಳೂ ಸತ್ಯವಲ್ಲ ಎನಿಸುತ್ತದೆ. ಮೊದಲನೆಯದಾಗಿ, ನೀವು-ನಾವು ಕನ್ನಡದಲ್ಲಿಯೇ ಬರೆದು - ಓದಿ - ಮಾತಾಡಿ - ಹಾಡಿ ಬದುಕುತ್ತಿರುವುದರಿಂದ ಕನ್ನಡವು ಕಣ್ಮರೆಯಾಗುವುದು ಅಥವಾ ಅದನ್ನು ಕಣ್ಮರೆಯಾಗಿಸುವ ಯತ್ನಗಳು ಯಶಸ್ವಿಯಾಗುವುದು ಕೆಲವೇ ದಿನಗಳಲ್ಲಿ ಸಾಧ್ಯವಿಲ್ಲ. ಈಗಂತೂ ಇಂಟರ್‌ನೆಟ್ಟು-ಬ್ಲಾಗು ಇತ್ಯಾದಿಗಳಲ್ಲಿ ಕನ್ನಡದ ಇನ್ನೊಂದು ಲೋಕವೇ ಸೃಷ್ಟಿಯಾಗುತ್ತಿದೆ. ಆದ್ದರಿಂದ ಮೂವತ್ತು-ನಲವತ್ತು ವರುಷಗಳಿಂದ "ಕನ್ನಡ ಕಣ್ಮರೆಯಾಗುತ್ತೆ" ಎಂದು ಆಶಿಸುತ್ತಿರುವವರ ಆಶೆ ಅಷ್ಟು ಬೇಗ ಈಡೇರುವ ಸಾಧ್ಯತೆಗಳಿಲ್ಲ.

ಹೇಳಿಕೆಯ ಎರಡನೇ ಭಾಗಕ್ಕೆ ಬರುವ ಮುಂಚೆ ನಮ್ಮ ರೂಮಿನ ಅಡಿಗೆ ಕೆಲಸ ಮಾಡುವ ಭಾಗ್ಯಮ್ಮನ ಬಗ್ಗೆ ಒಂಚೂರು ಹೇಳಬೇಕು.

ನಮ್ಮ ಭಾಗ್ಯಮ್ಮನಿಗೆ 'ಸ್ವಚ್ಛ ಮಾಡು' ಅಂದರೆ ತಿಳಿಯೋದಿಲ್ಲ, ಅವಳಿಗೆ 'ಕಿಲೀನು ಮಾಡು' ಅಂದರಷ್ಟೇ ಅರ್ಥವಾಗೋದು. ಗಜ್ಜರಿ ಅಂದರೆ ಅವಳಿಗೆ ಗೊತ್ತಿಲ್ಲ, ಆದರೆ ಕ್ಯಾರೆಟ್ ಗೊತ್ತು. ಕೊತ್ತಂಬರಿ ಬೆಳ್ಳುಳ್ಳಿ ಅಂದರೆ 'ಅದೇನು ಕನ್ನಡದಲ್ಲಿ ಹೇಳಿ ಸಾ' ಅಂತಾಳೆ,

ಆದರೆ ಕೋರಿಯಂಡರ್-ಗಾರ್ಲಿಕ್ ಅವಳ ನಾಲಿಗೆ ಮೇಲೆ ನಲಿದಾಡುವ ಪದಗಳು. 'ಕಿತ್ತಳೆ ಗೊತ್ತಾ?' ಅಂತ ಕೇಳಿದರೆ ಅವಳ ಉತ್ತರ 'ಊಹ್ಞೂಂ', 'ಆರೇಂಜ್' ಅಂದರೆ 'ಹ್ಞಾಂ'!

ಇಲ್ಲಿಯೇ ಹುಟ್ಟಿ ಬೆಳೆದು, ಇಲ್ಲಿಯೇ ದುಡಿದು ತಿನ್ನುವ ಭಾಗ್ಯಮ್ಮನಿಗೆ ಈ ಪರಿಯ ಇಂಗ್ಲೀಷು ದೀಕ್ಷೆ ದೊರೆತದ್ದು ಹೇಗೆ? ತನ್ನ ಪತ್ತೆದಾರಿಕೆಯ ಪ್ರಕಾರ ಟೀವಿಯೇ ಈ 'ಭಾಷಾಂತರ'ಕ್ಕೆ ಕಾರಣ. ಟೀವಿಯಲ್ಲಿ ಭಾಗ್ಯಮ್ಮ ಎಎಕ್ಸ್ಎನ್, ಎಚ್‌ಬಿಓ ಇತ್ಯಾದಿ ಇಂಗ್ಲೀಷು ವಾಹಿನಿಗಳನ್ನು ನೋಡ್ತಿರುತ್ತಾಳೆ ಅಂದುಕೊಳ್ಳಬೇಡಿ. ಅವಳು ನೋಡುವುದು 'ಮೂರು ಮತ್ತೊಂದು' ಇರುವ ಸಿರಿಗನ್ನಡದ ವಾಹಿನಿಗಳನ್ನೇ. ಕನ್ನಡ ಟೀವಿ ವಾಹಿನಿಗಳಲ್ಲಿ ಬರುವ ಅಡಿಗೆ ಕಾರ್ಯಕ್ರಮಗಳಲ್ಲಿ, ನಿರೂಪಕರೂ, ಅತಿಥಿಗಳೂ ಇಬ್ಬರೂ ಸ್ಪರ್ಧೆಗೆ ಬಿದ್ದವರಂತೆ ಇಂಗ್ಲೀಷು ಶಬ್ದಗಳನ್ನು ಬಳಸುವುದನ್ನು ನೀವೂ ನೋಡಿಯೇ ಇರುತ್ತೀರಿ. ಆ ಜನ ವಗ್ಗರಣೆ ಹಾಕುವುದಕ್ಕೆ ಸೀಜನಿಂಗ್ ಅನ್ನುತ್ತವೆ, 'ಕುದಿಸಿ' ಅನ್ನಲಿಕ್ಕೆ 'ಬಾಯಿಲ್ ಮಾಡುವುದು' ಅನ್ನುತ್ತವೆ. ಹಸಿ ಮೆಣಸಿನಕಾಯಿಗೆ 'ಗ್ರೀನ್ ಚಿಲ್ಲಿ', ಮೆಣಸಿನಕಾಯಿಗೆ 'ರೆಡ್ ಚಿಲ್ಲಿ' ಎಂದು ಅವರು ಹೇಳದಿದ್ದರೆ ದೇವರ ಮೇಲಾಣೆ. ದೋಸೆಯ ಹಿಟ್ಟಿಗೆ ಅವರು "ದೋಸಾ ಬ್ಯಾಟರ್" ಅನ್ನದಿದ್ದರೆ ನಾನು ಅಗ್ನಿಪ್ರವೇಶಕ್ಕೂ ತಯಾರು! ಇನ್ನು ಟೀವಿಗಳಲ್ಲಿನ ಧಾರಾವಾಹಿಗಳ ಬಗ್ಗೆಯಂತೂ ಹೇಳುವುದೇ ಬೇಡ. ಈ ಧಾರಾವಾಹಿಗಳಲ್ಲಿ ಯಾರಿಗೂ ನೋವಾಗುವುದಿಲ್ಲ, ಎಲ್ಲರಿಗೂ 'ಹರ್ಟ್' ಆಗುತ್ತೆ. ಅವರಿಗೆ ಜೀವನದಲ್ಲಿ ಸಮಸ್ಯೆಗಳು ಬರೋದೇ ಇಲ್ಲ, ಬರೀ 'ಪ್ರಾಬ್ಲಮ್'ಗಳು ಬರ್ತಾವೆ! ಇಂತಹ ಟೀವಿ ಕಾರ್ಯಕ್ರಮ - ಧಾರಾವಾಹಿ ನೋಡಿದ ಭಾಗ್ಯಮ್ಮನಿಗೆ ಶುದ್ಧ ಕನ್ನಡ ಅರ್ಥವಾಗುವುದಿಲ್ಲ ಎನ್ನುವುದರಲ್ಲಿ ಏನು ಆಶ್ಚರ್ಯ?

ಭಾಗ್ಯಮ್ಮ ಮತ್ತು ಈರಣ್ಣ ಇಬ್ಬರೂ ಕನ್ನಡಿಗರಾದರೂ ಇಬ್ಬರ ನಡುವೆ ಸರಾಗ ಸಂಭಾಷಣೆಗೆ ಇನ್ನೊಬ್ಬ ದುಭಾಷಿಯ ಅವಶ್ಯಕತೆ ಇರುತ್ತಿತ್ತು. ದುಭಾಷಿ ಇಲ್ಲದಿದ್ದರೆ, ಪರಿಣಾಮ ಕೆಲವೊಮ್ಮೆ ಭೀಕರವಾಗಿರುತ್ತಿತ್ತು. ಈರಣ್ಣ ಹೊಸದಾಗಿ ಬಂದಾಗ ಭಾಗ್ಯಮ್ಮ ಪರಿಚಯಿಸಿಕೊಳ್ಳುತ್ತಾ, ತನ್ನನ್ನು "ಅಡಿಗೆ ಹೆಂಗಸಾಗಿ ಇಟ್ಟುಕೊಂಡಿದ್ದಾರೆ" ಎಂದು ಹೇಳಿದ್ದಳು. ನಮ್ಮ ಕಡೆ "ಹೆಂಗಸು ಇಟ್ಟುಕೊಳ್ಳುವುದು" ಅಂದರೆ ಪಂಚ ಮಹಾ ಪಾತಕಗಳಲ್ಲಿ ಒಂದು. ಈರಣ್ಣ ಭಾಗ್ಯಮ್ಮನ ಮಾತಿಗೆ ಆ ಅರ್ಥ ಹಚ್ಚಿ ಖೋಕ್ ಖೋಕ್ ನಕ್ಕಿದ್ದಷ್ಟೇ ಅಲ್ಲ, ಮೂರ್ಖತನದಿಂದ ತಾನು ಯಾಕೆ ನಕ್ಕೆ ಎಂಬುದನ್ನು ಭಾಗ್ಯಮ್ಮನಿಗೆ ಹೇಳಿಯೂ ಬಿಟ್ಟಿದ್ದ. ಅವತ್ತು ಈರಣ್ಣನನ್ನು ಭಾಗ್ಯಮ್ಮನ ಚಪ್ಪಲಾಘಾತದಿಂದ ಪಾರುಮಾಡುವಲ್ಲಿ ನನ್ನ ಪೀಪಲ್ ಮ್ಯಾನೇಜ್‌ಮೆಂಟ್ ಕೌಶಲ್ಯವೆಲ್ಲಾ ಖರ್ಚಾಗಿ ಹೋಗಿತ್ತು!

ಬೆಂಗಳೂರು ಅಲ್ಲಿಂದ, ಇಲ್ಲಿಂದ, ಎಲ್ಲೆಲ್ಲಿಂದಲೋ ಜನ ಬಂದು ತಳವೂರುತ್ತಿರುವುದರಿಂದ ಭಾಗ್ಯಮ್ಮನಂತವರ ಶಬ್ದಕೋಶಗಳಲ್ಲಿ ಆ-ಈ ಭಾಷೆಗಳ ಪದಗಳೂ ಬರುತ್ತಿವೆ. "ಸ್ವಲ್ಪ ಅಟ್ಟಾ ಕಲಿಸಿ, ಡವ್ ಮಾಡಿಬಿಡ್ತೀನಿ" ಎನ್ನುವುದು ಭಾಗ್ಯಮ್ಮನ ಚಪಾತಿ ಮಾಡಲಿಕ್ಕೆ ಮುಂಚಿನ ಮುನ್ನುಡಿಯಂತಹ ಮಾತು. ನಿಮಗೆ ಗೊತ್ತಿಲ್ಲದಿದ್ದರೆ - 'ಅಟ್ಟಾ' ಅಂದರೆ ಹಿಟ್ಟು ಒಂದು ಪರದೇಶಿ ಭಾಷೆಯಲ್ಲಿ, 'ಡವ್' ಅಂದ್ರೆ ಕಣಕ, ಮತ್ತೊಂದರಲ್ಲಿ, ಆಗಿನ್ನೂ ನಮ್ಮ ಗುರು ಜಗ್ಗೇಶರ 'ಡವ್' ಅರ್ಥ ಮಾತ್ರ ನಮಗೆ ಗೊತ್ತಿತ್ತು.

ಭಾಗ್ಯಮ್ಮನ ಮುನ್ನುಡಿಯಿಂದ ಮೊದಲ ಸಲ "ಸ್ವಲ್ಪ ಅಟ್ಜಾಡಿಸಿ, ಡವ್ ಮಾಡಿ ಬಿಡ್ತೀನಿ" ಎಂದು ಕೇಳಿಸಿಕೊಂಡು ಜಗ್ಗೇಶರು ಭಾಗ್ಯಮ್ಮನಂತೆ "ಮೇಕಪ್" (ಮೇಕಪ್ ಎನ್ನುವುದು ಜಗ್ಗೇಶ್ ಅಭಿನಯದ ಚಿತ್ರ. ಅದರಲ್ಲಿ ಜಗ್ಗೇಶ್ ಒಂದು ಹೆಣ್ಣಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.) ಮಾಡಿಕೊಂಡು ಒಂದು ಸೆನ್ಸಾರಾಗದ ಡೈಲಾಗು ಹೇಳ್ತಾ ಇದ್ದಾರೇನೋ ಎಂಬ ಅನುಮಾನವಾಗಿತ್ತು!

ಭಾಗ್ಯಮ್ಮನ ಭಾಷಾಮಾಲಿನ್ಯದ ಬಗ್ಗೆ ಓದಿದ ಮೇಲೆ ನಿಮಗೆ ಈಗಾಗಲೇ ಆ ಹೇಳಿಕೆಯ ಎರಡನೇ ಭಾಗವೂ ಸತ್ಯವಲ್ಲ ಎಂದು ಅನಿಸಿರಬಹುದು. ಹೌದು, ಅಕಸ್ಮಾತ್ ಕನ್ನಡವು ಕಣ್ಮರೆಯಾದರೆ, ಅದು ಮೊದಲು ಅಡಿಗೆ ಮನೆಯಿಂದಲೇ ಕಣ್ಮರೆಯಾಗುತ್ತದೆ. ಅಡಿಗೆ ಮಾಡುವುದು - ಟೀವಿ ನೋಡುವುದು, ಬಿಟ್ಟು ಬೇರೇನೂ ಗೊತ್ತಿರದ ಭಾಗ್ಯಮ್ಮನಂತವರೂ, ಇತರ ಗೃಹಿಣಿಯರೂ ಟೀವಿಯ ಕನ್ನಡವನ್ನೇ ಉಪಯೋಗಿಸುತ್ತಾ ನೈಜ ಕನ್ನಡವನ್ನು ಮರೆಯುವುದು ನಿಶ್ಚಿತ. ಅದಾಗದಂತೆ ತಡೆಯಲು ಏನು ಮಾಡಬೇಕು? ಕುಂಬಳಕಾಯಿ ಮತ್ತು ಕುಡುಗೋಲು ಎರಡೂ ಮುಖ್ಯವಾಗಿ ಟೀವಿಯಲ್ಲಿ ಬರುವ ಅಡಿಗೆ ಕಾರ್ಯಕ್ರಮದ ನಿರೂಪಕರ ಮತ್ತು ಭಾಗವಹಿಸುವವರ ಕೈಯಲ್ಲಿಯೇ ಇವೆ!!

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದ್ದ
ಪಡುಕೋಣೆ ರಮಾನಂದರಾವ್ ಸ್ಮಾರಕ
ಹಾಸ್ಯ ಲೇಖನ ಸ್ಪರ್ಧೆ-2009ರ ಬಹುಮಾನ ವಿಜೇತರು

ಮೊದಲ ಬಹುಮಾನ: ರೂ. 1000

ನಾನೂ ನನ್ನ ರೂಂಮೇಟುಗಳು ಮತ್ತು ಭಾಷೆ

ಗುರುರಾಜ ಕುಲಕರ್ಣಿ, ಬೆಂಗಳೂರು

ಎರಡನೇ ಬಹುಮಾನ: ರೂ 750

ಬಡಾಯಿಗಾರರು

ದಿವಾಕರ ಹನಗೋಡು, ಶೃಂಗೇರಿ

ಮೂರನೇ ಬಹುಮಾನ: ರೂ 500

ಮೊದಲ ಗಂಡ

ಮಧುರಾ ಕರ್ಣಂ, ಬೆಂಗಳೂರು

ಬಹುಮಾನಿತ ಲೇಖನಗಳನ್ನು ಅಪರಂಜಿಯಲ್ಲಿ ಪ್ರಕಟಿಸಲಾಗುವುದು

ಈ ರಾಯರು ಬಂದರು ಈ ಮಾವನ ಮನೆಗೆ

• ಎನ್. ಪ್ರಕಾಶ್

(ಕೆ.ಎಸ್.ನ. ಅವರ ಕ್ಷಮೆ ಕೋರಿ)

ಹಲವು ಹುಣ್ಣಿಮೆ ಹರಸಿ ಹೋದವು ಬಾನು
ಬಾಡಿ ಹೋದವು ರೇಶಿಮೆಯ ದಿಂಬಿನಂಚಿನ ಹೂವು
ನಾದಿನಿಯ ನುಡಿಗಳು ಗಂಟಲೊಳಗೇ ಉಳಿದವು
ಮಾವ ಮೌನಕೆ ಶರಣು, ಅತ್ತೆಗೋ ಅರಳು ಮರುಳು

ಹೇಳುವವರಾರು, 'ಒಳಗೆ ನೀರಾಯಿತೆ ಪದುಮಳಿಗೆ?'
ಬರ ಬಂದಿರಬಹುದೆ ನೀರಿಗೆ, ವಿದ್ಯುತ್ತಿಗೆ?
ಹಂಡೆಯ ನೀರು ಸೋರೆ, ಒದ್ದೆಯಾಯಿತೆ ಕಟ್ಟೆಗೆ?
ನೀಗಬಾರದೆ ಎಲ್ಲ ತೊಂದರೆ ಈ ಒಂದು ದಿನದಾ ಮಟ್ಟಿಗೆ?

ದಿನವು ಸವೆಸುವರೆ ರಾಯರು ಮಾವನ ಮನೆಯ ದಾರಿ?
ಹಂಬಲದ ಹೆಗಲೇರಿ ಬರುವುದು, ತಿಂಗಳಿಗೊಂದೇ ಬಾರಿ
ಪದುಮಳಾದರು ಏನು, ದಿನವೂ ಕೂಡುವಳೆ ಹೊರಗೆ?
ಏನು ಯೋಗವೋ ಏನೊ, ಅವರು ಬಂದಾಗಲೆ ಇವಳು ಹೊರಗೆ

ಹೊರಗಾಗಲಿಕೆ ಬೇಡವೆಂಬುವರಾರು? ನೀರಾಗಬಾರದೆ ಬೇಗ?
ಹೊರಗಾಗಿಯೂ ಒಳಗೇ ಉಳಿಯುವುದೆಂಥ ನೆಂಟಿನ ಬೆರಗ?
ನೀರಾಗದೆ ಒಳಗೆ ಕೊಳಲ ದನಿ ಪುಳಕಗೊಳಿಸುವುದು ಹೇಗೆ?
ಕವಿಯೂ ಇಲ್ಲ, ಮಲ್ಲಿಗೆಯೂ ಇಲ್ಲ, ಬಂದಾಳು ಪದುಮ ಹೇಗೆ?

ಪತ್ತೇದಾರ ಪಕ್ಕಿ

• ಕುಮುದಾ ಪುರುಷೋತ್ತಮ್

ಬೇಸಿಗೆ ರಜ ಮುಗಿದು ಶಾಲೆಗಳು ಆರಂಭಗೊಂಡಿದ್ದುವು. ಸುಮಾರು ನಾಲ್ಕು ಗಂಟೆಯಾಗಿರಬೇಕು. ನಾನೂ ಗೆಳೆಯ ಸಾರನಾಥನೂ ಅಡುಗೆಯಾಕೆ ಸರೋಜಮ್ಮ ಮಾಡಿ ತಂದಿಟ್ಟ ಬಿಸಿ ಬಿಸಿ ಸಮೋಸ ತಿಂದು ಕಾಫಿ ಕಪ್ಪು ಬಾಯಿಗಿಡುತ್ತಿದ್ದಾಗ ಯಾರೋ ಬಾಗಿಲು ತಟ್ಟಿದರು.

"ಪಕ್ಕೀನೇ ಇರ್ಬೇಕು. ಬಾಗಿಲು ತೆಗೀತೀಯಾ ಪ್ಲೀಸ್?" ನನ್ನ ಗೆಳೆಯ ಪತ್ತೇದಾರ ಸಾರನಾಥ ಬಾಗಿಲು ತೆರೆಯುವ ಮುಂಚೆಯೇ ತನ್ನ ಆರನೇ ಇಂದ್ರಿಯ ಜಾಗೃತಗೊಳಿಸಿ ಕುಳಿತಲ್ಲಿಂದಲೇ ಯಾರು ಬಂದಿದ್ದಾರೆಂದು ಊಹಿಸಿಬಿಡಬಲ್ಲವನಾಗಿದ್ದ! ಅವನಿಗೆ ಕಾಫಿ ಕುಡಿಯುವ ಕ್ರಿಯೆ ಒಂದು ತಪಸ್ಸಿದ್ದಂತೆ. ಒಮ್ಮೆ ಕುಡಿಯಲಾರಂಭಿಸಿದರೆ ಲೋಟ ಖಾಲಿಯಾಗುವವರೆಗೆ ಜಪ್ಪಯ್ಯಾಂದ್ರೂ ಮೇಲೆದ್ದು ವ್ರತ ಭಂಗ ಮಾಡುತ್ತಿರಲಿಲ್ಲ. ಇದನ್ನು ಬಲ್ಲ ನಾನು ಮೇಲೆದ್ದು ಬಾಗಿಲು ತೆಗೆದ.

"ಏನೋ ಮರಿ, ತುಂಬಾ ದಿನಗಳಿಂದ ಕಾಣ್ಲೇ ಇಲ್ಲ?" ಸಾರನಾಥನ ಮುಖದಲ್ಲಿ ಕಂಡ ಲವಲವಿಕೆ, ಉತ್ಸಾಹ ಅವನ ಕಿರಿಯ ಸ್ನೇಹಿತನ ಆಗಮನ ಖುಷಿ ತಂದಿರುವುದು ಸ್ಪಷ್ಟವಾಗಿತ್ತು.

"ಅಂಕಲ್, ಬೇಸಿಗೆ ರಜದಲ್ಲಿ ನಮ್ಮ ದೊಡ್ಡಮ್ಮನ ಊರಿಗೆ ಹೋಗಿದ್ದೆ."

"ಯಾವ ಊರಿಗೆ ಹೋಗಿದ್ದೆ? ಏನೇನು ಮಾಡ್ದೆ? ನಾನು ಹೇಳಿಕೊಟ್ಟಿದ್ದೆಲ್ಲಾ ನೆನಪಿಟ್ಟುಕೊಂಡು ಏನಾದ್ರೂ ಪತ್ತೇದಾರಿ ಕೆಲ್ಸ ಮಾಡಿದೆಯಾ?" ಸಾರನಾಥ ವಿಪರೀತ ನಿರೀಕ್ಷೆಯಿಂದ ಕೇಳಿದ.

"ನಾನು ಹೋಗಿದ್ದು ಮಲೆನಾಡಿನ ಅಂಚಿನಲ್ಲಿರೋ ಹಳ್ಳಿಗೆ. ಯಾವಾಗ಼್ೂ ಕಣ್ಣು ಕಿವಿ ಮೂಗು ಎಚ್ಚರವಾಗಿಟ್ಟುಕೊಂಡು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು ಅಂದಿದ್ರಲ್ಲಾ ಹಾಗೇ ಮಾಡಿದೆ. ಆದ್ರೆ ಎಲ್ಲಾ ತಲೆ ಕೆಳಕಾಗಿ ಬಿಡ್ತು" ಪಕ್ಕಿ ತಲೆ ತಗ್ಗಿಸಿದ.

"ಸೋಲೇ ಯಶಸ್ಸಿನ ಮೊದಲ ಮೆಟ್ಟಿಲು ಅಂತ ಕೇಳಿಲ್ವಾ? ಚಿಂತೆ ಬೇಡ ಏನಾಯ್ತು? ಕಳ್ಳ ತಪ್ಪಿಸಿ ಒಡ್ಹೋದ್ನಾ ಅಥ್ವಾ ಇನ್ನೇನಾದ್ರೂ ಅವಾಂತ್ರ?" ಸಾರನಾಥ ಖಾಲಿ ಕಾಫಿ ಕಪ್ಪನ್ನು ಟೀಪಾಯ್ ಮೇಲಿರಿಸಿ ಚಕ್ಕ ಮಕ್ಕಳ ಹಾಕಿ ಕಥೆ ಕೇಳಲು ಮೈಯ್ಯೆಲ್ಲಾ ಕಿವಿಯಾಗಿ ಕಾದು ಕುಳಿತ. ಪಕ್ಕಿ ಹೇಳಿದ ಕಥಾ ವಿವರ ಇಕೋ ಇಲ್ಲಿ ನಿಮ್ಮ ಮುಂದಿದೆ.

ಪಕ್ಕಿ ಮತ್ತು ತಂಗಿ, ತಾಯಿಯ ಜೊತೆ ದೊಡ್ಡಮ್ಮನ ಊರಿಗೆ ಹೋದರು. ದೊಡ್ಡಮ್ಮನ ಮಕ್ಕಳು ಮಾಧವಿ ಮತ್ತು ರಾಘು ಹೆಚ್ಚು ಕಡಿಮೆ ಇವರ ಓರಗೆಯವರೇ. ಮಾಧವಿಯನ್ನು ಕಂಡೊಡನೆ ಸದಾ ತರಲೆ ಮಾಡುತ್ತಾ ಅಣ್ಣನ ತಲೆ ತಿನ್ನುತ್ತಿದ್ದ ಲಲ್ಲಿ ಪಕ್ಕಿಯ ಕಡೆ ತಿರುಗಿ ನೋಡದೆ ಅವಳಿಗೆ ಅಂಟಿಕೊಂಡಳು. ಪಕ್ಕಿ ನಿರಾಳವಾಗಿ ರಾಘು ಜೊತೆ ತೋಟದಲ್ಲಿ ಸುತ್ತಾಡುತ್ತಾ ಮರ ಹತ್ತಲು ಕಲಿತು ಪೇರಲ ಕಾಯಿ ತಿನ್ನುತ್ತಾ ತೊರೆಯಲ್ಲಿ ಆಟವಾಡುತ್ತಾ ಖುಷಿಯಿಂದಿದ್ದ. ಈ ಖುಷಿಯ ನಡುವೆ ಇದ್ದ ಒಂದೇ ಒಂದು ಕಪ್ಪು ಚುಕ್ಕೆ ಎಂದರೆ ಆ ಮನೆಯ ತಾತ. ಸದಾ ಸಿಡಿಮಿಡಿಗೊಳ್ಳುತ್ತಾ ಸಿಡುಕುತ್ತಿದ್ದ ತಾತನ ಸಿಡುಕು ಮಂದವಾಗಿದ್ದ ಕಿವಿಯಿಂದಾಗಿ ಇನ್ನೂ ಹೆಚ್ಚಿತ್ತು. ಹೇಳಿದ್ದನ್ನು ಅರ್ಧಂಬರ್ಧ ಅರ್ಥ ಮಾಡಿಕೊಂಡು ಹಾರಾಡುತ್ತಿದ್ದರು. ಹುಡುಗರು ನಿರಾಳವಾಗಿ ಆಡುತ್ತಿದ್ದರೆ ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಬಂದು ಕೂಗಾಡುತ್ತಿದ್ದರು.

''ಏನ್ರೋ, ಸದಾ ಆಟ ನಿಮ್ದು? ಓದಿಲ್ಲ ಬರಹವಿಲ್ಲ, ಕೂತು ಓದ್ಕೊಳಿ''

''ಏನು ಓದ್ಲಿ ತಾತ? ಪರೀಕ್ಷೆಗಳು ಮುಗಿದು ಈಗ ನಮಗೆ ಬೇಸಿಗೆ ರಜ'' ರಾಘು ವಿವರಿಸಲು ಹೋಗುತ್ತಿದ್ದ.

''ಪರೀಕ್ಷೆಗ್ಳು ಮುಗಿದ್ರೆ ಏನಾಯ್ತು? ಇನ್ನೇನಾರಾ ಓದಿ. ನಾವೆಲ್ಲಾ ಸಣ್ಣೋವ್ರಿದ್ದಾಗ ಎಷ್ಟು ಓದುತಿದ್ವಿ ಏನ್ಕಥೆ, ಸದಾ ಮಂಗಗಳಂತೆ ಮರ ಹತ್ತೋದು ಇಲ್ಲ ಕೊಚ್ಚೆ ನೀರಲ್ಲಿ ಆಡೋದು. ಇಷ್ಟೇ ನಿಮ್ಮಯೋಗ್ಯತೆ.''

ಕೇಳುವಷ್ಟು ಕೇಳಿ ಪಕ್ಕಿ ಒಮ್ಮೆ ತಾತನಿಗೆ ಕೇಳಿಸುವಂತೆ ಏರಿದ ಧ್ವನಿಯಲ್ಲಿ ತಿಳಿ ಹೇಳಲು ಪ್ರಯತ್ನಿಸಿದ್ದ. ''ತಾತ, ನಾವು ಆಡುವ ಜೊತೆ ಪ್ರಕೃತಿಯನ್ನೂ ಗಮನಿಸ್ತಾ ಎಷ್ಟೋ ವಿಷಯ ಕಲೀತಿದ್ದೀವಿ. ನಮ್ಮ ಸಾರನಾಥ ಅಂಕಲ್ ಹೇಳೋಹಾಗೆ ಪುಸ್ತಕದ ಓದಿಗಿಂತ ಪ್ರಕೃತಿಯಿಂದ ನೇರ ಕಲ್ಯೋದು ನಮ್ಮ ತಲೇಗೆ ಹೆಚ್ಚು ನಾಟುತ್ತಂತೆ.

''ಯಾಕೋ ಹಾಗೆ ಕೂಗ್ತಿ? ನನ್ಗೇನೂ ಕಿವುಡಿಲ್ಲ, ಹೇಳ್ತೀನಿ ಕೇಳು. ನಿಂಗೂ ಬುದ್ಧಿ ಇಲ್ಲ ನಿನ್ನ ಅದ್ಯಾರೋ ಸಾರನಾಥ ಅಂದ್ಯಲ್ಲಾ, ಅವಂಗೂ ಬುದ್ಧಿ ಇಲ್ಲ'' ಎಂದು ತಲೆಯಾಡಿಸುತ್ತಾ ಹೋಗಿಬಿಡುತ್ತಿದ್ದರು. ಪ್ರತಿಯೊಂದಕ್ಕೂ ತಾತನ ಸಿಡುಕು, ಕಿರಿಕಿರಿ ಇದ್ದೇ ಇರುತ್ತಿತ್ತು.

ಒಮ್ಮೆ ಪಕ್ಕಿಯ ದೊಡ್ಡಪ್ಪ ಊರಿಗೆ ಹೋಗಬೇಕಾಯಿತು. ಮನೆ ಕಡೆ ಜೋಪಾನವೆಂದು ದೊಡ್ಡಮ್ಮನ ಬಳಿ ಸಾರಿ ಸಾರಿ ಹೇಳಿ ಬಸ್ ಹತ್ತಿದರು. ಅಂದು ಹುಣ್ಣಿಮೆ. ಎಲ್ಲರೂ ತೊರೆಯ ಬಳಿ ರಾತ್ರಿ ಬೆಳದಿಂಗಳೂಟ ಮಾಡಿದರು. ತಾತ ತೊರೆಯ ಬಳಿ ಚಳಿ ಎಂದು ಬರದಿದ್ದುದು ಮಕ್ಕಳಿಗೆ ಕಡಿವಾಣ ಕಳಚಿದ ಕುದುರೆಯಂತಾಗಿತ್ತು. ತೊರೆಯಲ್ಲಿ ಕುಣಿದು ಕುಪ್ಪಳಿಸಿ ಮರಳಿನಲ್ಲಿ ಹೊರಳಾಡಿ ನಲಿದರು. ಹೊಟ್ಟೆ ಬಿರಿಯುವಂತೆ ತಿಂದ ಪಕ್ಕಿ ಮನೆಗೆ ಬಂದಾಗ ಕಣ್ಣೆಳೆಯುತ್ತಿತ್ತು. ಅಂಗಳದಲ್ಲಿ ಸಾಲಾಗಿ ಹಾಸಿಗೆ ಬಿಡಿಸಿ ಎಲ್ಲರೂ ಮಲಗಿದರು. ದೊಡ್ಡಮ್ಮ ಅಮ್ಮನ ಬಳಿ ಊರಿನಲ್ಲಿ ಹೆಚ್ಚುತ್ತಿರುವ ಕಳ್ಳತನದ ಬಗ್ಗೆ ಹೇಳುತ್ತಿದ್ದುದು ಕೇಳಿದ ಪಕ್ಕಿಯ ನಿದ್ದೆ ಹಾರಿಹೋಯಿತು. ಅಮ್ಮ ದೊಡ್ಡಮ್ಮ ನಿದ್ರೆಗೆ ಜಾರಿದರೂ ಇವನ ತಲೆಯಲ್ಲಿ ಕಳ್ಳ ಹೊಕ್ಕುಬಿಟ್ಟಿದ್ದ. ತಾನಿಲ್ಲಿರುವಾಗಲೇ ಕಳ್ಳತನದ ಪ್ರಯತ್ನವಾದರೆ? ತಾನು ಸಾಹಸಪಟ್ಟು

ಅವನನ್ನು ಏಕಾಂಗಿಯಾಗಿ ಹಿಡಿದು ಪೋಲೀಸರಿಗೊಪ್ಪಿಸಿದರೆ? ಈ ಸುದ್ದಿ ರೇಡಿಯೋ, ಟಿ.ವಿ., ಪತ್ರಿಕೆಗಳಲ್ಲಿ ಬಂದರೆ? ಇದನ್ನು ನೋಡಿದ ಸಾರನಾಥ ಅಂಕಲ್ ಸ್ವತಃ ಇಲ್ಲಿಗೇ ಬಂದು ಕೈ ಕುಲುಕಿದರೆ? ಪಕ್ಕಿಗೆ ರೋಮಾಂಚನವಾಯ್ತು. ಈ ಆಲೋಚನೆಯಲ್ಲಿ ಓಲಾಡುತ್ತಿದ್ದವ ದಡಕ್ಕನೆ ಎದ್ದು ಕುಳಿತು ಕಣ್ಣರಳಿಸಿದ. ಎದುರಿಗಿದ್ದ ಕಿಟಕಿಯಿಂದ ತಿಂಗಳ ಬೆಳಕಿನಲ್ಲಿ ಎಲ್ಲವೂ ನಿಚ್ಚಳವಾಗಿ ಕಾಣುತ್ತಿತ್ತು. ಸಂದೇಹವೇ ಇರಲಿಲ್ಲ, ಕಳ್ಳನೊಬ್ಬ ಮೆಲ್ಲನೆ ಸಪ್ಪಳವಾಗದಂತೆ ನಡೆಯುತ್ತಾ ಕಿಟಕಿ ದಾಟಿ ಹಿತ್ತಿಲತ್ತ ಹೋಗುತ್ತಿದ್ದ. ಕುಳ್ಳಗಿದ್ದ ಬೋಡು ತಲೆಯ ವ್ಯಕ್ತಿ. ಹಿಂದೊಮ್ಮೆ ಸಾರನಾಥ ಅಂಕಲ್ ಹೇಳಿದ್ದು ನೆನಪಿಗೆ ಬಂತು. ''ಹಳ್ಳಿ ಕಡೆ ಕಳ್ಳತನ ಮಾಡೋಕ್ಕೆ ಹೊರಟವ್ರು ತಲೆಯ ಕೂದಲು ತೆಗೆಸಿ ಮೈಗೆ ಎಣ್ಣೆ ಲೇಪಿಸ್ಕೋತಾರೆ. ಹಿಡದ್ರೆ ಎಣ್ಣೆ ಮೈ ಜಾರಿ ತಪ್ಪಿಸಿಕೊಳ್ಳೋದು ಸುಲಭ. ಕೂದಲು ಇದ್ದರೆ ಕೂದಲು ಹಿಡಿದು ಸದೆ ಬಡೀತಾರೆ. ಅದಕ್ಕೆಂದೇ ಕಳ್ಳತನಕ್ಕೆ ಹೊರಡೋ ಮುಂಚೆ ಕೂದಲು ಸಂಪೂರ್ಣ ತೆಗೆಸಿ ಮೈಗೆ ಹರಳೆಣ್ಣೆ ಹಚ್ಕೋತಾರೆ'' ಎಂದು ಹೇಳಿದ್ದರು. ಈಗ ಹೋದ ಬೋಡು ತಲೆಯ ವ್ಯಕ್ತಿ ಖಂಡಿತಾ ಕಳ್ಳನೇ ಎಂಬುದರಲ್ಲಿ ಸಂದೇಹವೇ ಇರಲಿಲ್ಲ. ಅಮ್ಮನ ಕಿವಿಯಲ್ಲಿ ಕಳ್ಳ ಬಂದಿರುವುದು ಹೇಳಿದ. ಕೇಳಿದ ಅಮ್ಮ ಗಾಬರಿಯಿಂದ ಎದ್ದು ಕುಳಿತು ದೊಡ್ಡಮ್ಮನನ್ನು ಎಬ್ಬಿಸಿದರು. ದೀಪ ಹಚ್ಚಲು ಮೇಲೆದ್ದ ದೊಡ್ಡಮ್ಮನನ್ನು ಪಕ್ಕಿ ತಡೆದ. ''ದೀಪ ಹಚ್ಚಿದ್ರೆ ಕಳ್ಳ ಓಡಿ ಹೋಗಿಬಿಡ್ತಾನೆ. ನೀವ್ಯಾರೂ ಹೆದರಬೇಡಿ. ನಾನವನನ್ನು ಹಿಡೀತೇನೆ'' ಮನೆಯಲ್ಲಿ ಜಿರಲೆ ಹಲ್ಲಿಗೂ ಭಯಪಡುತ್ತಿದ್ದ ಪಕ್ಕಿಯ ಶೌರ್ಯದ ಮಾತು ಅವನಮ್ಮನನ್ನು ದಂಗುಪಡಿಸಿತು.

ಆ ವೇಳೆಗೆ ಸರಿಯಾಗಿ ಹಿತ್ತಿಲಲ್ಲಿ ನಲ್ಲಿ ತಿರುಗಿಸಿ ಹರಿವ ನೀರಿನ ಸಪ್ಪಳವಾಯ್ತು. ''ಅಕ್ಕ, ಈ ಕಳ್ಳಂಗೆ ಎಷ್ಟು ಧೈರ್ಯನೋಡು. ಶಬ್ದ ಮಾಡಿದ್ರೆ ಜನ ಎಚ್ಚೆತ್ತು ಬಂದು ಹಿಡ್ಕೋತಾರೆ ಅನ್ನೋ ಭಯವೂ ಇಲ್ಲ. ಇಂತಹ ದುಸ್ಸಾಹಸಿಗ್ಳು ಯಾವ್ದಕ್ಕೂ ಹೇಸೊಲ್ಲ. ಸಧ್ಯ ಹಿಂದಿನ ಮುಂದಿನ ಬಾಗಿಲು ಭದ್ರವಾಗಿ ಹಾಕಿದ್ದೀ ತಾನೇ?'' ಪಕ್ಕಿ ಅಮ್ಮ ತನ್ನಕ್ಕನನ್ನು ಕೇಳಿದರು. ಅವರು ಮೇಲೆದ್ದು ಕತ್ತಲಿನಲ್ಲಿಯೇ ತಡಕಾಡುತ್ತಾ ಹೋಗಿ ನೋಡಿದರೆ ಮುಂದಿನ ಬಾಗಿಲು ಚಿಲಕವೇ ಹಾಕದೆ ಬಾಗಿಲು ಸುಮ್ಮನೇ ಮುಂದು ಮಾಡಲಾಗಿತ್ತು! ಗಾಬರಿಯಾದ ದೊಡ್ಡಮ್ಮ ಚಿಲಕ ಹಾಕಿ ಬಂದು ತಮ್ಮ ಅಜಾಗರೂಕತೆಗೆ ತಮ್ಮನ್ನೇ ಹಳಿದುಕೊಳ್ಳುತ್ತಾ ದೇವರ ಜಪ ಮಾಡುತ್ತಾ ಕುಳಿತುಬಿಟ್ಟರು. ಎರಡು ನಿಮಿಷ ಕಳೆದಿರಬೇಕು. ಕಳ್ಳ ರಾಜಾರೋಷವಾಗಿ ಕಿಟಕಿಯಿಂದ ಹಾದು ಬಂದು ಮುಂದಿನ ಬಾಗಿಲು ತಟ್ಟಿದ. ಏನು ಮಾಡಲೂ ತೋಚದ ಅಮ್ಮ, ದೊಡ್ಡಮ್ಮ ಎದ್ದು ಬಂದು ಬಾಗಿಲು ಹಿಂದಿನಿಂದ ಏರಿದ ಧ್ವನಿಯಲ್ಲಿ ಕಳ್ಳನನ್ನು ಸಿಕ್ಕಾಪಟ್ಟೆ ಬೈಯ್ಯಲು ಶುರು ಮಾಡಿಬಿಟ್ಟರು. ಅವರ ಉದ್ದೇಶ ಅಕ್ಕ ಪಕ್ಕದವರನ್ನೆಬ್ಬಿಸಿ ಸಹಾಯಕ್ಕೆ ಬರಮಾಡಿಸುವುದೇ ಆಗಿತ್ತು. ಇದೆಲ್ಲ ಕೂಗಾಟದಲ್ಲಿ ಎದ್ದು ಬಂದು ರಾಘು ಮತ್ತು ಮಾಧವಿ ಅಡುಗೆ ಮನೆಗೆ ನುಗ್ಗಿ ಹಾರೆ, ಒನಕೆ, ಈಳಿಗೆಮಣೆ ತಂದು ಅದರಲ್ಲೊಂದು ಲಲ್ಲಿ ಕೈಗೆ ಕೊಟ್ಟು ಸಿದ್ಧವಾಗಿ ನಿಂತರು. ಇದನ್ನೆಲ್ಲಾ ಕಂಡ ಪಕ್ಕಿಯ ಸಾಹಸ ಪ್ರವೃತ್ತಿ ಜಾಗೃತವಾಯಿತು. ಈಗ ತಾನು ಹಿಂಜರಿದರೆ ತನಗೆ ಸಿಗಬೇಕಾದ ಕೀರ್ತಿ ಬೇರೆಯವರ ಪಾಲಾಗುವುದು ಖಚಿತ. ಅದಕ್ಕೆ ಮುಂಚೆ ತಾನು ಮುನ್ನುಗ್ಗಿ ಕಳ್ಳನನ್ನು ಜೀವಂತ ಹಿಡಿದು

ಪೋಲೀಸರಿಗೆ ಒಪ್ಪಿಸಿಬಿಡಬೇಕು ಎಂದುಕೊಂಡು ಅಡ್ಡ ನಿಂತಿದ್ದ ದೊಡ್ಡಮ್ಮನನ್ನು ಪಕ್ಕಕ್ಕೆ ತಳ್ಳಿ ಚಿಲಕ ತೆಗೆದು ಹೊರಗೆ ನುಗ್ಗಿದ. ಬಾಗಿಲ ಮುಂದೆ ನಿಂತಿದ್ದ ಕಳ್ಳನನ್ನು ಮಿಸುಕಾಡದಂತೆ ಬಿಗಿಯಾಗಿ ಅಪ್ಪಿಕೊಂಡು ಕಳ್ಳಾ, ಕಳ್ಳಾ ಎಂದು ಕಿರುಚಿದ. ಕಳ್ಳ ಬಂಧನದಿಂದ ಬಿಡಿಸಿಕೊಳ್ಳಲು ಹೆಣಗಾಡುತ್ತಾ ಬಿಡೋ... ಬಿಡೋ... ಎಂದು ತಾನೂ ಕೂಗಾಡಿದ. ಅಷ್ಟರಲ್ಲಿ ಅಕ್ಕ ಪಕ್ಕದವರು ಕೈಗೆ ಸಿಕ್ಕ ಆಯುಧ ಹಿಡಿದು ಓಡೋಡಿ ಬಂದರು. ದೊಡ್ಡಮ್ಮ ಹೊರಗಿನ ಲೈಟ್ ಹಾಕಿರದಿದ್ದರೆ ಅಂದು ಆ ಕಳ್ಳನ ತಿಥಿಯಾಗಿ ಬಿಡುತ್ತಿತ್ತೇನೋ. ಬೆಳಕಿನಲ್ಲಿ ಕಳ್ಳನ ಮುಖ ಕಂಡ ಎಲ್ಲರೂ ಬೆಪ್ಪಾಗಿ ನಿಂತುಬಿಟ್ಟರು. ದೊಡ್ಡಮ್ಮ ನಾಚಿಕೆ ಪಶ್ಚಾತ್ತಾಪದಿಂದ ಭೂಮಿಗಿಳಿದು ಹೋದರು. ಒನಕೆ, ಹಾರೆ ಹಿಡಿದು ಬಂದ ಮಕ್ಕಳು ಆಯುಧಗಳನ್ನು ಕೆಳಗಿಟ್ಟು ಪೆಚ್ಚಾಗಿ ನಿಂತರು. ಪಕ್ಕಿ ಗಾಬರಿಯಿಂದ ಕಳ್ಳನ ಮೇಲಿನ ಹಿಡಿತ ಸಡಲಿಸಿ ತಲೆ ತಗ್ಗಿಸಿ ನಿಂತಿಬಿಟ್ಟ.

''ಮಾವಯ್ಯ, ತಪ್ಪಾಯ್ತು ಕ್ಷಮಿಸಿಬಿಡಿ. ನೀವೂಂತ ತಿಳೀದೆ ಯಾರೋ ಕಳ್ಳ ಬಂದ ಅಂದುಕೊಂಡುಬಿಟ್ವಿ'' ದೊಡ್ಡಮ್ಮ ತಾತನ ಕಾಲ್ಮುಟ್ಟಿ ನಮಸ್ಕರಿಸಿಬಿಟ್ಟರು.

''ಏನೂಂತ ಕ್ಷಮಿಸೋದು ನನ್ನ ತಲೆಕಾಯಿ ಬುರ್ಡೆ. ನಾನು ರಾತ್ರಿ ವೇಳೆ ಎದ್ದು ಬಚ್ಚಲಿಗೆ ಹೋಗೋದು ನಿನಗೆ ಗೊತ್ತಿಲ್ವೇ?'' ಸಿಡುಕು ತಾತ ಸೊಸೆಯನ್ನು ಯದ್ವಾ ತದ್ವಾ ತರಾಟೆಗೆ ತೆಗೆದುಕೊಂಡರು.

''ಮಾವ, ಎಲ್ಲಾ ಈ ಪಕ್ಕಿಯಿಂದಾದದ್ದು. ಅವನು ನೋಡಿದ್ದು ಕಳ್ಳನೇ ಅಂತ ನಿಖರವಾಗಿ ಹೇಳಿದಾಗ ಒಂದು ಕ್ಷಣ ಬುದ್ಧಿಗೆ ಮಂಕು ಕವಿದುಬಿಡ್ತು.'' ಅಮ್ಮನಿಂದ ಪಕ್ಕಿಯ ಬೆನ್ನಿಗೊಂದು ಬಿತ್ತು. ''ಪೆದ್ದಂಭಟ್ಟ ಕಿಟಿಕೀಲಿ ಕಳ್ಳಂಗೂ ತಾತಂಗೂ ವ್ಯತ್ಯಾಸ ತೀಳಿಲಿಲ್ವೇನೋ? ನಿನ್ನಿಂದ ನಾನು ತಲೆ ತಗ್ಗಿಸೋ ಹಾಗಾಯ್ತು.'' ಅಮ್ಮ ಪಕ್ಕಿಯ ಪರವಾಗಿ ಕ್ಷಮೆಯಾಚಿಸಿದರು. ಗೊಣಗುತ್ತಲೇ ಇದ್ದ ತಾತನನ್ನು ಅಕ್ಕಪಕ್ಕದ ಮಂದಿ ಸಮಾಧಾನಪಡಿಸಿ ಪಕ್ಕಿಯನ್ನು ಸಾಕಷ್ಟು ಗೇಲಿ ಮಾಡಿ ಮಲಗಲು ಹೋದರು. ಅಂದಿನಿಂದ ಆ ಊರಿನ ಮಂದಿ ಪಕ್ಕಿಯನ್ನು ಪತ್ತೇದಾರ ಪಕ್ಕಿ ಎಂದು ಕರೆದು ನಕ್ಕಿದ್ದೇ ನಕ್ಕಿದ್ದು!

ಆಶ್ಚರ್ಯವೆಂದರೆ ಈ ಘಟನೆಯ ನಂತರ ತಾತ ಸಿಡುಕಲೇ ಇಲ್ಲವಂತೆ!

★★★

ಕಥೆ ಮುಗಿಸಿ ತಲೆ ತಗ್ಗಿಸಿ ಕುಳಿತ ಪಕ್ಕಿಯನ್ನು ಸಾರನಾಥ ಹುರಿದುಂಬಿಸಿದ. ''ಬೇಜಾರು ಮಾಡ್ಕೋಬೇಡ್ಕೋ ಮರೀ. ಮೊದಮೊದಲು ಎಲ್ಲಾ ಪತ್ತೇದಾರರಿಗೂ ಇಂಥದ್ದು ಇದ್ದಿದ್ದೇ. ಕಳ್ಳನನ್ನು ಹಿಡಿಲೇಬೇಕು, ಎಲ್ಲರಿಂದ ಶಹಬಾಸ್‌ಗಿರಿ ಪಡೀಬೇಕು ಅನ್ನೋ ಆತುರದಲ್ಲಿ ನೀನೇ ಕಳ್ಳನನ್ನು ಸೃಷ್ಟಿ ಮಾಡಿದೆ. ತಾತಾ ಅಲ್ಲ ಆ ಸಂದರ್ಭದಲ್ಲಿ ಯಾರೇ ಬಂದಿದ್ರೂ ಅವ್ರು ನಿನ್ನ ಕಣ್ಣಿಗೆ ಕಳ್ಳನಂತೆಯೇ ಕಾಣ್ತಿದ್ರು. ಯೋಚಿಸ್ಬೇಡ. ಒಂದಲ್ಲ ಒಂದಿನ ನೀನೂ ನನ್ನಂತೆ ಪ್ರಸಿದ್ಧ ಪತ್ತೇದಾರನಾಗ್ತಿ.''

ಪೆಚ್ಚು ಮುಖ ಹಾಕಿ ಒಳಬಂದಿದ್ದ ಪಕ್ಕಿ ಸಮೋಸ ಕಚ್ಚುತ್ತಾ ನಗುತ್ತಾ ಮನೆಗೆ ಹೊರಟ.

ಹುರುಳಿಕಟ್ಟು......

ಹೊಸಗಾಳಿ-ಹೊಸ ಯೋಚನೆ ! (ಚೇಂಜ್ ಈಸ್ ದಿ ರೂಲ್)

• ಎಚ್. ಗೋಪಾಲಕೃಷ್ಣ

ಮನೆಯಲ್ಲಿ ಅಥವಾ ಎಲ್ಲೋ ಯಾವುದೇ ಕೆಲಸ ಆಗಬೇಕು ಅಂದರೆ ಒಂದು ರೀತಿಯ ಟೈಮ್ ಷೆಡ್ಯೂಲ್ ಅಂತ ಹಾಕಿಕೊಂಡು ಕೆಲಸ ಮಾಡುವುದು ರೂಢಿ, ಸಂಪ್ರದಾಯ. ಇದನ್ನ ನಾವು ಚಿಕ್ಕವರಾಗಿದ್ದಾಗಲೇ ನಮ್ಮ ತಲೆಯಲ್ಲಿ ಹೋಗುವಂತೆ ಮತ್ತು ಮೈಂಡ್ ಸೆಟ್ ಆರೀತಿ ಆಗುವಂತೆ ಯೋಜಿಸಿರುತ್ತಾರೆ-ನಮ್ಮನ್ನು ಹೆತ್ತವರು ಅವರಿಗೆ ಅರಿವಿಲ್ಲದಹಾಗೆಯೇ! ಅದು ಹೇಗೆ ಅಂದರೆ ಇಷ್ಟು ಹೊತ್ತಿಗೆ ಓದಬೇಕು, ಇಷ್ಟು ಹೊತ್ತಿಗೆ ಉಣ್ಣಬೇಕು, ಇಷ್ಟು ಹೊತ್ತಿಗೆ ಮಲಗಬೇಕು...... ಸರಿ ಸುಮಾರು ಹೀಗೆ.

ನೀವು ದೊಡ್ಡವರಾಗುತ್ತಾ ಆಗುತ್ತಾ ಈ ಸಿಸ್ಟಂ ಹಾಗೇ ಮುಂದುವರೆದುಕೊಂಡು ಬಂದು ನಿಮ್ಮಿಂದ ನಿಮ್ಮ ಮುಂದಿನ ಪೀಳಿಗೆಗೂ ವರ್ಗವಾಗುತ್ತದೆ.

ಇದೇ ವ್ಯವಸ್ಥೆ ನೀವು ಕೆಲಸಕ್ಕೆ ಸೇರಿದಾಗಲೂ ಮುಂದುವರಿಯುತ್ತೆ. ಕಾರ್ಖಾನೆಯಲ್ಲಿ ಕೆಲಸ ಅಂದರೆ ಸೈರನ್ ಆದ ಕೂಡಲೇ ಮೆಷೀನು ಆರಂಭಿಸುವುದು, ಮತ್ತೊಂದು ಸೈರನ್ ಆದ ಕೂಡಲೇ ಕಾಫಿಗೆ ಹೋಗುವುದು, ಮತ್ತೂ ಒಂದು ಸೈರನ್ ಆಯಿತು ಎಂದರೆ ಊಟಕ್ಕೆ ಹೊರಡುವುದು, ಕೊನೇ ಸೈರನ್ನಿನ ಶಬ್ದ ಕೇಳಿದ ಕೂಡಲೇ ಪಂಚ್ ಮಾಡಿ ಮನೆ ಸೇರಲು ಬಸ್ಸಿಗೆ ಓಡುವುದು. ಇದು ಕಾರ್ಖಾನೆ ಕೆಲಸಗಾರರ ರೂಟೀನ್ ಕರ್ಮವಾದರೆ, ಸರ್ಕಾರೀ ಕಛೇರಿಯಲ್ಲಿ ಕೆಲಸ ಮಾಡುವವರು ಅಥವಾ ಬೇರೆ ಯಾವುದೇ ಉದ್ದಿಮೆಯಲ್ಲಿರುವವರು ಅವರವರದೇ ಆದ ಒಂದು ಸಿಸ್ಟಮನ್ನು ರೂಢಿಸಿಕೊಂಡು ಅದನ್ನು ಚಾಚೂತಪ್ಪದೇ ಪಾಲಿಸಿಕೊಂಡು ಬಂದಿರುತ್ತಾರೆ. ಅಂದರೆ ನಮಗೆ ತಿಳಿದೋ ತಿಯದೆಯೋ ಒಂದು ವ್ಯವಸ್ಥೆಗೆ ನಾವು ಹೇಗೆ ಒಗ್ಗಿಹೋಗಿರುತ್ತೀವಿ ಅಂದರೆ ಒಂದೇ ಒಂದು ಸ್ವಲ್ಪ ಏರು ಪೇರಾದರೂ ವಿಲವಿಲ ಒದ್ದಾಡಿಬಿಡುತ್ತೇವೆ.

ಸುಮಾರು ಮೇಲಾದಾಯ ಇರುವ ಕಡೆ ಸೇವೆ ಸಲ್ಲಿಸುವವರು ಬೇರೆ ರೀತಿಯ ಮೈಂಡ್ ಸೆಟ್ಟಿಗೆ ಸೆಟ್ ಆಗಿರುತ್ತಾರೆ. ಬಾಡಿ ಸಿಸ್ಟಂ ಹೇಗೆ ಕಾರ್ಯ ನಿರ್ವಹಿಸುತ್ತೆ ಎಂದರೆ

ಮೇಲಾದಾಯ ಕಡಿಮೆ ಆದ ದಿವಸಗಳು ಇವರು ಹೇಳಿಕೊಳ್ಳಲಾರದ ಆತಂಕಕ್ಕೆ ಒಳಗಾಗುತ್ತಾರೆ.

ಸಿಸ್ಟಂ ಯಾವರೀತಿ ಕೆಲಸ ಮಾಡುತ್ತೆ ಅಂದರೆ ಅದು ನಮ್ಮ ಊಟತಿಂಡಿಗಳಲ್ಲೂ ಕಾಣಿಸುತ್ತೆ. ಮೊದಲು ಸಾರು ಅನ್ನ ನಂತರ ಹುಳಿ ಕೊನೆಯಲ್ಲಿ ಮೊಸರು ಅಥವಾ ಮಜ್ಜಿಗೆ..... ಹೀಗೆ. ಜತೆಯಲ್ಲಿ ಊಟಕ್ಕೆ ಕುಳಿತವರು ಮೊದಲು ಮೊಸರನ್ನವನ್ನೋ ಮಜ್ಜಿಗೆಯನ್ನೋ ತಿಂದರು ಎಂದರೆ ಅವರಿಗಿಂತಲೂ ತವಕ ನಮಗೆ ಶುರುವಾಗುತ್ತೆ. ಪಾಪ ಇವರಿಗೆ ಏನಾಗಿದೆಯೋ ಹುಷಾರಿದಾರೋ ಇಲ್ಲವ್ರೋ..... ಹೀಗೆ.

ಹೋಟಲಿನಲ್ಲಿ ತಿಂಡಿ ತಿನ್ನಲು ಹೋಗಿ – ಮೊದಲು ಕಾಫಿ ಕುಡಿದು ಆಮೇಲೆ ತಿಂಡಿ ಹೇಳಿ – ಸುತ್ತಲೂ ಇರುವವರು ನಿಮ್ಮನ್ನು ಹೇಗೆ ನೋಡುತ್ತಾರೆ ಗಮನಿಸಿ!

ಇನ್ನು ಬಟ್ಟೆಬರೆ ವಿಷಯ ಯೋಚಿಸಿ – ಫಾಂಟಮ್ ಅಂಡರ್‌ವೇರ್ ಪಾಂಟಿನ ಮೇಲೆ ತೊಟ್ಟರೆ ಅದು ನಮಗೆ ಅಸಹ್ಯ ಅನಿಸುತ್ತೆ. ಷರ್ಟಿನ ಮೇಲೆ ಯಾರಾದರೂ ಬನೀನು ತೊಟ್ಟರೆ ಬೆಕ್ಕಸದಿಂದ ನೋಡುತ್ತೇವೆ. ಇನ್ನೂ ತಮಾಷೆ ಎಂದರೆ ಸೀರೆ ಮೇಲೆ ಯಾರಾದರೂ ಪೆಟ್ಟಿಕೋಟ್ ತೊಟ್ಟು ಸಾರ್ವಜನಿಕವಾಗಿ ಕಾಣಿಸಿಕೊಂಡರಂತೂ ಮಿಕ್ಕ ಹೆಂಗಳೆಯರು ನಾಚಿ ಮನೆಸೇರಿ ಮುಂದೆ ಯಾವತ್ತೂ ರಸ್ತೇಗೆ ಇಳಿಯಲಾರರೇನೋ!

ಇದು ಯಾಕೆ ಹೀಗೆ? ರೂಢಿಯಾದದ್ದನ್ನು ಬಿಟ್ಟು ಬೇರೆ ಹಾದಿ ಹುಡುಕುವವರು ಯಾವಾಗಲೂ ಅಪಹಾಸ್ಯಕ್ಕೆ ಒಳಗಾಗುತ್ತಾರೆ. ಆದರೆ ರೂಢಿ ಸಂಪ್ರದಾಯವನ್ನು ಬಿಟ್ಟು ಹೊಸದಾರಿ ಹಿಡಿಯಲೇಬೇಕು – ಇದು ಪ್ರಕೃತಿ ನಿಯಮ. ಇದನ್ನೇ ನಮ್ಮ ಹಿಂದಿನವರು ಚೇಂಜ್ ಈಸ್ ದಿ ರೂಲ್ ಆಫ್ ನೇಚರ್ ಎಂದು ಹೇಳಿದ್ದು. ಹಾಗೆ ನೋಡಿದರೆ ಜಗತ್ತಿನಲ್ಲಿ ಯಾವುದೇ ಹೊಸ ಅವಿಷ್ಕಾರಗಳು, ವೈಜ್ಞಾನಿಕ ಸಿದ್ಧಾಂತಗಳು ಮತ್ತು ನೂತನ ಯೋಚನೆಗಳು ಜನ್ಮ ತಳೆದದ್ದೇ ಮೈಂಡ್‌ಸೆಟ್‌ನಿಂದ ಆಚೆ ಬಂದು ವಿಭಿನ್ನವಾಗಿ ಯೋಚಿಸಿ ಕಾರ್ಯತತ್ಪರರಾಗುವವರಿಂದ. ರವೆಇಡ್ಲಿ ಹುಟ್ಟಿದ ಕಥೆಯೊಂದು ಕೇಳಿರುವಿರಾ? ಅಕ್ಕಿಗೆ ಬರಗಾಲ ಬಂದು ಅಕ್ಕಿ ಸಿಗದೇ ಪಾಡು ಪಡುತ್ತಿರಬೇಕಾದರೆ ಗೋಧಿ, ರವೆ ಹೇರಳವಾಗಿ ಲಭ್ಯವಿತ್ತು. ಪರ್ಯಾಯ ಆಹಾರ ವ್ಯವಸ್ಥೆ ಅನಿವಾರ್ಯವಾಯಿತು. ಆಗ ರವೆಇಡ್ಲಿಯ ಆವಿಷ್ಕಾರವಾಯಿತು – ಬೆಂಗಳೂರಿನ ಹೋಟೆಲ್ ಉದ್ಯಮಿಯೊಬ್ಬರಿಂದ. ಮದ್ದೂರು ವಡೆಯ ಕಥೆ ಇನ್ನೂ ವಿಚಿತ್ರವಾದದ್ದು. ಮದ್ದೂರಿನ ರೈಲ್ವೇ ಸ್ಟೇಷನ್ ಹೋಟಲಿನವರದ್ದು ಒಂದೇ ಸಮಸ್ಯೆ. ಗಿರಾಕಿಗಳು ಬರೋಲ್ಲಾ – ಏನು ಮಾಡಿದರೂ ಮಿಕ್ಕುತ್ತೆ – ಹೋಟಲು ಮುಚ್ಚಬೇಕು... ಅಂತ. ಒಬ್ಬ ಹಿತೈಷಿ ಗಾರ್ಡ್ ಅವರಿಗೆ ಒಂದು ಸಲಹೆ ನೀಡಿದರಂತೆ – ಬಿಸಿ ಬಿಸಿಯಾಗಿ ಬೋಂಡ ಗೀಂಡವ್ರೋ ಬಜ್ಜೀನೋ – ಈರೀತಿ ಕರಿದದ್ದು ಮಾಡಿ – ಸಂಜೆ ಮನೆಗೆ ಹೋಗಬೇಕಾದರೆ ನಿಮ್ಮ ದೋಸೆ ಇಡ್ಲಿ ಚಿತ್ರಾನ್ನ ಯಾರು ತಿಂತಾರೆ – ಹಾಗೇನೇ ಬೆಳಿಗ್ಗೆ ಬರ್ತಾ ಮನೇಲೇ ಉಂಡು ಬಂದಿರ್ತಾರೆ ಆಗಲೂ ಯಾರೂ ದೋಸೆ ಇಡ್ಲಿ ಚಿತ್ರಾನ್ನ ತಿನ್ನೋಲ್ಲಾ. ಮೈಸೂರಿಗೆ ರೈಲು ಓಡಾಡುತ್ತಿದ್ದ ಸಮಯದಲ್ಲಿ ಈಸಲಹೆ ಬಂದದ್ದು.

ಹೋಟೆಲ್ಲಿನ ಮಾಲೀಕರು ಮೈಸೂರಿನ ರೈಲುಗಳು ಓಡುತ್ತಿದ್ದಾಗ ಸಮಸ್ಯೆಯನ್ನ ಗಾರ್ಡ್ ಒಬ್ಬರಿಗೆ ಹೇಳಿಕೊಂಡಾಗ – ಅವರು ಸುಮ್ಮನೆ ಕ್ಯಾಷುವಲ್ ಆಗಿ ಈ ಸಲಹೆ ಕೊಟ್ಟರು! ಸಲಹೆ ಜಾರಿ ಹೇಗೆ ಮಾಡೋದೂ? ಮಾಲೀಕರು ಒಂದು ತಿಂಗಳು ಬೇರೆ ಬೇರೆ ಕರಿದ ತಿಂಡಿಗಳ ಪ್ರಯೋಗ ಮಾಡಿದರು. ಈರುಳ್ಳಿ ದಂಡಿಯಾಗಿ ಸಿಗುತ್ತಿದ್ದ ಕಾಲ. ಈರುಳ್ಳಿ ಹಾಕಿ ಮದ್ದೂರು ವಡೆಯ ಪ್ರಯೋಗ ಮಾಡಿದರು. ಅದು ಎಷ್ಟು ಯಶಸ್ವಿಯಾಗಿದೆ ಎನ್ನುವುದು ಮೈಸೂರಿಗೆ ಹೋಗಿ ಬರುವವರಿಗೆ ಮಾತ್ರವಲ್ಲದೇ ರೈಲು ಪ್ರಯಾಣಿಕರು ಎಲ್ಲರಿಗೂ ತಿಳಿದಿರುವ ವಿಷಯ! ಮದ್ದೂರುವಡೆ ತಿನ್ನಲೆಂದೇ ರೈಲಿನಲ್ಲಿ ಓಡಾಡುವ ಸುಮಾರು ಜನ ಸ್ನೇಹಿತರು ನನಗಿದ್ದಾರೆ!

ಹೊಸತನ್ನು ಅದು ನಮಗೆ ಎಷ್ಟೇ ಒಲ್ಲದು ಅನಿಸಿದರೂ ಸ್ವಾಗತಿಸಬೇಕಂತೆ –

ಮುಂದೆ ಅದೇ ದೊಡ್ಡ ಯೋಜನೆಗಳಿಗೆ ಹಾದಿಯಾಗುವುದಂತೆ – ನಮ್ಮ ಕುಮಾರ ಕಂಠೀರವಗಳು ಹೊಸ ಪ್ರಯೋಗಗಳನ್ನು ಮಾಡಬೇಕಾದರೆ ನಾವಲ್ಲದೇ ಬೇರೆ ಯಾರು ಅವರಿಗೆ ಉತ್ತೇಜಿಸಬೇಕು? ಬೆನ್ನು ತಟ್ಟೋಣ ಮತ್ತು ಯಾರಿಗೆ ಗೊತ್ತು ಇಲ್ಲೊಬ್ಬ ರಾಮನ್, ಅಲ್ಲೊಬ್ಬ ಬೋಸ್ ಸಿಕ್ಕಿದರೂ ಸಿಗಬಹುದು.

ಯಾವ ಹುತ್ತದಲ್ಲಿ ಯಾವ ಹಾವು?



ಆಧುನಿಕತೆಯ ಅನಿವಾರ್ಯತೆ....ಈ ಸದ್ದು

• ಡಾ|| ನಾ. ಡಿಸೋಜ

ಒಂದು ಕಾಲದಲ್ಲಿ ಮನೆಯಲ್ಲಿ ಸದ್ದು ಮಾಡುತ್ತಿದ್ದ ಒಂದೇ ಒಂದು ಯಂತ್ರವೆಂದರೆ ಹೆಂಡತಿ. ಇದು ಅಪಾಯಕಾರಿಯಾದ ಹೇಳಿಕೆ ಅನ್ನುವುದನ್ನ ನಾನು ಬಲ್ಲೆ. ಏಕೆಂದರೆ ಯಾರೇ ಫೆಮಿನಿಷ್ಟ್‌ಗಳು ಇದರ ಬಗ್ಗೆ ತಕರಾರು ಎತ್ತಬಹುದು. ಮನೆಯಲ್ಲಿ ಗಲಾಟೆ ಮಾಡುವುದರಲ್ಲಿ ಗಂಡಸೇನು ಕಡಿಮೆಯೇ ಎಂದು ಅವರು ಕೇಳಬಹುದು. ಬಹುದೇನು ಕೇಳಿಯೇ ಕೇಳುತ್ತಾರೆ. ಮನೆಯಲ್ಲಿ ಹೆಂಗಸಿನದು ಗಲಾಟೆ,. ಆದರೆ ಗಂಡಸಿನದು ಅಬ್ಬರ, ಗದ್ದಲ, ಬೊಬ್ಬೆ ಇದರ ಹಿಂದೆ ಅವನ ದರ್ಪ ದೌಲತ್ತು, ತಾನು ಪುರುಷ ಅನ್ನುವ ಅಹಂಕಾರ ಎಲ್ಲವೂ ಇರುತ್ತದೆ. ಇದನ್ನ ಹೋಲಿಸಿ ನೋಡಿದಾಗ ಹೆಂಗಸಿನದು ಕೇವಲ ಸದ್ದು. ಅದೂ ಅಸಹಾಯಕತೆಯ, ನೋವಿನ, ಒಂದು ಬಗೆಯ ಪ್ರೀತಿ ಬೆರೆತ ಸಿಟ್ಟಿನ ಸದ್ದು ಅದು. ಈ ಅರ್ಥದಲ್ಲಿ ನಾನು ಹೇಳಿದ್ದು.

ಒಮ್ಮೆ ನನ್ನ ಸ್ನೇಹಿತನೋರ್ವ ನಮ್ಮ ಮನೆಗೆ ಬಂದಿದ್ದ ಊಟಕ್ಕೆ. ಊಟಕ್ಕೆ ಕುಳಿತಾಗ ಆತ ನನ್ನ ಹೆಂಡತಿ ತಂದು ಇರಿಸುವ ಲೋಟ, ತಟ್ಟೆ ಪಾತ್ರೆ ಇತ್ಯಾದಿಗಳನ್ನ ಮತ್ತೆ ಮತ್ತೆ ನೋಡುತ್ತಲಿದ್ದ. ನಾನು ಅವನ ವರ್ತನೆ ಅರ್ಥವಾಗದೆ

''ಏನಯ್ಯಾ ಸಮಾಚಾರ? ಪಾತ್ರೆ ಅಂಗಡಿಯವನ ಹಾಗೆ ಲೋಟ ತಟ್ಟೆ ನೋಡುತ್ತಿರುವಿ'' ಎಂದು ಕೇಳಿದೆ.

''ನೀನೇ ಅದೃಷ್ಟವಂತ ಬಿಡು, ನನ್ನ ಮನೆ ಲೋಟ ತಟ್ಟೆಗಳು ಅವು ತಂದಾಗ ಹೇಗಿದ್ದವೋ ಹಾಗೆಯೇ ಈಗಲೂ ಇವೆ. ನಮ್ಮ ಮನೆಯ ಲೋಟಗಳ ಮೂಗು ಮುಕ್ಕಾಗಿದೆ, ತಟ್ಟೆಗೆ ತೂತ ಬಿದ್ದಿದೆ, ಪಾತ್ರೆಯ ತಳ ನೆಗ್ಗಿ ಹೋಗಿದೆ'' ಎಂದ.

ನಾನು ಎದ್ದು ಒಳಹೋಗಿ ನಮ್ಮ ಮನೆಯ ಕೊಡಪಾನ ತಂದು ತೋರಿಸಿದೆ. ಅದು ಕೊಡಪಾನದಂತೆ ಕಾಣದೆ, ಬ್ಲೋ ಹೋದ ಫುಟ್ ಬಾಲಿನ ಹಾಗೆ ಕಾಣುತ್ತಿತ್ತು. ಅದನ್ನು ನೋಡಿದ್ದೇ ಆತ

''ನಿನ್ನ ಬಗ್ಗೆ ನನಗೆ ಕನಿಕರವಾಗುತ್ತದಪ್ಪ, ಈ ವಿಷಯದಲ್ಲಿ ನನ್ನ ಹೆಂಡತಿಯೇ ವಾಸಿ'' ಎಂದು ನಿಟ್ಟುಸಿರು ಬಿಟ್ಟ.

ಅವನ ಊಹೆ ನಿಜವೇ ಆಗಿತ್ತು. ನನ್ನ ಹೆಂಡತಿಗೆ ಯಾವಾಗ ಸಿಟ್ಟು ಬರುತ್ತದೋ ಆಗೆಲ್ಲ

ನಮ್ಮ ಮಾಡುವುದು ಈ ಕೊಡಪಾನವೇ. ನಮ್ಮ ದಾಂಪತ್ಯ ಜೀವನದ ಈ ಮೂವತ್ತು ವರ್ಷಗಳಿಂದ ಈ ಬಡಪಾಯಿ ಕೊಡಪಾನ ಅಡಿಗೆ ಮನೆ ಕಟ್ಟೆಗೆ, ಬಚ್ಚಲು ಮನೆಯ ಗೋಡೆಗೆ, ಒಗೆಯುವ ಕಲ್ಲಿಗೆ, ರುಬ್ಬುವ ಗುಂಡಿಗೆ, ತನ್ನ ಮೈ ಜಪ್ಪಿಸಿಕೊಂಡೂ ಕೊಂಡು ಈ ವರೆಗೆ ಯಾವುದೋ ಒಂದು ಆಕಾರ ಪಡೆದು ಬದುಕಿದೆಯಲ್ಲ ಇದೇ ಒಂದು ಅಚ್ಚರಿ. ನಮ್ಮ ದಾಂಪತ್ಯ ಜೀವನದ ಒಂದು ಯಶಸ್ವೀ ಸಂಕೇತವಾಗಿ ಅದು ಉಳಿದಿದೆ.

ಅಲ್ಲ ಸದ್ದಿನ ಬಗ್ಗೆ ಮಾತನಾಡಲು ಹೊರಟ ಇವನು ಇದೇನಿದು ಕೊಡಪಾನದ ಬಗ್ಗೆ ಭಾಷಣ ಕುಟ್ಟುತ್ತಿದ್ದಾನೆ ಎಂದು ನೀವು ಕೇಳಬಹುದು. ಕೊಡಪಾನದ ಅವನತಿಗೆ ಈ ಸದ್ದೇ ಕಾರಣವಲ್ಲವೇ? ಅಂದರೆ ಒಂದು ಕಾಲದಲ್ಲಿ ಅಡಿಗೆ ಮನೆಯಲ್ಲಿ, ಯಾಕೆ ಇಡೀ ನಮ್ಮ ಮನೆಗಳಲ್ಲಿ ಸದ್ದಿಗೆ ಕಾರಣವಾಗಿ ಇದ್ದವಳು ಹೆಂಗಸೇ.

ಬೆಡ್‌ರೂಮಿನ ಬಾಗಿಲು ಕುಟ್ಟುವುದು, ಆಲ್ಮೇರಾದ ಬಾಗಿಲು ರಾಚುವುದು, ಮೇಜಿಗೆ ಬಾಚಣಿಗೆಯಿಂದ ಬಡಿಯುವುದು, ಪೌಡರ್ ಡಬ್ಬವನ್ನ ಡ್ರೆಸಿಂಗ್ ಟೇಬಲಿಗೆ ಅಪ್ಪಳಿಸುವುದು, ಈ ಮೊದಲಾದ ಸದ್ದು ಕೇಳಿ ಬಂತು ಎಂದರೆ ಗಂಡಸರೆಲ್ಲ ಸೈರನ್ ಕೇಳಿದ ಸೈನಿಕರಂತೆ ಯುದ್ಧಕ್ಕೆ ಸಜ್ಜಾಗಿ ನಿಲ್ಲುವುದಿತ್ತು.

ಈ ಸದ್ದು ಬಿಟ್ಟರೆ ಮನೆಯಲ್ಲಿ ಬೇರೆ ಸದ್ದುಗಳು ಕೇಳಿ ಬರುತ್ತಿರಲಿಲ್ಲ. ಆದರೆ ಇಂದು? ಇದೀಗ ನಾನು ವಿಷಯಕ್ಕೆ ಬರುತ್ತಿದ್ದೇನೆ ಅನ್ನುವುದು ನಿಮಗೆ ಖಚಿತವಾಗಿದೆ ಅಂದುಕೊಳ್ಳುತ್ತೇನೆ.

ಇಂದು ಮನೆಯಲ್ಲಿ ನಾನಾ ಸದ್ದುಗಳು. ಕರಕರೆ, ಕರೆ, ಕೂಗು, ಸಪ್ಪಳ, ಇನ್ನೇನೋ.

ಮನೆಯಲ್ಲಿ ಒಂದು ಫೋನಿದೆ. ಅದು ಮೂಲೆಯಲ್ಲಿ ಅಜ್ಜಿಯ ಹಾಗೆ ಮುಸುಕು ಧರಿಸಿ ಕುಳಿತಿದೆ ಅಂದರೆ ಅದು ಆಗಾಗ್ಗೆ ಬಡಿದುಕೊಳ್ಳುತ್ತದೆ. ನಮ್ಮ ಮನೆಯಲೊಂದು ಪುಟ್ಟ ಪಾಪ ಇರುವುದು, ಎತ್ತಿಕೊಳ್ಳದಿರಲು ಅದು ಅತ್ತು ಕರೆವುದು. ಆ ಪಾಪ ಈ ಫೋನು.

''ಅಯ್ಯೋ, ಅದು ಬಡಕೋತಿದೆ ನೋಡ್ರೆ ಯಾರಾದರೂ'' ಎಂದು ಈ ಫೋನಿನ ಹಾಗೆಯೇ ಮೂಲೆಯಲ್ಲಿ ಮಲಗಿರುವ ಅಜ್ಜಿ ಕೂಗಿಕೊಳ್ಳುತ್ತಾಳೆ. ಯಾರು ಏನೇ ಕೆಲಸ ಮಾಡಲಿ ತಟ್ಟನೆ ಬಂದು ಇದನ್ನ ಅಟೆಂಡ್ ಮಾಡಬೇಕು. ಅಲ್ಲಿಯವರೆಗೆ ಮನೆ ಬಾಗಿಲಿಗೆ ಬಂದ ಸಂತೆ ದಿನದ ಖಾಯಂ ಭಿಕ್ಷುಕನಂತೆ ಅದು ಕೂಗುತ್ತಲೇ ಇರುತ್ತದೆ. ಅದನ್ನು ಎತ್ತಿ ಕಿವಿಗೆ ಇರಿಸಿಕೊಳ್ಳಲಿಲ್ಲ ಅಂದರೆ ಅದರ ಜೊತೆಯಲ್ಲಿ ಅಜ್ಜಿಯ ಕೂಗೂ ಮುಂದುವರೆಯುತ್ತದೆ.

ಈಗ ಈ ಫೋನಿಗೆ ಓರ್ವ ಸವತಿ ಬಂದಿದ್ದಾಳೆ. ಜಂಗಮ ದೂರವಾಣಿ ಎಂದು ಇದನ್ನ ಕೆಲವರು ಕರೆಯುತ್ತಾರೆ. ನಾನು ಇದನ್ನ ಸ್ತ್ರೀಲಿಂಗದ ಮೂಲಕವೇ ಸಂಬೋಧಿಸ ಬಯಸುತ್ತೇನೆ. ಈಕೆ ಇಂಪಾಗಿ ನಮ್ಮನ್ನ ಕೂಗಿ ಕರೆಯುತ್ತಾಳೆ. ವಿವಿಧ ಹಾಡುಗಳು, ರಾಗಗಳು, ಪಲುಕುಗಳು, ವಿವಿಧ ವಾದ್ಯಗಳು, ಇದರಿಂದ ಹೊರಬಿದ್ದು ನಮ್ಮನ್ನ ಎಚ್ಚರಿಸುತ್ತವೆ. ಇದು ಎಲ್ಲಿದೆ ಅನ್ನುವುದು ತಟ್ಟನೆ ನಮಗೆ ತಿಳಿಯುವುದಿಲ್ಲ, ಮೊದಲು ನಾವು ಇದನ್ನ

ಹುಡುಕಬೇಕಾಗುತ್ತದೆ. ವೆರಾಂಡದಲ್ಲಿ, ಮೇಜಿನ ಮೇಲೆ, ಮಂಚದ ಮೇಲೆ, ಕುರ್ಚಿಯ ಮೇಲೆ ಇದು ಅಡಗಿರುತ್ತದೆ. ಇದರ ಸದ್ದಿನಿಂದ ನಾವಿದನ್ನ ಹುಡುಕಿಕೊಳ್ಳಬೇಕು ನಂತರ ಇದರೊಡನೆ ಹಲೋ ಅನ್ನಬೇಕು.

ಒಂದು ಮನೆಯಲ್ಲಿ ಇದು ಒಂದೇ ಇರುವುದಿಲ್ಲ. ಯಜಮಾನನದೊಂದು, ಹೆಂಡತಿಯದೊಂದು, ಮಗಳದೊಂದು, ಮಗನದೊಂದು, ಮನೆ ಕೆಲಸದಾಕೆ, ಮನೆ ಆಳು, ಹೀಗೆ ಮನೆಯಲ್ಲಿ ಎಷ್ಟು ಜನ ಇರುತ್ತಾರೋ ಅಷ್ಟು ಮೊಬೈಲುಗಳು ಇರುತ್ತವೆ, ಇಲ್ಲ ಇರಬೇಕು, ಅದು ನಿಯಮ. ಹೀಗಾಗಿ ಯಾವುದೇ ಮೊಬೈಲ್ ಕೂಗಲಿ ಎಲ್ಲರೂ ತಮ್ಮತಮ್ಮದನ್ನ ಮುಟ್ಟಿ ನೋಡಿಕೊಳ್ಳುತ್ತಾರೆ. ಕೆಲ ಬಾರಿ ಒಂದು ಎರಡು ಮೊಬೈಲ್‌ಗಳಿಗೆ ಒಂದೇ ಟೋನ್ ಇರುತ್ತದೆ. ಆಗ ಗಾಬರಿ ಗೊಂದಲ ಮತ್ತೂ ಹೆಚ್ಚು. ಕರೆ ನನಗೋ ಇಲ್ಲ ನಿಮಗೋ ಎಂದು ಪರಸ್ಪರ ಮುಖ ನೋಡಿಕೊಳ್ಳುವ ಪರಿಸ್ಥಿತಿ.

ಟೆಲಿಫೋನ್ ಹಾಗು ಮೊಬೈಲುಗಳ ಮತ್ತೂ ಒಂದು ಕಾಯಿಲೆ ಅಂದರೆ ಅವು ರಾಂಗ್ ನಂಬರುಗಳು ಬರುವುದೇ ಹೆಚ್ಚು. ರಾಮಾಶಾಸ್ತ್ರಿಗಳು ತಮ್ಮ ಮೊಬೈಲು ಸದ್ದಾಯಿತೆಂದು ಎತ್ತಿಕೊಂಡು ಕಿವಿಗೆ ಇರಿಸಿ ಕೊಂಡರೆ ಅದು "ಭಯ್ಯಾ, ಏಕ್ ಕೆಜಿ ಚಿಕನ್ ಭೇಜಾತ ಮಿಲಾ ಕ್ಯಾ?" ಎಂದು ಕೇಳುತ್ತದೆ. ಇನ್ನು ನಮ್ಮ ಮನೆಗಳಲ್ಲಿ ಸದ್ದು ಮಾಡುವ ಮೂರನೇ ಪ್ರಾಣಿ ಅಂದರೆ ಮಿಕ್ಸರು ಅಥವಾ ಗ್ರೈಂಡರು. ಬೆಳಗಾಗಲಿಕ್ಕಿಲ್ಲ ಇವು ಸದ್ದು ಮಾಡುವುದರ ಜೊತೆಗೆ ಮನೆ ಮನೆಗೆ ನಮ್ಮ ಮನೆಯಲ್ಲಿ ಆಗುವ ದೋಸೆ, ಚಟ್ನಿ ಇಡ್ಲಿಯ ಸುದ್ದಿಯನ್ನು ಒಯ್ದು ಮುಟ್ಟಿಸುತ್ತವೆ. ಬೆಳಿಗ್ಗೆ ನಮ್ಮಾಕೆ ದೋಸೆಗೆ ಚಟ್ನಿ ಮಾಡಲಿಕ್ಕಿಲ್ಲ ಪಕ್ಕದ ಮನೆ ಸೌಭಾಗ್ಯಮ್ಮ ಮನೆ ಹಿಂಬದಿಯಿಂದ "ಅಯ್ಯೋ ನಮ್ಮ ಪಾಪು ಚಟ್ನಿ ಇಲ್ಲ ಅಂದ್ರೆ ದೋಸೆ ತಿನ್ನೋದೆ ಇಲ್ಲಾರಿ" ಎಂದು ಪೀಠಿಕೆ ಹಾಕುತ್ತಾಳೆ. ಮಿಕ್ಸಿಯ ಸದ್ದಿನೊಂದಿಗೆ ಈ ಸದ್ದನ್ನೂ ನಾವು ಕೇಳಬೇಕಾಗಿದೆ.

ಮಿಕ್ಸಿಯ ಸದ್ದನ್ನ ಕೇಳಬಹುದು ಆದರೆ ಗ್ರೈಂಡರ್ ಸದ್ದು ಭಯಾನಕ. ನನ್ನ ಮಗಳ ಮಗ ಪಕ್ಕದ ಮನೆಯವರು ಗ್ರೈಂಡರ್ ಹಾಕಿದ ತಕ್ಷಣ ಎದ್ದು ಕುಳಿತು ಬಿಡುತ್ತಿದ್ದ. ಕೂಡಲೆ ಅವನ ಬಳಿ ಹೋಗಿ ಚುಕ್ಕು ಬಡಿದು ಅವನನ್ನ ಮಲಗಿಸುವುದು ಒಂದು ಕೆಲಸವಾಯಿತು ಹದಿನೈದು ದಿನ. ಆದರೆ ಇದು ಎಲ್ಲಿಗೆ ಬಂತೆಂದರೆ ಬೆಳಿಗ್ಗೆ ಒಂದು ಬಾರಿ ಏಳುವ ಈತ ಮತ್ತೆ ಮಲಗಲು ಗ್ರೈಂಡರಿನ ಸದ್ದನ್ನ ಅವನಿಗೆ ಕೇಳಿಸಲೇಬೇಕಾಯಿತು. ಇದಕ್ಕಾಗಿ ಪಕ್ಕದ ಮನೆಯವರ ಸಹಕಾರಕ್ಕೆ ಕೈ ಚಾಚಬೇಕಾಯಿತು.

ಅಡಿಗೆ ಮನೆಯ ಮತ್ತೂ ಒಂದು ಕೂಗು ಮಾರಿ ಅಂದರೆ ಒಲೆಯನ್ನೇರಿ ಕುಳಿತಿರುವ ಕುಕ್ಕರು. ಇದು ಎರಡು ಸಾರಿಯೋ ಮೂರು ಸಾರಿಯೋ ಕೂಗದಿದ್ದರೆ ಅಡಿಗೆ ಆಗುವುದೇ ಇಲ್ಲ. ಇದರ ವಿಶಲ್ ಬಿಳಿ ಆವಿಯನ್ನ ಹೊರಹಾಕಿ ಸೀಟಿ ಹೊಡೆಯುವ ಕೆಲಸ ಮಾಡಬೇಕು, ಅಂದರೆ ಅನ್ನ ಸಾರು ಇತ್ಯಾದಿ. ಇಲ್ಲಿ ಇನ್ನೊಂದು ಕಷ್ಟ ಅಂದರೆ ಈ ಸೀಟಿಯನ್ನ ಲೆಕ್ಕ ಹಾಕುವುದು. ಏನೋ ಕೆಲಸ ಮಾಡುತ್ತಿದ್ದ ಅತ್ತೆ ಸೊಸೆಗೆ ಕೇಳುತ್ತಾಳೆ "ಕುಕ್ಕರು ಸೀಟಿ

ಹೊಡೀತೇನೆ?'' ಹಿಂದೆ ಹೆಂಗಸರು ರಸ್ತೆಯ ಮೇಲೆ ಹೋಗುವಾಗ ಯಾರಾದರೂ ತಮ್ಮನ್ನ ನೋಡಿ ಸೀಟಿ ಹೊಡೆದರೆ ಸಿಟ್ಟು ಬೇಸರ ಮಾಡಿಕೊಳ್ಳುತ್ತಿದ್ದರು, ಮುಖ ಮುರಿಯುತ್ತಿದ್ದರು, ಆದರೆ ಈಗ ನೋಡಿ ಅದಕ್ಕೆ ವಿರುದ್ಧ. ಕುಕ್ಕರು ಹೊಡೆಯುವ ಸೀಟಿಗಾಗಿ ನಮ್ಮ ಹೆಂಗಸರೆಲ್ಲ ಕಾದು ಕೂತಿರುತ್ತಾರೆ.

ಈ ಮಕ್ಕಳು ಬೇರೆ ಈ ಕುಕ್ಕರ ಸೀಟಿಗೆ ಹೆದರುತ್ತವೆ. ಅಲ್ಲಿ ಅಡಿಗೆ ಮನೆಯಲ್ಲಿ ಸೀಟಿ ಕೇಳಿಬಂದರೆ ತೊಟ್ಟಿಲ ಮಗು ಕಿರುಚಾಡುತ್ತದೆ. ಇದನ್ನು ಸಮಾಧಾನಪಡಿಸಲು ಮತ್ತೆ ಅರ್ಧಗಂಟೆ.

ಮನೆ ಅಂದ ಮೇಲೆ ಮನೆಗೊಂದು ಫ್ರಿಜ್ ಇರದಿದ್ದರೆ ಹೇಗೆ. ಕೊನೆಯ ಪಕ್ಷ ಪಕ್ಕದ ಮನೆಯವರಿಗಾಗಿ ಆದರೂ ನಮ್ಮ ಮನೆಯಲ್ಲಿ ಈ ಶೀತಲ ಯಂತ್ರಬೇಕು. ಅಲ್ಲದೆ ನಮ್ಮ ಮನೆಗೆ ಬಂದವರು ಸುತ್ತ ನೋಡಿ ಏನು ನಿಮ್ಮಲ್ಲಿ ಫ್ರಿಜ್ ಇಲ್ಲವೆ ಎಂದು ಕೇಳುತ್ತಾರಲ್ಲ ಅದಕ್ಕಾಗಿ ನಮ್ಮಲ್ಲಿ ಅದು ಇರಬೇಕು. ಇರಲಿ ಇದಾದರೂ ಸುಮ್ಮನಿರುತ್ತದೆಯೆ? ಅದು ತೆರೆದಿಟ್ಟರೆ ಹಾಡುತ್ತದೆ. ಮುಚ್ಚಿದರೆ ಕಿರುಚುತ್ತದೆ. ಆಗಾಗ್ಗೆ ಗೊರ್ ಗೊಟಕ್ ಎಂದು ಸದ್ದು ಮಾಡುತ್ತದೆ. ಹಿಂದಿನ ಕಲ್ಲಿದ್ದಲ ರೈಲು ಹೊರಟ ಹಾಗೆ, ನಿಂತಹಾಗೆ ಅದರ ಸದ್ದು.

ನನ್ನ ಮಂಗಳೂರು ಮಗನ ಮನೆಗೆ ಹೋದಾಗಲೆಲ್ಲ ನನ್ನನ್ನ ಕಾಡುವುದು ಆವನ ಮನೆ ಫ್ರಿಜ್ಜು. ಬಸ್ಸಿನಲ್ಲಿ ದಣಿದು ನಾನು ಹೋಗಿ ರಾತ್ರಿ ಮಲಗಲೆಂದು ತಲೆ ದಿಂಬಿಗೆ ತಲೆಕೊಟ್ಟರೆ. ರಾತ್ರಿ ಇಡೀ ಈ ಫ್ರಿಜ್ಜಿನ ಕಾಟ. ಕಿವಿಯ ಒಳಗೇನೆ ಬಂದು ಬೆರಳು ತೂರಿಸುತ್ತದೆ ಇದು.

ಇನ್ನು ಮನೆಯಲ್ಲಿರುವ ಫ್ಯಾನು, ಕೂಲರುಗಳು ಸದ್ದು ಮಾಡತೊಡಗಿದರೆ ಆ ಮನೆಯಲ್ಲಿ ಇರುವುದಾದರೂ ಹೇಗೆ ಹೇಳಿ. ಫ್ಯಾನುಗಳು ತಲೆಯ ಮೇಲೆಯೇ ತಿರುಗುವುದೊಂದು ಅಪಾಯ. ಗಡಗಡ ಅನ್ನುವ ಫ್ಯಾನಿನ ರೆಕ್ಕೆ ಎಲ್ಲಿ ತಲೆಯ ಮೇಲೇನೆ ಬೀಳುತ್ತದೋ ಅನ್ನುವ ಹೆದರಿಕೆಯಲ್ಲಿ ಯಾರು ನಿದ್ದೆ ಮಾಡುತ್ತಾರೆ?

ಈಗ ಮನೆಗಳಿಗೆ ಟಿ.ವಿ. ಬೇಕು. ಸಿ.ಡಿ. ಪ್ಲೇಯರ್ ಬೇಕು. ಎಫ್. ಎಂ. ರೇಡಿಯೋ ಬೇಕು. ಇವೆಲ್ಲ ಗಲಾಟೆ ಬಾಬ್ತುಗಳು. ಇವತ್ತಿನ ಸಂಗೀತವೇ ಗಲಾಟೆ ಸಂಗೀತ. ಹಿಂದೊಮ್ಮೆ ಒಂದು ಅಮೇರಿಕಾದ ಆರ್ಕೆಸ್ಟ್ರಾದವರು ಬೆಂಗಳೂರಿನಲ್ಲಿ ಕಾರ್ಯಕ್ರಮ ಏರ್ಪಡಿಸಲು ಪೂರ್ವಭಾವಿ ಪರಿಶೀಲನೆ ಮಾಡಲು ಬಂದಿದ್ದರು. ಅವರು ಇಲ್ಲಿಯ ಸ್ಟೇಡಿಯಂ ನೋಡಿ ತಮ್ಮ ಸಂಗೀತವನ್ನ ತಡೆಯುವ ಶಕ್ತಿ ಇಲ್ಲಿಯ ಕಟ್ಟಡಗಳಿಗಿಲ್ಲ, ತಾವು ಬಾರಿಸಲು ಹಾಡಲು ಉಪಕ್ರಮಿಸಿದರೆ ಇಲ್ಲಿಯ ಕಟ್ಟಡಗಳು ಕುಸಿದು ಬೀಳುತ್ತವೆ ಎಂದು ಹೇಳಿ ತಿರುಗಿಹೋದರು. ಇದು ನಮ್ಮ ಪುಣ್ಯ. (ರಾಜಕಾರಿಣಿಗಳಿಗೆ ಗುತ್ತಿಗೆದಾರರಿಗೆ ಆದ ಭಾರೀ ನಷ್ಟ ಕಟ್ಟಡಗಳು ಕುಸಿದು ಬಿದ್ದಿದ್ದರೆ ಅವರ ಕೈತುಂಬ ಕೆಲಸ ಸಿಗುತ್ತಿತ್ತಲ್ಲ, ಇರಲಿ).

ಇವತ್ತು ನಾವು ನಮ್ಮ ನಮ್ಮ ಮನೆಗಳಲ್ಲಿ ಇರಿಸಿಕೊಂಡು ಬಹು ಹೆಮ್ಮೆಯಿಂದ ಕೇಳುವ ಟಿ.ವಿ. ಎಫ್.ಎಂ. ಗಳೆಲ್ಲ ನಾಳೆ ಏನು ಅನಾಹುತ ಮಾಡುತ್ತವೋ ನಮಗೆ ಗೊತ್ತಿಲ್ಲ. ಅಂತು ನಾವು ಈ ನಾನಾ ಬಗೆಯ ಸದ್ದುಗಳಿಗೆ ಕಿವಿ ಕೊಟ್ಟು ಕಿವುಡರಾಗುತ್ತಿದ್ದೇವೆ.

ನಾಳೆ ಈ ಸದ್ದುಗಳು ಮತ್ತೂ ಅಧಿಕವಾಗುವ ಸಾಧ್ಯತೆ ಇದೆ. ಏಕೆಂದರೆ ಈ ಬಗೆಯ ಸದ್ದುಗಳ ಮೂಲಕವೇ ನಾವು ನಮ್ಮ ಸುಖ, ಶ್ರೀಮಂತಿಕೆ, ಹಿರಿಮೆಯನ್ನ ಪ್ರದರ್ಶಿಸಬೇಕು ಅನ್ನುವ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ಸದ್ದುಗಳು ಬೇಡ ಅನ್ನುವುದಾದರೆ ಬಸವಣ್ಣನವರ ಮಾತಿಗೆ ನಮ್ಮ ದನಿ ನೀಡಿ "ಸದ್ದೊಂದು ಕೇಳದಂತೆ ಕಿವುಡಾನ ಮಾಡಯ್ಯಾ ತಂದೆ' ಎಂದು ಬೇಡಿಕೊಳ್ಳುವುದೊಂದೇ ನಮಗೆ ಉಳಿದಿರುವ ದಾರಿ. ಅಲ್ಲವೆ?

ಆದರೂ ಈ ಆಧುನಿಕ ಸದ್ದುಗಳಿಂದಾಗಿ ಈ ಹಿಂದೆ ನಾವು ಕೇಳುತ್ತಿದ್ದ ಸದ್ದುಗಳು ಅಪ್ಯಾಯಮಾನವಾಗ ತೊಡಗಿದೆ ಅನ್ನುವುದನ್ನ ನಾವು ಗಮನಿಸಬೇಕು. ಅಡಿಗೆ ಮನೆಯೊಳಗಿನಿಂದ ಏನೋ ಒಂದು ಸದ್ದು ಹೊರ ಬಂದರೆ ಅದು ಮಿಕ್ಸಿಯದೋ, ಗ್ರೈಂಡರಿನದೋ, ಕುಕ್ಕರಿನದೋ, ಇಲ್ಲ ಟಿ.ವಿ. ಇಲ್ಲ ಎಫ್.ಎಂ. ದೋ ಎಂಬುದು ತಿಳಿಯದೆ ನಾವು ಕಂಗಾಲಾಗುತ್ತೇವೆ. ಇಲ್ಲವೆ ಈ ಸದ್ದಿಗೆ ಹಿಂದಿನಂತೆ ಹೆದರದೆ, ಬೆದರದೆ ನಮ್ಮ ಕೆಲಸದಲ್ಲಿ ಮಗ್ನರಾಗುತ್ತೇವೆ. ಇದು ಆಧುನಿಕತೆ ನಮಗೆ ಮಾಡಿರುವ ಉಪಕಾರ ಅನ್ನೋಣವೇ?

ಸುಲಭ ಚಿಕಿತ್ಸೆ

ಆದೊಂದು ಪ್ರತಿಷ್ಠಿತ ವೈದ್ಯರ ದವಾಖಾನೆ. ಅಲ್ಲಿ ಬರುವವರೆಲ್ಲ ನೋವಿನಿಂದ ನರಳುವವರೇ - ಸೊಂಟ, ಕಾಲು, ಕೈ, ಬೆನ್ನು ಹಾಗೆ.

ಒಂದು ಸಲ ಒಬ್ಬಾಕೆ ಒಂದು ಸಣ್ಣ ಕೋಲನ್ನೂರಿಕೊಂಡು ಒಳಬಂದಳು. ನಡೆಯಲು ತುಂಬಾ ಕಷ್ಟ ಪಡುತ್ತಿದ್ದಳು. ಪ್ರತಿ ಹೆಜ್ಜೆ ಇಡೊವಾಗಲೂ ನೋವಿನಿಂದ ಮುಖ ಕಿವಿಚುತ್ತಿದ್ದಳು.

ಅವಳ ಸರದಿ ಬಂದಾಗ ಕಷ್ಟಪಟ್ಟುಕೊಂಡು ವೈದ್ಯರಿರುವ ಕೋಣೆಗೆ ಹೋದಳು. ಸಣ್ಣ ಕೋಲನ್ನೂರುತ್ತಾ

15-20 ನಿಮಿಷ ಕಳೆದಿರಬಹುದು ಅವಳು ವಾಪಸ್ ಬಂದಳು. ಆದರೆ ಈಗ ಖುಷಿಯಿಂದ ನಡೆದು ಬರುತ್ತಿದ್ದಾಳೆ. ಮುಖದ ಮೇಲೆ ನೋವಿಲ್ಲ, ನಡುಗೇನೂ ಗಂಭೀರ ಲವಲವಿಕೆ.

ಅರೆ! ಏನಾಯಿತು ಇವಳಿಗೆ, ಏನೀ ಪವಾಡ?

ಯಾರೋ ಕೇಳಿದರು 'ಏನು ಮಾಡಿದರು ಡಾಕ್ಟು?'

'ಏನಿಲ್ಲ ದೊಡ್ಡ ಕೋಲನ್ನು ಕೊಟ್ಟರು ಅಷ್ಟೆ ಎಂದಳು

- ಧೃತರಾಷ್ಟ್ರ

+VE ಹಾಸ್ಪಿಟಾಲಿಟಿ!

• ಕಾ.ರಾ.

ಅದೊಂದು ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್. ಹೈಟೆಕ್, ಗ್ಲೋಬಲ್; ಅನುಮಾನವೆ ಇಲ್ಲ - ತುಂಬ ಹಾಸ್ಪಿಟಬಲ್! ಅಂಥ ದೊಡ್ಡ ಕಾಯಿಲೆ ಏನೂ ನನಗೆ ಬಂದಿಲ್ಲ ಎಂಬುದು ನನ್ನ ಬುದ್ಧಿಗೆ ಗೋಚರವಾದರೂ ಅದನ್ನು ಹೇಳಿಕೊಳ್ಳೋಕೂ ಆಗಲಿಲ್ಲ - ಲೋಕಾಯುಕ್ತರು ರೈಡ್ ಮಾಡಿದ್ದ ಲಂಚದ ಕೇಸಿನ ತನಿಖಾ ಫೈಲನ್ನು ಓದುತ್ತ ಕುಳಿತಿದ್ದಾಗ ಬಿಟ್ಟ ಬಾಯಿ ಬಿಟ್ಟ ಹಾಗೇ, ತೆರೆದ ಕಣ್ಣು ತೆರೆದ ಹಾಗೆ ಸ್ಥಗಿತವಾಗಿಬಿಟ್ಟಿತು. ಬಾಯೊಳಗಿನ ದವಡೆ ಮೂಳೆಯ ಕೀಲುಗಳನ್ನು ಬಿಗಿ ಹಿಡಿದಿದ್ದ ಅನೈಚ್ಛಿಕ ಮಾಂಸಖಂಡ ನರ ದೌರ್ಬಲ್ಯದಿಂದ ತನ್ನ ಸ್ಥಿತಿ ಸ್ಥಾಪನಾ ಶಕ್ತಿಯನ್ನು ಹೇಗೋ ಕಳೆದುಕೊಂಡುಬಿಟ್ಟಿತ್ತು, - ಕಾರ್ಪೊರೇಷನ್ ಕಛೇರಿಯ ಸಿಂಗಲ್ ವಿಂಡೋ ವಹಿವಾಟಿನಂತೆ. ಸೃಷ್ಟಿಕರ್ತನೇನಾದರು ದವಡೆಯ ಮೂಳೆಯ ಕೀಲುಗಳಿಗೆ ಚಲಿಸದಂತೆ ಸ್ಟೇ ಆರ್ಡರ್ ಆದೇಶಿಸಿದನೆ? ಬಿಟ್ಟ ಬಾಯಿ ಬಿಟ್ಟುಕೊಂಡೇ ಮನೆಗೆ ಹೋದೆ. ಮಾನವನ ಅಂತಿಮ ದೃಶ್ಯವನ್ನು ಕಂಡ ಮನೆಯಾಕೆ ಏನೇನೋ ಕಲ್ಪಿಸಿಕೊಂಡರು ಕಣ್ಣೀರಿಟ್ಟಳು! ನರಗಳ ಹಿಡಿತ ತಪ್ಪಿದವರ ಕಥೆಗಳನ್ನು ಓದಿದ್ದೆ. ತಲೆಯಲ್ಲಿ ಬರೀ ಗೊಂದಲ. ಇದು ಸೈಕಲಾಜಿಕಲ್ಲೆ? ಪೊಲಿಟಿಕಲ್ಲೆ? ನಿನಗೇನನ್ನಿಸುತ್ತೆ ಎಂದು ಒಂದು ಕಾಗದದ ಮೇಲೆ ಬರೆದು ಅವಳ ಕಣ್ಣು ಮುಂದೆ ಹಿಡಿದೆ. 'ಸೈಕೋನೂ ಅಲ್ಲ, ಮೈಕೋನೂ ಅಲ್ಲ ಇದು ನ್ಯೂರೋ, ತಕ್ಷಣ ಚಿಕಿತ್ಸೆ ಆಗಬೇಕು. ಹೈಟೆಕ್ ಆಸ್ಪತ್ರೆಯಲ್ಲಿ ಮಾತ್ರ ಸಾಧ್ಯ' ಎಂದು ಆಕೆ ನಿರ್ಧರಿಸಿ ಆಸ್ಪತ್ರೆಗಳ ಹೆಸರನ್ನೂ ಹೇಳಿ ಮಾಹಿತಿ ಕೊಟ್ಟಳು. ಅಂಥ ಆಸ್ಪತ್ರೆಯೊಂದರಲ್ಲಿ ಇತ್ತೀಚೆಗಷ್ಟೆ ಚಿಕಿತ್ಸೆಯನ್ನು ಮಾಡಿಸಿಕೊಂಡು ಬಂದಿದ್ದ ಇಬ್ಬರು ಸಮಾನ ರೋಗಗ್ರಸ್ತ ಮಿತ್ರರು ಕುಶಿಯಿಂದ ಕುಮ್ಮಕ್ಕು ಕೊಟ್ಟರು. ಅವರ ಒಳ ಸಂಚು ಏನೆಂಬುದು ನನಗೆ ಕಡೆಕಡೆಯಲ್ಲಿ ಅರ್ಥವಾಗುತ್ತ ಹೋಯಿತು! ಅದು ಆಸ್ಪತ್ರೆಯೇ ಅಲ್ಲ, ಒಂದು ಪಂಚತಾರಾ ಹೋಟಲು ಇದ್ದ ಹಾಗೆ ಎಂದೆಲ್ಲ ವರ್ಣಿಸಿದ್ದರು. ನನಗೂ ಒಂದು ಥರಹ ಭ್ರಮೆ ಆವರಿಸಿಕೊಂಡಿತ್ತು. ಆಸ್ಪತ್ರೆ ಸಿಬ್ಬಂದಿ ವರ್ಗದವರು ತೋರುವ ಪ್ರೀತಿ, ವಿಶ್ವಾಸ, ಔದಾರ್ಯ, ಜತೆಗೆ ಆಕರ್ಷಕ ವಾತಾವರಣ, ಅತ್ಯಾಧುನಿಕ ಅಂದ ಚಂದದ ಪರಿಕರಗಳು ಸ್ಪೆಷಲಿಸ್ಟ್‌ರೆಂಬ ಸಜ್ಜನರ ಸಹವಾಸ, ಸರ್ಜನರ ಕೈಚಳಕ, ಹೆಣ್ಣು ಡಾಕ್ಟರುಗಳ ಕೈಗುಣ, ನರ್ಸುಗಳ ಕಾಲ್ಗುಣ, ಡಯಟೀಷಿಯನ್ ಉಪಚಾರ, ಶುಶ್ರೂಷೆ ಎಂಥ ರೋಗವನ್ನಾದರೂ ಗುಣಪಡಿಸುತ್ತೆಂಬ

ಆತ್ಮವಿಶ್ವಾಸ ನನ್ನಲ್ಲಿ ತುಂಬಿತು. ನನ್ನ ಆರ್ಥೋ ಪೊರೋಸಿಸ್ ಅಸ್ಥಿಪಂಜರಕ್ಕೆ ಕ್ಯಾಲ್ಸಿಯಂ ಸಿಂಚನ ಮಾಡಿದಂತಾಯ್ತು!

ಬೈನು, ಸೈನು ಬಹು ಸೂಕ್ಷ್ಮ. ಹೈಟೆಕ್ಕೇ ಗತಿ ಎಂಬ ನಿರ್ಧಾರಕ್ಕೆ ಬರದೆ ವಿಧಿಯಿರಲಿಲ್ಲ ಅಕ್ಕಪಕ್ಕದ ಮನೆಯವರಿಗೂ ಏನೋ ಸಡಗರ, ಸಂತಸ. ಅವರೇ ಫೋನ್ ಮಾಡಿ ಆಂಬ್ಯುಲೆನ್ಸ್ ತರಿಸಿ ಮನೆ ಮುಂದೆ ನಿಲ್ಲಿಸಿಬಿಟ್ಟರು!

ಆಸ್ಪತ್ರೆಯ ಮುಖ್ಯ ದ್ವಾರದಲ್ಲಿ ನನ್ನನ್ನು ಇಳಿಸಿ ವೀಲ್‌ಚೇರ್ ಮೇಲೆ ಕೂರಿಸಿದರು. 'ಡಾಕ್ಟರು ಬರ್ತಾರೆ, ಹಾಲಿನಲ್ಲಿ ಮಲಗಿಸಿ' ಎಂದು ಹೇಳುತ್ತ ಓರ್ವ ಸ್ಥಿರದ್ರೂಪಿ ನರ್ಸ್ ನನ್ನ ಭುಜಕ್ಕೆ ಕೈ ಕೊಟ್ಟಳು ನನ್ನ ಹೆಂಡತಿ ಜತೆ ಜತೆಗೆ, ಎಮರ್ಜೆನ್ಸಿ ಎಂದರೆ ಎಂಥವರ ಮನಸ್ಸೂ ಕರಗುತ್ತೆ. ಆಕೆಯ ಸೆಕ್ಯೂಲರ್ ಸೇವಾ ಮನೋಧರ್ಮವನ್ನು ಮನೆಯಾಕೆಯೂ ಮೆಚ್ಚಿಕೊಂಡಳು. ನನಗೂ ಎಮರ್ಜೆನ್ಸಿ ಏನೂ ಕಾಣಿಸಲಿಲ್ಲ! ಅಲ್ಲೂ ಟೀವಿ ಇಟ್ಟಿದ್ದರು. ಮುಂಬಯಿಯಲ್ಲಾದ ಉಗ್ರರ ಧಾಳಿಯ ಚಿತ್ರಗಳು ಬರುತ್ತಿದ್ದವು. ಅಲ್ಲಿಯ ಪಂಚತಾರಾ ಹೋಟಲಿನ ಒಳಾಂಗಣದಿಂದ ತೂರಿಕೊಂಡು ಬರುತ್ತಿದ್ದ ಗುಂಡಿನ ಶಬ್ದ ನಾನಿದ್ದ ಆಸ್ಪತ್ರೆಯ ಮೂಲೆ ಮೂಲೆಗಳಲ್ಲೂ ಕ್ಷಣ ಕ್ಷಣಕ್ಕೂ ಕೇಳುತ್ತಿತ್ತು. ದೂರದಲ್ಲಿದ್ದ ನನಗೆ ಗುಂಡಿನ ಶಬ್ದ ಪ್ರಾಣಭಯವನ್ನೇನೂ ಹುಟ್ಟಿಸಿರಲಿಲ್ಲ. ನನಗಾಗುತ್ತಿದ್ದ ಭಯಕ್ಕೆ ಕಾರಣಗಳೇ ಬೇರೆ!

ಡಾಕ್ಟರು ಬಂದು ನಾಡಿ ಹಿಡಿದು ಸ್ಟೆತಸ್ಕೋಪನ್ನು ಎದೆಯ ಮೇಲಿಟ್ಟು 'ಹಾರ್ಟು ಹೊಡೆದುಕೊಳ್ಳುತ್ತಿದೆಯಲ್ರಿ ಹರಿರಾವ್' ಎಂದರು, ನನ್ನ ಹಾರ್ಟ್ ಬೀಟಿಂಗ್ಸ್ ಆಸ್ಪತ್ರೆಗೆ ಬರುವ ತನಕ ನಾರ್ಮಲ್ ಆಗೇ ಇತ್ತು. ಹೇಳೋಣವೆಂದರೆ ಬಾಯಲ್ಲಿ ಮಾತು ಬರದು. ಗಾಬರಿಯಿಂದ ಬಿ.ಪಿ. ಏರಿರಬೇಕೆಂದುಕೊಂಡೆ. ಮತ್ತೆ ಪರೀಕ್ಷೆ ಮಾಡಲು ಡಾಕ್ಟರು ತೊಡಗಿದಾಗ ಅದು ಅವರಿಗೆ ಗೊತ್ತಾಯಿತು ಅಂತ ಕಾಣುತ್ತೆ. ಯಾಕೆಂದರೆ ಅವರು ತನ್ನ ಎದೆಯ ಮೇಲೆ ಸ್ಟೆತಸ್ಕೋಪ್ ಇಟ್ಟಾಗ ಅದು ನನ್ನ ಜೇಬಿನಲ್ಲಿದ್ದ ಮೊಬೈಲನ್ನು ಒತ್ತಿತ್ತೋ ಏನೋ 'ನಿನ್ನಿಂದಲೇ... ನಿನ್ನಿಂದಲೇ' ಎಂದು ಹಾಡುವ ರಿಂಗ್‌ಟೋನ್ ಹೊರಹೊಮ್ಮಿ ಅವರ ಕಿವಿ ಮುಟ್ಟಿತು. 'ಹಾರ್ಟ್ ಸ್ಪೆಷಲಿಷ್ಟರನ್ನೇ ಕರೆಸುತ್ತೇವೆ, ಬಿಡಿ ನಿಮ್ಮ ಜೀವ ನಮಗೆ ಮುಖ್ಯ' ಎಂದರು. ಈ ಹೈಟೆಕ್ ಡಾಕ್ಟರುಗಳೇ ಹೀಗೆ. ಸೂಜೀಲಿ ಹೋಗೋದಕ್ಕೆ ಕತ್ತರಿ ತೊಗೊಳ್ತಾರೆ!

ಒಂದು ಲಕ್ಷ ಅಡ್ವಾನ್ಸ್ ಡಿಪಾಜಿಟ್ ಮಾಡಿದ ಮೇಲೆ ಫಾರ್ಮಾಲಿಟೀಸ್ ಮುಗಿಯಿತು ಅಂತ ಕೇರಳದ ಸಿಸ್ಟರ್ ನಾಲ್ಕು ಬಾರಿ ಓ.ಕೆ. ಮಾಡಿದಳು. ನನ್ನನ್ನು ವೀಲ್‌ಚೇರ್ ಸಮೇತ ಏಳನೇ ಮಹಡಿಗೆ ಏರಿಸಿ ನ್ಯೂರೋ ಐ.ಸಿ.ಯು.ಲಿ ಮಲಗಿಸಿದರು ಏರ್‌ಬೆಡ್ ಮೇಲೆ. ನನ್ನ ಜಾತಕ ಫಲ ಹೇಳಿದ್ದ ಸೋಮಯಾಜಿ ಶನಿ ಉಚ್ಚಸ್ಥಾನದಲ್ಲಿ ಕೂತಿದಾನೆ. ಲಿಫ್ಟಿನಲ್ಲಿ ಹೋಗಬೇಕಾಗುತ್ತೆ ಅಂತ ಭವಿಷ್ಯ ನುಡಿದಿದ್ದ. ಅಂತೂ ಈ ಸಲ ನಿಜವಾಯಿತು ಅವನ ಭವಿಷ್ಯ.

ನ್ಯೂರೋ ಡಾಕ್ಟರು ಬಂದು ತುಂಬ ಆತ್ಮೀಯವಾಗಿ ಮಾತಾಡಿಸಿ "ವಿ ವಿಲ್ ಸ್ಟಾರ್ಟ್ ಪ್ರೊಸೀಜರ್ ಮಿಸ್ಟರ್ ನರಹರಿರಾವ್" ಎಂದರು. ನಾನು ನನ್ನ ವೃತ್ತಿ ಕಾಯಕಕ್ಕನುಗುಣವಾಗಿ 'ಸಿವಿಲ್ ಆರ್ ಕ್ರಿಮಿನಲ್' ಎಂದೆ ಕುತೂಹಲದಿಂದ. ಡಾಕ್ಟರು ಸ್ವದೇಶ, ವಿದೇಶಗಳೆರಡಲ್ಲೂ

ಶಸ್ತ್ರ ವಿದ್ಯೆಯನ್ನು ಕಲಿತವರು. ಅವರು ಒಂದೇ ಮಾತಿನಲ್ಲಿ 'ಬೋತ್ ಕಂಬೈನ್ಡ್' ಎಂದರು. ಡಾಕ್ಟರ ಮಾತಿನಲ್ಲಿ ಅಡಕವಾಗಿದ್ದ ಮಾನವೀಯತೆಯ ಗುಣಲಕ್ಷಣಗಳೂ ಜಾತ್ಯಾತೀತ ಮನೋಭಾವ ನನ್ನ ಮನಸ್ಸಿಗೆ ನಾಟಿತು. ಹಾಗೇ ಯೋಚಿಸಿದೆ. ಸಿವಿಲ್ ಮತ್ತು ಕ್ರಿಮಿನಲ್ ಪ್ರೊಸೀಜರ್‌ಗಳ ಸಮ್ಮಿಲನವೇ ಅಲ್ಲವೆ ಮೆಡಿಕಲ್ ಪ್ರೊಸೀಜರ್. ಒಂದು ಕಡೆ ರೋಗ ಪೀಡಿತ ಅಂಗಾಂಗಗಳನ್ನು ಅಗತ್ಯವಿದ್ದಲ್ಲಿ ಕತ್ತರಿಸಿ ತೆಗೆಯುವುದು. ಇನ್ನೊಂದೆಡೆ ದುರ್ಬಲ ಜೀವ ಕಣಗಳಿಗೆ ಪುಷ್ಟಿ ನೀಡಿ ಪೋಷಿಸಿ ದೃಢವಾಗಿಸುವುದು. ನ್ಯೂರೋ ಡಾಕ್ಟರು ದ್ವೈತವನ್ನು ನಂಬಿದವರು. ಅವರ ಸಮ್ಮಿಶ್ರ ಚಿಕಿತ್ಸಾ ಕ್ರಮಕ್ಕೆ ನಾನು ಒಪ್ಪಿಗೆ ಕೊಟ್ಟೆ. ನನ್ನ ಸ್ಥಗಿತ 'ಜಾ' ಗಳು 'ಚ' ಕಾರ ಎತ್ತಲಿಲ್ಲ!

ರಕ್ತ, ಮೂತ್ರ ಪರೀಕ್ಷೆಗಳಿಂದ ಪ್ರಾರಂಭವಾಗಿ E.C.G; E.E.G; E.S.R; E.N.G ಅಂತ ರೋಗ ಪರೀಕ್ಷಾ ಪದಪುಂಜಗಳ ಪಟ್ಟಿ ಮುಂದುವರೆಯುತ್ತ ಹೋಯ್ತು. X ರೇ ಆಯ್ತು. ಸ್ಕ್ಯಾನ್ ಆಯ್ತು, ಷುಗರ್ ಆಯ್ತು, ಲಿವರ್ ಆಯ್ತು. ಕೆಳ ದವಡೆ ಮೇಲೆ ಐಸ್ ಪ್ಯಾಡಿಟ್ಟು ಮೇಲ್ ದವಡೆಗೆ ಟ್ರ್ಯಾಕ್ಷನ್ ಕೊಟ್ಟರು. ಜಪ್ಪಯ್ಯ ಅಂದರೂ 'ಜಾ' ಗಳು ಜಗ್ಗಲಿಲ್ಲ! ಎರಡೂ ದವಡೆಗಳು ವಿಚ್ಛೇದನ ಬಯಸಿದವೇ ಹೊರ್ತು ಹೊಂದಾಣಿಕೆ ಮಾಡಿಕೊಂಡು ಕೂಡಿ ಬಾಳುವ ಪ್ರಯತ್ನವನ್ನೇ ಮಾಡಲಿಲ್ಲ. ದವಡೆ ಕೋಪ ಬಡವನ ಜೇಬಿಗೆ ಮೂಲ ಎನ್ನುವಂತಾಯ್ತು ನನ್ನ ಪರಿಸ್ಥಿತಿ! ಯಾಕೆಂದರೆ ರೋಗದ ಬೇರು ಎಲ್ಲೋ ಇದೆಯಂತೆ. ಅದನ್ನು ಕಂಡುಕೊಳ್ಳಬೇಕಂತೆ. ಹೀಗಾಗಿ, ಲಿವರ್, ಬ್ಲಾಡರ್, ಲಂಗ್ಸ್, ಕಿಡ್ನಿ ಮುಂತಾದ ಎಲ್ಲಾ ಪ್ರಮುಖ ಒಳಾಂಗಗಳ ತಪಾಸಣೆ ನಡೆಯಿತು. ಎಂ.ಆರ್.ಐ. ಚಿತ್ರಗಳೂ ರಿಪೋರ್ಟು ಡಾಕ್ಟರ ಕೈಸೇರಿತು. ಕೈಸನ್ನೆ ಮಾಡಿ ರಿಪೋರ್ಟ್ ತೋರಿಸಿ ಎಂದೆ. ಡಾಕ್ಟರಿಗೆ ಆಶ್ಚರ್ಯವಾಯಿತು. "ಮಾತಿಲ್ಲ ಕಥೆಯಿಲ್ಲ, ಇಷ್ಟೊಂದು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ರಿಪೋರ್ಟ್ ನೋಡುತ್ತೇನೆ ಅಂತೀರಲ್ಲ - ಛೆ! ನ್ಯೂರೋ ಸೈಕೇಂಟ್ರಿಕ್ ಸಿಂಡ್ರೋಮ್" ಎಂದರು.

ಅವರು ಹಾಗೆ ಹೇಳಿದ ಮೇಲಾದರು ಹೈಜ್ಯಾಕ್ ಆಗಿದ್ದ ನನ್ನ 'ಜಾ'ಗಳು ಹಠಾತ್ತನೆ ಜಗಿದೂ ಇಳಿದೂ, ಪುನರಪಿ ಜಗಿದೂ ಇಳಿದೂ ಲೈನ್ ಆಫ್ ಕಂಟ್ರೋಲ್ ಬಳಿ ಸಂಧಿಸಿ ಶಾಂತಿಮಂತ್ರ ಪಠಿಸಬಾರದಾಗಿತ್ತೆ! ಹಾಗಾಗಿದ್ದರೆ ಟೀವಿ ವಿಸ್ಮಯಕ್ಕೆ ಇನ್ನೊಂದು ಎಪಿಸೋಡ್ ಸಿಗುತ್ತಿತ್ತು. ಹಾಗಾಗಲಿಲ್ಲ. ರಿಪೋರ್ಟ್ ಕಡೆ ನೆಟ್ಟ ದೃಷ್ಟಿ ಇಟ್ಟುಕೊಂಡು ಮನಸ್ಸಿನಲ್ಲಿ ಓದಿಕೊಂಡೆ. ರೆಪ್ಪೆ ಆಡದೆ ಇದ್ದಿದ್ದು ಒಳ್ಳೆಯದೇ ಆಯ್ತು! ಎಲ್ಲಾ ಅಂಗಾಂಗಗಳೂ "normal insize - well distanced' ಎಂದು ಬರೆದಿತ್ತು. ಮೂತ್ರಪಿಂಡಗಳ ಸ್ಥಾನಮಾನಗಳ ಬಗ್ಗೆ ರೇಡಿಯಾಜಿಸ್ಟ್ ಹೆಚ್ಚು ನಿಗ ಕೊಟ್ಟಿದ್ದ. "Both kidneys are normal in size, shape and outlines Right kidney measures 93 mm, thickness 14 mm; Left kidney measures 86 mm, thickness 16 mm. No significant at normalities" ಎಂಬ ಒಕ್ಕಣೆ ರಿಪೋರ್ಟಿನಲ್ಲಿತ್ತು. ಸೃಷ್ಟಿಕರ್ತನಿಗೆ ಅಂತರಂಗದಲ್ಲೂ, ಶಸ್ತ್ರ ವೈದ್ಯನಿಗೆ ಬಹಿರಂಗದಲ್ಲೂ ಐಡಿಕಾರ್ಡ್ ನಂಬರ್ ಹೇಳಿಕೊಂಡು ಹೃತ್ಪೂರ್ವಕವಾಗಿ

ನಮಸ್ಕಾರ ಮಾಡಿದೆ. ವೈದ್ಯೋ ನಾರಾಯಣೋ ಹರಿ - ಅಲ್ಲವೆ. ಯಾತಕ್ಕೆ ಇಷ್ಟೊಂದು ಅನ್ಯೋನ್ಯ ಭಕ್ತಿಭಾವ ಎಂದು ಕೇಳಿದರು ಡಾಕ್ಟರು. ನನ್ನ ಕಿಡ್ನಿ ನಾರ್ಮಲ್ ಆಗಿರುವುದಕ್ಕೆ ಎಂದು ಹೇಳೋಣವೆಂದರೆ ಬಾಯಿ ಚಲನೆ ಕಳೆದುಕೊಂಡು ಮಾತು ಹೊರಡುತ್ತಿಲ್ಲ. ಅಲ್ಲದೆ ಮನಸ್ಸಿನಲ್ಲಿ ಅತೃಪ್ತಿ, ಕೀಳರಿಮೆ ಆವರಿಸಿತ್ತು. ಇಷ್ಟು ದೊಡ್ಡ ದೇಹದಲ್ಲಿ ತುಂಬಾ ಉಪಯುಕ್ತವಾದ ಅಂಗ ಎನಿಸಿಕೊಂಡ ಕಿಡ್ನಿ ತೂಕ, ಗಾತ್ರ ಇಷ್ಟೇನೇ, ಏನೇನೂ ಸಾಲದು ನನ್ನ ಇಮೇಜೇ ಹಾಳಾಯಿತು ಎಂಬ ಭಾವನೆ ಬಂತು. ಈ ಟೀವಿಗೆ ವಿಚಾರ ಗೊತ್ತಾಗಿದ್ದರೆ ನನ್ನ ಇಮೇಜನ್ನು ಎಷ್ಟು ಕುಲಗೆಡಿಸುತ್ತಿದ್ದರೋ - ಹೋಗಲಿ ಬಿಡಿ ಅದು ಮುಖ್ಯವಲ್ಲ. ಆಮೇಲೆ ನಡೆದದ್ದೇ ಸೋಜಿಗ. ರೇಡಿಯಾಲಜಿ ಡಿಪಾರ್ಟ್‌ಮೆಂಟಿಗೆ ಹೋಗಿದ್ದ ನನ್ನಾಕೆ ಒಂದು ಕವರನ್ನು ಬಿಲ್ಲು-ಬತ್ತಳಿಕೆಯಂತೆ ಕೈಲಿ ಹಿಡಿದುಕೊಂಡು ನನ್ನ ಬೆಡ್ ಬಳಿಗೆ ಬಂದು ನಿಂತಳು. ಖಿನ್ನ ವದನದವಳಾಗಿದ್ದಳು. ಯಾಕೆ ಎಂದೆ. ಎಂಬತ್ತು ಸಾವಿರ ರೂಪಾಯಿಯನ್ನು ಬತ್ತಳಿಕೆಯಿಂದ ಹೊರ ತೆಗೆದು ಮುಖದ ಮುಂದೆ ಹಿಡಿದಳು. ಹಠಾತ್ತನೆ ನನಗೆ ಉಸಿರು ಸಿಕ್ಕಿಹಾಕಿ ಕೊಂಡಂತಾಗಿ ಮೇಲಿಂದ ಮೇಲೆ ಬಿಕ್ಕಳಿಕೆ ಬರಲು ಪ್ರಾರಂಭವಾಯಿತು. ಮುಖದ ಸ್ನಾಯುಗಳು ಅಳಕವಾಯಿತು. ಮರುಕ್ಷಣದಲ್ಲೇ ಹಿಗ್ಗಿದ ಮುಖದ ಅಪಧಮನಿಯಲ್ಲಿ ರಕ್ತ ಸಂಚಾರವಾಗಿ ಹಲ್ಲುಗಳು ಕರ್ತವ್ಯಶೀಲತೆ ಮೂಡಿತು. ಜಾರಿಕೊಂಡಿದ್ದ ಕೆಳದವಡೆ ಕ್ಷಣಮಾತ್ರದಲ್ಲಿ ವಿ.ಎಸ್.ಎಲ್.ವಿ. ಯಂತೆ ಮೇಲಕ್ಕೆ ಜಿಗಿದು ಮೇಲ್‌ದವಡೆಯನ್ನು ಅಪ್ಪಿಕೊಂಡು ಸದನ ಕಲಾಪ ಘೋಷಿಸಿತು. ಸ್ಪೀಕರ್ ರಾಜಿನಾಮೆಯನ್ನು ಹಿಂತೆಗೆದುಕೊಂಡರು ಅಂದರೆ ನಾಲಿಗೆ ಹೊರಳಿತು. ಸರಸ್ವತಿ ಅಂಶ ಪ್ರಜ್ವಲಿಸುವ ಹೊತ್ತಿಗೆ ಲಕ್ಷ್ಮೀ ಕೈಬಿಟ್ಟಿದ್ದಳು!

"ನನಗೆ ಪ್ರಜ್ಞೆ ಇದೆಯಲ್ಲ ಡಾಕ್ಟರೆ. ಇಲ್ಲಿ ನಡೆಯುತ್ತಿರುವುದೆಲ್ಲ ಗೊತ್ತಾಗುತ್ತಿದೆ. ನನ್ನನ್ನು ಐ.ಸಿ.ಯು. ನಲ್ಲೇ ಇನ್ನೂ ಇಟ್ಟುಕೊಂಡಿದ್ದೀರಲ್ಲ" ಎಂದು ಕೇಳಿದೆ. ಅಷ್ಟು ಹೊತ್ತಿಗೆ ನನ್ನ ಮತ್ತು ಡಾಕ್ಟರ ಮಧ್ಯೆ ಅನ್ಯೋನ್ಯ ಸೌಜನ್ಯತಾಭಾವ, ಆತ್ಮೀಯ ಅನುಬಂಧ, ಋಣಾನು ಸಂಬಂಧ ಬೆಸೆದುಕೊಂಡುಬಿಟ್ಟಿತ್ತು. ಡಾಕ್ಟರು ಹೇಳುವುದನ್ನು ಕೇಳುವ ಮನಸ್ಸಾಗಿತ್ತು. ಇಷ್ಟೆಲ್ಲ ಅವರು ಮಾಡುವುದು ನನ್ನ ಒಳಿತಿಗೇ ತಾನೇ! "ನಿಮಗೆ ಪೂರ್ಣ ಪ್ರಜ್ಞೆ ಈಗಲೂ ಇಲ್ಲ ಮಿಸ್ಟರ್ ನರಹರಿರಾವ್, ನಿಮ್ಮದು ಸೆಮಿಕಾನ್ಷಸ್‌ನೆಸ್ಸೇನೋ ದವಡೆಗಳು ಮುಚ್ಚಿ ತೆರೆದೂ ಮಾಡುತ್ತಿವೆ. ಆದರೆ ಅವು ಮತ್ತೆ ಹತೋಟಿ ಕಳೆದುಕೊಳ್ಳುವುದಿಲ್ಲ ಎಂದು ಈಗಲೇ ಅಷ್ಟು ನಿಖರವಾಗಿ ಹೇಳುವುದು ಹೇಗೆ. ಕಣ್ಣಿನ ರೆಪ್ಪೆಗಳನ್ನು ನೋಡಿ, ಯಥಾಸ್ಥಿತಿಯಲ್ಲಿವೆ. ಕಾರಣ ಮಿದುಳಿನ ನರಗಳಿಂದ ಸೂಕ್ತ ಸಂಕೇತಗಳು ಹೊರಡುತ್ತಿಲ್ಲ. ಈ ಸ್ಥಿತಿಯಲ್ಲಿ ನಿಮ್ಮನ್ನು ಐ.ಸಿ.ಯು.ಲಿ ಇಡದೆ ಇನ್ನೆಲ್ಲಿಡಲು ಸಾಧ್ಯ ಹೇಳಿ Cause of the disease not known, any way it is a good case for further investigation" ಎಂದರು. ಅವರ ಮಾತನ್ನು ನಾನು ಅಷ್ಟು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಡಾಕ್ಟರೂ ಸಿಟ್ಟಾಗಲಿಲ್ಲ. ಮೆಲು ದನಿಯಲ್ಲಿ ನನಗೆ ಸಾಂತ್ವನ ಹೇಳುತ್ತ "ನಮ್ಮದು ಗ್ಲೋಬಲ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಮಿಸ್ಟರ್ ನರಹರಿರಾವ್, ನಮ್ಮ ಆಸ್ಪತ್ರೆಗೆ ಬರುವ ರೋಗಿಗಳ ಚಿಕಿತ್ಸಾ ಕ್ರಮದಲ್ಲಿ ಸ್ವಲ್ಪವೂ

ಲೋಪ ಮಾಡುವುದಿಲ್ಲ. ಆಮೂಲಾಗ್ರವಾಗಿ ಪರೀಕ್ಷಿಸಿ ಮಾಡಬೇಕಾದ ಚಿಕಿತ್ಸೆಯನ್ನೆಲ್ಲ ಮಾಡಿ ಮುಗಿಸುತ್ತೇವೆ. ನಾವು ಎಂದೂ ಜಿಪುಣತನವನ್ನು ತೋರಿಸುವುದಿಲ್ಲ. ನಮ್ಮ ಔದಾರ್ಯ ಸೌಜನ್ಯಭರಿತ ಸೇವೆಗೆ ರೋಗಿಗಳ ಸಹಕಾರವೇ ತಳಹದಿ. ನಿಮ್ಮ ರೋಗ ಏನೆಂಬುದೇ ನಮಗಿನ್ನೂ ಗೊತ್ತಾಗಿಲ್ಲ. ರೋಗವನ್ನು ಕಂಡು ಹಿಡಿಯುವುದೇ ಕಷ್ಟದ ಕೆಲಸ. ಹಾಗೂ ದುಬಾರಿ. ಚಿಕಿತ್ಸೆ ಸುಲಭ. ಯಾಕೆಂದರೆ ಪ್ರಯೋಗಾರ್ಥವಾಗಿ ಎಷ್ಟೋ ಸಲ ಇಲ್ಲದ ಬೇರೆ ಬೇರೆ ರೋಗಗಳಿಗೆ ಚಿಕಿತ್ಸೆ ಮಾಡಿಬಿಡುತ್ತೇವೆ ಹೀಗಾಗಿ ಹಲವಾರು ಬಾರಿ ದುಷ್ಪರಿಣಾಮಗಳಾಗಬಹುದು. ವಿಧಿಯಿಲ್ಲ. ರೋಗ ಉಲ್ಬಣಿಸಿ ಉಸಿರಾಟಕ್ಕೆ ತೊಂದ್ರೆಯಾದರೆ ಆಕ್ಸಿಜನ್ ಮಾಸ್ಕ್ ಹಾಕುತ್ತೇವೆ. ಆಹಾರ ಒಳಕ್ಕೆ ಹೋಗದೆ ಹೋದರೆ ಮೂಗಿನಿಂದ ಟ್ಯೂಬ್ ಹಾಕಿ ಕಳಿಸಬೇಕಾಗುತ್ತೆ. ಹೃದಯದ ಕವಾಟಗಳು ರಕ್ತವನ್ನು ಹರಿಸಲು ಅಸಮರ್ಥವಾಗಬಹುದು. ರಕ್ತದ ಒತ್ತಡ, ನಾಡಿ ಮಿಡಿತ, ಹೃದಯದ ಬಡಿತ ಸೋಡಿಯಂ, ಪೊಟ್ಯಾಸಿಯಂಗಳ ಏರಿಳಿತ – ಇವೆಲ್ಲವನ್ನು ನಿಯಂತ್ರಿಸಲು ವಿಶೇಷ ವೈದ್ಯೋಪಕರಣಗಳನ್ನು ಸಜ್ಜುಗೊಳಿಸಬೇಕಾಗುತ್ತೆ. ಇಷ್ಟೆಲ್ಲ ಸೇವೆ ಐ.ಸಿ.ಯು.ಲಿ ಮಾತ್ರ ಸಾಧ್ಯ ಆರಾಮವಾಗಿ ಮಲಗಿಕೊಳ್ಳಿ'' ಎಂದು ಸಮಾಧಾನ ಹೇಳಿದರು. 'ನಾನು ಆಸ್ಪತ್ರೆಗೆ ದಾಖಲಾದಾಗ ಇವುಗಳ ಅವಶ್ಯಕತೆ ನನಗಿರಲಿಲ್ಲ' ಎಂದೆ. ಆಸ್ಪತ್ರೆಗೆ ಬಂದ ಮೇಲೇ ಇದೆಲ್ಲ ಗೊತ್ತಾಗುವುದು. ಪ್ರತಿಯೊಬ್ಬ ರೋಗಿಗೂ ಇದು ಅನುಭವದಿಂದಲೇ ಗೊತ್ತಾಗುವಂಥದು. ನಾವು ಈ ವಿಚಾರದಲ್ಲಿ ತುಂಬ ಅಡ್ವಾನ್ಸ್ ಆಗಿ ತಯಾರಾಗಿರುತ್ತೇವೆ. ನಮಗೆ ರೋಗಿಗಿಂತ ರೋಗವೇ ಮುಖ್ಯ. ಐ.ಸಿ.ಯು. ಬೇಡ ಎಂದರೆ H.D.U.ಗೆ ಹಾಗುತ್ತೇವೆ ಬಿಡಿ'' ಎಂದರು. ನನಗೆ H.U.F.ಗೊತ್ತಿತ್ತು. ನನ್ನ ಅವಿಭಕ್ತ ಕುಟುಂಬಕ್ಕೆ ನಾನೇ ಕರ್ತ H.D.U. ಎಂದರೇನು? ಎಂದು ತರಬೇತಿ ಪಡೆಯುತ್ತಿದ್ದ ಮೇಲ್ ಸಹಾಯಕನೊಬ್ಬನನ್ನು ಗುಟ್ಟಾಗಿ ವಿಚಾರಿಸಿದೆ. ಅದಕ್ಕೆ ಅವನು 'ಐ.ಸಿ.ಯು.'ಲಿ ಬೇರೊಬ್ಬ ರೋಗಿಗೆ ಬೆಡ್ ಬೇಕಾಗಿದೆ. ಅವರು ಪೂರ್ಣ ಪ್ರಜ್ಞಾಶೂನ್ಯರು. ನಿಮ್ಮದು 'ಸೆಮಿ' ಅರ್ಧಂಬರ್ಧ ತಿಳಿವಳಿಕೆ, ಅದಕ್ಕೆ ನಿಮ್ಮನ್ನು 'ಹೈಯರ್ ಡಿಸೆಂಡೆನ್ಸಿ ಯೂನಿಟ್'ಗೆ ಹಾಕಿ ಅವರನ್ನು ನಿಮ್ಮ ಬೆಡ್ಡಿಗೆ ವರ್ಗಾಯಿಸುತ್ತೇವೆ ಎಂದ. ಎರಡಕ್ಕೂ ಇರುವ ವ್ಯತ್ಯಾಸವೇನು ಎಂದು ಕೇಳಿದೆ. ಐ.ಸಿ.ಯು.ನಲ್ಲಿ ಮೂರು ನಾಲ್ಕು ದಿನ ಅಷ್ಟೆ ಸಾಮಾನ್ಯವಾಗಿ ಬೆಡ್ ಖಾಲಿ ಆಗಿಬಿಡುತ್ತೆ. H.D.U.ಆದರೆ ವಾರಗಟ್ಟಲೆ ಎಳೆಯುತ್ತೆ ಎಂದು ಮೊಗಮ್ಮಾಗಿ ಹೇಳಿದ. ತಾಳಿದವನು ಬಾಳಿಯಾನು ಎಂದುಕೊಂಡೆ.

ವಾರ್ಡ್ ಪ್ರದಕ್ಷಿಣೆಗೆ ಬಂದ ನ್ಯೂರೋ ಸರ್ಜನರು ನನ್ನ ಬೆಡ್ ಹತ್ತಿರ ಬಂದು ಅಲ್ಲೇ ಇಟ್ಟಿದ್ದ ಚಿಕಿತ್ಸಾ ಸೂಚಕ ಫೈಲಿನ ಮೇಲೆ ಕಣ್ಣಾಡಿಸಿದರು. ''ನನಗೇನಾಗಿದೆ ಡಾಕ್ಟರೆ, ಬೆಳಗಾದರೆ ರಕ್ತ ತೆಗೆದುಕೊಂಡು ಹೋಗುತ್ತಾರೆ, ಮಧ್ಯಾಹ್ನ ರಿಪೋರ್ಟ್ ಕಳಿಸುತ್ತಾರೆ. ಸಂಜೆ ಇಂಜಕ್ಷನ್ ಕೊಡ್ತಾರೆ! ರೋಗ ಯಾವುದು ಅಂತ ಯಾರೂ ಹೇಳುತ್ತಿಲ್ಲ'' ಎಂದು ತುಂಬ ಪರ್ಸನಲ್ ಆಗಿ ಮಾತಾಡಿದೆ. ಅವರು ತುಂಬಾ ಸರಳವಾಗಿ ಮಿದುಳಿನ ರಚನೆ ಮತ್ತು ಅದರ ಕಾರ್ಯವೈಖರಿಯನ್ನು ಕನ್ನಡದಲ್ಲಿ ಹೇಳಿದಾಗ ನನಗೆ ತುಂಬಾ ಸಂತೋಷವಾಯಿತು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ಮಾಡಲು ಸಿಕ್ಕಿದ್ದು ಸಾರ್ಥಕವಾಯಿತು ಎಂದುಕೊಂಡೆ.

ಆವರ ಅವರು ರೋಗದ ಹೆಸರನ್ನು ಇಂಗ್ಲಿಷ್‌ನಲ್ಲಿ ಹೇಳುತ್ತ ಸರಳವಾಗಿ 'ಬ್ರೈನ್ ಇನ್‌ಫೆಕ್ಷನ್' ಎಂದರು. ಮಿದುಳಿನ ಜೀವ ಕಣಗಳಿಗೆ ವೈರಸ್ ತಗಲಿದೆ. ಯಾವುದು ಅಂತ ಗೊತ್ತಿಲ್ಲ. ವೈರಸ್ ತಗಲಿದ ಜೀವಕಣಗಳು – ಸೆಲ್ಸ್ – ಶರೀರದ ಇತರ ಅಂಗಾಂಗಗಳಿಗೆ ಸಮಯೋಚಿತವಾದ ಸೂಕ್ತ ಸಂದೇಶಗಳನ್ನು ಕಳಿಸುತ್ತಿಲ್ಲ. ಆದಕ್ಕೇ ದೇಹದ ಕ್ರಿಯಾ ಶಕ್ತಿಯಲ್ಲಿ ಏರುಪೇರು. Wrong signals, chaos and confusion ಎಂದರು. ಅರರೆ! ಇದೇನು ಮಹಾ! ದಿನನಿತ್ಯ ನಡೆಯುತ್ತಿರುವುದು ಹೀಗೇ ಅಲ್ಲವೆ? ಇದಕ್ಕೆಲ್ಲ ಡಾಕ್ಟರು ಗಾಬರಿ ಪಡಿಸುತ್ತಾರಲ್ಲ ಎಂದೆನಿಸಿತು ನನಗೆ. ಪ್ರಪಂಚದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಹೆಚ್ಚು ಕಡಿಮೆ ಮಾನವ ಕೋಟಿಗೆ ಎರಗಿರುವುದು ಬ್ರೈನ್ ಇನ್‌ಫೆಕ್ಷನ್ನೇ ಅಲ್ಲವೆ?

ಸರ್ಕಾರ ನಡೆಸುತ್ತಿರುವ ಬಹುಪಟ್ಟು ರಾಜಕೀಯ ನಾಯಕರು ಈ ರೋಗಕ್ಕೆ ತುತ್ತಾಗಿದ್ದಾರೆಂದೆನಿಸುವುದಿಲ್ಲವೆ? ಇವರು ಮಾಡುವ ಭಾಷಣಗಳನ್ನು, ಕೊಡುವ ಹೇಳಿಕೆಗಳನ್ನು ನೋಡಿದರೆ – ಹೇಳೋದೊಂದು, ಮಾಡೋದಿನ್ನೊಂದು ಆಗಿರುವ ಕಾರ್ಯ ವೈಖರಿಯನ್ನು ಗಮನಿಸಿದರೆ ತಲೆಗೆ ವೈರಸ್ ಹೊಕ್ಕಿದರೆ ಮಾತ್ರ ಇಂಥ ಪ್ರಜಾತಂತ್ರ ಸಾಧ್ಯ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಬ್ರೈನ್ ಇನ್‌ಫೆಕ್ಷನ್‌ನ್ನು ಸಾಮಾನ್ಯ ಪ್ರಜೆಗಳೂ ಗುರ್ತಿಸಿದ್ದಾರೆ. ಅಂಥವರನ್ನು ಒಪ್ಪಿಕೊಂಡೂ ಇದ್ದಾರೆ! ಇಂಥ ಅತಿ ಸಾಧಾರಣ ಮಿದುಳಿನ ಕಾಯಿಲೆಯನ್ನು ಇಷ್ಟು ದೊಡ್ಡದನ್ನಾಗಿ ಮಾಡಿ ನನ್ನನ್ನು ಐ.ಸಿ.ಯು.ಗೆ ಹಾಕಿ ದೇಹದ ಎಲ್ಲಾ ಅಂಗಾಂಗಗಳನ್ನೂ ಪರೀಕ್ಷೆಗೆ ಒಡ್ಡುತ್ತಿದ್ದೀರಿ. ನಿಮ್ಮ ಆದರದ ಎಮರ್ಜೆನ್ಸಿ ಸ್ವಾಗತ, ಹೆಲ್ತ್‌ಕೇರ್ ಕಾಳಜಿ, ಮಾಸ್ಟರ್ ಚೆಕಪ್, ನ್ಯೂರಲ್ ಸತ್ಕಾರ, ಇಮೇಜಿಂಗ್ ಚಿತ್ತಾರ, ಕೊಲೇಪ್ಸಬಲ್ ಕಾಟ್, ರಿವರ್ಸಬಲ್ ಬೆಡ್, ಉಷ್ಣೋಪಚಾರ, ಶೈತ್ಯೋಪಚಾರ ಕರುಳು ಕುಯ್ಯುವ ಕೈಚಳಕ, ಮಾಂತ್ರಿಕ ಶುಶ್ರೂಷೆ, ಬಾಹ್ಯಾಕಾಶಕ್ಕೆ ಹಾರಿಹೋಗುವ ನೌಕೆಯಂತಿರುವ ನಿಮ್ಮ OT ನನ್ನನ್ನು ದಂಗುಬಡಿಸಿದೆ. ನನ್ನನ್ನು ಬೇಗ ಡಿಸ್ಚಾರ್ಜ್ ಮಾಡಿ. ಬಿಲ್ಲನ್ನು ಪಾವತಿ ಮಾಡಲು ಸಿದ್ಧವಾಗಿದ್ದೇನೆ" ಎಂದೆ!

ದೊಡ್ಡ ಡಾಕ್ಟರು ಹಿಂದಿನ ದಿನವೇ ಬಂದು ಮೂಗಿಗೆ ಬಿಗಿದಿದ್ದ ಆಮ್ಲಜನಕದ ಕುಕ್ಕೆಯನ್ನು ತೆಗೆಸಿದ್ದರು. ನಿಮಗೆ ಇದರ ಅವಶ್ಯಕತೆ ಇರಲಿಲ್ಲವಲ್ಲ ಎಂದಿದ್ದರು ಅನುಮಾನದಿಂದ! ನನ್ನನ್ನು ಪರೀಕ್ಷಿಸಿದ್ದ ಸೈಕ್ಯಾಟ್ರಿಸ್ಟ್ (ನ್ಯೂರೋ) ವಾರ್ಡ್ ಸಿಸ್ಟರ್‌ಗೆ ಒಂದು ರಿಪೋರ್ಟ್ ಕೊಟ್ಟು ಹೋಗಿದ್ದರು. ಅವರು ನನ್ನ ದವಡೆಗಳ ಅಧೋಗತಿಗೆ ಖಿನ್ನತೆ ಅಥವಾ ಡಿಪ್ರೆಶನ್ ಕಾರಣ ಎಂಬ ನಿರ್ಧಾರಕ್ಕೆ ಬಂದರಂತೆ. ಇದನ್ನು ನಾನು ಖಂಡಿತ ಒಪ್ಪಲಾರೆ! ನನಗೇನೂ ಖಿನ್ನತೆ ಹೊಸದಲ್ಲ, ಮದುವೆಯಾದಾಗಲಿಂದಲೂ ಇದೆ. ಹಾಗೆಯೇ ನನ್ನ ಹೃದಯದ ತಪಾಸಣೆ ಅಂದರೆ 'ಕಾರ್ಡಿಯಕ್ ಚೆಕ್' ನಡೆಸಿದಾಗ ಹೃದಯದಲ್ಲಿ ರಕ್ತ ಪರಿಚಲನೆಗೆ ಕವಾಟಗಳಿಂದ ತೊಂದರೆಯಾಗಿಲ್ಲ. ರಕ್ತನಾಳ ಒಳಗೋಡೆಗಳು ಸುಭದ್ರವಾಗಿವೆ ಎಂಬ ಅಂಶ ದೃಢಪಟ್ಟಿದ್ದರೂ ಹೈ ಬಿ.ಪಿ.ಗೆ ಕಾರಣ ಏನೆಂಬುದನ್ನು ಅವರು ಹೇಳಲಾರದೆ ಹೋದರು. ಇದರಿಂದ ಕಾರ್ಡಿಯಾಲಿಜಿಸ್ಟ್ ಬಗ್ಗೆ ನನಗಿದ್ದ ನಿಗೂಢ ಹೃದಯವಂತಿಕೆ – ಕಾರ್ಡಿಯಾಲಿಟಿ ಮಾಯವಾಗಿ ಹೋಯಿತು. ಸ್ಟೆತಸ್ಕೋಪಿನಲ್ಲಿ ಹೃದಯದ ಲಬ್‌ಡಬ್

ಕೇಳಿತೇ ಹೊರತು ಒಳ ದನಿಗಳ ನಿಗೂಢತೆ ಹ್ಯಾಗೆ ತಿಳಿದೀತು? ನನ್ನ ಹೈ ಬಿ.ಪಿ.ಗೆ ಆಸ್ಪತ್ರೆಯ ಬಿಲ್ಲೇ ಯಾಕೆ ಕಾರಣವಾಗಿರಬಾರದು. ಹೃದಯ ತಜ್ಞರಾಗಲೀ, ಮನೋವೈದ್ಯರಾಗಲೀ ಅರಿಯದೇ ಹೋದರಲ್ಲ ಎಂಬ ವ್ಯಥೆ ನನ್ನನ್ನು ಕಾಡಿಸಿ ಹೊಟ್ಟೆಯಲ್ಲಿ ಮೂಕ ಸಂಕಟವನ್ನುಂಟುಮಾಡಿತು. ಡಾಕ್ಟರಿಗೆ ಹೇಳೋಣವೆಂದರೆ ಏನೋ ಹೆದರಿಕೆ, ಮುಜುಗರ. ನನ್ನ ಈ ಸ್ಥಿತಿಯಲ್ಲಿ ಅವರು ಬಿಡುವುದೂ ಇಲ್ಲ. 'ಎಂಡೋಸ್ಕೋಪಿ' ಮಾಡಿಸಲೇಬೇಕು ಎಂದುಬಿಡುತ್ತಾರೆ. ನಾನಾಗಿ ನಾನು ಅನವಶ್ಯಕ ಪರೀಕ್ಷೆಗೆ ದಾರಿ ಮಾಡಿಕೊಟ್ಟ ಹಾಗಾಗುತ್ತೆ ಅಂತ ನನ್ನ ಉದರ ವೇದನೆಯನ್ನು ಅಮಿಕಿಟ್ಟುಕೊಂಡೆ! ಈ ಹೈಟೆಕ್ ಆಸ್ಪತ್ರೆಗಳೇ ಹೀಗೆ. "We touch your lives till the very end' ಎಂದು ಬೋರ್ಡುಗಳನ್ನು ಬರೆಸಿ ಹಾಕಿಕೊಂಡುಬಿಟ್ಟಿದ್ದಾರೆ!

ನನ್ನ ಕಿಡ್ನಿಯನ್ನು ಪರೀಕ್ಷಿಸಿದ್ದ ನೆಫ್ರಾಲಿಜಿಸ್ಟ್ ವಾರ್ಡಿಗೆ ಬಂದರು. ಡಾಕ್ಟರ ಹತ್ತಿರ ದುಃಖ ಹೇಳಿಕೊಂಡ್ರೆ ಮಾತ್ರೆ ಪಟ್ಟಿ ಉದ್ದವಾಗುತ್ತೆ ಅಷ್ಟೆ ಎಂಬುದು ಗೊತ್ತಿದ್ದರೂ ನನ್ನ ಹೈ ಬಿ.ಪಿ.ಯನ್ನು ಅವರ ಗಮನಕ್ಕೂ ತಂದೆ. ಅವರು ಮುಲಾಜಿಲ್ಲದೆ ಒಂದೇ ಮಾತಿನಲ್ಲಿ ಕರಳು ತುಂಡು ಮಾಡಿದ ಹಾಗೆ ಹೇಳಿದರು. ''ಕಿಡ್ನಿಗೆ ಸಂಬಂಧಪಟ್ಟ ಹಾಗೆ ಏನಾದರೂ ಇದ್ದರೆ ಕೇಳಿ. ನಿಮ್ಮ ಶರೀರದ ಬೇರೆ ಬೇರೆ ಅಂಗಾಂಗಗಳ ಜಾಯಮಾನದ ಬಗ್ಗೆ ನಾನು ಏನನ್ನೂ ಹೇಳಲಾರೆ! ಬೇರೆ ಬೇರೆ ಅವಯವಗಳ ಸ್ಪೆಷಲಿಸ್ಟರು ಇದಾರೆ. ಅವರು ಬಂದಾಗ ಕೇಳಿ'' ಎಂದುಬಿಟ್ಟರು. ಇಷ್ಟನ್ನೂ ಗಮನಿಸುತ್ತಿದ್ದ ನನ್ನ ಮನೆಯಾಕೆ ಅತಿ ಸಾಮಾನ್ಯದ ಒಂದು ಪ್ರಶ್ನೆಯನ್ನು ಡ್ಯೂಟಿ ಡಾಕ್ಟರ ಮುಂದಿಟ್ಟಳು. 'ಹೋಗಲಿ ಪೇಷೆಂಟ್ ಈಗ ಹ್ಯಾಗಿದ್ದಾರೆ ಎಂಬುದನ್ನಾದರು ಹೇಳಿ' ಅಂತ ಕೇಳಿದಳು. 'ತುಂಬಾ ಒಳ್ಳೆಯ ಪ್ರಶ್ನೆ' ಎಂದರು ಅಂದು ಡ್ಯೂಟಿ ಮೇಲಿದ್ದ ಟೀವಿ ಡಾಕ್ಟರು! ಆದರೂ ಅವರು ಸಮಾಧಾನದ ಮಾತುಗಳನ್ನು ಮುಂದುವರಿಸುತ್ತಾ ''ನೋಡಿ ತಾಯಿ, ಹೃದಯದ ಬಡಿತ ಈಗ ಒಂದೇ ಸಮ ಇದೆ. ಬಿ.ಪಿ. ಏರಿದರೆ ತಕ್ಷಣ ನಾರ್ಮಲ್‌ಗೆ ತರುತ್ತೇವೆ. ವಿದ್ಯುತ್ ಮಾಪನಗಳನ್ನು ನೋಡಿ, ರಕ್ತದಲ್ಲಿ ಸೋಡಿಯಂ ಪೊಟ್ಯಾಷಿಯಂ ಎಷ್ಟಿದೆ ಎಂಬುದನ್ನು ತೋರಿಸುತ್ತಿದೆ. ಹೆಚ್ಚು ಕಡಿಮೆ ಆದರೆ ಡ್ರಿಪ್ಸ್ ಹಾಕಿ ಸರಿಪಡಿಸುತ್ತೇವೆ ಇದು ಗ್ಲೂಕೋಮೀಟರು. ರಕ್ತದಲ್ಲಿ ಸಕ್ಕರೆ ಅಂಶ ಜಾಸ್ತಿ ಆದರೆ ಕೂಡಲೇ ಇನ್ಸುಲೀನ್ ಚುಚ್ಚುತ್ತೇವೆ. ಉಸಿರಾಟದ ತೊಂದರೆ ಆದರೆ ಆಕ್ಸಿಜನ್ ಮಾಸ್ಕ್ ಹಾಕುತ್ತೇವೆ. ಪೇಷೆಂಟ್ ಈಸ್ ಕ್ವೋಟ್‌ಸ್ಟೇಬಲ್! ಗಾಬರಿಪಡಲು ಕಾರಣವೇ ಇಲ್ಲ'' ಎಂದು ಹೇಳುತ್ತಾ ಆಕೆಯ ಸಹನೆ, ತಾಳ್ಮೆ ನಿರಂತರ ಸಹಕಾರವನ್ನು ಕೋರಿದರು. 'ಇದಕ್ಕಿಂತ ಇನ್ನೇನು ಮಾಡೋಕಾಗುತ್ತೆ. ಎಲ್ಲಾ ಹಣೆಬರಹ ಬಿಡಿ ಡಾಕ್ಟರೆ' ಎಂದುಬಿಟ್ಟಳು ಅವಳು.

ಇಷ್ಟೊಂದು ಜನ ಡಾಕ್ಟರುಗಳು ನನ್ನನ್ನು ಸುತ್ತುಕೊಂಡಿದಾರಲ್ಲ ಎಂಬುದು ಮನೆಯಾಕೆಯ ಆತಂಕ, ''ನೀನು ಹಬ್ಬದ ಅಡಿಗೆಯನ್ನೋ, ವೈಕುಂಠ ಸಮಾರಾಧನೆಯ ಅಡಿಗೆಯನ್ನೋ ಮಾಡೋ ದಿವಸ ಮನೆಯಲ್ಲಿರುವವರು ಸಾಲದು ಅಂತ ಅಕ್ಕಪಕ್ಕದ ಮನೆಯವರನ್ನು ಅಡಿಗೆ ಮನೆಗೆ ಸೇರಿಸಿಕೊಳ್ಳುತ್ತೀಯಲ್ಲ. ಅವತ್ತು ಅಡಿಗೆ ಏನಾಗಿರುತ್ತೆ. ನಿನಗೆ ಗಾದೆ ಗೊತ್ತಿಲ್ಲವೆ'' ಎಂದೆ. ನನ್ನ ಬೆಡ್ಡಿನ ಪಕ್ಕದ ಪೇಷೆಂಟ್ ಶ್ವಾಸಕೋಶದ

ತೊಂದರೆಯಿಂದ ನರಳುತ್ತಿದ್ದರೂ ಅವರು ತಮ್ಮ ವಿಶ್ವಾಸ ಕೋಶವನ್ನು ಬರಿದು ಮಾಡಿಕೊಂಡಿರಲಿಲ್ಲ. ಅವರು ನನ್ನ ಮಾತನ್ನು ಕೇಳಿ ತಕ್ಷಣ ಪ್ರತಿಕ್ರಿಯಿಸುತ್ತ, 'ಮಿಸ್ಟರ್ ನರಹರಿರಾವ್, you mean that too many doctors....?' ಅಲ್ಲವೆ ಎಂದರು. ಇಬ್ಬರಿಗೂ ನಗು ಬಂತು.

ನನ್ನ ಸ್ಥಗಿತ ದವಡೆಗಳು ವಿಧೇಯತೆಯನ್ನು ಪ್ರದರ್ಶಿಸಿದ ಮೇಲೆ, ಟಾಕ್‌ಶಕ್ತಿ ಪುನಶ್ಚೇತನಗೊಂಡಾಗ, ರೋಗವೇನೂ ಇಲ್ಲ ಎಂದು ಖಾತರಿ ಮಾಡಿಕೊಂಡು ನಿಶ್ಚಿಂತೆಯಿಂದ ಇದ್ದುಬಿಟ್ಟೆ. ಆದರೆ ಡಾಕ್ಟರು ಬಿಡಬೇಕಲ್ಲ, ರಿಲೇಪ್ಸ್ ಆಗುವ ಅನುಮಾನ ಅವರಿಗೆ. ನನ್ನ ಆರೋಗ್ಯದ ದೃಷ್ಟಿಯಿಂದ ಚಿಕಿತ್ಸೆ ಮುಂದುವರಿಸಿದರು. 'ಇನ್ನೊಂದು ಮುಖ್ಯವಾದ ಟೆಸ್ಟ್ ಮಾಡಲೇಬೇಕು, ನಿಮ್ಮ ಮಿದುಳಿನ ನೀರನ್ನು ತೆಗೆದು ಪ್ರಯೋಗಾಲಯಕ್ಕೆ ಕಳಿಸುತ್ತೇವೆ' ಎಂದು ಅವರು ಹೇಳುತ್ತಿದ್ದ ಹಾಗೆ ಫಿಸಿಯೋ ಥೆರಪಿ ಡಿಪಾರ್ಟ್‌ಮೆಂಟಿನ ಒಂದು ಅಂಗಸಾಧಕರ ಗುಂಪೇ ಇಳಿದು ಬಂತು. ನನ್ನನ್ನು ಮಂಚದಿಂದ ಇಳಿಸಿ ನೆಟ್ಟಗೆ ನಿಲ್ಲಿ ಎಂದರು. 15 ದಿವಸದಿಂದ ಮಲಗಿದ್ದ ನನಗೆ ತಕ್ಷಣ ನಿಲ್ಲಲಾಗಲಿಲ್ಲ, ಕುಸಿಯುವ ಹಾಗೇ ಆಯಿತು. ದವಡೆ ಮೂಳೆ ಪರೀಕ್ಷಿಸಿದ್ದ ಮೂಳೆ ಡಾಕ್ಟರು ದಿಢೀರನೆ ಪ್ರತ್ಯಕ್ಷರಾದರು. ಬೆನ್ನುಮೂಳೆ ಸ್ಕ್ಯಾನು, ಎಂ.ಆರ್.ಐ. ಆಗಿ ಚಿತ್ರಗಳ ಸಮೇತ ರಿಪೋರ್ಟ್ ಬಂತು. ಬೆನ್ನು ಕೆಳಗೆ ಮಾಡಿಕೊಂಡು ಕೊಲೇಪ್ಸಿಬಲ್ ಕಾಟ್ ಮೇಲೆ ಮಲಗಿದ್ದರ ಪರಿಣಾಮ ವರ್ಟಿ ಬ್ರೋ ಹದಿನೇಳನೆ ತಟ್ಟೆಯಲ್ಲಿ ಕಂಪ್ರಷನ್ ಫ್ರಾಕ್ಚರ್ ಆಗಿದೆ. ಇವತ್ತಿನಿಂದ ಯಾವುದಾದರೂ ಒಂದು ಪಕ್ಕಕ್ಕೆ ಮುಖ ಮಾಡಿಕೊಂಡು 15 ದಿವಸ ಮಲಗಬೇಕು. ನಿಮ್ಮನ್ನು ಈ ಸ್ಥಿತಿಯಲ್ಲಿ ಮನೆಗೆ ಕಳಿಸಿಕೊಡಲಾರೆವು. ಹೆಲ್ಪ್ ಅಸ್ ಟು ಸರ್ವ್ ಯು ಬೆಟರ್ ಎಂದರು ಮೂಳೆ ಡಾಕ್ಟರು. "ಡಿಸೀಸ್ ಈಸ್ ಬೆಟರ್ ದ್ಯಾನ್ ಕ್ಯೂರ್" ಎಂದೆ ನಾನು. 'ಹಾಸ್ಯಕ್ಕೆ ಇದು ಸಮಯವಲ್ಲ ಮಿಸ್ಟರ್ ನರಹರಿರಾವ್' ಎನ್ನುತ್ತ ಕೆಳ ಮಹಡಿಯ ಒಂದು ಸುಸಜ್ಜಿತ ಲಕ್ಷುರಿ ವಾರ್ಡಿಗೆ ಕಳಿಸಿಕೊಟ್ಟರು. 'ಪ್ರೆಸಿಡೆನ್ಶಿಯಲ್ ಸ್ಯೂಟ್' ಎಂದು ಕರೆಯುತ್ತಾರೆ! ಪಂಚತಾರಾ ಹೋಟಲಿನಲ್ಲಿರುವಂಥ ಕೊಠಡಿಯೇ ಸರಿ. ಅದು ನನಗೆ ಹೆಚ್ಚು ಎನ್ನಿಸಿತು ಬೇರೆ ವಾರ್ಡಿನಲ್ಲಿ ಬೆಡ್ ಖಾಲಿ ಇಲ್ಲ, ಅಲ್ಲದೆ ಆಸ್ಟಿಯೋ ಪೊರೋಸಿಸ್ ಅಂದರೆ ಟೊಳ್ಳು ಮೂಳೆಯವರಿಗೆ ಅಷ್ಟು ಸೌಲಭ್ಯ ಬೇಕು ಎಂದರು. ಯತ್ನವಿಲ್ಲದೆ ಒಪ್ಪಿಕೊಳ್ಳಬೇಕಾಯ್ತು. ಆದರೆ ಒಂದು ಸಮಾಧಾನ. ಅಲ್ಲಿಯತನಕ ಲಿಕ್ವಿಡ್ ಡಯಟ್‌ನಲ್ಲಿದ್ದ ನನಗೆ ಮುಂಬರುವ ದಿನಗಳಲ್ಲಿ ಸಾಫ್ಟ್ ಡಯಟ್ ಅಂದರೆ "Well cooked normal food with double boiled rice and dhal water' ಕೊಡಬಹುದೆಂದು ಡಯಟೀಷಿಯನ್ ನನ್ನನ್ನು ಪರೀಕ್ಷಿಸಿ ಶಿಫಾರಸು ಮಾಡಿದ್ದಳು. ಆಕೆ ಕೇರಳದವಳು – ಕನ್ನಡ ಕಲಿತಿರಲಿಲ್ಲ, "I will visit you on rounds. I will recommend coconut water also' ಎಂದಳು!

ಮಾರನೆ ದಿವಸ 'ಕೊ ಕೋನೆಟ್ ವಾಟರ್' ಬರುವ ಹೊತ್ತಿಗೆ ನನ್ನ ಹೆಂಡತಿಯೂ

ಬಂದಳು. 'ನಿಮ್ಮನ್ನು ಹೀಗೇ ಬಿಟ್ಟರೆ ನೀವು ಮನೆಗೆ ಬರೋಲ್ಲ. ಹೊಸ ಹೊಸ ರೋಗ ಕಾಣಿಸಿಕೊಂಡೀತು ಆಸ್ಪತ್ರೆ ಬಿಲ್ 5 ಲಕ್ಷ ಕಟ್ಟಿದ್ದೇನೆ. ನಿಮ್ಮ ಡಿಸ್ಚಾರ್ಜ್ ರಿಪೋರ್ಟ್ ಸಿದ್ಧವಾಗಿದೆ. ಮನೆಗೆ ಹೊರಡಿ' ಎಂದಳು. ಹೊರಡುವಾಗ ಆಸ್ಪತ್ರೆಯ ಹಿರಿಯ ಆಡಳಿತಾಧಿಕಾರಿಯೊಬ್ಬರು ಬಂದು ನನಗೆ ಶುಭಕೋರಿ 'ನಮ್ಮ ಆಸ್ಪತ್ರೆಯಲ್ಲಿ ನಿಮಗೆ ಯಾವ ತೊಂದರೆಯೂ ಆಗಿರಲಾರದೆಂದು ಭಾವಿಸಿದ್ದೇನೆ. ಆಸ್ಪತ್ರೆಯ ಸಿಬ್ಬಂದಿ ನಿಮ್ಮನ್ನು ಚೆನ್ನಾಗಿ ನೋಡಿಕೊಂಡರು ಎಂಬ ನಂಬಿಕೆ ನನಗಿದೆ, ಗುಡ್‌ಬೈ' ಎಂದರು. 'ನಿಮ್ಮ ಮುಂಜಾಗ್ರತಾ ಚಿಕಿತ್ಸಾಕ್ರಮ, ಸೌಜನ್ಯ ಭರಿತ ಸೇವೆ, ಉದಾರ ಮನೋಭಾವ ಮೆಚ್ಚಿಕೊಳ್ಳುವಂಥದು. ನಿಮ್ಮ ಹೈಟೆಕ್ ಹಾಸ್ಪಿಟಾಲಿಟಿ' ಎಂದೆ!



ಗಾಳಿ ತಿನ್ನುವುದು

• ಈರಪ್ಪ ಎಂ. ಕಾಂಬಳಿ

'**ಗಾ**ಳಿ ಗುದ್ದುವುದು' ಎಂಬ ಪಡೆನುಡಿಯಿದೆ ಕನ್ನಡದಲ್ಲಿ, ಅದನ್ನು ಅನುಸರಿಸಿದಂತೆಯೇ ಗಾಳಿ ಗುದ್ದಿ ಮೈ ನೋವು ಮಾಡಿಕೊಂಡರು ಎಂಬ ಗಾದೆಯ ಮಾತೂ ಚಾಲ್ತಿಯಲ್ಲಿದೆ. ವೇದ ಸುಳ್ಳಾದರೂ ಆಗಬಹುದು, ಗಾದೆ ಹಾಗಲ್ಲ ಅನುಭವದಿಂದ ವೇದ್ಯವಾದ ಮಾತು. ಅದಕ್ಕೆ ಅದರದೇ ಆದ ಅರ್ಥವೂ ಮಹತ್ವವೂ ಪ್ರಾಪ್ತವಾಗಿರುತ್ತದೆ.

ಅದೆಲ್ಲ ಸರಿ. ಹಾಗಾದರೆ, ಈ 'ಗಾಳಿ ತಿನ್ನುವುದು' ಎಲ್ಲಿಂದ ಬಂತು ಎಂದು ವಾಚಕ ಮಹಾಶಯರು ಹುಬ್ಬೇರಿಸುವ ಮೊದಲೇ ಅದಕ್ಕೆ ತಕ್ಕ ವಿವರಣೆ ನೀಡಿಬಿಡುತ್ತೇನೆ. ನನ್ನ ಬಿಸಿಲ ಸೀಮೆಯ ಕಚೇರಿಗಳಲ್ಲಿ ಹಗಲಿಡೀ ಕೋಣೆಯೊಳಗಡೆ ಬಂದಿಯಾಗಿ; ಮಡಿಕೆಯೊಳಗಿನ ಮಜ್ಜಿಗೆ ಕಡೆದಂತೆ ತಲೆಯ ಮೇಲಿನ ಫ್ಯಾನುಗಳು ಕಟೆದ ಬಿಸಿ ಗಾಳಿ ಸೇವಿಸಿ ಸುಸ್ತಾಗಿ, ಸಂಜೆಯ ತಂಪು ಹೊತ್ತಿನಲ್ಲಿ ಬಿಳಿಕಾಲರಿನ ಜನರ ಹಿಂಡು ಊರ ಹೊರಗೆ 'ಹವಾಸಿರಿ' ಹೊರಟಿರುವುದು ಮಾಮೂಲು ದೃಶ್ಯ.

ಸ್ಥಳೀಯ ರೈತರು-ಶ್ರಮಿಕರು ಆ ಗೋಧೂಳಿ ಹೊತ್ತಿನಲ್ಲಿ ತಂತಮ್ಮ ಹೊಲ - ಪಟ್ಟಿಗಳಲ್ಲಿ ದಣಿಗು ಕಣ್ಣರೆಪ್ಪೆಯ ಕೂದಲುಗಳಿಗೆ ಕೆಂಧೂಳು ಅಂಟಿಸಿಕೊಂಡವರಾಗಿ ಜಾನುವಾರುಗಳ ಹಿಂದೆ ಮನೆಗಳಿಗೆ ಧಾವಿಸುತ್ತಿದ್ದವರ ಕಣ್ಣಿಗೆ ಹಾಗೆ ತಂಡೋಪತಂಡವಾಗಿ ನಿರಾಳವಾಗಿ ಹರಟುತ್ತಾ ಹೊರಟ ಮಂದಿ ಕುತೂಹಲದ ವಸ್ತುವಾಗುತ್ತಿದ್ದರು. ತಾವು ಕಾಡಿಂದ ನಾಡಿಗೆ ಧಾವಿಸುತ್ತಿದ್ದರೆ ಇವರು ಊರಿಂದ ಹೊರಗೆ ಹೋಗುವ ಧಾವಂತದ ಹಿಂದೆ ಇರುವ ಘನ ಉದ್ದೇಶವಾದರು ಏನು? ಎಂದು ಕೇಳುವವರಿಗೆ 'ಅವರು ಗಾಳಿ ತಿನ್ನಲು ಹೊರಟ ಮಂದಿ' ಎಂದು ಹುಡುಗನೊಬ್ಬ ಸಮಜಾಯಿಷಿದಾಗ, ಆ ಮಾತು ಆಗ ನಮಗೆ ವ್ಯಂಗ್ಯವಾಗಿ ಕಾಣಿಸಿತ್ತಾದರೂ, ಈಗ ಅದೇನೂ ಅತಿಶಯೋಕ್ತಿಯಲ್ಲ ಅನ್ನಿಸುತ್ತದೆ.

'ಇದೇನಿದು, ಆಕಾಶ ನೋಡುವುದಕ್ಕೂ ನೂಕು ನುಗ್ಗಲೆ?' ಅನ್ನ ಬೇಡಿರಿ. ಮುಂದೊಂದು ದಿನ ಶುದ್ಧಗಾಳಿಗೂ ತತ್ವಾರ ಬಂದೀತು. ಜೇನು ಹುಟ್ಟಿನಂಥ ಅಪಾರ್ಟ್‌ಮೆಂಟುಗಳಲ್ಲಿ ಇಡಿಕಿರಿದ ಆಧುನಿಕ ನಾಗರಿಕ ಜಗತ್ತಿನ ಜನರು ಆಕಾಶ ನೋಡುವದಿರಲಿ, ಹೊರಗೆ ತಲೆ ಹಾಕಿದರೆ ಕಾಣಬಹುದಾದ ಅಪರೂಪದ ಸೂರ್ಯಗ್ರಹಣ, ಚಂದ್ರ ಗ್ರಹಣಗಳನ್ನು ದೂರದರ್ಶನ ಪೆಟ್ಟಿಗೆಯಲ್ಲಿ ಮೂಡುವುದನ್ನೇ

ಸ್ಫೋಟಿ ಆಸ್ಫೋಟಿಸುವ ಮಟ್ಟ ತಲುಪಿರುವಾಗ; ಮುಂದೊಂದು ದಿನ ಗಾಳಿಗೂ 'ಗಾಸಾರ' ಬಂದರೂ ಬಂದೀತು. ಅಚ್ಚರಿಪಡಬೇಕಿಲ್ಲ.

ಕುಸಿದ ದೇಹವನ್ನು ಹವಾ ನಿಯಂತ್ರಿತ ಹಾಲ್‌ನಲ್ಲಿ ಉದ್ದಕ್ಕೆ ಮಲಗಿಸಿ, ಸಿಲಿಂಡರಿನಲ್ಲಿ ತುಂಬಿದ ಆಕ್ಸಿಜನ್ ಗಾಳಿಯನ್ನು ಕೊಳವೆಯ ಮುಖಾಂತರ ನೀಡುವುದಿಲ್ಲವೆ? ಅಂಥ ಗಾಳಿ ಸೇವನೆಗೆ ದಿನವೊಂದಕ್ಕೆ ಸಾವಿರಾರು ರೂಪಾಯಿ ತೀಕಬೇಕಾಗುತ್ತದೆ. ನಿಸರ್ಗ ನಮಗೆ ನೀರು-ಗಾಳಿಯನ್ನು ಮುಫತ್ತಾಗಿ ನೀಡಿ ತನ್ನ ಆಹಾರವನ್ನು ಮಾತ್ರ ತಾನೇ ಸಂಪಾದಿಸಿಕೊಳ್ಳಲಿ ಎಂಬ ನಿಯಮ ಮಾಡಿತ್ತು. ಈಗ ನೀರು-ಗಾಳಿಗೂ ದುಡ್ಡು ತೆತ್ತುವ ಕಾಲ ಎದುರಾಗಿದೆ. ಇದು ನಿಸರ್ಗಕ್ಕೂ ನಾಗರಿಕ ಜಗತ್ತಿಗೂ ನಡೆಯುವ ಶೀತಲ ಸಮರವೇ ಸೈ. ಮನುಷ್ಯ ನಿಸರ್ಗದಿಂದ ದೂರ ಹೋದಷ್ಟೂ ಇಂಥ ಬೆಲೆ ತೆತ್ತಬೇಕಾಗುತ್ತದೇನೊ!

'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಎಂಬ ಕವಿ ವಾಣಿಯಂತೆ, ಇಲ್ಲಿ ಗಾಳಿಯ ಬೆನ್ನೇರಿ ಹೊರಟವನಂತೆ ಗಂಭೀರ ಜಿಜ್ಞಾಸೆಗೆ ತೊಡಗಿದೆನೇನೋ, ನಾನು ತುಸು ದಾರಿ ತಪ್ಪಿ . ಭಾರತೀಯರು ವಾಯುದೇವನೆಂದೇ ಆರಾಧಿಸುವ ಗಾಳಿಯ ಉಸಾಬರಿಯೇ ಆ ತೆರನಾದದ್ದು. ನಾನಾದರು ಏನು ಮಾಡಲಿ? ಇದು ಏನಿದ್ದರೂ ನಿಸರ್ಗ ಎಸಗಿದ ಕಿಲಾಡಿತನವಷ್ಟೆ! ಜೀವಿ ಪರಿಸರದಲ್ಲಿ, ಭೂಮಿಗೆ ಬಿದ್ದ ಕ್ಷಣದಿಂದ ಹಿಡಿದು ಕೊನೆಯುಸಿರು ಕಕ್ಕುವವರೆಗಿನ ಕಾಲಘಟ್ಟದಲ್ಲಿ ಗಾಳಿ ತೀರಾ ಅನಿವಾರ್ಯ ಎಂಬ ಕಾರಣಕ್ಕೆ ಇಷ್ಟೆಲ್ಲ ಹೇತು ನಿರೂಪಿಸಿದೆ.

ಮನುಷ್ಯರಾದ ನಾವೆಷ್ಟೇ ರೊಕ್ಕದ ಬೆನ್ನು ಹತ್ತಲಿ, ಗಾಳಿ ವಿಷಯಕ್ಕೆ ಬಂದಾಗ ಸ್ವತಃ ಕಾರಿನಿಂದ ಇಳಿದು ಬೀದಿಯಲ್ಲಿ ನಡೆದಾಡಬೇಕು. ಬೇಕಾದರೆ, ಬೆಳಗಿನ ಹೊತ್ತು ಬೆಂಗಳೂರಿನ ಲಾಲ್‌ಬಾಗ್-ಕಬ್ಬನ್ ಪಾರ್ಕಿಗೆ ಬಂದರೆ ಸುತ್ತಲೂ ನಾನಾ ನಮೂನೆಯ ಕಾರುಗಳಲ್ಲಿ ಬಂದು ಇಳಿದ ಜನರು ಮರಗಳ ನಡುವೆ ನಡೆದು ನಡೆದು, ಬಿದ್ದು ಓಡಿ ಬೆವರು ಹರಿಸುವುದನ್ನು ಕಂಡಾಗ ಅಯ್ಯೋ ಪಾಪ, ಇವರಿಗೇನು ಹುಚ್ಚೇ ಅನ್ನಿಸದಿರದು. ಇದನ್ನೇ ಪ್ರಕೃತಿ ಒಡ್ಡಿದ ಸವಾಲು ಎನ್ನಿರಿ, ಕಿಲಾಡಿತನ ಎನ್ನಿರಿ. ಇದೂ ಒಂದು ರೀತಿಯ 'ಮಾನವೀಯ ನ್ಯಾಯ'. ಸವಲತ್ತುಗಳು ಹೆಚ್ಚಾದೊಡನೆ ಸುಖದ ಖಾಯಿಲೆಗಳು ಅಮರಿಕೊಳ್ಳುತ್ತವೆ. ಆಗ ಅನಿವಾರ್ಯವಾಗಿ ಮನುಷ್ಯ ಬೀದಿಗಿಳಿದು, ದೇಹ ದಂಡಿಸಲು ಮುಂದಾಗುತ್ತಾನೆ. ಇದು ನಾನು ಬರೆಯ ಹೊರಟ ಪ್ರಬಂಧದ ಪೀಠಿಕೆಯಷ್ಟೆ

ಕಂಪ್ಯೂಟರು ಯುಗದಲ್ಲಿ ಅದರ ಪರಿಭಾಷೆಯಲ್ಲೇ ಹೇಳುವುದಾದರೆ, ಮಾನವನ ಬೆನ್ನಿಗೆ ಲಗತ್ತಾದ ಕರುಳು ರೀಚಾರ್ಜಬಲ್ ಬ್ಯಾಟರಿಯಾದರೆ, ತಲೆಯೊಳಗಿನ ಮೆದುಳು ಸಾಫ್ಟ್‌ವೇರ್ ಚಿಪ್. ಎರಡೂ ಸುಸ್ಥಿತಿಯಲ್ಲಿದ್ದರೇನೇ ಎಲ್ಲ ಸುಸೂತ್ರವಾಗಿ ನಡೆಯುತ್ತದೆ. ಬ್ಯಾಟರಿ ದುರ್ಬಲವಿದ್ದರೂ ಹೆದ್ದಾರಿಯಲ್ಲಿ ಓಡುತ್ತಿದ್ದರೆ ಆ ವಾಹನದ ಹೆಡ್‌ಲೈಟುಗಳು ಇನ್ನೂ ಪ್ರಕಾಶಮಾನವಾಗಿ ಬೆಳಗುವ ತೆರದಲ್ಲಿಯೇ ದೇಹವನ್ನು ಬೀದಿಯಲ್ಲಿ ನಡೆಸಿ, ಓಡಿಸಿ ಹೊಟ್ಟೆಯೊಳಗಿನ ದಹನ ಕಾರ್ಯ ಚುರುಕಾದಷ್ಟೂ ಆಹಾರದ ಪಚನ ಕ್ರಿಯೆ ಸರಾಗವಾಗಿ

ನಡೆದು ದೇಹ-ಮನಸ್ಸುಗಳಿಗೆ ಬೇಕಾದ ಚೈತನ್ಯ ಹೆಚ್ಚುತ್ತಾ ಹೋಗುತ್ತದೆ. ಈ ಕಾರಣಕ್ಕಾಗಿ ಆಧುನಿಕ ನಾಗರಿಕ ಜಗತ್ತಿನಲ್ಲಿ ಮನುಷ್ಯ ತಾನು ಕಟ್ಟಿಕೊಂಡ ಸ್ವರ್ಗಸುಖದಲ್ಲಿ ಅದೆಷ್ಟೇ ಲೋಲಾಡಲಿ ಪರೋಕ್ಷವಾಗಿ ದೇಹ ದಂಡಿಸುವಂಥ 'ವಾಯು ವಿಹಾರ'ಕ್ಕೆ ಇಳಿಯಲೇ ಬೇಕು. ಇದನ್ನೇ ನಾನು 'ನಿಸರ್ಗ ರಹಸ್ಯ' ಎಂದದ್ದು.

ನಾಲ್ಕು ಗೋಡೆಯ ನಡುವೆ ದಿನದ ಬಹುಭಾಗ ಕಳೆಯುವ ಜನಕ್ಕೆ ದಿನದ ಒಂದೆರಡು ಗಂಟೆಗಳನ್ನಾದರೂ ತೆರೆದ ಪರಿಸರದಲ್ಲಿ ಕಳೆಯುವ ತರದೂದು ಇರುತ್ತದೆ. ಒಂದು ಅರ್ಥದಲ್ಲಿ ಅದು ನಿಸರ್ಗದ ಕರೆಯೂ ಆದೀತು. ಹಗಲಿಡೀ ಗಾಳಿ – ಮಣ್ಣು – ಆಕಾಶ – ನೀರು – ಸೂರ್ಯರೊಂದಿಗೆ ಒಡನಾಟವಿರುವ ಹಳ್ಳಿಯ ಶ್ರಮಿಕ ವರ್ಗಕ್ಕೆ ಹೀಗೆ ಈ ವೈಟ್ ಕಾಲರಿನ ಮಂದಿ ಸಂಜೆಯ ಹೊತ್ತು ಗಾಳಿವಾರಿಗೆಯಾ ಗಾಳಿ ಸವಾರಿಗೆ ಹೊರಟದ್ದು ಅವರ ಕಣ್ಣಿಗೆ ಒಂದು ಅಣಕ ***(Mockery).*** ಆದರೇನು ಮಾಡುವುದು? ಎರಡೂ ಸಮುದಾಯಗಳ ನಡುವೆ ಪರಸ್ಪ ರ ಹೊಕ್ಕು – ಮಾಡಿ ಬಳಕೆಯಿದ್ದರೆ, ಆ ತಾರತಮ್ಯ ಭಾವ ಇರುವುದಿಲ್ಲ. ಅದಿಲ್ಲದೆ ಹೋದರೆ ಪರಸ್ಪರರಿಗೆ ಅಪರಿಚಿತ ಪ್ರಪಂಚಗಳಾಗೇ ತೋರುತ್ತವೆ.

ಈ 'ಗಾಳಿ ಆಂಜನೇಯ'ನ ಬಗೆಗೆ ಅರ್ಥಾತ್ ಪ್ರಾಣದೇವನ ಬಗೆಗೆ ನಾನೇಕೆ ಇಷ್ಟು ತಲೆ ಕೆಡಿಸಿಕೊಂಡೆ ಎನ್ನುವುದಕ್ಕೂ ಒಂದು ಕಾರಣವಿದೆ. ಕಾಲು ಶತಮಾನ ಕಾಲ ಬೆಂಗಳೂರಿನ ಮೆಜೆಸ್ಟಿಕ್‌ನ ಹೊಟ್ಟೆಯಲ್ಲಿಯೇ ಕಳೆದದ್ದಕ್ಕೇನೋ. ಇಲ್ಲಿ ಕಟ್ಟಿದ್ದ ಬಿಳಿ ಬಟ್ಟೆಯ ಬ್ಯಾನರು ಕೆಲವೇ ದಿನಗಳಲ್ಲಿ ವಾಹನಗಳ ದಟ್ಟ ಹೊಗೆಗೆ ಕಣ್ಣೆದುರೇ ಮಸಿಯರಿಯಂತಾಗಿ ಹೋಗುತ್ತಿದ್ದುದನ್ನು ಕಣ್ಣಾರೆ ಕಂಡವನು. ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಇಲ್ಲಿ ಸಂಚರಿಸುವ ವಾಯುದೇವನಿಗೆ ಖಂಡಿತ ಕುಷ್ಠರೋಗ ತಗುಲಿರುತ್ತದೆ. ದಿನದ ಬಹುಭಾಗ ಆತನನ್ನು ಸೇವಿಸುವ ನಮ್ಮ ಶ್ವಾಸಕೋಶಗಳ ಗತಿ ಏನಾಗಿದೆಯೊ. ನಮ್ಮ ದೇಹಗಳು ಒಳಗೊಳಗೇ ಟೊಳ್ಳಾಗಿ ಹೋಗಿರುತ್ತವೇನೊ. ಆಗೀಗ, ಈ ನಗರದಿಂದ ಬಿಡಿಸಿಕೊಂಡು ಹೊರಗಿನ ಶುದ್ಧ ಗಾಳಿಯ ಪರಿಸರಕ್ಕೇನಾದರು ಹೋದರೆ, ನಮ್ಮ ಶ್ವಾಸಕೋಶಗಳು ದಿಗಿಲು ಬೀಳುತ್ತವೆ, ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ.

ಇರಲಿ ಗಾಳಿಕುದುರೆಯೇರಿ ಹೊರಟವರ ಕಾಲುಗಳು ನೆಲದ ಮೇಲೆಯೇ ಅನ್ನುವುದೂ ಅಷ್ಟೇ ದಿಟ. ಆಗಲೇ ಪ್ರಸ್ತಾಪಿಸಿದಂತೆ, ಸುಖ-ಸವಲತ್ತುಗಳು ಹೆಚ್ಚಾದಂತೆ ಮನುಷ್ಯ ದೇಹವೂ ಶಾಪಗ್ರಸ್ಥ ನಳಮಹಾರಾಜನಂತೆ ಅಡ್ಡಾದಿಡ್ಡಿ ಬೆಳೆದು ಆಕಾರಗೇಡಿ ***(Shape less)*** ಆಗಿ, ಕಡೆಗೆ ಅತುಲ ಅನಾರೋಗ್ಯಕ್ಕೆ ***(hopeless)*** ಗುರಿಯಾಗುತ್ತದೆ. ಒಂದೊಂದಾಗಿ ವೈದ್ಯ ಜಗತ್ತಿನಿಂದ ನೋಟೀಸುಗಳು, ಸಮನುಗಳು ಜಾರಿಯಾಗ ಹತ್ತುತ್ತವೆ. ಹಾಗಾಗುವ ಮೊದಲೇ ತುಸು ಮುನ್ನೆಚ್ಚರಿಕೆ ವಹಿಸಿದರೆ, ವೈದ್ಯರು ಹೇಳುವುದಕ್ಕೆ ಮೊದಲೇ ನಿತ್ಯ ಒಂದು ಗಂಟೆ ನಡೆದಾಡುವ; ದೇಹವನ್ನು ಸಕಲ ದಿಕ್ಕುಗಳಿಗೂ ಮಣಿಸುವ; ಆಗೀಗ ಸ್ಪ್ರಿಂಗ್ ಗಾದಿಯಿಳಿದು ನೆಲದ ಮೇಲೆ ಮಲಗುವ ಇವೇ ಮೊದಲಾದ ಕಸರತ್ತು ಅನಿವಾರ್ಯವಾಗುತ್ತದೆ. ಇಲ್ಲದೆ ಹೋದರೆ ಹತ್ತಾರು ವರ್ಷ ದೇಹದ ಬಗೆಗೆ ಒಂದಿಷ್ಟೂ

ತನಿಕರ ತೋರಿಸದೆ, ಅದನ್ನು ಬೇಕಾಬಿಟ್ಟಿ ಬಳಸಿದ್ದಕ್ಕಾಗಿ ನಂತರ ಬಡ್ಡಿ ಸಮೇತ ದಂಡ ಕಟ್ಟಬೇಕಾಗುತ್ತದೆ. ಅಷ್ಟೇ ಅಲ್ಲ, ಊಟವನ್ನು ಔಷಧಿಯಂತೆಯೂ ಔಷಧಿ-ಮಾತ್ರೆಗಳನ್ನು ಊಟದಂತೆಯೂ ಮುಕ್ಕಬೇಕಾದ ಪರಿಸ್ಥಿತಿ ಎದುರಾಗುವುದುಂಟು.

ಮುಂದೊಂದು ದಿನ ನರ್ಸಿಂಗ್ ಹೋಂಗಳಲ್ಲಿ ದೇಹದ ಮೇಲೆ ನಡೆಯುವ ಆ ತೆರನಾದ ಹಲ್ಲೆಗೆ ಹೆದರಿಯೋ ಏನೋ ನಗರದ ಜನ ಬೀದಿಗಿಳಿದು ವಾಕ್ ಮಾಡಲು ಶುರು ಮಾಡುತ್ತಾರೆ. ಬೆಳಗಿನ ಹೊತ್ತು ನಗರದ ಬಡಾವಣೆಗಳಲ್ಲಿ ಹಿಂಡು ಹಿಂಡಾಗಿ ಹಾಗೆ ಅಂಡಲೆವ ನಾಗರಿಕರ ತರಾವರಿ ನಡಿಗೆಯನ್ನು ನೋಡಿಕೊಂಡು ನಿಲ್ಲುವುದೇ ಒಂದು ಚೆಂದದ ಪ್ರಸಂಗ. ಆಕಾಶಕ್ಕೂ ಭೂಮಿಗೂ ಅವಿನಾಭಾವ ಸಂಬಂಧವಿರುವಂತೆಯೇ ಮನುಷ್ಯನ ಉಸಿರಾಟಕ್ಕೂ ನಡಿಗೆಯ ಗತಿಗೂ ಅದೇ ರೀತಿಯ ಅನನ್ಯತೆಯಿದೆ; ವಿಶಿಷ್ಟ ಲಯಗಾರಿಕೆಯೂ ಇದೆ. ಪ್ರತಿಯೊಬ್ಬ ಮನುಷ್ಯನ ದೇಹ ರಚನೆಯನ್ನು ಅನುಸರಿಸಿ ಆತನದೇ ಆದ ಪ್ರತ್ಯೇಕ ಕಾಲು ನಡಿಗೆಯ ಶಬ್ದವನ್ನು ಕೇಳಿಯೇ ಅಂಧರು ಅಂಥ ವ್ಯಕ್ತಿಗಳನ್ನು ಗುರುತಿಸುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೇನೆ.

ಇಷ್ಟೆಲ್ಲದರ ತಾತ್ಪರ್ಯವಿಷ್ಟೇ. ಸುಖಲೋಲುಪ್ತರಿಗೆ ವೈದ್ಯರು ತಾಕೀತು ಮಾಡುವ ಮೊದಲೇ ಬೀದಿಗಿಳಿಯಬೇಕು. 'ಗಾಳಿ ತಿನ್ನುವುದು' ಎಂದರೆ ಪರೋಕ್ಷವಾಗಿ 'ಕಾಲಾಡುವುದು' ಎಂದೇ ಸದ್ಯಕ್ಕೆ ಪರಿಭಾಷಿಸೋಣ. ಕೆಲವರಿಗೆ, ಹಾಗೆ ಕೈಕಾಲು ಬಾಗಿಸಲು ಮನೆಯೊಳಗೆ ಅವಕಾಶವಿಲ್ಲದೆ; ಬೀದಿ ಪಾರ್ಕುಗಳಿಗೆ ಇಳಿಯಲೂ ಮನಸ್ಸಿಲ್ಲದೆ, ನಗರ ಪ್ರದೇಶಗಳಲ್ಲಿ ಫಿಟ್‌ನೆಸ್ ಸೆಂಟರ್ ಹುಟ್ಟಿಕೊಂಡದ್ದು. ಒಂದು ಕಾಲದಲ್ಲಿ ಶರೀರ ಧರ್ಮಕ್ಕೆ ಜೋತು ಬಿದ್ದ ಮನುಷ್ಯ, ತನ್ನ ಸ್ನಾಯು ಬಲದ ಮೇಲೆಯೇ ಪೂರ್ಣ ನೆಚ್ಚಿದ್ದನಾಗಿ ಹಳ್ಳಿಗಳಲ್ಲಿ ಓಣಿಗೊಂದು ಗರಡಿ ಮನೆಗಳಿರುತ್ತಿದ್ದವು. ಮನೆಯ ಆ ಮೂಲಕ ತನ್ನ ಊರಿನ ಆರೋಗ್ಯ ಅಷ್ಟೇ ಅಲ್ಲ, ಸ್ಥಾನ-ಮಾನ ಕಾಪಾಡಲು ಮನುಷ್ಯರ ಗಟ್ಟಿ ಶರೀರಗಳ ನೆರವೂ ಆಗಬೇಕಾಗುತ್ತಿತ್ತು. ಕಾಲಕ್ರಮೇಣ ನಾಗರಿಕತೆ ಬೆಳೆದಂತೆ ದೈಹಿಕ ಶಕ್ತಿಗಿಂತ ಬುದ್ಧಿಶಕ್ತಿಯೊಂದರ ಕಡೆಗೇ ಗಮನ ಹರಿದಾಗ, ಹಲವು ಹತ್ತು ವ್ಯಸನಗಳ ದಾಸನಾದಾಗ, ಈಗ ಗಲ್ಲಿಗೊಂದು ದವಾಖಾನೆ ಬೇಕಾದವು. ಇದನ್ನು ಮನಗಂಡ ಕೆಲವರು ಮನೆಯೊಳಗೇ ಯಂತ್ರಗಳ ನೆರವಿನಿಂದ ಕೈಕಾಲು ಆಡಿಸ ಹತ್ತಿದರು. ಕೆಲವರು ಬಿಡುವು ಮಾಡಿಕೊಂಡು ಜಿಮ್ ಕೇಂದ್ರಗಳ ಖಾಯಂ ಸದಸ್ಯರಾದರು. ದುಡ್ಡು ಖರ್ಚು ಮಾಡಿ ಕೊಬ್ಬು ಬೆಳೆಸಿಕೊಳ್ಳುವುದು; ಕೊಬ್ಬು ಕರಗಿಸಲು ಮತ್ತೆ ದುಡ್ಡು ಖರ್ಚು ಮಾಡುವುದು.

ಒಂದು ಕಾಲದಲ್ಲಿ, ರಾತ್ರಿಯ ಹತ್ತುಗಂಟೆಯೆಂದರೆ ಹಳ್ಳಿಯ ಬಾಳಿನಲ್ಲಿ ಒಂದು ಜೋಂಪು ನಿದ್ದೆ ತೆಗೆದು ಮಗ್ಗಲು ಬದಲಾಯಿಸುವ ಮಧ್ಯರಾತ್ರಿಯಿದ್ದಂತೆ. ಅಂಥದ್ದರಲ್ಲಿ ಮ್ಯಾಟ್ರೀಕು ಪರೀಕ್ಷೆಗೆ ಕೂತಿದ್ದ ಹುಡುಗರಾದ ನಮಗೆ ಆ ನೀರವ ರಾತ್ರಿಯಲ್ಲಿ ತಬ್ಬಿಕೊಳ್ಳಲು ನುಗ್ಗಿ ಬರುತ್ತಿದ್ದ ನಿದ್ದೆಯನ್ನು ಓಸರಿಸಿ, ಓದುವುದರಲ್ಲಿ ತಲ್ಲೀನರಾಗುತ್ತಿದ್ದ ದಿನಗಳವು. ಅಷ್ಟರಲ್ಲಿ, ಲಯಬದ್ಧವಾಗಿ ಬಡಿಗೆ ಊರುವ ಕಟ್‌ಕಟ್ ಸದ್ದಿನೊಂದಿಗೆ, ಹೆಜ್ಜೆಗೊಮ್ಮೆ 'ಖಲಾಸ್' ಎಂದು ಕೀಗೊಂಚಲ ಸದ್ದು ಹೊರಟಿತೆಂದರೆ – ಶೆಟ್ಟರು ಅಂಗಡಿ ಮುಚ್ಚಿ ಬಂದು

ಚೆಂಬು ಹಿಡಿದು ಊರಂಚಿನ ಕಳ್ಳೀಸಾಲಿಗೆ ಹೊರಟಿದ್ದಾರೆಂದರೆ ಈಗ ನಿಖರವಾದ ಸಮಯ ಹತ್ತುಗಂಟೆಯೆಂದು ನಿಸ್ಸಂಶಯವಾಗಿ ಒಪ್ಪಿಕೊಳ್ಳುತ್ತಿದ್ದೆವು. ನಮ್ಮ ಮುಂಗೈಗಳಲ್ಲಿನ್ನೂ ಗಡಿಯಾರಗಳಿರಲಿಲ್ಲವಲ್ಲ, ಅದಕ್ಕೆ.

ಹಗಲಿಡೀ ತಮ್ಮ ಕಿರಾಣಿ ಅಂಗಡಿಯಲ್ಲಿ ಗೂಟ ಹೊಡೆದುಕೊಂಡು ಕೂತಿರುತ್ತಿದ್ದ ಶೆಟ್ಟರಿಗೆ ಗ್ಯಾಸ್ ತುಂಬಿರುವ ಹೊಟ್ಟೆ. ಅಪರೂಪಕ್ಕೆ ಮದುವೆಗೆಂದು ಹೋದಾಗ ಗಾಡಿಯಿಂದ ಬಿದ್ದು ಶಾಶ್ವತವಾಗಿ ಒಂದು ಕಾಲು ಬೇರೆ ಊನವಾಗಿತ್ತು. ಈ ಎಲ್ಲವರ ಫಲಿತಾಂಶವೆಂದರೆ – ರಾತ್ರಿಯ ಕಾವಲಿನಲ್ಲಿ ಹರಿದಾಡುವ ಹುಳುಹುಪ್ಪಟೆಗಳನ್ನೂ ಹಂದಿ - ನಾಯಿಗಳನ್ನೂ ದೂರ ಓಡಿಸಲು ಬಲಗೈಯಲ್ಲಿ ಹಿಡಿದಿದ್ದ ಕೋಲನ್ನು ಲಯಬದ್ಧವಾಗಿ ನೆಲಕ್ಕೆ ಕುಟ್ಟುವ; ಅದರ ಹಿಂದೆಯೇ ಊನವಾದ ಕಾಲನ್ನು ಸಶಬ್ದವಾಗಿ ಬಾರ್‍ರೆಂದು ಎಳೆದು ಇಕ್ಕಿ; ಮತ್ತೊಂದು ಕಾಲನ್ನು ಎತ್ತಿ ರಪ್ಪೆಂದು ಕುಕ್ಕಿದಾಗ; ಅದರ ಜತೆಗೇ ಸೊಂಟದ ಬೆಳ್ಳಿ ಉಡುದಾರಕ್ಕೆ ಜೋತು ಬಿದ್ದ ಕೀಗೊಂಚಲು ಜಲ್ಲೆಂದು ಬೇರೆ ಸರಿಯಾಗಿ ತಾಳ ಹಾಕುತ್ತಿತ್ತು. ರಾತ್ರಿ ಹತ್ತರ ಪ್ರಶಾಂತ ವಾತಾವರಣದಲ್ಲಿ ನಮ್ಮ ಈ ಶೆಟ್ಟರ ಸವಾರಿ ಹೊರಟಿದೆಯೆಂದರೆ, ಆ ಹೊತ್ತಿನಲ್ಲಿಯೇ ಆಕಾಶವಾಣಿ ಪ್ರಸಾರಿಸುವ ದಕ್ಷಿಣಾದಿ ಸಂಗೀತದ 'ತನಿ ಬಿಡುವ' ಕಾರ್ಯಕ್ರಮದಂತಿರುತ್ತಿತ್ತು. ಗ್ಯಾಸ್ಟಿಕ್ ಟ್ರಬಲ್‌ನಿಂದಾಗಿ ಕೆಳಗಿನಿಂದ ಶಂಖ ಊದುವವೂ ಇರುತ್ತಿತ್ತು. ಇದು ನಮ್ಮ ಶೆಟ್ಟರ 'ಹವಾ ಸಿರಿ' ನಡಿಗೆ!

ಉನ್ನತ ಅಧಿಕಾರಿಯೊಬ್ಬರ ಮನೆಗೊಮ್ಮೆ ಬೆಳಗಿನ ಹೊತ್ತು ಅನಿರೀಕ್ಷಿತ ಹೋಗಬೇಕಾಯಿತು. ಸಾಹೇಬರು ಊರಲ್ಲಿರಲಿಲ್ಲ. ಮನೆಗೆ ಬೀಗ ಬಿದ್ದಿತ್ತು; ಹೊರಗೆ ಕೂತಿದ್ದ ಮನೆಗೆಲಸದ ಮುದುಕಿಯನ್ನು 'ಮೇಡಂ ಎಲ್ಲಿ' ಎಂದು ಕೇಳಲಾಗಿ "ಅದೆಲ್ಲಿಗೋ ಕುಂಡಿ ಕರಗಿಸೋಕೆ ಓಗವ್ರೆ" ಅಂದಿತು. ಒಂದೇ ಏಟಿಗೆ ನಮಗರ್ಥವಾಗಲಿಲ್ಲ. ಸಂಜೆಯ ಹೊತ್ತು ಕ್ಲಬ್ಬು, ಹಗಲು ಶಾಪಿಂಗ್, ಅವರಿವರ ಮನೆಯಲ್ಲಿ ಕಿಟ್ಟಿ ಪಾರ್ಟಿ, ಮಕ್ಕಳ ಭವಿಷ್ಯತ್ತಿನ ಕಡೆ ಗಮನ ಕೊಡಲು ಇವರಿಗೆ ಯಾವಾಗ ಪುರಸೊತ್ತು? ಬಾಲ್ಯದಲ್ಲಿ ನಮಗೆ ಊಡಿಸಿದ್ದ - 'ಮನೆಯ ಮೊದಲ ಗುರು ತಾಯಿ' ಎನ್ನುವುದು ಈಗ ಎಷ್ಟರಮಟ್ಟಿಗೆ ಸರಿ? ಎಂಬೆಲ್ಲ ಪ್ರಶ್ನೆಗಳು ತಲೆಯಲ್ಲಿ ಸುಳಿದು ಹೋದವು.

ವಾಚಕರು ಕ್ಷಮಿಸಬೇಕು, ವಿಷಯಾಂತರ ಮಾಡಲಾರೆ ಬನ್ನಿರಿ. ಇತ್ತೀಚಿನ ವರ್ಷಗಳಲ್ಲಿ ಜನದಟ್ಟಣೆಯಿಂದ ತತ್ತರಿಸುವ ಮಹಾನಗರಗಳಲ್ಲಿ ಹುಟ್ಟಿ ಬೆಳೆದು, ಅಲ್ಲೇ ಬದುಕು ಕಟ್ಟಿಕೊಂಡ ಜನರಿಗೆ ಸಹಜ ಬದುಕಿನ ಪ್ರಾಥಮಿಕ ತಿಳಿವಳಿಕೆಯೂ ಇಲ್ಲದ ಪ್ರಯುಕ್ತ ಕಂಡಕಂಡವರ ಮೊರೆ ಹೋಗಿ, ಭ್ರಮಿಷ್ಟರಂತೆ ವರ್ತಿಸುತ್ತಿರುವುದರ ಬಗೆಗೆ ಕನಿಕರವಾಗುತ್ತದೆ. ಮಾಧ್ಯಮಗಳಲ್ಲಿ ಜೋತಿಷಿಗಳು ಹೇಳುವುದನ್ನು ನಂಬಬೇಕೋ ಅಥವಾ ನರ್ಸಿಂಗ್ ಹೋಮುಗಳು ಹೇಳುವುದನ್ನು ನಂಬಬೇಕೋ ಗೊತ್ತಾಗದೆ ಮನಸ್ಸುಗಳು ಗೊಂದಲದ ಗೂಡಾಗಿವೆ. ಮನಸ್ಸು ಹಾಳಾಗಲಿ, ದೇಹಾರೋಗ್ಯವನ್ನಾದರು ಕಾಪಾಡಿಕೊಳ್ಳೋಣವೆಂದು ಬಹುತೇಕರು ಈಗ ಬೆಳಗಿನ ಜಾವ ವಿಶೇಷ ದಿರಿಸಿನಲ್ಲಿ ವಾಕರುಗಳೋ ಜಾಗರುಗಳೊ ಆಗಿ ಕಾಣಿಸಿಕೊಳ್ಳುವುದು ಬಡಾವಣೆಗಳಲ್ಲಿ ಸಾಮಾನ್ಯ ದೃಶ್ಯ.

ವಯಸ್ಸಾದ ಕೈಲಾಗದವರು ಹತ್ತಿರದ ಪಾರ್ಕಿನ ಕಲ್ಲು ಬೆಂಚನ್ನು ಆಶ್ರಯಿಸಿ ನಡೆದಾಡುವ ನಾನಾ ನಮೂನೆ ಜನರನ್ನು ನೋಡುತ್ತಲೇ ತಮ್ಮ ಕಳೆದ ಬದುಕಿನ ನೆನಪುಗಳನ್ನು ಮೆಲುಕುತ್ತ ಹವಾ ಸೇವನೆಯಲ್ಲಿ ತೊಡಗಿರುತ್ತಾರೆ.

ಅಂಥದೇ ಪ್ರತಿಷ್ಠಿತ ಬಡಾವಣೆಗೆ ಲಗತ್ತಾಗಿದ್ದ ಮೈದಾನದಲ್ಲಿ ಸೂರ್ಯೋದಯಕ್ಕೆ ಮೊದಲು ಮಧ್ಯವಯಸ್ಸಿನ ಐಪಿಎಸ್ ಅಧಿಕಾರಿಯೊಬ್ಬರು ಸಿವಿಲ್ ದಿರಿಸಿನಲ್ಲಿ ಪತ್ನಿ ಸಮೇತ ಹಾಜರಾಗುತ್ತಿದ್ದರು. ಹಾಳು ಬಿದ್ದ ಮೈದಾನವೆಂದ ಮೇಲೆ ಮೂಲೆಯಲ್ಲಿ ಕಸದ ತಿಪ್ಪೆಗಳೂ; ಬೀದಿ ನಾಯಿಗಳೂ ಮಲಗಿರುತ್ತಿದ್ದವು. ಮೈದಾನದ ಒಂದು ಮೂಲೆಯಲ್ಲಿ ದಂಪತಿಯ ಪ್ರವೇಶವಾಗುತ್ತಿದ್ದಂತೆ ಪೋಲಿಸ್ ಅಧಿಕಾರಿ ಮೈ ಸೆಟೆಸಿ ಕುಕ್ಕೋಟ ***(brisk walk)*** ತೊಡಗಿದರೆ; ಆತನ ಪತ್ನಿ ಗಂಡನನ್ನು ಅನುಸರಿಸಲಾಗದೆ, ತನ್ನದೇ ಆದ ಶೈಲಿಯಲ್ಲಿ, ಇದೀಗ ಮಲಗುವ ಕೋಣೆಯಿಂದ ಹೊರ ಬಿದ್ದು ಪಾಯಖಾನೆಗೆ ಹೊರಟಾಕೆಯಂತೇ ಥೇಟು.

ಶಾಲು ಸುತ್ತಿದ್ದ ಮೈಯಲ್ಲಿ ಅವಸರವಸರವಾಗಿ, ದಡಕ್ಕನೇ ಮೈದಾನಕ್ಕಿಳಿಯುತ್ತಿದ್ದಂತೆ, ಹತ್ತಿರದಲ್ಲಿಯೇ ನಿರ್ವಿಕಾರವಾಗಿ ಮಲಗಿದ್ದ ಬೀದಿನಾಯಿ ಗಾಬರಿಯಿಂದ ದಿಗ್ಗನೇ ಎದ್ದು ವಿಕಾರವಾಗಿ ಅರಚಿಕೊಂಡು ಅಷ್ಟು ದೂರಕ್ಕೆ ಓಡಿತ್ತು, ತನ್ನ ನಿದ್ರಾ ಸಮಾಧಿಗೆ ಭಂಗ ಒದಗಿದಂತೆ. ಅಧಿಕಾರಿ ಒಂದು ಕ್ಷಣ ನಿಂತು ನೋಡಿ ಮುಗುಳ್ನಕ್ಕು, ಮುಂದೆ ನಡೆದಿದ್ದರು. ಈಕೆ ತನ್ನ ಕಾಲಿನ ಗಾತ್ರಕ್ಕಿಂತ ದೊಡ್ಡವಿದ್ದ ಹವಾಯಿ ಚಪ್ಪಲಿಗಳನ್ನು ಸರಬರ ಎಂದು ಎಳೆದುಕೊಂಡು, ಸಶಬ್ದವಾಗಿ ನಡೆಯುತ್ತ ಕೈಗಳನ್ನು ಬೇರೆ ಬೇರೆ ದಿಕ್ಕಿಗೆ ಬೀಸುತ್ತಾ ತೊಗಲು ಗೊಂಬೆಯ ತರಹ ನಡೆಯುವ ಆಕೆಯ ಭಂಗಿಯೇ ನಿಂತು ನೋಡುವಂತಿತ್ತು. ಪೋಲಿಸು ಅಧಿಕಾರಿಯನ್ನು ಕಟ್ಟಿಕೊಂಡದ್ದಕ್ಕೆ ಇದು ತನಗೆ ಬೆಳಗಿನ ಹೊತ್ತಿನ ಬಿಡದ ಕರ್ಮವೇನೋ ಅನ್ನುವ ಮುಖಭಾವದಲ್ಲಿ; ಮಜ್ಜಿಗೆ ಕಡೆಯುವವರು ದೇಹವನ್ನು ಅಲ್ಲಾಡಿಸುವ ತೆರದಲ್ಲಿಯೇ ಆಕೆಯ ಆ ವಿಚಿತ್ರ ನಡಿಗೆ ನೋಡುಗರು ಕಣ್ಣು ಕೀಲಿಸುವಂತಿತ್ತು.

ಹೀಗೇ ಬರೆಯುತ್ತ ಹೋದರೆ, ಒಬ್ಬೊಬ್ಬರ ನಡಿಗೆಯೂ ಒಂದೊಂದು ಅಧ್ಯಾಯವಾದೀತು. ಅವಿಭಕ್ತ ಕುಟುಂಬ ಒಡೆದು ಚೂರು ಚೂರಾಗಿ, ನಾನು ನನ್ನ ಹೆಂಡತಿ ಹಾಗೂ ಮಗು ಇಷ್ಟಕ್ಕೇ ಸೀಮಿತವಾದ ಇವತ್ತಿನ ಸಂಕುಚಿತ ಬುದ್ಧಿಯ ಸಂಸಾರಗಳು ಹೊಸ ಸವಾಲುಗಳನ್ನೂ ಸಮಸ್ಯೆಗಳನ್ನೂ ಎದುರಿಸಬೇಕಾಗಿ ಬಂದದ್ದು ಅನಿವಾರ್ಯ. ಇತ್ತೀಚಿನ ದಿನಗಳಲ್ಲಿ ದುಡ್ಡಿನ ಬೆನ್ನು ಹತ್ತಿದ ನಮ್ಮ ಯುವ ಜನಾಂಗ, ದುಡ್ಡೊಂದು ಇದ್ದರೆ ಎಲ್ಲ ಕೊಳ್ಳಬಹುದೆಂಬ ಕೊಳ್ಳುಬಾಕರಾಗಿ, ದುಡ್ಡೇ ಬದುಕಿಗೆ ಪೂರ್ಣ ಪರಿಹಾರವೆಂಬ ಭ್ರಮೆಯಲ್ಲಿ ಬಿದ್ದಿದೆ. ಅದರಿಂದಾಗಿ ತಮ್ಮ ಮನೆಯೊಳಗೆ ಅನುಭವಸ್ಥ ಹಿರಿಯರ ಮಾರ್ಗದರ್ಶನದಿಂದ ವಂಚಿತವಾಗಿದೆ. ದೇಹ-ಮನಸ್ಸುಗಳು ಸ್ವಸ್ಥವಾಗಿರಲು ಅಗತ್ಯವಾದ ಸಂಗತಿಗಳ ಪ್ರಾಥಮಿಕ ಪಾಠವೂ ಇಲ್ಲದೆ ದಿಕ್ಕು ತಪ್ಪುತ್ತಿರುವುದನ್ನು ಆಗಲೇ ಕಾಣುತ್ತಿದ್ದೇವೆ.

ಮಧ್ಯಮವರ್ಗದವರೇ ಮುಂಗಡ ಬುಕ್ಕಿಂಗ್ ಮಾಡಿಸಿ ಪ್ರಯಾಣಿಸುವ ಎರಡನೇ ದರ್ಜೆಯ ರೈಲು ಬೋಗಿಯಲ್ಲಿ ಕಂಡ ದೃಶ್ಯ. ಓಡುತ್ತಿದ್ದ ರೈಲಿನಲ್ಲಿ ರಾತ್ರಿಯಿಡಿ ಪ್ರಯಾಣಿಸಿ,

ಬೆಳಕು ಹರಿದಾಗ ಕಣ್ಣು ಬಿಟ್ಟು ಕೆಳಗೆ ನೋಡಿದೆ. ತಮ್ಮ ಆರು ವರ್ಷದ ಮಗನನ್ನು ಕೂರಿಸಿ, ದಂಪತಿಗಳು ತಮ್ಮ ಶೌಚಾಚಮನಕ್ಕೆ ತೆರಳಿದ್ದರೆಂದು ತೋರುತ್ತದೆ. ಆಸನದಲ್ಲಿ ದೇವರಂತೆ ಕೂತಿದ್ದ ಮಗುವಿನ ಮುಂದೆ ಎರಡು ಅಡಿ ದೂರದಲ್ಲಿ ಸೇಬನ್ನು ಇರಿಸಲಾಗಿತ್ತು. ಮಗು ಬಾಗಿ ಬಾಗಿ ಸೇಬಿಗೆ ಕೈ ಹಾಕುತ್ತದೆ, ಒಂದೂವರೆ ಅಡಿಯಷ್ಟು ದೂರ ಸವರಿ, ಸೇಬು ಎಟುಕದೆ, ನಿರಾಶೆಯಿಂದ ಕಣ್ಣು ಉಜ್ಜಿಕೊಳ್ಳುತ್ತಿದೆ. ನನಗದು ವಿಚಿತ್ರವಾಗಿ ತೋರಿದರೂ ಏನೋ ಸಮಸ್ಯೆಯಿರಬೇಕೆಂದು ಸಂದೇಹ ಮೂಡಿತ್ತು.


ಐದಾರು ನಿಮಿಷಗಳಲ್ಲಿ ಮರಳಿದ್ದ ಆತನ ತಾಯಿ, ಪ್ಲಾಸ್ಟಿಕ್ ಪಾತ್ರೆಯನ್ನು ಮಗುವಿನ ಗದ್ದದ ಕೆಳಗೆ ಹಿಡಿದು, ಬ್ರಶ್‌ನಿಂದ ಹಲ್ಲುಜ್ಜಿ, ಮುಖಕ್ಕೆ ನೀರು ಚಿಮುಕಿಸಿ, ಆಸ್ಪತ್ರೆಯಲ್ಲಿ ಮಾಡುತ್ತಾರಲ್ಲ ಹಾಗೆ ಮುಖ ತೊಳೆದು, ತನ್ನ ವ್ಯಾನಿಟಿ ಬ್ಯಾಗಿನಲ್ಲಿದ್ದ ದಪ್ಪ ಕನ್ನಡಕ ತೆಗೆದು ಮೂಗಿನ ಮೇಲೆ ಕೂರಿಸಿದಾಗಲೇ, ಆ ಮಗುವಿಗೆ ಬೆಳಕು ಹರಿದಂತಾಗಿ, ಉಲ್ಲಾಸದಿಂದ ಅಷ್ಟು ದೂರದಲ್ಲಿರಿಸಲಾಗಿದ್ದ ಸೇಬಿಗೆ ಸರಿಯಾಗಿ ಕೈಹಾಕಿ ಈಗ ಎತ್ತಿಕೊಂಡಿತ್ತು. ಪುಟಿಯುವ ಚೆಂಡಿನಂತೆ ಜಿಗಿದಾಡಬೇಕಿದ್ದ ಆ ಮಗುವಿಗೆ ಯಾಕೆ ಈ ಶಿಕ್ಷೆ? ಇನ್ನೂ ಹದಿವಯಸ್ಸೂ ತಲುಪದ ಎಳೆಯ ಜೀವ, ಹೀಗೆ ತಾಯಿಯನ್ನೇ ಆಶ್ರಯಿಸಿ ಮುದುಕನಂತೆ ಅಲ್ಲಾಡದೆ ಕೂತಿದ್ದು ನನಗೆ ಕನಿಕರ ಹುಟ್ಟಿಸಿತ್ತು. ಎರಡೂವರೆ ದಿನಗಳ ದೀರ್ಘ ಪ್ರಯಾಣದಲ್ಲಿ ದಂಪತಿ ಆಪ್ತವಾಗಿ ಹೋಗಿ, ಅವರ ಮಾತುಕತೆಯಿಂದ ಕೊನೆಗೆ ತಿಳಿದು ಬಂದದ್ದು – ಮಗುವಿನ ಆ ತೆರನಾದ ಅಸಮರ್ಪಕ ಹುಟ್ಟಿಗೆ ಅವರೇ ಕಾರಣವಂತೆ. ಒಂದು ತೆರನಾದ ಸ್ವಯಂಕೃತ ಅಪರಾಧವೇ ಸೈ.

ನನಗೆ ಗೊತ್ತಿರುವ ವೈದ್ಯ ದಂಪತಿಗೆ ಹುಟ್ಟಿದ ಮಗನದು ಇನ್ನೊಂದು ಸಮಸ್ಯೆ. ಹತ್ತು ವರ್ಷಕ್ಕೆ ಐವತ್ತು ಕೆಜಿ ತೂಗುವ, ಹಿಟ್ಟಿನ ಮೂಟೆಯಂತಿರುವ ಹುಡುಗ. ಮನೆಗೆ ಹೋದರೆ ಮೂರೂ ಹೊತ್ತು ಟಿವಿ ಮುಂದೆ; ಇಲ್ಲಾ ಕಂಪ್ಯೂಟರಿನ ಮುಂದೆ ಕೂತಿರುತ್ತಾನೆ. ಗೆಳೆಯರಂತೂ ಮೊದಲೇ ಇಲ್ಲ, ದೈಹಿಕ ಚಟುವಟಿಕೆಯೇ ಸೊನ್ನೆ. ಬೇಸತ್ತ ದಂಪತಿಗಳು ಸಾವಿರಾರು ರೂಪಾಯಿ ಖರ್ಚು ಮಾಡಿ, ಕಾಲಿಗೆ ದುಬಾರಿ ಷೂ, ಜಾಗ್ಗಿಂಗ್ ಸೂಟು, ತಲೆಗೊಂದು ಹ್ಯಾಟು ತೊಡಿಸಿ, ಒಡಕಲು ಮೈಯಿಯ ಅವನನ್ನು ನಿತ್ಯ ಹತ್ತಿರದ ಪಾರ್ಕಿಗೆ ಅಟ್ಟುತ್ತಿದ್ದರು. ಮೊನ್ನೆ ಪಾರ್ಕಿನ ಮೂಲೆಯಲ್ಲಿ ತುದಿಗುಂಡಿಯಲ್ಲಿ ಕುಂತು ಅಪರಿಚಿತ ಸಸಿಯೊಂದರ ತಲೆ ಸವರುತ್ತಿದ್ದುದನ್ನು ಕಂಡೆ.

'ಕೂತು ಅಲ್ಲೇನು ಮಾಡ್ತಾ ಇದ್ದೀಯೋ?'' ಎಂದು ಕೇಳಿದ್ದಕ್ಕೆ

'ಕ್ಯಾಲೊರಿ ಬರ್ನ್ ಮಾಡ್ತಾ ಇದ್ದೀನಿ ಅಂಕೋಲ್!' ಎಂದು ಸಿದ್ಧ ಉತ್ತರ ಕೊಟ್ಟ. ನಮ್ಮ ಮುಂದಿನ ಪೀಳಿಗೆ ಕುಂಡದಲ್ಲೇ ಬೆಳೆಸುವ 'ಬೋನ್ಸಾಯ್' ಮರಗಳಾಗದಂತೆ; ನಮ್ಮ ಮನೆಯೊಳಗಡೆ ಅಲಂಕಾರಕ್ಕಾಗಿ ಸಾಕುವ 'ಅಕ್ವೇರಿಯಂ' – ಗಾಜಿನ ತೊಟ್ಟಿಯಲ್ಲಿ ಕಾತಿಟ್ಟ ಬಣ್ಣದ ಮರಿಮೀನುಗಳಂತೆ ನಮ್ಮ ಮಕ್ಕಳು ಹೋಮ್‌ಸಿಕ್ ಆಗದಂತೆ ನೋಡಿಕೊಳ್ಳಲು ಪರಿಹಾರೋಪಾಯಗಳ ಬಗೆಗೆ ಚಿಂತಿಸುತ್ತ ನಡೆದೆ. ಇನ್ನೂ ಬಗೆಹರಿದಿಲ್ಲ.

ಸುಖ-ಸವಲತ್ತಿನ ಕಾರ್ಕೋಟಕ ವಿಷವೇರಿಸಿಕೊಂಡ ಮೈಮನಸ್ಸುಗಳ ನೋಡಿದರೇನೇ ಅಸಹ್ಯವಾಗುತ್ತದೆ. ಆದರೆ, ಸೋಗಲಾಡಿ ನಾಗರಿಕ ಜಗತ್ತು ನಾಜೂಕಾಗೇ ಅದನ್ನು ಮರೆ ಮಾಚುತ್ತದೆ. ಸದರೀ ಶಾಪಗ್ರಸ್ತ ಮೈ-ಮನಸ್ಸುಗಳನ್ನು ತುಸು ತಹಬಂದಿಗೆ ತೆಗೆದುಕೊಂಡು ಪ್ರತಿಗೊಳಿಸಬೇಕಾಗಿದೆ. ಬಣ್ಣಗೆಟ್ಟ ಆಧುನಿಕ ನಾಗರಿಕ ಜಗತ್ತಿನಲ್ಲಿ, ಅದರ ಅಗತ್ಯವಿರುವುದನ್ನು ಮನಗಂಡೇ ಚಾಣಾಕ್ಷ ಮತಿಗಳು 'ಬದುಕುವ ಕಲೆ ಹೇಳಿ ಕೊಡುತ್ತೇವೆ ಬನ್ನಿರಿ' ಎಂದು ಬೂಸಿ ಬಿಡುತ್ತ, ಯೋಗ-ಧ್ಯಾನ-ಭಜನೆಗಳನ್ನು ಮುಂದೆ ಮಾಡುವ ಮೂಲಕ ದುರ್ಬಲ ಮನಸ್ಸುಗಳಿಗೆ ತಾತ್ಕಾಲಿಕ ನಿಶೆ ಏರುವಂತೆ ಮಾಡಿ ಮೈಯ ಮರೆಸುವ ದಂಧೆಯೂ ಈಗ ಭರಾಟೆಯಿಂದ ನಡೆಯುತ್ತದೆ. ನಾವು ಮನುಷ್ಯರಾಗಿ ಹುಟ್ಟಿದ್ದೇ 'ಒಂದು ಮಹಾಯೋಗ' ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿದೆ. ಈಗ ಏನಿದ್ದರೂ, ಬದುಕು ಎಲ್ಲಿ ಹದ ತಪ್ಪು ತ್ತಿದೆಯೆನ್ನುವುದನ್ನು ಪತ್ತೆ ಹಚ್ಚುವ ಪೆಥಾಲಜಿಸ್ಟರ ಅಗತ್ಯವಿದೆ. ಹೌದು 'ಗಾಳಿ ತಿನ್ನಬೇಕು.' ಹಾಗಾದರೆ ಶುದ್ಧಗಾಳಿಗಾಗಿ ಹಂಬಲಿಸಬೇಕಲ್ಲವೆ?



ನಮ್ಮ ಮನೆಯ ಸೀಸರ್

• ಬಿ.ಜಿ. ರುದ್ರಪ್ಪ

ಸಾಮಾನ್ಯವಾಗಿ ಎಲ್ಲರೂ ತಮ್ಮ ಸಂಸಾರದಲ್ಲಿ ಒಂದು ನಾಯಿಯಿರಲು ಇಷ್ಟಪಡುತ್ತಾರೆ. ಮೊದಲನೆಯದಾಗಿ ಅದು ಮನೆ ಕಾಯುತ್ತದೆ. ಎರಡನೆಯದಾಗಿ ಎಂತಹ ಸಮಯದಲ್ಲೂ ಅದರ ನಿಷ್ಕಳಂಕ ಪ್ರೀತಿ ಸಿಗುತ್ತದೆ. ನಾನೂ ಕೂಡ ಈ ಗುಂಪಿಗೆ ಸೇರಿದವನು. ಸಂಸಾರ ಪ್ರಾರಂಭಿಸಿದ ಮೊದಲಲ್ಲಿ ಒಂದು ಔಟ್‌ಹೌಸ್‌ನಲ್ಲಿ ವಾಸಿಸುತ್ತಿದ್ದುದರಿಂದ, ನಾಯಿ ಸಾಕುವ ಯೋಗವಿರಲಿಲ್ಲ.

ಜಯನಗರದಲ್ಲಿ ಸ್ವಂತ ಮನೆ ಕಟ್ಟಿದ್ದು ಸುಮಾರು ನಾಲ್ಕು ದಶಕಗಳ ಹಿಂದೆ. ಆಗ ಮನೆಗಳಿಗಿಂತ ಖಾಲಿ ಸೈಟುಗಳೇ ಜಾಸ್ತಿ. ಹೊಸಮನೆಗೆ ಸೇರಿಕೊಂಡ ಕೆಲ ವರ್ಷಗಳವರೆವಿಗೂ ಹಿಂದೆ ಮುಂದೆ ಅಕ್ಕಪಕ್ಕದಲ್ಲಿ ಮನೆಗಳೇ ಇರಲಿಲ್ಲ. ಆದುದರಿಂದ ಒಂದು ನಾಯಿಯ ಅವಶ್ಯಕತೆ ಇತ್ತು. ಒಳ್ಳೆಯ ಜಾತಿಯ ನಾಯಿಯನ್ನು ಕೊಳ್ಳಬೇಕೇ ಅಥವಾ ಕಂತ್ರಿ ನಾಯಿ ಸಾಕೆ ಎಂಬ ಜಿಜ್ಞಾಸೆ. ಜಾತಿ ನಾಯಿ ಕೊಂಡರೆ, ಅದಕ್ಕೆ ಹಾರ್ಟ್ ಟ್ರಬಲ್. ಕಿಡ್ನಿ ಫೈಲ್ಯೂರು ಇತ್ಯಾದಿ ಕಾಯಿಲೆಗಳು ಬರುವ ಸಂಭವ ಜಾಸ್ತಿ. ಅದು ನಮ್ಮ ಮನೆ ಕಾಯುವ ಬದಲು, ಅದನ್ನು ನೋಡಿಕೊಳ್ಳುವ ಇನ್ನೊಂದು ರೀತಿಯ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಕಂತ್ರಿ ನಾಯಿಯನ್ನು ಸಾಕಿದರೆ ಅತಿಯಾಗಿ ಬೊಗಳುವುದು, ಹೇಸಿಗೆ ತಿನ್ನುವುದು ಇತ್ಯಾದಿ, ಕೊನೆಗೆ (ಸೆಮಿ) ಅರ್ಧ ಜಾತಿ ನಾಯಿ ಮನೆಗೆ ತರುವುದೆಂದು ನಿರ್ಣಯಿಸಿದೆ.

ಅದೃಷ್ಟವಶಾತ್ ನನ್ನ ಸ್ನೇಹಿತ ಒಂದು ಸೆಮಿ ಜಾತಿ ನಾಯಿ ತಂದುಕೊಟ್ಟನು. ನನ್ನ ಅಂದಾಜಿನ ಪ್ರಕಾರ ಶೇಕಡ 50ಕ್ಕೂ ಜಾಸ್ತಿ ಲ್ಯಾಬ್ರಡಾರ್ ರಕ್ತವಿತ್ತು. ಒಳ್ಳೆಯ ಕಂದುಬಣ್ಣ ಹೊಳೆಯುವ ಕೂದಲು, ಒಟ್ಟಿನಲ್ಲಿ ಮುದ್ದಾಗಿತ್ತು. ಇನ್ನು ಅದಕ್ಕೆ ಹೆಸರಿಡುವ ಪ್ರಶ್ನೆ ಬಂತು. ಟಾಮಿ, ಜಾನಿ, ಟೈಗರ್, ರಾಮು, ರಾಜ ಇತ್ಯಾದಿ ಹೆಸರುಗಳ ಪಟ್ಟಿ ತಯಾರಾಯಿತು. ಕೊನೆಗೆ ಏಕೋ ಏನೋ ಸೀಸರ್ ಎಂದು ನಾಮಕರಣ ಮಾಡಲಾಯಿತು.

ಪ್ರತಿ ನಾಯಿಗೂ ಒಂದು ವೈಶಿಷ್ಟ್ಯ ಗುಣವಿರುತ್ತದೆ. ಚೆನ್ನಾಗಿ ಡ್ರೆಸ್ ಮಾಡಿಕೊಂಡು ಯಾರು ಬಂದರೂ (ಕಳ್ಳರಾದರೂ ಪರವಾಗಿಲ್ಲ) ಅವರನ್ನು ಸ್ವಾಗತಿಸುತ್ತಿತ್ತು. ಆದರೆ ಭಿಕ್ಷುಕರು ಕೆಲಸಗಾರರ ಉಡುಪು ಧರಿಸಿದವರು ರಸ್ತೆಯಲ್ಲಿ ಹೋಗುತ್ತಿದ್ದರೂ ಕೋಪದಿಂದ ಬೊಗಳುತ್ತಿತ್ತು; ಆಕಸ್ಮಾತ್ ಗೇಟು ತೆಗೆದಿದ್ದರೆ ಅಟ್ಟಿಸಿಕೊಂಡೂ ಹೋಗುತ್ತಿತ್ತು. ಆಗ ಅವರಿಂದ

ನಮಗೆ ಪ್ರೀತಿ. ಅದರ ಇನ್ನೊಂದು ಗುಣವೆಂದರೆ ರಸ್ತೆಯಲ್ಲಿ ಸ್ಕೂಟರ್ ಅಥವಾ ಮೋಟಾರ್ ಬೈಕ್ ಹೋಗುತ್ತಿದ್ದರೆ ಅಟ್ಟಿಸಿಕೊಂಡು ಹೋಗುತ್ತಿತ್ತು. ''ಎಂಥಾ ನಾಯಿ ಸಾಕಿದ್ದೀರಿ, ಅದನ್ನು ರಸ್ತೆಯಲ್ಲಿ ಯಾಕೆ ಬಿಡುತ್ತೀರಾ?'' ಈ ರೀತಿಯ ಬೈಗುಳವನ್ನು ಸಹಿಸಬೇಕಾಗಿತ್ತು.

ಸೀಸರ್‌ಗೆ ಸಂಬಂಧಪಟ್ಟ ಇನ್ನೊಂದು ಅನುಭವವನ್ನು ಮರೆಯುವ ಹಾಗೇ ಇಲ್ಲ. ಆಗ ಜಯನಗರ ಬಹುಪಾಲು ಬಯಲು ಪ್ರದೇಶವಾಗಿತ್ತು. ಹಾವುಗಳ ಕಾಟವಿತ್ತು. ಒಂದು ಸಾಯಂಕಾಲ ಸೀಸರ್ ಅತಿ ರೋಷದಿಂದ ಬೊಗಳುತ್ತಿದೆ. ಆಚೆ ಬಂದು ನೋಡಿದರೆ, ಹಾವನ್ನು ಕಚ್ಚಲು ಪ್ರಯತ್ನಿಸುತ್ತಿದೆ. ಅದು ನಾಗರ ಹಾವು. ಹೆಡೆಯೆತ್ತಿ ಹತ್ತಿರ ಬಂದರೆ ಕಡಿಯುತ್ತೇನೆ ಎಂದು ಸೂಚಿಸುತ್ತಿದೆ. ನನ್ನ ಭಯವೇನೆಂದರೆ, ಸೀಸರ್ ಹಾವನ್ನು ಸಾಯಿಸಿದ್ದರೂ ಅದರ ಕಡಿತದಿಂದ ಇದು ಸಾಯುವುದು ಖಂಡಿತ. ಕಾಲರ್ ಹಿಡಿಯಲು ಹತ್ತಿರ ಹೋದರೆ, ಅದಕ್ಕೆ ಧೈರ್ಯ ಹೆಚ್ಚಾಗಿ ಹಾವಿನ ಹತ್ತಿರ ಹೋಗಲು ಕಾತುರವಾಗುತ್ತಿತ್ತು. ಕೊನೆಗೆ ಸೀಸರನ ಕಾಲರ್ ಹಿಡಿದು ಕಟ್ಟುಹಾಕಿದ್ದಾಯಿತು. ನಾಯಿ ಬದುಕಿತು. ಹಾವು ಸದ್ದಿಲ್ಲದೆ ಯಾವುದೋ ಪೊದೆ ಸೇರಿತು. ಇದಾದ ಕೆಲವು ದಿನಗಳ ನಂತರ ಸೀಸರ್ ಮನೆ ಬಿಟ್ಟುಹೋಗಿದ್ದು ಮತ್ತೆ ಬರಲೇ ಇಲ್ಲ. ಒಳ್ಳೆಯ ಸಂಗಾತಿಯನ್ನು ಕಳೆದುಕೊಂಡೆ.

ಮತ್ತೆರಡು ನಾಯಿಗಳು ಬಂದವು ಕೆಲಕಾಲವಿದ್ದುವು. ಇನ್ನೊಂದು ನಾಯಿಗಾಗಿ ಹುಡುಕಾಟ ಪ್ರಾರಂಭವಾಯಿತು. ನನ್ನ ಸಹೋದ್ಯೋಗಿಯೊಬ್ಬರ ಸಹಾಯ ಕೇಳಿದೆ. ಕೆ.ಇ.ಬಿ.ಯಲ್ಲಿ ಕಂಟೋನ್‌ಮೆಂಟ್ ಏರಿಯಾದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದರು. ಈಗ ಬಿಡಿ. ಕೆ.ಇ.ಬಿ.ಯನ್ನು ತುಕ್ಕಡ ತುಕ್ಕಡ ಮಾಡಿಬಿಟ್ಟಿದ್ದಾರೆ – ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ. ಅದರ ಪರಿಸ್ಥಿತಿಯೇ ಬೇರೆ. ಬೆಸ್ಕಾಂಗೆ ಕಂಪ್ಲೈಂಟ್ ಕೊಟ್ಟರೆ ಬರುವ ಉತ್ತರ ''ನಾವೇನು ಮಾಡುವುದು ಸಬ್ ಸ್ಟೇಷನ್‌ನಲ್ಲಿ ತೊಂದರೆಯಿದೆ. ಕೆಪಿಟಿಸಿಎಲ್ ಅವರನ್ನು ಕೇಳಿ''. ಅವರಿಗೆ ಫೋನ್ ಮಾಡಿದರೆ ಕೆಲವು ಜನರೇಟಿಂಗ್ ಸ್ಟೇಷನ್‌ಗಳಲ್ಲಿ ವಿದ್ಯುತ್ ಉತ್ಪಾದನೆಯಿಲ್ಲ. ವಿದ್ಯುತ್ತನ್ನು ರೇಷನ್ ಮಾಡಬೇಕಾಗಿದೆ. ಇನ್ನು ಉಳಿದಿದ್ದು ಕೆಪಿಸಿಗೋ ಅಥವಾ ಎನ್‌ಟಿಪಿಸಿಗೋ ಮಾತನಾಡಬೇಕು. ವಿಷಯ ಎಲ್ಲಿಗೋ ಹೋಯಿತು ಕ್ಷಮಿಸಿ.

ಕಂಟೋನ್‌ಮೆಂಟ್ ರೈಲ್ವೇ ಸ್ಟೇಷನ್ನಿನ ಹತ್ತಿರ ಒಂದು ವೆಟರಿನರಿ ಆಸ್ಪತ್ರೆ ಇದೆ. ಅಲ್ಲಿ ನಾಯಿಗಳಿಗೆ ಔಷಧಿ ಕೊಡುವುದಲ್ಲದೆ ಯಾರಿಗಾದರೂ ನಾಯಿಯನ್ನು ಕಾರಣಾಂತರಗಳಿಂದ ಸಾಕಲು ಸಾಧ್ಯವಾಗದೇ ಹೋದರೆ ಅದನ್ನು ಕೆಲವು ದಿನಗಳ ಮಟ್ಟಿಗೆ ಇಟ್ಟುಕೊಳ್ಳುವ ವ್ಯವಸ್ಥೆ ಇದೆ. ನಾನು ಆ ಏರಿಯಾದ ಚೆನ್ನಪ್ಪರವರ ಜೊತೆಗೆ ಆಸ್ಪತ್ರೆಗೆ ಹೋದಾಗ ಅಲ್ಲಿ ಕೆಲವು ನಾಯಿಗಳಿದ್ದವು. ಅವುಗಳನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಅವುಗಳು ಕಾಯಿಲೆಯಿಂದ ನರಳುತ್ತಿದ್ದಂತೆ ಕಾಣುತ್ತಿತ್ತು. ಯಾರಾದರೂ ತಮ್ಮನ್ನು ಕರೆದುಕೊಂಡು ಹೋಗುವರೋ ಎಂಬ ಆಸೆ ಇಟ್ಟುಕೊಂಡಂತ್ತಿತ್ತು.

ಒಂದು ಕರಿಯ ನಾಯಿ. ಒಂದು ವರ್ಷ ವಯಸ್ಸಿರಬಹುದು. ದೊಡ್ಡ ಸೈಜು. ಅದರ ದೀನ ನೋಟ ನನ್ನನ್ನು ಆಕರ್ಷಿಸಿತು. ಮೈ ತುಂಬಾ ಚಿಗುಟಗಳಿದ್ದರೂ, ಬೇದಿ ಮಾಡಿಕೊಂಡಿದ್ದರೂ ಅದು ಅಲ್ಲೇ ಇದ್ದು ಕಷ್ಟಪಡುವುದು ನನ್ನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ.

ಯಾರೋ ಸಾಹುಕಾರರು ಪ್ರೀತಿಯಿಂದ ಸಾಕಿದ್ದ ನಾಯಿಯಿರಬೇಕು. ಬೋನಿನಿಂದ ಈಚೆ ಬಂದ ತಕ್ಷಣವೇ ವ್ಯಾನ್‌ನಲ್ಲಿ ಬಂದು ಕುಳಿತುಬಿಟ್ಟಿತು. ನನ್ನನ್ನು ಇಲ್ಲಿ ಬಿಡಬೇಡಿ ಎನ್ನುವ ದೈನ್ಯತೆ ಕಾಣುತ್ತಿತ್ತು ಅದರ ಮುಖದಲ್ಲಿ.

ಸರಿ ನಾಯಿ ಮನೆಗೆ ಬಂತು. ಕಾಯಿಲೆಯಿಂದ ನರಳುತ್ತಿದ್ದ ಕೊಳಕಾಗಿದ್ದ ನಾಯಿಯನ್ನು ಸ್ವಚ್ಛಗೊಳಿಸುವ ಕೆಲಸ ಸ್ವಾಭಾವಿಕವಾಗಿ ಮನೆಯೊಡತಿಗೆ ಬಂತು. ಆಕೆಗೆ ಕೋಪವೂ ಬಂತು. ದುರ್ಭಿಕ್ಷದಲ್ಲಿ ಅಧಿಕಮಾಸವೆಂಬಂತೆ ಆಗ ಮನೆಯಲ್ಲಿ ನೆಂಟರಿದ್ದರು. ಅದಲ್ಲದೆ ನೀರಿನ ಅಭಾವ ಬೇರೆ. ನಾಯಿ ಎಷ್ಟು ಕಷ್ಟದಲ್ಲಿತ್ತೆಂದರೆ, ಅದಕ್ಕೆ ಬೊಗಳುವುದಕ್ಕೂ ಶಕ್ತಿಯಿರಲಿಲ್ಲ. ಹಾಲು ಅನ್ನ ತಿಂದ ಮೇಲೆ ಬೊಗಳಲು ಪ್ರಾರಂಭಿಸಿತು. ಸ್ನಾನವನ್ನು ಸಂತೋಷದಿಂದ ಮಾಡಿಸಿಕೊಂಡಿತು. ಚಿಗುಟಗಳು ಮಾಯವಾದುವು. ತಳತಳ ಹೊಳೆಯುವ ಕಪ್ಪು ಕೂದಲು. ನನ್ನ ಪ್ರಕಾರ ಅದು ಲ್ಯಾಬ್ರಡಾರ್ ಮತ್ತು ಕಾಕರ್ ಸ್ಪ್ಯಾನಿಯಲ್ ಕ್ರಾಸ್ ಇದ್ದಿರಬಹುದು. ಎಲ್ಲರ ಪ್ರೀತಿಯನ್ನು ಸಂಪಾದಿಸಿತು. ಹಿಂದಿನ ಯಜಮಾನ ಏನು ಹೆಸರು ಇಟ್ಟಿದ್ದರೋ ಗೊತ್ತಿಲ್ಲ. ಅದಕ್ಕೆ ಮತ್ತೆ ಸೀಸರ್ ಎಂದು ನಾಮಕರಣವಾಯಿತು. ಅಂತೂ ನಮ್ಮ ಮನೆಯವರಲ್ಲಿ ಒಬ್ಬನಾದ. ನಮ್ಮೆಲ್ಲರ ಜೊತೆಯಲ್ಲಿ ಸಿಟ್ಟಿಂಗ್ ರೂಂ ನಲ್ಲಿ ನೆಲದಮೇಲೆ ಪವಡಿಸುವುದು ಅವನಿಗೆ ತುಂಬಾ ಪ್ರೀತಿ.

ಇವನ ವಿಶಿಷ್ಟ ಗುಣಗಳೆಂದರೆ, ಸೋಮಾರಿತನ ಮತ್ತು ತಿಂಡಿ ಪೋಕತನ. ಮೂರು ಅಥವಾ ನಾಲ್ಕು ರೊಟ್ಟಿ ಮತ್ತು ಹಾಲನ್ನು ಒಂದು ನಿಮಿಷದಲ್ಲಿ ನುಂಗಿಬಿಡುವನು. ಯಾವಾಗಲೂ ಸಾಧುವಾಗಿದ್ದರೂ ತಿಂಡಿಕೊಟ್ಟವರನ್ನೂ ಕೂಡ ತಿನ್ನುವ ಸಮಯದಲ್ಲಿ ಹತ್ತಿರ ಸೇರಿಸುತ್ತಿರಲಿಲ್ಲ. ನಾಯಿಗಳಿಗೆ ಸಿಹಿ ಪದಾರ್ಥ ಅಷ್ಟೇನೂ ಇಷ್ಟವಿರುವುದಿಲ್ಲ. ಆದರೆ ಸೀಸರ್‌ಗೆ ಅದರ ಮೇಲೆ ತುಂಬಾ ಪ್ರೀತಿ. ಯುಗಾದಿ ಹಬ್ಬ ಅಂತ ಜ್ಞಾಪಕ. ಮನೆಯೊಡತಿ ಕಷ್ಟಪಟ್ಟು ಹತ್ತಿಪ್ಪತ್ತು ಒಬ್ಬಟ್ಟು ಮಾಡಿಟ್ಟಿದ್ದಳು. ಅಡಿಗೆ ಮನೆಯೊಳಗೆ ಅವನಿಗೆ ಬರಲು ಅಪ್ಪಣೆ ಇಲ್ಲದೆ ಹೋದರೂ ಕೂಡ ಒಳಕ್ಕೆ ನುಗ್ಗಿ ಮುಕ್ಕಾಲು ಭಾಗ ಒಬ್ಬಟ್ಟನ್ನೆಲ್ಲಾ ಮುಗಿಸಿತ್ತು. ಒದೆ ಬಿತ್ತು. ತಾನು ತಪ್ಪು ಮಾಡಿದೆನೆಂದು ಅವನಿಗೆ ಗೊತ್ತಿತ್ತು.

ನಮ್ಮ ಸ್ನೇಹಿತ ರೆಡ್ಡಿ ನಮ್ಮ ಮನೆಗೆ ಬಂದಾಗ ಸೀಸರಿಗಾಗಿ ಮಾಂಸವನ್ನು ತರುತ್ತಿದ್ದನು. ಆತ ಬಂದಾಗ ಸೀಸರ್ ಗ್ಯಾರೇಜಿನ ಸೂರಿನ ಮೇಲೆ ಕುಳಿತಿದ್ದ. ಮಾಂಸವನ್ನು ಕಂಡ ಕೂಡಲೇ ಅಲ್ಲಿಂದ ನೇರವಾಗಿ ನೆಲಕ್ಕೆ ಹಾರಿದ. ಮಾಂಸದ ಮೇಲೆ ಕೂಡ ವಿಪರೀತ ಆಸೆ. ಸದ್ಯಕ್ಕೆ ಅವನ ಕಾಲುಗಳು ಮುರಿಯಲಿಲ್ಲ. ಇಲ್ಲದೇ ಹೋದರೆ ಆಸ್ಪತ್ರೆಗೆ ಅಲೆಯಬೇಕಾಗಿತ್ತು.

ಇನ್ನು ಅವನ ಸೋಮಾರಿತನಕ್ಕೆ ಒಂದು ನಿದರ್ಶನ. ನಾವು ಸೆಕೆಂಡ್ ಶೋ ಸಿನಿಮಾ ನೋಡಿಕೊಂಡು ಬಂದಾಗ ಅವನಿಗೆ ಎಚ್ಚರವಿರುತ್ತಿರಲಿಲ್ಲ. ಎಷ್ಟೋ ಹೊತ್ತಿನ ಮೇಲೆ ಎದ್ದು ಬಾಲ ಅಲ್ಲಾಡಿಸುತ್ತಾ ಬರುವನು. ನಾನು ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದುದು "ರಾತ್ರಿ ಕಳ್ಳರು ಬಂದರೆ, ಬೊಗಳಿ ಹೆದರಿಸಿ ಓಡಿಸುತ್ತಾನೆ. ಆದರೆ ಅವನನ್ನು ನಾವು ಎಬ್ಬಿಸಬೇಕು ಅಷ್ಟೇ."

ಆದರೆ ಆಫೀಸಿನಿಂದ ಸುಸ್ತಾಗಿ ಬಂದಾಗ ಅವನು ತೋರಿಸುತ್ತಿದ್ದ ನಿಷ್ಕಳಂಕ ಪ್ರೀತಿ ಆ

ದಿನದ ಅಹಿತಕರ ವಿಷಯಗಳನ್ನೆಲ್ಲಾ ಮರೆಯುವಂತೆ ಮಾಡುತ್ತಿತ್ತು. ದೀಪಾವಳಿಯ ಪಟಾಕಿ ಶಬ್ದ ಅವನಿಗೆ ವಿಪರೀತ ಭಯ ಹುಟ್ಟಿಸುತ್ತಿತ್ತು. ಆ ಮೂರು ದಿನಗಳು ಮಂಚದ ಕೆಳಗೆ ಅವಿತುಕೊಳ್ಳುತ್ತಿದ್ದ. ತಿಂಡಿಯೂ ಬೇಡವಾಗಿತ್ತು.

ಒಂದು ದೀಪಾವಳಿಯಲ್ಲಿ ಯಾಕೋ ಏನೋ ಮನೆ ಬಿಟ್ಟು ಓಡಿದ. ಹಿಂದಿರುಗಿ ಬರುವ ದಾರಿ ಗೊತ್ತಾಗಲಿಲ್ಲವೋ ಅಥವಾ ಯಾರಾದರೂ ಕಟ್ಟಿಹಾಕಿಕೊಂಡರೋ ತಿಳಿಯದು. ಅವನು ಬರಲೇ ಇಲ್ಲ. ನನ್ನ ಮಗಳು ನಂದಿನಿಗೆ ಅವನ ಮೇಲೆ ತುಂಬಾ ಪ್ರೀತಿ. ಅವಳ ದುಃಖವನ್ನು ನೋಡಲಾಗುತ್ತಿರಲಿಲ್ಲ. ದಾರಿಯಲ್ಲಿ ಎಲ್ಲಿ ಕರಿಯ ನಾಯಿ ಕಂಡರೆ ಅದು ಸೀಸರ್ ಎಂಬ ಭ್ರಮೆ ಅವಳಿಗೆ.

ಸುಮಾರು ನಾಲ್ಕು ತಿಂಗಳ ನಂತರ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮೂರ್ತಿ, ನಮ್ಮ ಮನೆಯ ಹತ್ತಿರವಿರುವ ಬೈರಸಂದ್ರದಲ್ಲಿ ಯಾರೋ ಒಬ್ಬರು ಇಟ್ಟುಕೊಂಡಿರುವ ನಾಯಿ ಸೀಸರ್ ತರಹ ಇದೆ ಎಂದು ತಿಳಿಸಿದ. ತಕ್ಷಣವೇ ಅಲ್ಲಿ ಹೋದಾಗ ಅದು ನಮ್ಮ ಸೀಸರ್ ಎಂದು ಖಚಿತವಾಯಿತು. ಸೀಸರ್ ಸಿಕ್ಕ ಸಂತೋಷಕ್ಕೆ ಅವನಿಗೆ ನಾನೂರು ರೂಪಾಯಿ ಕೊಟ್ಟೆ. ಅವನಿಗೆ ಆಸೆ ಜಾಸ್ತಿ. ಇಷ್ಟು ದಿವಸ ಊಟ ಹಾಕಿದ ಖರ್ಚನ್ನು ಕೊಡಬೇಕೆಂದು ಮತ್ತೆ ಇನ್ನೂರು ರೂಪಾಯಿ ಕೊಟ್ಟೆ. ಮನೆಯವರೆಲ್ಲರೂ ಅದರಲ್ಲಿ ನಂದಿನಿ ಪಟ್ಟ ಸಂತೋಷ ಅಷ್ಟಿಷ್ಟಲ್ಲ.

ಕಾಲ ಕಳೆದಂತೆ ಸೀಸರಿಗೂ ವಯಸ್ಸಾಯಿತು. ಅವನಿಗೆ ಉತ್ಸಾಹ ಕಮ್ಮಿಯಾಯಿತು. ಕೊನೆಗೆ ನಮ್ಮನ್ನು ಬಿಟ್ಟು ಹೋಗುತ್ತಿರುವೆನೆಂದು ಕಣ್ಣಲ್ಲೇ ತಿಳಿಸಿ ಪ್ರಾಣ ಬಿಟ್ಟನು. ನಮ್ಮ ಮನೆಯ ಹಿತ್ತಲಲ್ಲೇ ಅವನ ಸಮಾಧಿಯಾಯಿತು. ಅಲ್ಲಿಯೇ ಬಾಳೆಯ ಗಿಡವನ್ನು ಹಾಕಿದ್ದೇವೆ. ಇವನ ದೇಹ ಆ ಗಿಡಕ್ಕೆ ಪೋಷಣೆ ನೀಡುತ್ತಿದೆ. ಒಳ್ಳೆಯ ಬಾಳೆಗೊನೆ ಕೂಡ ನಮಗೆ ದೊರಕಿದೆ.

ಈಗಲೂ ಮನೆಯಲ್ಲಿ ಇನ್ನೊಂದು ನಾಯಿಯನ್ನು ಸಾಕುವ ಆಸೆ. ಆದರೆ ನಮಗೆ ಸ್ವಲ್ಪ ವಯಸ್ಸಾಗಿದೆ. ನೋಡಿಕೊಳ್ಳುವುದು ಕಷ್ಟ ನಮ್ಮಾಕೆ ಹೇಳಿದಳು ''ಮನೆಯಲ್ಲಿ ನಾನಿರಬೇಕು ಇಲ್ಲವೇ ನಾಯಿ ಇರಬೇಕು'' ಅವಳಿಗೆ ನಾಯಿಯ ಮೆಲೆ ಇಷ್ಟವಿಲ್ಲವೆಂತಲ್ಲ. ಆಕೆಯೂ ಸೀಸರನ್ನು ತುಂಬಾ ಪ್ರೀತಿಸುತ್ತಿದ್ದಳು. ಸೀಸರಿನ ನೆನಪು ನಮ್ಮಲ್ಲಿ ಹಾಗೇ ಉಳಿದಿದೆ.

ಬಾಪ್ಪೂ ಶಾಂಪು
ಕೊಳ್ಳುವರಿಲ್ಲ
ಮುಚ್ಚಬೇಕು ಶಾಪು

- ಎನ್. ಪ್ರಕಾಶ್

ಹರಾಜಿನಲ್ಲಿ ಹಾಸ್ಯ ಲೇಖಕರು

• ಸುಶ್ರುತ

ಅಯ್ಯೋಪಾಪ! ಹಾಗಾಗಬಾರದಾಗಿತ್ತು ಎಂದು ಯಾರೇನೂ ಮರುಕಪಡಬೇಕಾಗಿಲ್ಲ. ಇದು ಹೊಟ್ಟೆಕಿಚ್ಚು ಪಟ್ಟುಕೊಳ್ಳುವ ಸಮಾಚಾರ. ಮೊನ್ನೆ ಬೆಂಗಳೂರಿನ ಹೊರವಲಯದ ಹಾಲಿಡೇ ರಿಸಾರ್ಟ್‌ನಲ್ಲಿ ಕನ್ನಡದ ಹೆಸರಾಂತ ಹಾಸ್ಯಸಾಹಿತಿಗಳು ನಂಬಲಾರದ ಮೊತ್ತಕ್ಕೆ ಮಾರಾಟವಾದರು. ಅವರುಗಳ ಪೈಕಿ ಪೂರ್ವ, ಪೂರ್ವೋತ್ತರ, ಐಲಿತ ಹಾಗೂ ಬಂಡಾಯ ಪಂಗಡಕ್ಕೆ ಸೇರಿದ ವಿವಿಧ ವಯೋಮಾನದ ಸಾಹಿತಿಗಳು ಬಿಕರಿಯಾದರು. ಹರಾಜಿನಲ್ಲಿ ಪ್ರತಿಷ್ಠಿತ ಪತ್ರಿಕಾ ಮಾಲಿಕರು, ದೊಡ್ಡ ದೊಡ್ಡ ಉದ್ಯಮಿಗಳು ಚಾನೆಲ್ ಒಡೆಯರು ಭಾಗವಹಿಸಿ ಹಾಸ್ಯಸಾಹಿತ್ಯಕ್ಕೆ ದೊಡ್ಡ ಬೆಲೆ ಕಟ್ಟಿದರು ಈ ಟಿ.ವಿ.ಯ ರಾಮೋಜಿರಾವ್ ಜೀ ಟಿ.ವಿ.ಯ ಕಾರ್ಯನಿರ್ವಾಹಕರು, ಉದಯ ಟಿ.ವಿ.ಯ ಕ್ರಿಯೆಟಿವ್ ನಿರ್ದೇಶಕರು, ದಿ ಪ್ರಿಂಟರ್ಸ್ (ಮೈಸೂರು) ಮಾಲಿಕರು ಟೈಂಸ್ ಗ್ರೂಪಿನ ಸ್ಥಳೀಯ ಸಂಪಾದಕರು, ಸಪ್ನ ಬುಕ್ ಹೌಸಿನ '5' ಸೋದರರು ಅಪರಂಜಿ ಶಿವು ಪಾಲ್ಗೊಂಡಿದ್ದರು. ಸಮಯ ಪ್ರಜ್ಞೆಗೂ ಹಾಸ್ಯಪ್ರಜ್ಞೆಗೂ ಇರುವ ಅವಿನಾಭಾವ ಸಂಬಂಧದಿಂದಲೋ ಏನೋ ಹರಾಜಿನ ಪ್ರಕ್ರಿಯೆ ಬಹಳ ಅಚ್ಚುಕಟ್ಟಾಗಿ, ನಿಗದಿಯಾದ ನಿಮಿಷಕ್ಕೆ ಸರಿಯಾಗಿ ಪ್ರಾರಂಭವಾಯಿತು. ಹರಾಜಿಗೆ ಒಂದು ನಿಮಿಷ ತಡವಾಗಿ ಬಂದ ಖ್ಯಾತ ಉದ್ಯಮಿ ಮಲ್ಯರವರನ್ನು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಿಲ್ಲವಂತೆ ಇದರಿಂದ ಯಾರಿಗೇನು ಬೇಜಾರಾಗದಿದ್ದರೂ ಸಾಹಿತಿ ಕೃಷ್ಣ ಸುಬ್ಬರಾಯರಿಗೆ ಸ್ವಲ್ಪ ವೈಯಕ್ತಿಕ ನಷ್ಟವಾಯಿತೆಂದು ಅಸಮಾಧಾನವಾಯಿತಂತೆ. ಅದಕ್ಕೆ ಮುಖ್ಯ ಕಾರಣ ಮಲ್ಯರವರು ಆ ಸಾಹಿತಿಯನ್ನು ಕೊಂಡುಕೊಳ್ಳುವರೆಂಬ ಸುದ್ದಿ ಇತ್ತಂತೆ.

ಹರಾಜಿನಲ್ಲಿ ಆರು ಸಾಹಿತಿಗಳನ್ನು ಒಟ್ಟು 1.75 ಕೋಟಿ ರೂಪಾಯಿಗಳನ್ನು ಕೊಟ್ಟು ಕೊಂಡರಂತೆ. ಅ.ರಾ.ಸೇ., ಬೇಲೂರು, ಸೂರಿ, ಕುಮುದಾ ಪುರುಷೋತ್ತಮ್, ಗೌತಮ ಹಾಗೂ ತುರುವೇಕೆರೆ ಪ್ರಸಾದ್ ಅವರುಗಳನ್ನು ದಿ ಪ್ರಿಂಟರ್ಸ್ (ಮೈಸೂರು) ಟೈಂಸ್ ಆಫ್ ಇಂಡಿಯಾ, ಸಪ್ನ ಬುಕ್ ಹೌಸ್, ಜೀ ಟಿ.ವಿ., ಈ ಟಿ.ವಿ., ಹಾಗೂ ಉದಯ ಟಿ.ವಿ. ಬಿಕರಿ ಮಾಡಿದರಂತೆ.

ಹಾಸ್ಯದ ಹರಾಜಿನಲ್ಲಿ ಸ್ವಾರಸ್ಯಕರವಾದ ಘಟನೆಯೊಂದು ಜರಗಿತು. ಮುಂಬೈ ಮೂಲಕದ ಮಹಿಳಾ ವಾಣಿಯಾದ ಪತ್ರಿಕಾ ಸಮೂಹದವರು ಹರಾಜಿನಲ್ಲಿ ಭಾಗವಹಿಸುವಾಗ ಕನ್ನಡದ ಹೆಸರಾಂತ ಹಾಸ್ಯ ಸಾಹಿತಿ 'ಪ್ರಭಾ'ರರನ್ನು ಬಿಡ್ ಮಾಡಿದಾಗ ದೈತ್ಯಾಕಾರದ ಗೋಪಾಲಕೃಷ್ಣ ಎದ್ದು ನಿಂತಾಗ ಸಭೆಯಲ್ಲಿ ಎಲ್ಲರೂ ಗೊಳ್ಳೆಂದು ನಕ್ಕರಂತೆ.

ಆಗಲೇ 'ಗೋಪಾಲಿ' ಹೆಸರಿನಲ್ಲಿ ಬಿಡ್ ಆಗಿದ್ದೀರಲ್ಲಾ ಅಂತ ಕೇಳಿದಾಗ ಗೋಪಾಲಕೃಷ್ಣ ಮುಸಿ ಮುಸಿ ನಕ್ಕು ನನಗೆ ಇನ್ನೂ ಇಪ್ಪತ್ತು ಹೆಸರಿದೆ ಅಂದರಂತೆ!

'ಪ್ರಭಾ' ಗಂಡು ಎಂದು ತಿಳಿದ ತಕ್ಷಣವೇ ಆ ಪತ್ರಿಕೆಯವರು ತಮ್ಮ 'ಬಿಡ್'ಗೆ 'ಗುಡ್ ಬೈ' ಹೇಳಿದನಂತೆ.

ಹರಾಜಿನಲ್ಲಿ ಯಾವ ಗೊಂದಲ ಗಲಾಟೆ ನಡೆಯದೆ ಶಾಂತಿಯುತವಾಗಿ ನಡೆಯಿತೆಂದು ಈವೆಂಟ್ ಮ್ಯಾನೇಜ್‌ಮೆಂಟ್‌ನ ಪರವಾಗಿ ಶ್ರೀ ಗುಂಡೂರಾಯರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರೂ ಸಹ ಹರಾಜಿನ ಒಂದು ಹಂತದಲ್ಲಿ ರಿಸಾರ್ಟ್ ಕಾಂಪೌಂಡಿನ ಹೊರಗೆ ಕನ್ನಡ ಹೋರಾಟಗಾರರ ಒಂದು ಗುಂಪು ಪ್ರತಿಭಟನೆ ಮಾಡಿದ್ದನ್ನು ಟಿ.ವಿ. - 10 ಚಾನೆಲ್ ನೇರ ಪ್ರಸಾರದಲ್ಲಿ ತೋರಿಸುತ್ತಿತ್ತು. ಹರಾಜಿನಲ್ಲಿ ಭಾಗವಹಿಸಿದ ಬಹುತೇಕ ಸಂಸ್ಥೆ ಕನ್ನಡೇತರರಿಗೆ ಸೇರಿದ್ದು ಎಂಬುದು ಹೋರಾಟಗಾರರ ಕಾರಣವಂತೆ. ಆದರೆ ಹರಾಜಿನಿಂದ ಕನ್ನಡ ಲೇಖಕರಿಗೆ ಒಳ್ಳೆಯದಾಗುತ್ತಿದೆ ಅದಕ್ಕೆ ಅಡ್ಡ ಬರಬೇಡಿ ಎಂದು ಪೊಲೀಸರ ಹಿತವಚನಕ್ಕೆ ಹೋರಾಟಗಾರರು ಒಪ್ಪಿ ತಮ್ಮ ಪ್ರತಿಭಟನೆಯನ್ನು ನಿಲ್ಲಿಸಿ ಸಂತೋಷ ಕೂಟದ ಉಪಹಾರ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರಂತೆ.

ಪತ್ರಿಕಾ ಪುಟದಲ್ಲಿ ಜಾಹೀರಾತಿನಿಂದಾಗಿ ಹಾಸ್ಯದ ಕಾಲಂ ಒಂದೊಂದಾಗಿ ಕಣ್ಮರೆಯಾಗುತ್ತಿರುವ ಈ ಸಂಕಟರಮಣ (ಸಂಕ್ರಮಣದಂತೆ) ಕಾಲದಲ್ಲಿ, ಇದ್ದಕ್ಕಿದ್ದಂತೆ ಇಷ್ಟೊಂದು ಬೇಡಿಕೆ ಹೇಗೆ ಬಂತು ಎಂಬುದು ಅರ್ಥವಾಗದೆ ಹಾಸ್ಯಲೇಖಕರು ತಬ್ಬಿಬ್ಬಾಗಿದ್ದಾರೆ. ಸಂಬಳವೇ ಬರದ ಕಾಲದಲ್ಲಿ ಬೋನಸ್ ಬಂದರೆ ಯಾರಿಗೆ ತಾನೇ ಗಾಬರಿಯಾಗುವುದಿಲ್ಲ. ಹರಾಜಿನ ಗುಟ್ಟಿನ ಹಿಂದಿನ ವಿಚಾರವೆಂದರೆ ಇನ್ನೈದು ವರ್ಷಗಳಲ್ಲಿ ಹೊಸ ಹೊಸ ಹಾಸ್ಯ ಪತ್ರಿಕೆಗಳು, ಮ್ಯಾಗಜೈನ್‌ಗಳು, ಹೊಸ ಹೊಸ ಹಾಸ್ಯದ ಚಾನೆಲ್‌ಗಳು ನವೀನ ಹಾಸ್ಯ ಕಾರ್ಯಕ್ರಮ ಬರುವುದೆಂಬ ಸುಳಿವು ಸಿಕ್ಕಂತಾಗಿದೆ.

ಒಟ್ಟಿನಲ್ಲಿ ಹಾಸ್ಯ ಲೇಖಕರಿಗೆ ಉತ್ತಮ ಭವಿಷ್ಯವಿದೆ. ಹರಾಜಿನಲ್ಲಿ ಬಿಕರಿಯಾದ ಹಾಸ್ಯಲೇಖಕರು 2010ರಿಂದ ಐದು ವರ್ಷಗಳ ಕಾಲ ತಮ್ಮನ್ನು ಖರೀದಿಸಿದ ಸಂಸ್ಥೆಗೆ ಮಾತ್ರ ಬರೆಯುವುದು ಅಥವಾ ಅವರ ನಿರ್ದೇಶನದ ಮೇರೆಗೆ ಬೇರೆಯವರಿಗೆ ಬರೆಯುವಂತೆ ಒಪ್ಪಂದ ಮಾಡಿಕೊಳ್ಳಬೇಕಂತೆ. ಮುಂದಿನ ಹರಾಜಿನಲ್ಲಿ ತಮ್ಮನ್ನು ಯಾರಾದರೂ ಕೊಂಡುಕೊಳ್ಳಲಿ ಎಂದು ಅನೇಕ ಹಾಸ್ಯ ಸಾಹಿತಿಗಳು ತಮ್ಮ ದಾರಿಯನ್ನು ಹುಡುಕುತ್ತಿದ್ದಾರೆ.

ಮುಖ್ಯಮಂತ್ರಿಗಳು ನಗದೇ ಇರುವುದು ಅವರ ಎಲ್ಲಾ ಸಮಸ್ಯೆಗಳಿಗೂ ಕಾರಣವೆಂದು ವ್ಯಖ್ಯಾನಿಸಿದ ಮೇಲೆ ಮಾಧ್ಯಮದವರು ಹಾಸ್ಯದ ಬಗ್ಗೆ ಅಷ್ಟೊಂದು ಆಶಾದಾಯಕವಾಗಿ ಹಣವನ್ನು ಹೂಡಲು ನಿರ್ಧರಿಸಬೇಕೆಂದು ಕೆಲವರ ಸ್ಪಷ್ಟ ಅಭಿಪ್ರಾಯ. ಮೊನ್ನೆ ತಾನೆ ಮುಖ್ಯಮಂತ್ರಿಯವರು ಕೈಯಿಂದ ಬಿಡುಗಡೆಯಾದ ಪಾರಿವಾಳ ಮತ್ತೆ ಅವರ ಕೈ ಮೇಲೆ ವಾಪಸ್ಸಾಗಿದ್ದು ಹೊಸ ಚೈತನ್ಯ ಬಂದಂತಾಗಿ, ತಾವು ಖರ್ಚು ಮಾಡಿದ ದುಡ್ಡು ಕೂಡ ತಮ್ಮ ತೆಕ್ಕೆಗೆ ವಾಪಸ್ಸಾಗುತ್ತೆ ಪಾರುವಾಳದಂತೆ ಪ್ರಸಾದ ಸಹಿತ ಅಂತ ಮಾಧ್ಯಮದ ಮಿತ್ರರು ನಂಬಿರುವುದು ಆಕಸ್ಮಿಕವೇನಲ್ಲ. ಜ್ಯೋತಿಷ್ಯವೂ ಹಾಗೆ ಅವರನ್ನು ನಂಬಿಸಿರಬೇಕು. ಏನೇ ಆಗಲಿ ಹಾಸ್ಯಕ್ಕೆ ಜಯವಾಗಲಿ!

"ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು?"

• ಡಿ. ರಮೇಶ್

ಭಾರತ ಸರ್ಕಾರದ ಒಂದು ಇಂಟರ್‌ನ್ಯಾಷನಲ್ ಟ್ರೇಡಿಂಗ್ ಕಾರ್ಪೊರೇಷನ್ ವತಿಯಿಂದ ನನ್ನನ್ನು ಜರ್ಮನಿಯ ಆಫೀಸಿನ ಹೆಡ್ಡಾಗಿ ಕಳುಹಿಸಿದ್ದರು ಎಂದು ನನ್ನ ಒಂದು ಬೇರೆ ಲೇಖನದಲ್ಲಿ ಹೇಳಿದ್ದೆ.

ನನ್ನ ಈ ಹುದ್ದೆಯ ಕಾರಣ ಅನೇಕಾನೇಕ ರಾಜಕೀಯ ಪುಡಾರಿಗಳು, ಮಂತ್ರಿಗಳು, ಉನ್ನತ ಅಧಿಕಾರಿಗಳು - ಇಂಥವರನ್ನು ಹತ್ತಿರದಿಂದ ನೋಡಿ, ಅವರ ಬಗ್ಗೆ ತಿಳಿಯುವ ಅನೇಕ ಅವಕಾಶಗಳು ಬಂದವು.

ಜರ್ಮನಿಯಲ್ಲಿ ನನ್ನ ಆಫೀಸು ಇದ್ದದ್ದು ಫ್ರಾಂಕ್‌ಫರ್ಟ್ ನಗರದಲ್ಲಿ. ಇಲ್ಲಿನ ಏರ್‌ಪೋರ್ಟ್ ಯೂರೋಪಿನ ಕೇಂದ್ರಬಿಂದುವಿನಂತಿದ್ದು ಮುಂದೆ ಎಲ್ಲಿ ಹೋಗಬೇಕಾದರೂ (ಉದಾ: ಪೂರ್ವ ಯೂರೋಪು, ಉತ್ತರ ಮತ್ತು ದಕ್ಷಿಣ ಅಮೇರಿಕಾಗಳು) ಫ್ರಾಂಕ್‌ಫರ್ಟಿಗೆ ಬರಬೇಕಿತ್ತು. ಇದಲ್ಲದೆ, ಜರ್ಮನಿಯೇ ಒಂದು ವಿಶೇಷ ಮಾರ್ಕೆಟ್ ಆಗಿತ್ತು. ಹೀಗಾಗಿ, ಉನ್ನತ ಅಧಿಕಾರಿಗಳು, ಮಂತ್ರಿಗಳು (ಅದರಲ್ಲೂ ಕೇಂದ್ರ ಸರಕಾರದ್ದು), ಡೆಲಿಗೇಶನ್ನುಗಳು ಲೆಕ್ಕವಿಲ್ಲದಷ್ಟು ಬರುತ್ತಿದ್ದರು/ಬರುತ್ತಿದ್ದವು. ಸಾಧಾರಣವಾಗಿ, ನಮಗೆ ಮುಂಚೆಯೇ ಅಂತಹ ವಿಸಿಟ್ಟುಗಳ ಬಗ್ಗೆ ಸಮಾಚಾರ ಬರುತ್ತಿತ್ತು.

ಒಮ್ಮೆ ನಮ್ಮ ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿ ಬಂದಿದ್ದರು. ಅವರನ್ನು ಏರ್ಪೋರ್ಟಿನಲ್ಲಿ ಹೋಗಿ ಕಾಣಬೇಕು ಎಂದು ಟೆಲೆಕ್ಸ್ ಬಂತು. ಸರಿ, ನಮ್ಮ ಇತರ ಭಾರತ ಸರಕಾರದ ಆಫೀಸಿನ ಬಾಸುಗಳ ಜತೆ ಏರ್ಪೋರ್ಟಿಗೆ ಹೋಗಿ ಲೈನಾಗಿ ನಿಂತಿದ್ದೆವು. ನಮ್ಮ ರಾಯಭಾರಿಗಳು ನಮ್ಮನ್ನು ಒಬ್ಬೊಬ್ಬರಾಗಿ ಪರಿಚಯಿಸುತ್ತಿದ್ದರು. ನನ್ನ ಸರದಿ ಬಂತು. ಸರಿ, ಕೈ ಕುಲುಕಿಯಾಯ್ತು. ಆದರೆ ಅವರನ್ನು ನೋಡಿದಾಗಿನಿಂದ ಅವರು ತಮ್ಮ ಮೂತ್ರವನ್ನು ಕುಡಿಯುತ್ತಾರೆ ಎಂಬ ನೆನಪು ಕಾಡುತ್ತಿತ್ತು. ಅವರ ಕೈ ಕುಲುಕಿದ ತಕ್ಷಣ ಏನೋ ಅಸಹ್ಯ, ಏನೋ ಮುಜುಗರ. ತಕ್ಷಣ ಕೈ ತೊಳೆಯಬೇಕು ಎನ್ನುವ ಕಾತರ. ಆಪರ್ಚುನಿಟಿ ಸಿಕ್ಕ ಕೂಡಲೇ ಹೋಗಿ ಸೋಪ್ ಹಾಕಿ ಕೈ ತೊಳೆದೆ! ದೇಸಾಯಿಯವರು ಹೊರಬರುತ್ತಲೇ, ಅಲ್ಲಿ ಕಾದಿದ್ದ ಪತ್ರಕರ್ತರು ಅವರನ್ನು ಪ್ರಶ್ನಿಸಲು ಕಾದಿದ್ದರು. ಶುರುವಾಯ್ತು, ಪತ್ರಿಕಾಗೋಷ್ಠಿ

ಕೇಳಿದ ಪ್ರಶ್ನೆಗಳೆಲ್ಲ ಇವರು ಕುಡಿಯುವ ಮೂತ್ರದ ಬಗ್ಗೆಯೇ! ಪಿಎಂಗೆ ಕೋಪ ಬಂತು: ನಾನು ಭಾರತದ ಪ್ರಧಾನಿ, ನನಗೆ ಕೇಳಲು ಬೇರೆ ಪ್ರಶ್ನೆಗಳೇ ಇಲ್ಲವೆ ಎಂದು ರೇಗಾಡಿದ್ದು ನೆನಪು.

ಇನ್ನೊಬ್ಬ ಪ್ರಧಾನಿ ಬಂದು ಕೆಲದಿನಗಳೇ ಇದ್ದರು. ಆ ನಮ್ಮೂರಲ್ಲಿ ಎಲೆಕ್ಟ್ರಾನಿಕ್ ಸಾಮಾನುಗಳು ಬಹಳ ಜನಪ್ರಿಯವಾಗಿದ್ದವು. ನಾನು ಹೇಳಿದ ಯಜಮಾನರು ನನ್ನ ಬಳಿ ಬಂದು, 'ರಮೇಶ್ ಸಾಬ್, ಕುಛ್ ಪೈಸೇ ಬಚೇ ಹೈ, ಬತಾಯಿಯೆ ಕ್ಯಾ ಕರೂ?' (ದುಡ್ಡು ಸ್ವಲ್ಪ ಮಿಕ್ಕಿದೆ, ಹೇಳಿ, ಏನು ಮಾಡಲಿ) ಅಂದರು. ನಾನೆಂದೆ, ಬನ್ನಿ ನಮ್ಮ ಗುರುತಿನ ಅಂಗಡಿಯಲ್ಲಿ ಎಲ್ಲಾ ತರಹದ ಎಲೆಕ್ಟ್ರಾನಿಕ್ ಸಾಮಾನುಗಳು ಇವೆ, ಕನ್ಸೆಷನ್ ಕೊಡಿಸ್ತೀನಿ ಅಂದೆ. ಅವರು ಬೇಡ, ಆ ತರಹದ ಎಲ್ಲಾ ಕೊಂಡಾಯ್ತು ಬೇರೆ ಏನಾದರೂ, ಅಂದರು. ಅರ್ಥವಾಗಲಿಲ್ಲ ಎಂದೆ, ಅವರಿಗೆ. ಅವರು ಸ್ವಲ್ಪ ನಸುನಕ್ಕು, ನಾಚುತ್ತಾ ಎಂಬಂತೆ, 'ಮೈ ಲಡಕೀಕ ಬಾರೇಮೇ ಸೋಚ್ ರಹಾಥ', ಎಂದರು. ಆವಾಗ ಅವರಿಗೆ ಕೊನೆಯಪಕ್ಷ ಎಪ್ಪತ್ತು ವಯಸ್ಸಾಗಿತ್ತು. ನನಗೆ ತುಂಬ ಇಂಪ್ರೆಸ್ ಆಯ್ತು. ಎಪ್ಪತ್ತರಲ್ಲೂ ಹೀಗೆ! ಭೇಷ್, ನಮ್ಮ ದೇಶದ ರಾಜಕೀಯಕ್ಕೆ ಭವಿಷ್ಯ ಅದ್ಭುತವಾಗಿದೆ ಎನ್ನಿಸಿತು. ನಾನು ಉತ್ತರಿಸಿದೆ: ನನಗೆ ಇದರ ಬಗ್ಗೆ ಅಷ್ಟು ಗೊತ್ತಿಲ್ಲ ಆದರೆ ಕಾಯ್ಸರ್ ಸ್ಟ್ರಾಸ್ಸೆ ಎಂಬ ರಸ್ತೆ ತುಂಬ ಬರಿ ವೇಶ್ಯೆಯರು ಅಥವ ಇಗೊಳ್ಳಿ ಈ ಮ್ಯಾಗಜೀನ್ ಎಂದು ಒಂದು ವಾರಪತ್ರಿಕೆ ಕೊಟ್ಟೆ. ಅದು ಪ್ರತಿ ಬುಧವಾರ ಎಲ್ಲರ ಮನೆಗೂ ಬಿಟ್ಟಿ ಹಾಕಿ ಹೋಗುತ್ತಿದ್ದರು. ಅದರಲ್ಲಿ "ಕೊನ್ಟಾಕ್ಟೆ" (ಅಂದರೆ ಕಾಂಟ್ಯಾಕ್ಟ್). ಅದರಲ್ಲಿ ಎರಡು ಪುಟಗಳ ತುಂಬಾ ತಮ್ಮ ಒಡಲನ್ನು ವರ್ಣಿಸಿ ಜಾಹೀರಾತು ಮಾಡಿದ ಹೆಣ್ಣುಗಳ ವಿಸ್ತಾರ ವರ್ಣನೆ ಇರುತ್ತಿತ್ತು. ಒಬ್ಬಳ ಫಿಗರ್ ಇಷ್ಟು ದೊಡ್ಡದು, ನಿತಂಬ ಎಷ್ಟು ತಾನೇನು ಸ್ಪೆಷಲ್ಲಾಗಿ ಮಾಡಬಲ್ಲೆ ಇತ್ಯಾದಿಗಳ ವಿವರ. ಅದನ್ನು ಯಜಮಾನರಿಗೆ ಕೊಟ್ಟು ಸ್ವಾಮಿ, ತಮ್ಮ ಇಷ್ಟಬಂದವಳನ್ನು ನಿಮ್ಮ ರೂಮಿಗೆ ಕರೆಸಿಕೊಳ್ಳಿ ಎಂದೆ. ಈ ವ್ಯಕ್ತಿ ಕೆಲವರುಷಗಳ ನಂತರ ಭಾರತದ ಒಂದು ಬಲು ಹಳೆಯ, ದೊಡ್ಡ, ರಾಜಕೀಯ ಪಾರ್ಟಿಗೆ ಅಧ್ಯಕ್ಷರಾಗಿ, ಇನ್ನೇನು ಪ್ರಧಾನಿಯಾಗಬೇಕಿತ್ತು. ಕಾರಣಾಂತರದಿಂದ ಆಗಲಿಲ್ಲ.

ಶ್ರೀ ಪಿ.ವಿ. ನರಸಿಂಹರಾಯರು ಕಾಮರ್ಸ್ ಮಿನಿಸ್ಟರ್ ಆಗಿದ್ದಾಗ ನಮ್ಮೂರಿಗೆ ಒಮ್ಮೆ ಬಂದಿದ್ದರು. ಅವರೊಡನೆ ಒಂದೂವರೆ ಘಂಟೆಗಳ ಕಾಲ ಕಳೆಯುವ ಸುಯೋಗ ದೊರೆತಿತ್ತು. ಗಂಭೀರ ಪ್ರಕೃತಿ: ಮುಗುಳ್ನಗೆಯೂ ಕಡಿಮೆ. ನನಗೆ ಗೊತ್ತಿದ್ದ ಸುಭಾಷಿತಗಳನ್ನು ಮತ್ತು ತಿಳಿದಿದ್ದ ಎರಡು ತೆಲುಗು ಪದಗಳನ್ನು ಉಪಯೋಗಿಸಿ, ನಾನು ಮಾಡುತ್ತಿದ್ದ ಎಕ್ಸ್‌ಪೋರ್ಟ್ ಬಗ್ಗೆ ವಿವರಿಸಿದೆ. ಸಂದರ್ಭಕ್ಕೆ ಸರಿಯಾದ ಪ್ರಶ್ನೆಗಳನ್ನು ಕೇಳಿದರು. ದೇವರದಯೆಯಿಂದ ಜರ್ಮನಿಯಲ್ಲಿ ನನ್ನ ಪರ್ಫಾರ್ಮೆನ್ಸ್ ನಿಜವಾಗಿಯೂ ತುಂಬಾನೆ ಚೆನ್ನಾಗಿತ್ತು. 'ಕೀಪ್ ಇಟ್ ಅಪ್ ಯಂಗ್ ಮಾನ್' ಎಂದರು. "ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು?", ಎಂದು ಕೇಳಿದರು. "ಥ್ಯಾಂಕ್‌ಯು ಸರ್, ಎವ್ವರಿ ಥಿಂಗ್ ಈಸ್ ಫೈನ್" ಎಂದೆ.

ಕೆಲ ಕಾಲದ ನಂತರ, ಶ್ರೀ ವಿ.ಪಿ. ಸಿಂಗ್ ಕಾಮರ್ಸ್ ಮಂತ್ರಿಯಾದರು. ತಕ್ಷಣ ಅವರು

ಬ್ರೆಜಿಲ್ಲಿಗೆ ಹೋಗಬೇಕಿತ್ತು. ಹೀಗಾಗಿ ನಮ್ಮೂರಿಗೆ ಬಂದರು. ಆವಾಗ ನಮ್ಮ ಕಾನ್ಸಲ್ ಜನರಲ್ ಊರಿನಲ್ಲಿರಲಿಲ್ಲ. ಅವರೊಡನೆ ಸುಮಾರು ಐದಾರು ಘಂಟೆಗಳ ಕಾಲ ಇದ್ದೆ. ಉತ್ತರ ಪ್ರದೇಶದ ಯಾವುದೋ ಒಂದು ಸಣ್ಣ ರಾಜ್ಯದ ರಾಜನ ದತ್ತು ಮಗ ಇವರು. ತುಂಬಾ ಗಾಂಭೀರ್ಯ. ತುಂಬಾ ಗೌರವಕೊಟ್ಟು ಮಾತನಾಡುತ್ತಿದ್ದರು. ಆಗ ಕೆಲವು ವಾರಗಳು ನನ್ನ ಹೆಡ್ಡಾಫೀಸಿನ ಜತೆ ತಲೆ ಚಚ್ಚಿಕೊಳ್ಳುತ್ತಿದ್ದೆ: ಮೊಲಾಸೆಸ್ ಎಂಬ ವಸ್ತುವಿಗೆ ಬಹಳ ಒಳ್ಳೆ ಬೆಲೆ ಇದೆ, ರಿಲೀಸ್ ಮಾಡಿ ಅಂತ. ಶ್ರೀ ಸಿಂಗರಿಗೆ ಇದರ ಬಗ್ಗೆ ಹೇಳಿದೆ. ತಕ್ಷಣ ಅವರು ತಮ್ಮ ಪೀಯೆಗೆ ಫೋನ್ ಮಾಡಿ ನಾನು ಹೇಳಿದೆ ಎಂದು ಹೇಳಿ ಅಂದರು. (ಅಂದು ಸಂಜೆಯೇ ಡೆಲ್ಲಿಯಲ್ಲಿದ್ದ ಅವರೊಡನೆ ಮಾತನಾಡಿದೆ. 24 ಘಂಟೆಗಳಲ್ಲಿ ಸಾಂಕ್ಷನ್ ಬಂತು. ಸುಮಾರು ಒಂದು ಲಕ್ಷ ಟನ್ ಮಾರಿ ನಮ್ಮ ಕಂಪನಿಗೆ ಸಾಕಷ್ಟು ಲಾಭಗಳಿಸಿದೆ). ಮಧ್ಯಾಹ್ನ ಏರ್ಪೋರ್ಟಿನಲ್ಲಿ ಠಳಾಯಿಸುತ್ತಾ, ಅಲ್ಲಿ ಪ್ರದರ್ಶಿಸಿದ್ದ ಸೀಕ್ರೆಟ್ ಡಿವೈಸಸ್ (ಉಂಗುರದಲ್ಲಿ ಟೇಪ್ ರೆಕಾರ್ಡರ್, ಗಡಿಯಾರದಲ್ಲಿ ಕ್ಯಾಮರ ಇತ್ಯಾದಿ) ನೋಡುತ್ತಿದ್ದರು. ಹಾಗೆಯೇ ಓಡಾಡುತ್ತಿದ್ದಾಗ, ಪಾಕಿಸ್ತಾನದ ಒಂದು ಮಿಲಿಟರಿ ತಂಡ ಕೆಲ ಜರ್ಮನರ (ಅವರು ಆತಿಥೇಯರಾಗಿರಬೇಕು) ಜತೆ ಹೋಗುತ್ತಿದ್ದರು. ಆ ಮಿಲಿಟರಿ ಆಫೀಸರುಗಳು ಹಾಕಿಕೊಂಡಿದ್ದ ಯೂನಿಫಾರ್ಮಿನಲ್ಲಿ ಭುಜದ ಮೇಲಿದ್ದ ರೆಜಿಮೆಂಟಲ್ ಸಿಂಬಲ್ ನೆನಪಿಟ್ಟುಕೊಂಡೆ. ಸಿಂಗ್ ಸಾಹೇಬರನ್ನ ಬೀಳ್ಕೊಟ್ಟು ಮನೆಗೆ ಬಂದೊಡನೆಯೇ ಯೂರೋಪಿನಲ್ಲಿದ್ದ ನಮ್ಮ ರಾ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ ಮಿತ್ರರಿಗೆ ಫೋನ್ ಮಾಡಿ ಪಾಕ್ ಆಫೀಸರುಗಳ ಬಗ್ಗೆ ತಿಳಿಸಿ ಅವರ ರೆಜಿಮೆಂಟ್ ಬಗ್ಗೆಯೂ ಹೇಳಿದೆ. 'ಭೇಷ್' ಅಂತಾರೆ ಅಂದುಕೊಂಡಿದ್ದೆ. ಅವರು, 'ಗುಡ್, ಅವರ ಬಗ್ಗೆ ಇನ್ನೂ ತಿಳಿದು ಹೇಳಲು ಸಾಧ್ಯವೆ?' ಎಂದರು. ಅದು ನಿಮ್ಮ ಡಿಪಾರ್ಟ್‌ಮೆಂಟ್ ಕೆಲಸ, ನಾನು ಸಾಕಷ್ಟು ಲೀಡ್ ಕೊಟ್ಟಿದ್ದೇನೆ ಎಂದೆ. (ನಂತರ ಶ್ರೀ ಸಿಂಗರು ಪ್ರಧಾನ ಮಂತ್ರಿಗಳಾಗಿ, ಮಂಡಲ್ ಕಮಿಷನ್ನಿನ ಗೋಳು ಮಾಡಿ, ತಮ್ಮ ರಾಜಕೀಯ ಬದಲಾಯಿಸಿದ ಮೇಲೆ ಅವರನ್ನ ಅತ್ಯಂತ ದ್ವೇಷಿಸಲು ಆರಂಭಿಸಿದೆ ಇರಲಿ). ಬೀಳ್ಕೊಡುವಾಗ ಶ್ರೀ ಸಿಂಗರು "ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು?" ಎಂದು ಕೇಳಿದರು. "ನೋ ಸಾರ್, ಆ್ಯಮ್ ಫೈನ್, ಥ್ಯಾಂಕ್‌ಯು" ಎಂದೆ.

ಶ್ರೀ ಜೋಗೀಂದರ್ ಸಿಂಗ್ ಕರ್ನಾಟಕ ಕೇಡರಿನಲ್ಲಿದ್ದ ಸಿಬಿ ಐಪಿಎಸ್ ಅಧಿಕಾರಿ. (ಕಡೆಯಲ್ಲಿ ಇವರು ಸಿಬಿಐ ನಿರ್ದೇಶಕರಾಗಿ ನಿವೃತ್ತಿ ಹೊಂದಿದರು). ಇವರು ನಮ್ಮ ಮಂತ್ರಾಲಯವಾದ ಕಾಮರ್ಸ್ ಮಂತ್ರಾಲಯದಲ್ಲಿ ಚೀಫ್ ವಿಜಿಲೆನ್ಸ್ ಆಫೀಸರ್ ಆಗಿದ್ದರು. ನಾನು ಜರ್ಮನಿಯಲ್ಲಿದ್ದಾಗ ಇವರಿಂದ ಒಂದು ಫೋನ್ ಕರೆ ಬಂತು. ನನಗೇನೋ ದುಗುಡ: ಇವರು ಯಾಕೆ ಫೋನ್ ಮಾಡಿರಬಹುದು. ನನ್ನ ಆಫೀಸಿನಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿದೆಯೋ ಏನೋ ಎಂದು. ಶ್ರೀ ಸಿಂಗ್ (ಅವರನ್ನು ಚೆನ್ನಾಗಿ ಅರಿತಮೇಲೆ ತಿಳಿದದ್ದು) ಸದಾ ಹಸನ್ಮುಖಿ, ಮಾತನಾಡುವುದರಲ್ಲಿ ಗೌರವ ತೋರಿಸುತ್ತಾರೆ. ಫೋನಿನಲ್ಲಿ ಅವರು ಮೊದಲು ಹೇಳಿದ್ದು: "ರಮೇಶ್ ಸಾಬ್, ಇದು ಹೇಗೆ, ನಿಮ್ಮ

ಸಂಸ್ಥೆಯಲ್ಲಿದ್ದುಕೊಂಡೂ (ನಾನಿದ್ದ ಸಂಸ್ಥೆ ತುಂಬಾ ಕರಪ್ಟ್ ಎಂದು ಹೆಸರು ಗಳಿಸಿತ್ತು) ನಿಮ್ಮ ಮೇಲೆ ಒಂದು ಕೇಸ್ ಇರಲಿ, ಒಂದು ಫೈಲ್ ಕೂಡಾ ಇಲ್ಲವಲ್ಲ!''

ನನ್ನ ಮನಸ್ಸಿನ ಮಗುಡ ಹೀಗೆ ಮುಂಚೆ ನಿವಾರಿಸಿ ನಂತರ ಹೇಳಿದರು; ಮುಂದಿನ ತಿಂಗಳು ಯೂರೋಪಿಗೆ ಬರುತ್ತೇನೆ, ಜರ್ಮನಿ ಮತ್ತು ಡೆನ್ಮಾರ್ಕ್, ಸ್ವೀಡನ್, ಫಿನ್ಲಾಂಡ್ ದೇಶಗಳಿಗೆ ಭಾರತದಲ್ಲಿ ತಯಾರಾದ ಸ್ಪೋರ್ಟ್ಸ್ ಸಾಮಾನುಗಳನ್ನು ರಫ್ತು ಮಾಡಲು ಇರುವ ಸಾಧ್ಯತೆ ಮತ್ತು ಅವಕಾಶಗಳನ್ನು ಅಧ್ಯಯನ ಮಾಡಬೇಕು, ನನ್ನ ಜತೆ ನೀವೂ ಬರಬೇಕು ಎಂದರು. ಜರ್ಮನಿಯಲ್ಲಿ ನಿಮ್ಮ ಮನೆಯಲ್ಲೇ ಇರುತ್ತೇನೆ ಎಂದೂ ಹೇಳಿದರು. ಶ್ರೀಯುತರನ್ನು ಹಿಂದೆಂದೂ ಮೀಟಿರಲಿಲ್ಲ. ಅವರು ಹೇಗೆ, ಏನು ಒಂದೂ ತಿಳಿದಿರಲಿಲ್ಲ. ಅಂತೂ ಬಂದ ನಂತರ ಒಳ್ಳೆ ಸ್ನೇಹವೇ ಆಯ್ತು. ನಮ್ಮ ಮನೆಗೆ ಚೆನ್ನಾಗಿ ಒಗ್ಗಿಕೊಂಡರು. ತುಂಬಾ ಫ್ರೆಂಡ್ಲಿ ವ್ಯಕ್ತಿ. ಸ್ವಲ್ಪವೂ ಡಂಭವಿರಲಿಲ್ಲ. (ನನ್ನ ಮಗನಿಗೂ, ಮಗಳಿಗೂ ಐಪಿಎಸ್ ಮಾಡಿ, ತುಂಬಾ ಸುಲಭ ಅಂತ ತುಂಬ ಸಲ ಹೇಳಿದರು. ಆದರೆ ನನ್ನ ಮಕ್ಕಳು ಗೌರವದಿಂದ ಕೇಳಿಸಿಕೊಂಡರೇ ಹೊರತು ಅವರು ಹೇಳಿದ ಹಾಗೆ ಐಪಿಎಸ್ ಪರೀಕ್ಷೆ ಬರೆಯಲು ಸ್ವಲ್ಪವೂ ಅಭಿರುಚಿ ತೋರಲಿಲ್ಲ. ಈವಾಗ ಇಬ್ಬರೂ ತಮ್ಮ ತಮ್ಮ ಕಸುಬಿನಲ್ಲಿ ಚೆನ್ನಾಗಿದ್ದಾರೆ).

ಸರಿ, ಅವರೊಡನೆ ಸ್ವೀಡನ್ನಿನ ಸ್ಟಾಕ್‌ಹೋಮಿಗೆ ಹೊರಟೆ. ಯಥಾಪ್ರಕಾರ ಏರ್ಪೋರ್ಟಿನಲ್ಲಿ ನಮ್ಮ ಬ್ಯಾಗುಗಳನ್ನು ಎಕ್ಸ್ ರೇ ಯಂತ್ರದ ಮೂಲಕ ಹಾಯಿಸಿದರು. ನನ್ನ ಗಂಟುಗಳಲ್ಲಿ ಏನೂ ತೊಂದರೆಯಾಗಲಿಲ್ಲ. ಆದರೆ ಸಿಂಗ್ ಅವರ ಬ್ಯಾಗನ್ನು ಮತ್ತೆ ಮತ್ತೆ ಹಾಕಿ ನೋಡಿ, 'ಸ್ವಲ್ಪ ಬಿಚ್ಚಿ ತೋರಿಸಿ' ಅಂದ ಪೋಲೀಸಿನವನು. ಇವರು ಬ್ಯಾಗ್ ಬಿಚ್ಚಿದರು. ಅದರಲ್ಲಿ ಒಂದು ಬಟ್ಟೆ ಗಂಟು. ಅದನ್ನೂ ಬಿಚ್ಚಿ ಅಂದ. ಬಿಚ್ಚಿದರೆ, ಬಿಚ್ಚಿದರೆ, ಅದರಲ್ಲಿ ಏನಿತ್ತು ಗೊತ್ತೇ? ಚನ-ಗೂಡ್ ಅಂದರೆ, ಹುರಿಗಡಲೆ ಮತ್ತು ಬೆಲ್ಲದ ಮಿಕ್ಸ್ಚರ್! ಇದೇನಿದು ಅಂದ ಜರ್ಮನ್ ಸಿಪಾಹಿ. ದಿಸ್ ಈಸ್ ದಿ ಎಮರ್‌ಜೆನ್ಸಿ ಫುಡ್ ಆಫ್ ದಿ ಜಾಟ್ಸ್ ಅಂದರು ನಮ್ಮ ಯಜಮಾನರು. ಏನು ಹೇಳುತ್ತಿದ್ದೀರಿ, ಏನಿದು? ಎಂದು ಮತ್ತೆ ಕೇಳಿದ ಸಿಪಾಹಿ. ನನಗೆ ಬರುತ್ತಿದ್ದ ಜರ್ಮನಿನಲ್ಲಿ ಅವನಿಗೆ ತಿಳಿಯಹೇಳಿದೆ: ಉತ್ತರ ಭಾರತದಲ್ಲಿ ಹಳ್ಳಿಯ ಜನ ಮನೆಯಿಂದ ಹೊರಗೆ ಬಂದರೆ ಈ ಪ್ರೋಟೀನು ಮತ್ತು ಈ ಹೈ ಕ್ಯಾಲೋರಿ ಪದಾರ್ಥ ಜತೆಗೆ ಕೊಂಡೇ ಹೋಗುತ್ತಾರೆ, ಹೀಗಾಗಿ, ಎಲ್ಲಿ ಆಹಾರದ ಸಮಸ್ಯೆಯಾದರೂ ಇವನ್ನು ತಿಂದು ಹಸಿವು ನೀಗಿಸಿಕೊಳ್ಳುತ್ತಾರೆ. ಅವನಿಗೆ ಅಷ್ಟು ಭರವಸೆ ಬರಲಿಲ್ಲ. ಅಂದಿನ ವರುಷಗಳಲ್ಲಿ ಭಾರತದಿಂದ ಜರ್ಮನಿಗೆ ಹೋಗುತ್ತಿದ್ದವರು ಕೇವಲ ಶರಣಾರ್ಥಿಗಳು (ಅಸೈಲಮ್ ಸೀಕರ್ಸ್) ಭಾರತ ಸರಕಾರ ನಮ್ಮನ್ನು ಕೊಲ್ಲುತ್ತದೆ ಎಂದು ಹೇಳಿದರೆ, ಜರ್ಮನಿಯ ಕಾನೂನಿನ ಪ್ರಕಾರ ಶರಣು ಕೊಟ್ಟು, ಹೊಟ್ಟೆ ಬಟ್ಟೆ ಬರೆಗೆ ದುಡ್ಡೂ ಕೊಡುತ್ತಿದ್ದರು. (ಇಂದಿನ ದಿನಗಳಂತೆ, ಭಾರತೀಯರೆಂದರೆ ಸಾಫ್ಟ್‌ವೇರ್ ಎಂಜಿನಿಯರುಗಳು ಎಂದು ಗೌರವ ಮಾಡುವ ಹಾಗೆ ಆಗ ಇರಲಿಲ್ಲ). 'ಇಂಡರ್ಸ್' (ಇಂಡಿಯನ್ಸ್) ಎಂದು ಹೇಳಿ ಮುಂದೆಹೋಗಲು ಹೇಳಿದ. ಸ್ಟಾಕ್‌ಹೋಮಿನಲ್ಲಿ ನಮ್ಮ ದೂತಾವಾಸದಿಂದ ಒಂದು ಸುಂದರ ವೋಲ್ವೋ ಕಾರು ಬಂದಿತ್ತು. ಕಾರು ಹೊರಟೊಡನೆ, 'ಈಟ್' ಎಂದು ಹೇಳುತ್ತಾ

ಡ್ಯಾಶ್ ಬೋರ್ಡಿನ ಮೇಲೆ ಒಂದು ಹಿಡಿ ಚನ-ಗೂಡ್ ಹಾಕಿದರು. ಆ ಸ್ವೀಡ ಭಯಬಿದ್ದವನಂತೆ ಸ್ವಲ್ಪ ಹಿಂದೆ ಹೋದ, ನಂತರ (ಪಾಪ, ಅರ್ಥವಾಗಿರಲಿಲ್ಲವಲ್ಲ) ಕಣ್ಣು ಕಣ್ಣು ಬಿಡುತ್ತಿದ್ದ. ನಾನು ನಿಧಾನವಾಗಿ ಇಂಗ್ಲೀಷಿನಲ್ಲಿ ಹೇಳಿದೆ (ಸ್ವೀಡನ್ನಿನಲ್ಲಿ ಫ್ರಾಂಸಿನಲ್ಲಿರುವಂತೆ ಇಂಗ್ಲೀಷು ಮಾತನಾಡಲು ಹಿಂಜರಿಯುವುದಿಲ್ಲ): ಇಟ್ ಈಸ್ ಬೀಯಿಂಗ್ ಆಫರ್ಡ್ ಇನ್ ಫ್ರೆಂಡ್ ಶಿಪ್, ಇಟ್ ಈಸ್ ಪ್ಯೂರ್ ವೆಜಿಟೇರಿಯನ್ ಸ್ಟಫ್, ಈಟ್ ಎ ಫ್ಯೂ ಅಟ್ ಲೀಸ್ಟ್. ಪಾಪ ಸ್ವಲ್ಪ ಬಾಯಿಗೆ ಹಾಕಿಕೊಂಡ. ಮಾರನೆಯ ಬೆಳಿಗ್ಗೆ ಹೋಟಲಿನಲ್ಲಿ (ನಾವಿದ್ದದ್ದು ಒಂದು ರೂಮು ಬಿಟ್ಟು ಎದುರು ಬದುರು) ನನ್ನ ರೂಮಿಗೆ ಶ್ರೀ ಸಿಂಗ್ ಬಂದರು. ಒಂದು ಇಸ್ತ್ರಿ ಮಾಡಿ ಮಡಿಸಿದ್ದ ಯಾವುದೋ ಬಟ್ಟೆ ಅವರ ಕೈಯ್ಯಲ್ಲಿತ್ತು. ಅದನ್ನ ಬಿಚ್ಚಿದರು: ಒಗೆದು, ಗಂಜಿ ಹಾಕಿ ಇಸ್ತ್ರಿ ಮಾಡಿದ ಅವರ ಪೇಟ! ಅದನ್ನ ಬಿಚ್ಚಿ, ಅಗಲದ ಸೈಡ್ ಸರಿಯಾಗಿ ಮಡಿಚಿ, ಅವರ ರೂಮಿನ ಒಂದು ಮೂಲೆಯಿಂದ ನನ್ನ ರೂಮಿನ ಮೂಲೆಯ ತನಕ, ಉದ್ದಕ್ಕೆ ಹರಡಿ ಪೇಟ ಸುತ್ತಿಕೊಂಡರು. ಇದರ ಮಧ್ಯದಲ್ಲಿ ಕಾರಿಡಾರು! ಬೆಳಗಿನ ಝೂವ ಕಾರಿಡಾರಿನಲ್ಲಿ ಹೋಗಿಬರುವವರ ಓಡಾಟ ಬೇರೆ! ಮಗುವಿನಂಥ ನಮ್ಮ ಸಿಂಗರಿಗೆ ಸ್ವಲ್ಪವೂ ಇದರ ಸೂಕ್ಷ್ಮ ತಿಳಿಯಲಿಲ್ಲ.

ಇದಾಗಿದ್ದು ಹೆಲ್ಸಿಂಕಿಯಲ್ಲೋ ಕೋಪರ್ನಹಾರ್ಗ್ (ಕೆಬ್ನಹೆಫ್ನ್)ನಲ್ಲೋ ನೆನಪಿಲ್ಲ. ಸಿಂಗ್ ಅವರಿಗೆ ಚಿಕ್ನ ಎಂದರೆ ತುಂಬಾ ಇಷ್ಟ ತಿಂದು ಕೆಲವು ದಿನಗಳಾಗಿತ್ತು ಎಂದು ಕಾಣತ್ತೆ. ನಾವು ಹೋಗುತ್ತಿದ್ದ ಕಾರಿನಲ್ಲಿಂದ ಸಿಂಗ್ ಅವರು ''ಕೆ ಎಫ್ ಸಿ'' ಎಂಬ ಬೋರ್ಡ್ ಕಂಡರು. ''ಸ್ಟಾಪ್, ಸ್ಟಾಪ್'' ಎಂದು ಕೂಗಿದರು. ಡ್ರೈವರ್ ಹೆದರಿ ಕಾರು ಥಟ್ಟನೆ ನಿಲ್ಲಿಸಿದ. ಸಿಂಗ್ ಅಂಗಡಿಗೆ ಓಡಿಹೋಗಿ ಒಂದು ಪ್ಯಾಕೆಟ್ ಜತೆ ಹಿಂದಿರುಗಿದರು. ಕಾರಿನಲ್ಲಿ ಕುಳಿತು ಪ್ಯಾಕೆಟ್ ಬಿಚ್ಚಿ ತಂದಿದ್ದ ಫ್ರೈಡ್ ಕೋಳಿ ಕಾಲುಗಳನ್ನು ಒಂದೊಂದೇ ತಿನ್ನುತ್ತಾ, ಮೋಕ್ಷವನ್ನು ಪಡೆದ ಮುನಿಯಂತೆ ಸಂತೋಷ-ತೃಪ್ತಿ ಮುಖದಲ್ಲಿ ಸುರಿಸುತ್ತಾ ಸವಿಯುತ್ತಿದ್ದರು. ಪ್ಯಾಕೆಟ್ ಖಾಲಿಯಾದ ಮೇಲೆ ಅದನ್ನ ನಿಧಾನವಾಗಿ ಮಡಿಸಿ ಹೊರಗೆಸೆದರು. (ನಮ್ಮ ನಾಡಿನಲ್ಲಿ ಮಾತ್ರ ಹಾಗೆ ಮಾಡಬಹುದು. ಆ ದೇಶಗಳಲ್ಲೆಲ್ಲಾ ಇದು ಅಕ್ಷಮ್ಯ).

ಕಡೆಗೆ ಬೀಳ್ಕೊಡುವಾಗ ''ರಮೇಶ್ ಸಾರ್, ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು?'' ಎಂದರು. ''ಥ್ಯಾಂಕ್ ಯು ಸರ್, ಐ ಆ್ಯಮ್ ಫೈನ್'' ಎಂದೆ.

ಇನ್ನೊಮ್ಮೆ ನಮ್ಮ ಮನೆಯಲ್ಲಿ ಯಾವುದೋ ದೊಡ್ಡ ಪಾರ್ಟಿ ನಡೀತಿತ್ತು. ಎಲ್ಲರೂ ಗುಂಡು ಹಾಕುತ್ತಾ, ಮೆಲುಕುತ್ತಾ, ಮಜಾ ಮಾಡುತ್ತಿದ್ದರು. (ಇಲ್ಲಿ ನನ್ನ ಒಂದು ಸ್ವಂತ ವಿಷಯ ಹೇಳಲು ದಯವಿಟ್ಟು ಅನುಮತಿ ಕೊಡಿ: ನನ್ನ ಶ್ರೀಮತಿ ಇಂದು ಅವರು, ಜೀವನದಲ್ಲಿ ಎಂದೂ ಒಂದು ಮೊಟ್ಟೆಯನ್ನೂ ತಿನ್ನದ ಮುತ್ತೈದೆ. ಆದರೆ, ಬಟರ್ ಚಿಕನ್ ಮಾಡುವ ಸೀಕ್ರೆಟ್ ಕಲಿತಿದ್ದರು. ಇಂಥಹ ಪಾರ್ಟಿಗಳಿಗೆ ಮುಂಚೆ ನಾವು ಮೆಟ್ರೊ ಎಂಬ ಅಂಗಡಿಗೆ (ನನಗೆ ಮೆಂಬರ್‌ಷಿಪ್ ಸಿಕ್ಕಿತ್ತು) ಹೋಗಿ ನೂರಿಪ್ಪತ್ತು ಕೋಳಿ ಕಾಲುಗಳನ್ನು ತರುತ್ತಿದ್ದೆವು. ಅವರು ಮಾಡಿದ ಬಟರ್ ಚಿಕನ್ ಬಂದವರೆಲ್ಲ ಬೆರಳು ನೆಕ್ಕಿಕೊಂಡು, ಚಪ್ಪರಿಸಿ ತಿನ್ನುತ್ತಿದ್ದರು).

ಹೀಗೆ ಪಾರ್ಟಿ ನಡೆಯುತ್ತಿದ್ದಾಗ, ನಮ್ಮ ಕಾನ್ಸಲ್ ಜನರಲ್ ಗುಪ್ತ ಅವರು ಏರ್‌ಪೋರ್ಟಿನಿಂದ ಒಬ್ಬ ಅತಿಥಿಯನ್ನು ಕರೆತಂದರು. ಅವರು ಯಾರು ಅಂತೀರಿ? ನಂತರ ಕರ್ನಾಟಕದ ರಾಜ್ಯಪಾಲರಾದ ಶ್ರೀ ಖುರ್ಷೀದ್ ಆಲಮ್ ಖಾನರು. ಆಸೀನರಾದ ಸ್ವಲ್ಪ ಸಮಯದ ನಂತರ ಅವರನ್ನ ಕೇಳಿದೆ, 'ಸರ್, ವಾಟ್ ವಿಲ್ ಯು ಹ್ಯಾವ್'. ಅವರ ಉತ್ತರ: 'ಐ ವಿಲ್ ಹ್ಯಾವ್ ಎ ಬಾತ್'. ಅವರೂ ನಿಜಕ್ಕೂ ಸ್ನಾನಕ್ಕೆ ಹೋದರು. (ಅವರು ಟೀಟೋಟಲರಂತೆ: ಟೋಟಲಿ ಆನ್ ಟೀ ಓನ್ಲಿ).

ವಾಪಸ್ ಹೋಗುತ್ತಾ, "ರಮೇಶ್ ಸಾಬ್, ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು? ಎಂದರು, ನೋ ಸಾರ್ ಎವೆರಿಥಿಂಗ್ ಈಸ್ ಫೈನ್" ಎಂದು ಹೇಳಿದ.

ಪಶ್ಚಿಮ ಯೂರೋಪಿನಲ್ಲಿ ಜರ್ಮನಿ, ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಈ ದೇಶಗಳಲ್ಲಿ ಸೆಕ್ಸ್ ಒಂದು ದೊಡ್ಡ ಉದ್ಯೋಗ ಹಾಗೂ ಓಪನ್ನಾಗಿ, ರಾಜಾರೋಷವಾಗಿ ನಡೆಯುತ್ತದೆ. ಇದಕ್ಕೆ ಅಲ್ಲಿನ ಸರಕಾರಗಳು ಲೈಸನ್ಸುಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತವೆ. ಹೀಗಾಗಿ ನಮ್ಮ ಭಾರತದೇಶದಿಂದ ಬರುವ ಎಲ್ಲರಿಗೂ ಈ ವಿಷಯದಲ್ಲಿ ತುಂಬ ಕುತೂಹಲ. ಅದೆಲ್ಲ ನೋಡಬೇಕೆಂಬ ತೀವ್ರ ಆಸೆ, ಬಾಯಿಬಿಟ್ಟು ಕೇಳಲು ನಾಚಿಕೆ, ಬಿಗುಮಾನ. ನನಗೆ ಅವರ ಇಚ್ಛೆ ತಿಳಿದಿದ್ದರೂ ಅವರೇ ಮುಂಚೆ ಬಾಯಿ ಬಿಡಲಿ ಎಂದು ಕಾಯುತ್ತಿದ್ದೆ. ಒಮ್ಮೆ ಒಬ್ಬ ಅತಿ ಉನ್ನತ ಅಧಿಕಾರಿಯೊಬ್ಬರ ಪತ್ನಿ ಕೇವಲ ಒಂದು ದಿನಕ್ಕಾಗಿ ನಮ್ಮೂರಿಗೆ ಬಂದಿದ್ದರು. ಏರ್ಪೋರ್ಟಿನಲ್ಲೇ ಧೈರ್ಯವಾಗಿ ನನಗೆ ಹೇಳಿದರು: ಇಂದು ಸಂಜೆಯೇ ನಾನು ಹೊರಟು ಹೋಗಬೇಕು, ಆದರೆ ಹೋಗುವ ಮುನ್ನ ಸೆಕ್ಸ್ ಸಿನೆಮಾ ದೊಡ್ಡ ಸ್ಕ್ರೀನಿನಲ್ಲಿ ನೋಡಬೇಕು. ಸರಿ ಎಂದು ಹೊರಹೊರಟೆವು. ದುರದೃಷ್ಟವಶಾತ್ ಅಂದು 'ಫಾಶಿಂಗ್' ಎಂಬ ಒಂದು ಜರ್ಮನ್ ಹಬ್ಬ, ಎಲ್ಲರೂ ಬಣ್ಣ ಬಣ್ಣದ ವೇಷ ತೊಟ್ಟು ರಸ್ತೆಯಲ್ಲೆಲ್ಲಾ ಕುಡಿಯುತ್ತಾ, ಕುಣಿಯುತ್ತಾ ಇರುತ್ತಾರೆ. ಪಾಪ ನಮ್ಮ ಡೆಲ್ಲಿಯಿಂದ ಬಂದ ಮುತ್ತೈದೆಗೆ ತನ್ನ ಆಸೆ ಪೂರ್ತಿ ಮಾಡಲಾಗಲಿಲ್ಲ. "ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು" ಎಂದು ನನ್ನನ್ನು ಕೇಳಲೇ ಇಲ್ಲ!

ಇನ್ನೊಮ್ಮೆ, ನಮ್ಮ ಘನ ಭಾರತ ಸರಕಾರದ ಕ್ಯಾಬಿನೆಟ್ ಮಂತ್ರಿಯೊಬ್ಬರು ದಿನವೆಲ್ಲ ನಮ್ಮನೆಯಲ್ಲೇ ಕಳೆದರು. ಅವರೂ ಬಿಳಿ ದ್ರಾಕ್ಷಿರಸ ಇದ್ದರೆ ಕುಡಿಯುತ್ತೇನೆ ಅಂದರು. ನಮ್ಮನೆಯಲ್ಲಿ ಎಲ್ಲಾ ಹಣ್ಣುಗಳ ರಸವೂ ಇರುತ್ತಿತ್ತು. ಹಾಗೆಂದುಕೊಂಡು ಗ್ರೇಪ್ ಜೂಸ್ ಕೊಟ್ಟೆ. ಆಗ ಜತೆಗಿದ್ದ ಅವರ ಸೈಡ್ ಕಿಕ್ ನನಗೆ ಪಿಸುಗುಟ್ಟಿದ: ಸಾಹೇಬರು ಕೇಳುತ್ತಿರೋದು ವೈಟ್ ವೈನ್, ಗ್ರೇಪ್ ಜೂಸ್ ಅಲ್ಲ. ಈ ವಿಧವಾದ ಹಿಪೋಕ್ರಸಿ, ಆಷಾಢಭೂತಿತನ ನಮ್ಮದೇಶದ ಒಂದು ಟ್ರೇಡ್ ಮಾರ್ಕ್ ಅನ್ನೋತರಹ ಪದೇ ಪದೇ ಅನುಭವ ಆಗಿ ಸಂಕಟ ಆಗುತ್ತಿತ್ತು. ನಂತರ ಯಜಮಾನರನ್ನು ಒಂದು ದೊಡ್ಡ ಅಂಗಡಿ ಬೀದಿಗೆ ಕರೆದೊಯ್ದೆ. ಅಲ್ಲಿ ಒಂದು ಸೆಕ್ಸ್ ಶೋ ಇದ್ದ ಎಡೆಯಲ್ಲಿ ಒಂದು ಸ್ಪೆಶಲ್ ಕೋಣೆಯಲ್ಲಿ ಕುಳಿತು ಆದದ್ದೆಲ್ಲಾ ನೋಡಿಬಂದರು. ಹೊರಗೆ ಬಂದಾಗ ಯಜಮಾನರ ಮುಖ ನಮಗೆಲ್ಲ ಪರಿಚಯ ಇರುವ ಟೆನ್ಷನ್ನಿಂದ ಕೂಡಿತ್ತು. ಒಂದೆರಡು ನಿಮಿಷಗಳು ಬಿಟ್ಟು ನಮ್ಮ ಮಹಾ ದೇಶದ ನೇತಾಜಿಯವರ ಅಂಬೋಣ: ಛೆ, ಏನಿದೆಲ್ಲ, ಹೀಗೆಲ್ಲ ಆದರೆ ದೇಶದ ಜನರಲ್ಲಿ ಮೊರಾಲಿಟಿ

ಉಳಿಯುತ್ತೇ, ನಮ್ಮ ದೇಶದಲ್ಲಿ ಹೀಗೆಲ್ಲ ಇದೆಯೆ? ನನ್ನ ಮನಸ್ಸಿನಲ್ಲಿ ಆಗ ಬಂದ ವಿಚಾರಗಳನ್ನು ಅವರಿಗೂ ಹೇಳಲಿಲ್ಲ, ನಮ್ಮ ಅಪರಂಜಿಯಲ್ಲಿ ಪ್ರಕಟಿಸುವ ಹಾಗೂ ಇಲ್ಲ! ಅವರು ಹೋಗುತ್ತಾ, ''ಈಸ್ ದೇರ್ ಎನಿಥಿಂಗ್ ಐ ಕ್ಯಾನ್ ಡೂ ಫಾರ್ ಯು?'' ಎಂದು ಕೇಳಿದರು. ''ಥ್ಯಾಂಕ್ ಯು ಸರ್, ಎವ್ರಿಥಿಂಗ್ ಈಸ್ ಫೈನ್'' ಎಂದು ಹೇಳಿದ.

ಇನ್ನೊಮ್ಮೆ ಬಿಹಾರಿನಿಂದ ಒಬ್ಬ ಐಎಎಸ್ ಅಧಿಕಾರಿ ಬಂದಿದ್ದ, ಯಾವುದೋ ಬಿಹಾರ್ ಸ್ಟೇಟ್ ಕಾರ್ಪೊರೇಷನ್ನಿನ ಎಂ.ಡಿ. ಆಗಿದ್ದ. ಅವನು ಹೇಳಿದ ಮಾತು: ತನ್ನ ಟ್ರಾನ್ಸ್‌ಫರಿಗೆ ಪ್ರಯತ್ನ ಮಾಡುತ್ತಿದ್ದನಂತೆ. ಅವನ ಅಂಬೋಣ: ಬಿಹಾರಿನಲ್ಲೇ ಸಿಕ್ಕಿದರೆ, ತಿಂಗಳಿಗೆ ಹತ್ತು ಲಕ್ಷ ಸಂಪಾದಿಸುತ್ತೇನೆ, ಆದರೆ ನಾನು ಕೇಳಿರುವ ಡೆಲ್ಲಿಯ ಕಾಮರ್ಸ್ ಮಂತ್ರಾಲಯದಲ್ಲಿ ಸಿಕ್ಕಿದರೆ, ಸುಗ್ಗಿ, ದಿನಕ್ಕೆ ಎರಡು ಮೂರು ಲಕ್ಷವಾದರೂ ಮಾಡುತ್ತೇನೆ. 'ಸಾರೇ ಜಹಾನ್ ಸೆ ಅಚ್ಛಾ ಹಿಂದುಸ್ತಾನ್ ಹಮಾರಾ!'.


ನನ್ನ ಶ್ರೀಮತಿ ಇಂದು ಅವರು ಆಲ್ ಇಂಡಿಯ ರೇಡಿಯೋದಲ್ಲಿ ಪರ್ಮನೆಂಟ್ ಕೆಲಸದಲ್ಲಿದ್ದರು. ನಾಲ್ಕು ವರ್ಷಗಳ ರಜೆಯನ್ನು ಫಾರ್ಮಲ್ ಆಗಿ ಪಡೆದು ಜರ್ಮನಿಗೆ ಬಂದಿದ್ದರು. ಒಮ್ಮೆ ಡೆಲ್ಲಿಯಿಂದ ಬಂದ ತುಂಬಾ ಹಿರಿಯ ಅಧಿಕಾರಿಯೊಬ್ಬರಿಗೆ, ತಮ್ಮ ರಜೆ ಹೆಚ್ಚಿಸಲು ಅಪ್ಲಿಕೇಷನ್ ಕಳಿಸಿದ್ದನ್ನು ಹೇಳಿ ಅದರ ಬಗ್ಗೆ ಇನ್ಫರ್ಮೇಷನ್ ಅಂಡ್ ಬ್ರಾಡ್ಕಾಸ್ಟಿಂಗ್ ಮಂತ್ರಾಲಯದಲ್ಲಿ ವಿಚಾರಿಸಿ ಎಂದು ಇಂದು ಕೇಳಿಕೊಂಡರು. ಅವರು ಡೆಲ್ಲಿಯಿಂದ ಫೋನಿನಲ್ಲಿ ಹೇಳಿದ್ದು ಜೋರಾಗೇ ಷಾಕ್ ಕೊಡ್ತು. ಇಂದು ಅವರಿಗೆ ರಜೆ ಸ್ಯಾಂಕ್ಷನ್ ಮಾಡಿದ ಪ್ರತಿಯೇ ಆಫೀಸಿನಲ್ಲಿ ಇಲ್ಲವೆಂದೂ, 'ಷಿ ಈಸ್ ಅಬ್ಸ್ಕಾಂಡಿಂಗ್ ಎಂದು ಬರೆದಿದ್ದಾರೆ', ಎಂದೂ ಹೇಳಿದರು. ಸಧ್ಯ, ಅವರು ಇಂದು ಅವರ ಹತ್ತಿರ ಇದ್ದ ಪತ್ರದ ಪ್ರತಿಯನ್ನು ನೋಡಿ ಹೋಗಿದ್ದರಿಂದ ಐ ಅಂಡ್ ಬಿ ಮಂತ್ರಾಲಯದ ಹಿರಿಯ ಅಧಿ ಕಾರಿಗಳೊಡನೆ ಮಾತನಾಡಿ ಹೇಳಿ ಪರಿಸ್ಥಿತಿ ಸುಧಾರಿಸಿದರಂತೆ! ಅವರು ಬಂದಿಲ್ಲದಿದ್ದರೆ ಇಂದು ಅವರ ಕೆರಿಯರಿನ ಗತಿ!

ಹೀಗೆಯೇ, ಜರ್ಮನಿಯಲ್ಲಿದ್ದಾಗ, ಸರ್ವಶ್ರೀ ಶಿವರಾಜ ಪಾಟೀಲ್, ನಾರಾಯಣ ದತ್ತ ತಿವಾರಿ, ಸೀತಾರಾಮ ಕೇಸರಿ ಇತ್ಯಾದಿಯಾಗಿ ಅನೇಕ ನಾಯಕರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಆದರೆ, ಬೈ ದಿ ವೇ, ಅವರು ಮರಳಿ ಹೋದ ನಂತರ ಒಮ್ಮೆಯೂ, ಒಬ್ಬರನ್ನೂ ಭೇಟಿ ಮಾಡಲು ಹೋಗಲಿಲ್ಲ, ಅದು ಬೇಕು, ಇದು ಬೇಕು ಎಂದು ಕೇಳಲಿಲ್ಲ. ಹೀಗೆ ಹೇಳಿ ಜಂಭ ಹೊಡೆಯಬೇಕೆಂದಲ್ಲ, ಗುರುತು ಹೇಳಿ ಹೋಗಿ ಹಲ್ಲು ಕಿರಿದಿದ್ದರೆ ನನಗೆ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದಿತ್ತು. ಆದರೆ ಒಂದು ತಿಳಿದಿತ್ತು: ಸಾಧಾರಣವಾಗಿ ಅಧಿಕಾರ ಎಷ್ಟು ಹಿರಿಯದೋ, ಅಧಿಕಾರಿ ಅಷ್ಟೇ ಸಣ್ಣವನಾಗಿರುತ್ತಾನೆ. ಎಂಬುದು ನನ್ನ ಅನುಭವ!

ಇನ್ನು ಬೇರೆಯವರೊಡನೆ ಭೇಟಿಯಾದ ನೆನಪುಗಳು ಬಂದರೆ, ನಮ್ಮ ಅಪರಂಜಿ ಸಂಪಾದಕರಿಗೆ ಈಗಾಗಲೇ ಬೋರ್ ಆಗಿಲ್ಲವಾದರೆ, ಇನ್ನೊಮ್ಮೆ ಬರೆಯುತ್ತೇನೆ.

ವಕ್ರ ಪದಬಂಧ

• ಶಂಸ ಐತಾಳ



ಎಡದಿಂದ ಬಲಕ್ಕೆ

1. ಕನ್ನಡವೇ ನಿತ್ಯ; ಕನ್ನಡವೇ.... (2)
4. 'ಪಂಚತಂತ್ರ'ದ ಜಾಣನರಿ (4)
7. 'ಗಾಳಿಪಟ' ಹಾರಿಸಿದವರು (2)
8. ಹನ್ನೆರಡು ರಾಶಿಗಳಲ್ಲಿ ಕೊನೆಯದು (2)
9. ಬಂದರೋ ಬಂದರು 'ಹಳ್ಳ ಬಂತು ಹಳ್ಳ'ದ ... (2)
10. ಮುಂದಿನ ಜನಾಂಗವೆನಿಸಿದ ಇಂದಿನ ... (3)
11. 'ಅಪರಂಜಿಯ' ಸಂಪಾದಕರು (2)
13. 'ಭಲಾರೇ ವಿಚಿತ್ರಂ' ಯಾರಿವರು? (2)
15. ಬ್ರಹ್ಮಚಾರಿಯ ಮಗ (2)
16. 'ಸಂಕ್ರಮಣ'ದ ಸಂಪಾದಕರು (2)
18. ಇದು ಹೊಚ್ಚ ಹೊಸತು (3)
20. ಗದ್ಯ ಪದ್ಯ ಮಿಶ್ರಿತವಾದ ಒಂದು ಹಳೆಯ ಕಾವ್ಯ ಪ್ರಕಾರ (2)
21. ಪತ್ಯದ್ಲಿ... (3)
23. ನಮ್ಮ ಅಮ್ಮನ ಅಣ್ಣಾ (3)
25. ಕನ್ನಡ ವರ್ಣಮಾಲೆಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿದ ಡಾಕ್ಟರ್ (5)

ಕೆಳಗಿನಿಂದ ಮೇಲಕ್ಕೆ

2. ಸುತ್ತಲೂ ಅತ್ತೆ ಕೊಡುವ ಕಾರಂತರ ... (2)
3. ನಾಯಿ ಮರಿಯನ್ನು 'ತಿಂಡಿ' ಬೇಕೇ? ಎಂದು ಕೇಳಿದ ಅಜ್ಜಯ್ಯ (2)
5. 'ವಿಗಡವಿಕ್ರಮರಾಯ' ರಚಿಸಿದ ನಾಟಕಕಾರ (2)
6. 'ಕೆಳಗಿನಿಂದ ಮೇಲಕ್ಕೆ 19' ಅವರ ತಂದೆ (3)
9. 'ವಂಡರ್ ಕಣ್ಣ'ನ ಪದ ಪ್ರಚಂಡರು (3)
12. 'ಬಲದಿಂದ ಎಡಕ್ಕೆ' 4ರ ಸ್ನೇಹಿತ (4)
14. 'ಅಪರಂಜಿ'ಯ ತಾತ (2)
15. 'ರಂಗಾಯಣ'ದ ಪ್ರಪ್ರಥಮ ನಿರ್ದೇಶಕರು (3)
17. 'ಚೀಚಿ'ಯಲ್ಲದ ಇವರು (2)
19. 'ಕೆಳಗಿನಿಂದ ಮೇಲಕ್ಕೆ 6' – ಅವರ ಮಗ (3)
22. ಕಂಸನು ಜನಿಸಿದ ಉಡುಪಿ ಬ್ರಾಹ್ಮಣರ ಹೋಟೆಲು (5)
23. ಕಣ್ಣು (3)
24. ಪತ್ರಪುಳಿ (2) ಬೇಡವಾದರೇನು? ಇದಂತೂ ಬೇಕೇ ಬೇಕಲ್ಲ! (3)
25. ಈ ಪದಬಂಧ(ನ) ವನ್ನು ರಚಿಸಿದವರು (5)

ಉತ್ತರಗಳಿಗೆ ಮುಂದಿನ ಸಂಚಿಕೆ ನೋಡಿ

ಪುಸ್ತಕ ಪರಿಚಯ

• ಗೋಪಾಲಿ

ಶರಲೇಖನ ಸಾಹಸಗಳು

ಲೇಖಕರು: ಎಂ. ಶಿವಕುಮಾರ್

ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು



ಅಪರಂಜಿ ಪತ್ರಿಕೆಯಲ್ಲಿ ನಿಯತವಾಗಿ ಬಂದ ಶರಲೇಖನ ಬಿಡಿ ಎಪಿಸೋಡುಗಳು ಈಗ ಪುಸ್ತಕ ರೂಪದಲ್ಲಿ ಶರಲೇಖನ ಸಾಹಸಗಳು ಎಂಬ ಹೆಸರಿನಿಂದ ಪ್ರಕಟಗೊಂಡಿವೆ. ಷರ್ಲಾಕ್ ಹೋಂಸ್‌ನ ಪತ್ತೇದಾರಿಗಳನ್ನು ಓದಿ ಅದರ ಸವಿಯನ್ನು ಅನುಭವಿಸಿರುವ ಯಾರೇ ಆದರೂ ಬಹುಕಾಲ ನೆನೆಯುವಂತೆ ಪತ್ತೇದಾರಿಗಳು ಇರುತ್ತಿದ್ದುದನ್ನು ಬಲ್ಲವು. ಷರ್ಲಾಕ್ ಹೋಂಸ್ ಅಭಿಮಾನಿಗಳು ಯಾರೇ ಇರಲಿ ಅಥವಾ ಷರ್ಲಾಕ್ ಹೋಂಸೇ ಗೊತ್ತಿಲ್ಲದಿದ್ದರೂ ಶರಲೇಖನ ಸಾಹಸಗಳು ಸಲೀಸಾಗಿ ಓದನ್ನು ಸಾಗಿಸಲು ನೆರವಾಗುವುದರ ಜತೆಗೆ ಈ ರೀತಿಯ ಪತ್ತೇದಾರಿ ಕಥೆಗಳು ಕೊಲೆ, ಸುಲಿಗೆ, ನೇಣು, ಹೋರಾಟ ಪೊಲೀಸು ಜೈಲು ಇವುಗಳಿಲ್ಲದೆಯೂ ಓದುಗರನ್ನು ರಂಜಿಸಬಲ್ಲವು ಎಂದು ತೋರಿಸುತ್ತದೆ. ಷರ್ಲಾಕ್ ಹೋಂಸ್ ಅನ್ನು ಗೇಲಿ ಮಾಡಿ ಅಣಕು ಮಾಡುವ ಲೇಖಕರ ಉದ್ದೇಶ ಇಲ್ಲಿ ನೂರಕ್ಕೆ ನೂರೈವತ್ತರಷ್ಟು ಸಕ್ಸಸ್ ಆಗಿದೆ. ಕೆಲವು ಲೇಖನಗಳು ಓದುತ್ತಿರುವಂತೆ ನಗೆ ಬುಗ್ಗೆ ಹರಿಯುವಂತೆ ಪ್ರಚೋದಿಸುತ್ತದೆ. ಅದರಲ್ಲೂ ಜೋಕುಗಳಿಗೆ ನಂಬರುಗಳನ್ನು ಕೊಟ್ಟುಕೊಂಡು ಅದನ್ನು ಅನುಭವಿಸುವ ಲೇಖನ ನಮ್ಮ ಹಾಸ್ಯೋತ್ಸವದ ನೆನಪುಗಳನ್ನು ತರುತ್ತದೆ.

ಬದಲಾಗುತ್ತಿರುವ ದೇವೇಂದ್ರನ ಲೋಕದಲ್ಲಿ ಅಧಿಕಾರಕ್ಕಾಗಿ ಕಚ್ಚಾಟ ಶುರುವಾಗುತ್ತೆ.

ದೇವೇಂದ್ರನ ಸಾರಥಿ ಮಾತಲಿಯೂ ಮಿಕ್ಕ ರಾಕ್ಷಸರ ಜತೆ ಸೇರಿ ಆಯುಧಗಳನ್ನು ಸಂಗ್ರಹಿಸಿ ಬಿಡುತ್ತಾನೆ. ಅವನನ್ನು ಬಂಧಿಸಲು ಹೋದರೆ ಆತ ನಾಪತ್ತೆಯಾಗಿಬಿಡುತ್ತಾನೆ ಮತ್ತು ಆತ ಭೂಲೋಕಕ್ಕೆ ಬಂದಿದ್ದಾನೆ ಅಂತ ದೇವೇಂದ್ರನಿಗೆ ಮಾಹಿತಿ ಸಿಗುತ್ತೆ. ಮಾತಲಿಯನ್ನು ಹುಡುಕಿ ಕೊಡಿ ಎಂದು ದೇವೇಂದ್ರ ಶರಲೇಖನ ಬಳಿ ನೆರವಿಗೆ ಬರುತ್ತಾನೆ.

ಶರಲೇಖ ಮಾತಲಿಯನ್ನು ಪತ್ತೆ ಮಾಡಿದ್ದು ಹೇಗೆ? ಮಾತಲಿ ಸಾರಥಿಯಾಗಿದ್ದವನು. ಭೂಲೋಕದಲ್ಲಿಯೂ ಸಾರಥಿಯಾಗಿ ಅವನು ವೃತ್ತಿಯಲ್ಲಿ ತೊಡಗಬೇಕು ಅಂದರೆ ಅದು ಬೆಂಗಳೂರಿನ ರಿಕ್ಷಾ ಡ್ರೈವರ್ ಆಗಿ ಮಾತ್ರಾ ಸಾಧ್ಯ . ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ಇವನನ್ನು ಹುಡುಕುವುದು ಹೇಗೆ? ಕೂಗಿದ ಕಡೆಗೆ ಬರುವ, ಟ್ರಾಫಿಕ್ ಜಾಮುಗಳಲ್ಲಿ ಸಹನೆಯಿಂದ ಕಾಯುವ ಫುಟ್ ಪಾತುಗಳ ಮೇಲೆ ರಿಕ್ಷಾ ಓಡಿಸದ ಡ್ರೈವರನ್ನ ಪೋಲೀಸ್ ಉಳ್ಳಾಗಡ್ಡಿ ತಲಾಷ್ ಮಾಡುತ್ತಾನೆ. ಅವನೇ ಮಾತಲಿ ಎಂದು ಹೇಗೆ ಶರಲೇಖ ಪ್ರೂವ್ ಮಾಡುತ್ತಾನೆ ಗೊತ್ತೇ? ನೀವು ಕಣ್ಣು ಮಿಟುಕಿಸಿ ಅನ್ನುತ್ತಾನೆ. ಇಂದ್ರ ಲೋಕದವರಿಗೆ ಕಣ್ಣು ಮಿಟುಕಿಸಲು ಆಗದು. ಹೀಗೆ ಮಾತಲಿ ಸಿಕ್ಕಿ ಬೀಳುತ್ತಾನೆ.

ಇಡೀ ಪುಸ್ತಕದಲ್ಲಿ ಈ ರೀತಿಯ ಕಚಗುಳಿ ಇಡುವ ಇಪ್ಪತ್ತು ಲೇಖನಗಳಿವೆ ಮತ್ತು ಮತ್ತು ಇದರ ಓದು ಮುದ ನೀಡುತ್ತದೆ. ರಾತ್ರಿ ಮನೆಯಲ್ಲಿ ಒಬ್ಬರೇ ಇರಬೇಕಾದರೆ ಖಂಡಿತ ಈ ಪುಸ್ತಕ ಓದಬೇಡಿ-ನಿಮ್ಮ ನಗು ಕೇಳಿ ಅಕ್ಕ ಪಕ್ಕದವರು ಮನೇಲಿ ಹೆಂಡತಿ ಇಲ್ಲ ಅಂತ ಒಬ್ಬನೇ ಪಾರ್ಟಿ ಮಾಡ್ತಿದಾನೆ ಅಂತ ಅಂದುಕೋಬಾರದು. ಈ ಪುಸ್ತಕ ಮತ್ತೆ ಮತ್ತೆ ಓದಬಹುದಾದದ್ದು.



ಚೆನ್ನಕಿಂತ ಚೆನ್ನ ಕಾಂಟೆಸ್ಟ್!

• ತುರುವೇಕೆರೆ ಪ್ರಸಾದ್

ಮಹಿಳಾ ಮಂಡಲಿಯ ಆನಿವರ್ಸರಿಯನ್ನು ಬರ್ಜ್‌ದುಬೈನಲ್ಲಿ ಗ್ರಾಂಡಾಗಿ ಮಾಡಬೇಕೆಂಬ ಮಹಿಳಾ ಮಣಿಗಳ ಆಸೆಗೆ ದುಬೈನ ಆರ್ಥಿಕ ಬಿಕ್ಕಟ್ಟು ತಣ್ಣೀರೆರೆಚಿತ್ತು. ದುಬೈ ವರ್ಲ್ಡ್ ರಿಯಾಲ್ಟಿ ಸೆಂಟರ್ ಡಮಾರ್ ಅಂದು ನಮ್ಮ ಮಹಿಳಾಮಣಿಗಳು ದಂಗುಬಡಿದು ಹೋಗಿದ್ದರು. ಜಾಗತಿಕ ಹಿಂಜರಿತವನ್ನು ಲೆಕ್ಕಿಸದೆ ಕೆ.ಜಿ.ಗಟ್ಟಲೆ ಚಿನ್ನ ಹೇರಿಕೊಂಡು ದುಬೈನಲ್ಲಿ ಎಂಜಾಯ್ ಮಾಡಲು ಹೊರಟಿದ್ದವರು ಅಲ್ಲಿನ ಶೋಚನೀಯ ಪರಿಸ್ಥಿತಿ ತಿಳಿದು ಮಂಕು ಬಡಿದವರಂತೆ ಕುಕ್ಕರಿಸಿದ್ದರು. ಆಪರೇಶನ್ ಬರ್ಜ್‌ದುಬೈ ಕ್ಯಾನ್ಸಲ್ ಆದ ಹಿನ್ನೆಲೆಯಲ್ಲಿ ವಾರ್ಷಿಕೋತ್ಸವವನ್ನು ಮತ್ತೆ ಹೇಗೆ ಗ್ರಾಂಡಾಗಿ ಸೆಲೆಬ್ರೇಟ್ ಮಾಡುವುದು ಎಂಬ ಬಗ್ಗೆ ಹೆತ್ತೂರು ಸ್ವಾಮಿಗಳ ಮಠದಲ್ಲಿ ಚಿಂತನ ಮಂಥನ ಕಾರ್ಯಾಗಾರ ಶುರುವಾಗಿತ್ತು.

ಅಧ್ಯಕ್ಷೆ ಅಲಮೇಲಮ್ಮ ಯಾಕೆ ಎಲ್ಲಾ ಹೀಗೆ ಕರಂದ್ಲಾಜೆ ತರ ಕರದಂಟು ಕೈಯಿಂದ ಕಿತ್ಕಂಡೋರ ತರ ಮುಖ ಮಾಡ್ಕಂಡು ಕೂತಿದೀರ? ಮುಂದೇನು ಮಾಡಬಹುದು ಅಂತ ನಿಮ್ಮ ಅಭಿಪ್ರಾಯ ತಿಳಿಸಿ ಅಂದ್ರು.

ಇನ್ನೇನು ಮಾಮೂಲಿ ತರ ಗೇಮ್ಸ್ ಆಡಿಸಿ ಮುಗಿಸಿಬಿಡೋಣ? ಅಂದ್ರು ಅಂಬುಜಮ್ಮ.

ನಮಗೆ ಆರ್ಥ್ರೈಟಿಸ್, ರುಮ್ಯಾಟಿಕ್ಸ್, ನಾವೆಂತ ಗೇಮ್ಸ್ ಆಡಕ್ಕಾಗುತ್ತೆ? ಎಲ್ಲಾ ಎಂಗ್ ಚಾಪ್ಸ್ ಹೊಡ್ಕಂಡು ಬಿಡ್ತಾರೆ. ಬೇರೆ ಏನಾದರೂ ಮಾಡೋಣ ಅಂದ್ರು ಸುನಂದಮ್ಮ.

ಮಾಮೂಲಿ ತರ ಸ್ಪರ್ಧೆಗಳನ್ನೇ ಯಾಕೆ ಮಾಡಬಾರದು? ಸಾವಿತ್ರಮ್ಮನೋರು ಹಳೇ ಸಂಪ್ರದಾಯಕ್ಕೇ ಜೋತು ಬಿದ್ದರು.

ಏನು ಅತ್ತೆ-ಸೊಸೆ ಜಗಳ ಆಡಿಸೋದಾ? ಬೇಡಪ್ಪಾ, ಮನೇಲಿ ಆಡೇ ಸಾಕಾಗಿರುತ್ತೆ ಅಂದ್ರು ಶಂಕರಮ್ಮ.

ಮಳ್ಳಿ ಮಳ್ಳಿ ಮಿಂಚುಳ್ಳಿ ವಂದು ಗಿಳ್ಳಿ ಪೋ ಆಡಿಸುದ್ರೆ ಹೇಗೆ? ಕನಕಲಕ್ಷ್ಮಿ ಬಾಣ ಬಿಟ್ಟರು.

ಹೋಗ್ರಿ ರೀ! ನಮ್ಮ ಸೊಸೆಯರ ಕೈಲಿ ಮೂಗು ಚಿಗುಟಿಸಿಕೊಂಡು ಸಾಕಾಗಿರುತ್ತೆ. ಅದೆಲ್ಲಾ ರಾಜಕೀಯದವರ ಆಟ. ಪಾಪ! ನಮ್ಮ ಶೋಭಾ ಅವರು ಈ ಆಟ ಆಡಕ್ಕೆ ಹೋಗೇ ಎಡವಟ್ಟಾದದ್ದು. ಈ ಔಟ್ ಡೇಟೆಡ್ ಆಟಗಳೆಲ್ಲಾ ಬೇಡ, ಯಾವುದಾದರೂ ಹೊಸ ಆಟ ಇದ್ರೆ ಹೇಳಿ ಅಂದ್ರು ಕಮಲಮ್ಮ.

ರೀ! ಫಿನ್‌ಲ್ಯಾಂಡಲ್ಲಿ ಹೆಂಡ್ತಿ ಹೊತ್ಕಂಡು ಓಡೋ ಸ್ಪರ್ಧೆ ಇದೆಯಂತೆ. ಅದೇ ತರ ನಾವು ಗಂಡನ್ನ ಹೊತ್ಕಂಡು ಓಡೋ ಸ್ಪರ್ಧೆ ಮಾಡಿದ್ರೆ ಹೇಗೆ? ಪಲ್ಲಮೂಟೆ ಪೂರ್ಣಿಮ ಸಜೆಶನ್ ಕೊಟ್ಟರು.

ರೀ! ನಿಮಗೇನಾದರೂ ಬುದ್ಧಿ ಇದೆಯೇನ್ರೀ? ಗಂಡನ್ನ ಹೊರೋದು, ಮಕ್ಕಳನ್ನ ಹೆರೋದು ಸಾಕಪ್ಪಾ ಸಾಕು ಅನ್ನುವಷ್ಟು ಬೋರಾಗಿ ಹೋಗಿದೆ. ಅದನ್ನೇ ಮತ್ತೆ ಸ್ಪರ್ಧೆ ಅಂತ ಮಾಡೋದ್ರಲ್ಲಿ ಏನ್ರೀ ಮಜ ಇರುತ್ತೆ? ಇಂಡಿಯಾ ಗಂಡಂದಿರನ್ನು ಹೊರೋ ಫನ್ ಲ್ಯಾಂಡ್ ಅನ್ನೋ ಅಪಖ್ಯಾತಿ ಬಂದಿರೋದು ಸಾಲದಾ? ಇಷ್ಟಕ್ಕೂ ನಿಮ್ಮ ಹಾಗೆ ಗಂಡನ್ನ ಹೊರೋ ಕ್ಯಾಪಾಸಿಟಿ ಎಲ್ಲರಿಗೂ ಇರಬೇಕಲ್ಲ ಮೂದಲಿಸಿದರು ಯಮುನಾಬಾಯಿ.

'ಅದು ಬೇಡ ಅಂದ್ರೆ ಇನ್ನೇನು ಇದ್ದೇ ಇದೆಯಲ್ಲ? ಕಣ್ ಕಟ್ಟಿ ಮಡಕೆ ಒಡೆಸೋದು?' ಎಂದು ಓಲ್ಡ್ ಐಡಿಯಾ ಕೊಟ್ಟರು ವಿಶಾಲಾಕ್ಷಿ.

ಅಯ್ಯಯ್ಯೋ ಬೇಡಪ್ಪಾ, ಹೋದ ಸಾರಿ ಆಗಿದ್ದೇ ಸಾಕು. ಆ ಸುಂದರಮ್ಮನೋರು ತಾವು ಅಧ್ಯಕ್ಷರಾಗಲಿಲ್ಲ ಅನ್ನೋ ಸಿಟ್ಟಿಗೆ ವನಜಳಿಗೆ ಲೂಸಾಗಿ ಕಣ್ ಕಟ್ಟಿ ಅವಳು ಮಡಕೆ ಒಡೆಯೋ ನೆವದಲ್ಲಿ ನನ್ನ ಬುರುಡೇಗೇ ಬಾರಿಸಿರಲಿಲ್ವಾ? ಅ ಗುಬುಟು ಇನ್ನೂ ಹೋಗಿಲ್ಲ ಎಂದು ತಲೆ ಸವರಿಕೊಂಡರು ಅಂಬುಜಮ್ಮ. ಅಧ್ಯಕ್ಷರ ಜೊತೆಗೇ ಅಯಾಚಿತವಾಗಿ ಮಿಕ್ಕವರೂ ತಲೆ ಸವರಿಕೊಂಡು ನಿಟ್ಟುಸಿರುಬಿಟ್ಟರು.

ಅಷ್ಟರಲ್ಲಿ ಕ್ಲಬ್ಬಿನ ಆಲ್‌ರೌಂಡರ್ ಅನಿತಾ ಮೇಲೆದ್ದಳು: ನೋಡಿ, ಹಳೇ ಅನುಭವಗಳಿಂದ ನಾವು ಬೆಚ್ಚಿ ಬೆದರೋದು ಬೇಡ. ಈ ಕಣ್ ಕಟ್ಟೋ ಆಟ ಚೆನ್ನಾಗಿದೆ, ಇದರಲ್ಲಿ ಅರ್ಧ ಭಾಗ ಉಳಿಸಿಕೊಳ್ಳೋಣ. ಇನ್ನರ್ಧ ಭಾಗ ಬದಲಿಸೋಣ

ಅಂದ್ರೆ? ಎಲ್ಲಾ ರಾಗ ಎಳೆದರು.

ಅಂದ್ರೆ, ಕಣ್‌ಕಟ್ಟೋದು ಇರಲಿ, ಆದರೆ ಮಡಕೆ ಒಡೆಯೋ ಪೋರ್ಶನ್ ಬೇಡ

ಅಂದ್ರೆ ಇನ್ನೇನು ಒಡೆಯೋದು?

ಒಡೆಯೋದಲ್ಲ, ಹಿಡಿಯೋದು?

ಹಿಡಿಯೋದಾ? ನಾವು ಏನನ್ನ ಹಿಡಿಯೋದು? ಸ್ವಲ್ಪ ಡೀಟೈಲಾಗಿ ಹೇಳಿ ಅಂದ್ರು ನಂದಿನಿ.

ನಾವು ಹಿಡಿಯೋದಲ್ಲ, ನಾವು ಹಿಡಿಸ್ಕೊಳೋದು

ನಾವು ಹಿಡಿಸ್ಕೊಳೋದಾ? ಮದುವೆ ಆದ ಮೇಲೆ ನಮ್ಮನ್ನ ಇನ್ಯಾರು ಹಿಡೀತಾರೆ-ನಮ್ಮ ಗಂಡಂದಿರನ್ನು ಬಿಟ್ಟು

ನಾನು ಹೇಳಿದ್ದೂ ಅದನ್ನೇ ರೀ! ಗಂಡಂದಿರಿಂದಲೇ ಹಿಡಿಸಿಕೊಳ್ಳೋದು ಅಂತ

ಕಣ್ಣಾ ಮುಚ್ಚೇ, ಕಾಡೇ ಗುಡೇನಾ?

ಅಲ್ಲ, ಅದು ಮಕ್ಕಳಾಡೋದು. ಇದು ಚೆನ್ನಕಿಂತ ಚೆನ್ನ ಅಂತ ನಮ್ಮಂತೋರು ಆಡೋದು. ನೀವೆಲ್ಲಾ ಲಕ್ಸ್ ಅಡ್ವಟೈಸ್ ನೋಡಿದೀರಲ್ಲವಾ? ಅದರಲ್ಲಿ ಅಭಿಷೇಕ್ ಬಚ್ಚನ್ ಐಶ್ವರ್ಯಳನ್ನು ಹಿಡಿಯಲ್ವಾ?

ಓಹೋ! ಅದಾ? ಹೂ! ನೋಡಿದೀವಿ. ಚೆನ್ನಕಿಂತ ಚೆನ್ನ ಆಡ್! ಅದೇ ಐಶ್ವರ್ಯ ಅಭಿಷೇಕ್‌ದು ಕಣ್ ಕಟ್ಟಿ ಬಿಡ್ತಾಳೆ. ಅವನು ಅವಳನ್ನ ಹಿಡಿಯೋಕೆ ಟ್ರೈ ಮಾಡ್ತಾನೆ. ಅವಳ ಕೆನ್ನೆ, ಮೈ ಎಲ್ಲಾ ಸವರಿಕೊಂಡು ಹೋಗಿ ಕಡೇಗೆ ಒಂದು ಅಜ್ಜಿನ ಹಿಡ್ಕೊತಾನಲ್ಲ, ಅದೇ ತಾನೇ?

ಎಕ್ಸಾಕ್ಟ್‌ಲೀ ಅದೇ ರೀ! ನಾವೂ ನಮ್ಮ ಗಂಡಂದಿರ ಕಣ್ಣಿಗೆ ಬಟ್ಟೆ ಕಟ್ಟೋದು. ಅವರು ನಮ್ಮನ್ನ ಹಿಡೀಬೇಕು. ಯಾರು ತಮ್ಮ ಒರಿಜಿನಲ್, ಸ್ವಂತ ಹೆಂಡ್ತೀನೇ ಹಿಡೀತಾರೋ ಅವರು ಚೆನ್ನಕಿಂತ ಚೆನ್ನ ಬೆಸ್ಟ್ ಕಪಲ್ ಅನ್ನೋ ಪ್ರಶಸ್ತಿಗೆ ಪಾತ್ರರಾಗ್ತಾರೆ? ಏನಂತೀರಿ?

ಆದರೂ ನಮ್ಮ ಗಂಡಂದಿರು ಇದಕ್ಕೆ ಒಪ್ತಾರಾ? ಮನೇಲೇ ಕಣ್ಣು ಕಟ್ಟಿಸಿಕೊಂಡು ಕಣ್ಣಾಮುಚ್ಚಾಲೆ ಆಡಿ ಸಾಕಾಗಿ ಹೋಗಿರುತ್ತೆ ಅಮೂಲ್ ಅಮಲ ಅನುಮಾನ ವ್ಯಕ್ತಪಡಿಸುದ್ರು.

ಯಾಕೆ ಒಪ್ಪಲ್ಲ, ಇಷ್ಟು ಜನ ಹೆಂಗಸರು ಇರ್ತಾರೆ ಅಂದ್ರೆ ಖಂಡಿತಾ ಒಪ್ತಾರೆ

ಅದೇ ಡೌಟು? ಇಷ್ಟು ಜನ ಹೆಂಗಸರಿದ್ದಾಗ ಕಣ್ ಕಟ್ಟೋಕೆ ಬಿಡ್ತಾರಾ ಅಂತ

ಆದರೂ ಮಲ್ಟಿಪಲ್ ಛಾಯ್ಸ್ ಅಂದ್ರೆ ಗಂಡಸರು ಒಪ್ಕೊತಾರೆ ಬಿಡಿ

ಅಲ್ಲಿಗೆ ಚೆನ್ನಕಿಂತ ಚೆನ್ನಾ ಕಾಂಟೆಸ್ಟ್ ನಡೆಸುವುದು ಪಕ್ಕಾ ಆಗಿಹೋಯಿತು.

★ ★ ★

ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಚೆನ್ನಕಿಂತ ಚೆನ್ನ ಕಾಂಟೆಸ್ಟ್ ಅರೇಂಜ್ ಆಯ್ತು. ಎಲ್ಲ ಮಹಿಳಾ ಮಣಿಗಳು ತಮ್ಮ ಗಂಡಂದಿರೊಂದಿಗೆ ನಿಗದಿತ ಸಮಯಕ್ಕೆ ಹಾಜರಾದರು. ಇಡೀ ಕಲ್ಯಾಣ ಮಂಟಪವೇ ಹೆಂಗಳೆಯರು ಮತ್ತು ಅವರ ಗಂಡಂದಿರಿಂದ ತುಂಬಿ ತುಳುಕಿ ಹೋಯ್ತು. ಮೊದಲಿಗೆ ನಂದಿನಿ ಟರ್ನ್. ನಂದಿನಿ ಗಂಡನ ಕಣ್ಣಿಗೆ ಬಟ್ಟೆ ಕಟ್ಟಿ ಹೆಂಗಸರ ಮಧ್ಯೆ ಬಿಟ್ಟಳು. ತಾನೇನೂ ಐಶ್ವರ್ಯ ರೈಗಿಂತ ಕಮ್ಮಿ ಇಲ್ಲದಂತೆ ಬಾಗುತ್ತಾ ಬಳುಕುತ್ತಾ ಗಂಡನಿಗೆ ನೀರು ಕುಡಿಸಿದಳು. ಕಡೆಗೆ ಅವಳ ಗಂಡ ಅನಿತಾಳನ್ನು ಹಿಡಿದುಬಿಟ್ಟಾಗ ಇಡೀ ಕಲ್ಯಾಣ ಮಂಟಪವೇ ದೊಡ್ಡ ಹೇಶಾರವ ಮಾಡಿತು. ಅನಿತಾ ನಾಚಿಕೆಯಿಂದ ಕೆಂಪಾಗಿಹೋದಳು. ನಂದಿನಿ ಮಾತ್ರ ಮುಖ ಗಡಿಗೆ ಮಾಡಿಕೊಂಡಳು. ಅನಿತಾ ಗಂಡನ ಕಣ್ ಕಟ್ಟಿ ಬಿಟ್ಟಾಗ ಅವನು ಅನಿತಾಳನ್ನು ಹಿಡಿಯುವ ಬದಲು ಬ್ಯೂಟಿಕ್ವೀನ್ ಎಂದೇ ಹೆಸರಾಗಿದ್ದ ಲಾವಣ್ಯಳನ್ನು ಹಿಡಿದು ಎಲ್ಲರ ಅಸೂಯೆಗೆ ಪಾತ್ರನಾದ. ಅನಿತಾ ಹಲ್ಲುಮುಡಿ ಕಚ್ಚಿದಳು. ಲಾವಣ್ಯಳ ಗಂಡ ರಾಗಿಣಿಯನ್ನು ಹಿಡಿದು ಲಾವಣ್ಯಳ ಕಣ್ಣು ಕೆಂಪಾಗುವಂತೆ ಮಾಡಿದ. ಹೀಗೇ ಶೃತಿ, ಪದ್ಮಾ, ವಿನುತಾ, ಪ್ರಿಯಾ, ಅರ್ಚನಾ, ರೇಣುಕಾ, ಸುರೇಖಾ ಎಲ್ಲರ ಗಂಡಂದಿರೂ ಬೇರೆಯವರನ್ನು ಹಿಡಿದರೇ ಹೊರತು ಯಾರೊಬ್ಬರೂ ತಮ್ಮ ಹೆಂಡತಿಯನ್ನೇ ಹಿಡಿಯುವಲ್ಲಿ ಸಫಲರಾಗಲಿಲ್ಲ. ಕೊನೆಗೆ ವನಜಾಳ ಸರದಿ ಬಂತು. ಗಂಡನ ಕಣ್ಣಿಗೆ ಗಟ್ಟಿಯಾಗಿ ಬಟ್ಟೆ ಕಟ್ಟಿದ ವನಜಾ ಗಂಡನ ಕೈಗೆ ಸಿಗದೆ ಒನಪು, ಒಯ್ಯಾರ ಮಾಡುತ್ತಾ ಗಂಡನನ್ನು ಗಿರಗಿಟ್ಲೆ ಆಡಿಸಿದಳು. ಅದೆಷ್ಟು ಲಕ್ಸ್ ತಿಕ್ಕಿದ್ದಳೋ ಏನೋ, ಅವಳ ಗಂಡ ಏನೇ ಮಾಡಿದರೂ ಸಿಗದೆ ಜಾರಿ ಜಾರಿ ಹೋಗುತ್ತಿದ್ದ. ತಮ್ಮ ಹೆಂಡತಿಯರಿಗೆ ಲಕ್ಸ್ ತಂದು ಕೊಟ್ಟರೆ ಹೀಗೇ ತಮ್ಮ ಕಣ್ಣು ಕಟ್ಟಿ ಕೈಯ್ಯಿಂದ ಜಾರಿ

ಹೋಗುತ್ತಾರೆ, ಹುಶಾರಾಗಿರಬೇಕು ಎಂಬುದು ಅಲ್ಲಿದ್ದ ಗಂಡಸರಿಗೆಲ್ಲ ಮನವರಿಕೆ ಆಯಿತು. ಆದರೆ ಅವರೆಲ್ಲಾ ವನಜಳ ಬೆಡಗು, ಬಿನ್ನಾಣಗಳನ್ನು ಬಾಯಿ ಬಿಟ್ಟು ಕೊಂಡು ನೋಡುತ್ತಿರುವಂತೆಯೇ ಅವಳ ಗಂಡ ವನಜಳನ್ನು ಹಿಡಿದೇ ಬಿಟ್ಟ. ಇಡೀ ಛತ್ರ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿ ವನಜ ದಂಪತಿಗಳನ್ನು ಅಭಿನಂದಿಸಿತು. ಚೆನ್ನಕಿಂತ ಚೆನ್ನ ಪ್ರಶಸ್ತಿ ವನಜ ದಂಪತಿಗಳ ಪಾಲಾಯಿತು.

ಎಲ್ಲಾ ಮುಗಿದ ಮೇಲೆ ಬಫೆಯಲ್ಲಿ ಮಹಿಳಾ ಮಣಿಗಳೆಲ್ಲಾ ತಮ್ಮ ಗಂಡಂದಿರ ಸೋಲಿನ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಿದ್ದರು. ನಾನು ತುಂಬಾ ಆಸೆಯಿಂದ ಈ ಕಾಂಟೆಸ್ಟ್‌ಗೆ ಸಜೆಸ್ಟ್ ಮಾಡಿದ್ದೆ. ನೋಡ್ರೀ, ನಮ್ಮನೆಯವರು ಕೊನೆಗೂ ನನ್ನನ್ನ ಹಿಡೀಲಿಲ್ಲ ಅನಿತಾ ಬೇಜಾರು ಮಾಡಿಕೊಂಡಳು.

ಹೋಗಲಿ ಬಿಡ್ರೀ, ನೀವು ತುಂಬಾ ಜಾರ್ತಿದ್ರಿ ಅಂತ ಕಾಣುತ್ತೆ. ನಿಮ್ಮ ಯಜಮಾನರಿಗೆ ಗ್ರಿಪ್ ಸಿಕ್ಕಿಲ್ಲ ಸಮಾಧಾನ ಮಾಡಿದರು ಅಧ್ಯಕ್ಷೆ ಅಲಮೇಲಮ್ಮ.

ಅಯ್ಯೋ! ಏನು ಜಾರುದ್ರೆ ಏನು? ಕಣ್‌ಕಾಣೋ ಹಾಗೆ ಲೂಸಾಗಿ ಕಟ್ಟಿತ್ತಿಲ್ವಾ? ಮತ್ತೆ ನೋಡ್ಕಂಡು ಹಿಡೀಬೇಕು ತಾನೇ? ಎಲ್ಲಾ ಬೆಕ್ಕಸ ಬೆರಗಾದರು.

ಹೌದಾ? ನೀವೂ ಲೂಸಾಗಿ ಕಣ್ ಕಟ್ಟಿದ್ರಾ? ನಾನೊಬ್ಳೇ ಲೂಸಾಗಿ ಕಟ್ಟಿದ್ದದ್ದು ಅಂದ್ಕೊಂಡಿದ್ದೆ ಅಂದಳು ರಾಗಿಣಿ. ಮೆಲ್ಲಗೆ ಒಬ್ಬೊಬ್ಬರೇ ಬಾಯಿ ಬಿಟ್ಟರು. ಸುರೇಖಾ, ನಂದಿನಿ, ಪದ್ಮಾ, ಶೃತಿ ಎಲ್ಲಾ ತಮ್ಮ ಗಂಡಂದಿರ ಕಣ್ಣಿಗೆ ಲೂಸಾಗೇ ಬಟ್ಟೆ ಕಟ್ಟಿ ತಮ್ಮನ್ನೇ ಹಿಡಿಯಲಿ ಎಂದು ಮಾಡಿದ ಸಂಚು ವಿಫಲವಾಗಿತ್ತು. ಈ ಗಂಡಸರ ಬುದ್ಧೀನೇ ಇಷ್ಟು! ಕಡೆಗೂ ಹೀನ ಸುಳಿ ಬೋಳೀಸುದ್ರೆ ಹೋಗಲ್ಲ ಅಂತ ತೋರಿಸಿಬಿಟ್ರಲ್ಲ, ಬರ್ಲಿ ಮನೇಗೆ ಇವತ್ತು ಎಂದು ಎಲ್ಲಾ ಕರಕರ ಹಲ್ಲು ಕಡಿದರು.

★ ★ ★

ಹಾಗೆಯೇ ವನಜಳ ಗಂಡ ವನಜಳನ್ನೇ ಹಿಡಿದ ಬಗ್ಗೆಯೂ ಚರ್ಚೆ ಆಯಿತು. ವನಜಾ ಲೂಸಾಗೇ ಕಟ್ಟಿದ್ದರೂ ನಾಯಿ ತರ ಲೂಸ್ ಬುದ್ಧಿ ತೋರಿಸದೆ ನಿಯತ್ತಿನಿಂದ ವನಜಳನ್ನೆ ಹಿಡಿದ ಅವಳ ಗಂಡಸ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಇದರ ಹಿಂದಿನ ಗುಟ್ಟೇನು ಎಂದು ತಿಳಿಯುವ ಹಂಬಲವಾಯಿತು. ಅಷ್ಟರಲ್ಲಿ ವನಜಳ ಗಂಡನೇ ಅತ್ತ ಬಂದ. ಹೆಂಗಸರೆಲ್ಲಾ ಅವನನ್ನು ಮುತ್ತಿದರು:

ನಿಮ್ಮ ಯಶಸ್ಸಿನ ಗುಟ್ಟೇನು? ನೀವು ವನಜಳನ್ನೇ ಹೇಗೆ ಮತ್ತು ಏಕೆ ಹಿಡಿದ್ರಿ? ಅಷ್ಟು ಗಾಢವಾದ ಅನ್ಯೋನ್ಯ ಸಂಬಂಧನಾ ನಿಮ್ಮದು?

ಅನ್ಯೋನ್ಯನೂ ಇಲ್ಲ ಎಂತದ್ದೂ ಇಲ್ಲ ಮಣ್ಣು. ಮೊದಲೇ ಪ್ಲಾನ್ ಮಾಡಿದ್ದ ಹಾಗೆ ಕಣ್ಣಿಗೆ ಬಟ್ಟೆ ಕಟ್ತಾ ವನಜ ನನ್ನ ಜೇಬಲ್ಲಿದ್ದ ಲಾಕರ್ ಕೀ ಹಾರಿಸಿದ್ಲು. ಅದನ್ನೆಲ್ಲಿ ಏಮಾರಿಸಿಬಿಡ್ತಾಳೋ ಅಂತ ಕಷ್ಟಪಟ್ಟು ಹಿಡಿದೆ ಅಂದ. ವನಜಳಿಗಿದ್ದ ಚಾಲಾಕಿತನ ತಮಗೆ ಇಲ್ಲದೆ ಹೋಯಿತಲ್ಲ ಅಂತ ಮಹಿಳಾಮಣಿಗಳೆಲ್ಲಾ ತಲೆ ಚಚ್ಚಿಕೊಂಡ್ರು.

ಸಂಗೀತ - ಸ್ವಾರಸ್ಯ

• ವೈ.ವಿ. ಗುಂಡೂರಾವ್

ನಿರೂಪಕ: ನನ್ನ ಗೆಳೆಯರು ಇಬ್ಬರಿದ್ದಾರೆ. ಒಬ್ಬ ಕರ್ನಾಟಕ ಸಂಗೀತಗಾರ. ಇನ್ನೊಬ್ಬ ರಸಿಕ. ಒಬ್ಬನಿಗೆ ಹಾಡೋದೇ ಒಂದು ಶಕ್ತಿ. ಇನ್ನೊಬ್ಬನಿಗೆ ಕೇಳೋದರಲ್ಲೇ ಆಸಕ್ತಿ. ಜೀವನದ ಘಟನೆಗಳನ್ನೆಲ್ಲಾ ಸಂಗೀತದ ರಂಗಗಳಿಗೆ limit ಮಾಡ್ತಾ ಇರ್ತಾರೆ ಇಬ್ಬರೂ. ಬೆಳಿಗ್ಗೆ ಎದ್ದ ತಕ್ಷಣ ಹಲ್ಲು ಉಜ್ಜುವಾಗ ಹಾಡೋ ರಾಗದಿಂದ ಹಿಡಿದು, ಸಾಯೋವರೆಗೂ ಹಾಡೋ ರಾಗಗಳ ಕುರಿತು ಒಂದು ವಕ್ರದೃಷ್ಟಿ ಬೀರೋದು ಅವರ ಚಟ. ಅವರ ಮಾತುಗಳನ್ನು ಕೇಳಿದರೆ ಸಂಪ್ರದಾಯಸ್ಥರಿಗೆ ಸಿಟ್ಟು ಬರಬಹುದು. ಮಜ ತೊಗೋಳೋರಿಗೆ ಒಂದು ಮನರಂಜನೆ. ಅವರ ಚರ್ಚೆ ನಮಗೆ ಸ್ವಲ್ಪ ಸಂಗೀತ ಜ್ಞಾನಾನೂ ನೀಡುತ್ತೆ. ಬನ್ನಿ.. ಅವರು ಮಾತ್ ಹಾಡೋದನ್ನ ಕೇಳಿಸಿಕೊಳ್ಳೋಣ.

ಸುರೇಶ: ಏನಪ್ಪಾ ಪರೇಶಾ! ಬಹಳ ಪರೇಶಾನ್ ಆಗಿರೋ ತರಹ ಇದ್ದೀಯಾ! ಏನು ಸಮಾಚಾರಾ?

ಪರೇಶ: ಪರೇಶಾನ್ ಏನಿಲ್ಲ ಸುರೇಶ. ಬಾ... ಕೂತ್ಕೊ... ಹಾಗೇ ವಿಚಾರ ಮಾಡ್ತಾ ಇದ್ದೆ ನಮ್ಮ ಇಡೀ ಜೀವನ ಒಂದು ಸಂಗೀತ ಇದ್ದ ಹಾಗೆ.

ಸುರೇಶ: ನಿನಗೆ ಸಂಗೀತ ಬಿಟ್ಟರೆ ಬೇರೆ ಏನೂ ವಿಚಾರನೇ ಬರೋದಿಲ್ಲವಾ? ಸಂಗೀತಗಾರ ಅಂದ ಮಾತ್ರಕ್ಕೆ ಯಾವಾಗಲೂ ಅದೇ ವಿಚಾರ ಮಾತಾಡಬೇಕಾ?

ಪರೇಶ: ಏಯ್! ಬರೀ ನಾನು ಮಾತ್ರ ಅಲ್ಲವೋ. ಪ್ರತಿಯೊಬ್ಬರ ಜೀವನಾನೂ ಸಂಗೀತಾನೇ. ಶೃತಿರ್ಮಾತಾ, ಲಯ ಪಿತಾ. ಸಂಸಾರ, ಸಂಸ್ಥೆ ಸಮಾಜ, ಈ ಮೂರು 'ಸ' ಕಾರಗಳಲ್ಲಿ ಜೀವನ ಸಂಗೀತದ ಸಾಕಾರ ಆಗಬೇಕು. ಹಾಡುವವರು ವಾದ್ಯಗಾರರೂ ಹೊಂದಿಕೊಂಡು ಹೋದರೆ ಹೇಗೆ ಸಂಗೀತ ಇಂಪೋ, ಹಾಗೆ ಸಂಸಾರದ ಸದಸ್ಯರು, ಸಹೋದ್ಯೋಗಿಗಳು, ಸುತ್ತಮುತ್ತಲಿನವರೂ ಒಬ್ಬರಿಗೊಬ್ಬರು ಹೊಂದಿಕೊಂಡು ಹೋದರೆ ಬಾಳು ಇಂಪು, ಕಂಪು, ತಂಪು.

ಸುರೇಶ: ಈಗ ಯಾಕೆ ಈ ಉಪದೇಶ?

ಪರೇಶ: ಉಪದೇಶ ಅಲ್ಲ... ಹೇಳತೀನಿ ಕೇಳು. ನಮ್ಮ ಬಾಳಿನ ಸಂಗೀತ ದಿನನಿತ್ಯದ ಚಟುವಟಿಕೆಗಳಿಂದ ಪ್ರಾರಂಭ

ಸುರೇಶ: ಯಾಕೆ ಹುಟ್ಟಿದಾಗಲಿಂದ ಅಂತ ಹೇಳು. ಪ್ರತಿಯೊಬ್ಬ್ರೂ ಹುಟ್ಟಿದ ತಕ್ಷಣ ಅಳೋದಿಲ್ಲವಾ? ಅದೇ ಒಂದು ರಾಗ ಅಂದುಬಿಡು.

ಪರೇಶ: ಅನ್ನೋದೇನು! ಅದೇ ಮೊದಲನೆ ಆಲಾಪನೆ. ಕಿರಿಕಿರಿ ಪ್ರಿಯರಾಗ. ನಂತರ ಬೆಳೀತಾ ಬೆಳೀತಾ ಸ್ವರ ಪ್ರಸ್ತಾರ. ಆಡ್ತಾ ಆಡ್ತಾ ಆಟದ ಸಾಮಾನುಗಳು ಅನ್ನುವ ವಾದ್ಯಗಳ ವಾದನ. School, college ಗಳಿಗೆ ಬಂದ ಮೇಲೆ ಗುಂಪು ಗಾಯನ, orchestra, fusion music, confusion music.

ಸುರೇಶ: Sorry. ಮಧ್ಯೆ ಬಾಯಿ ಹಾಕಿದೆ. ಈದಿನ ನಿತ್ಯದ ಸಂಗೀತದಲ್ಲಿ ಏನಾದರೂ ವ್ಯವಸ್ಥೆ ಇದೆಯೋ ಅಥವಾ ಇಲ್ಲವೋ

ಪರೇಶ: ಮೊದ ಮೊದಲ ತುಂಬಾ crude ಸಂಗೀತ, ಶಾಸ್ತ್ರೀಯ ಅಲ್ಲ. ಆದರೆ ಬೆಳೀತಾ ಬೆಳೀತಾ ನಮ್ಮ ಜೀವನ ಸಂಗೀತ ಶಿಸ್ತುಬದ್ಧವಾಗ್ತಾ ಆಗ್ತಾ ನಮ್ಮ ಬಾಳು ಶಾಸ್ತ್ರೀಯ ಸಂಗೀತ ಆಗ್ತಾ ಹೋಗುತ್ತೆ. ಅದರೂ ಕರ್ನಾಟಕ ಶಾಸ್ತ್ರೀಯ ಸಂಗೀತ. ವಿವಿಧ ರೀತಿ ಜನಗಳು, ವಿವಿಧ ಸಂದರ್ಭಗಳೇ, ವಿವಿಧ ರಾಗಗಳನ್ನು ಕಲಿಸುವ ಗುರುಗಳು.

ಸುರೇಶ: ನೋಡಪ್ಪಾ! ನಾನು ನಿನ್ನ ಹಾಗೆ ಸಂಗೀತಗಾರನಲ್ಲದಿದ್ದರೂ ಸ್ವಲ್ಪ ಸ್ವಲ್ಪ ಸಂಗೀತ ಕೇಳಿ ಬಲ್ಲೆ. ನನಗೆ ಅರ್ಥವಾಗೋ ಹಾಗೆ ನಿನ್ನ ಈ ಸಂಶೋಧನೆ ಸ್ವಲ್ಪ ವಿವರಿಸ್ತೀಯಾ? ಸಂಶೋಧನೆ ಅಂದರೇನು? ಅದೇ ನೀನು ಹೇಳಿದೆಯಲ್ಲಾ ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲೇ ಶಾಸ್ತ್ರೀಯ ಸಂಗೀತದ ರಾಗಗಳು ಇರುತ್ವೆ ಅಂತ. ಅದನ್ನು ಸ್ವಲ್ಪ ಹಾಡುವವನಾಗು. ಬೇಡ ಬೇಡ. ಅದರ ಬಗ್ಗೆ ಆಡುವವನಾಗು.

ಪರೇಶ: ಆಗಲಿ. ನೀನು ಮಾತ್ರ ಓಡುವವನಾಗಬೇಡ.

ಸುರೇಶ: ಕಾಡುವವನೂ ಆಗಲ್ಲ. ಪ್ರಾರಂಭಿಸು ನಿನ್ನ ಕಚೇರಿ.

ಪರೇಶ: ಇದು ನಿಜವಾದ ಸಂಗೀತ ಅಲ್ಲ. ಸಂಗೀತದ ಬಗ್ಗೆ ಒಂದು ವಕ್ರದೃಷ್ಟಿ. ನೋಡಪ್ಪಾ! ನೀನು ದಿನಾ ಬೆಳಿಗ್ಗೆ ಎದ್ದ ಕೂಡಲೇ ಏನು ಮಾಡ್ತೀಯಾ? ಹಲ್ಲು ಉಜ್ಜುತ್ತೀಯ ಅಲ್ಲವಾ?

ಸುರೇಶ: ರಾತ್ರಿ ಮಲಕೊಳಕ್ಕೆ ಮುಂಚೇನೂ ಉಜ್ಜುತೀನಿ.

ಪರೇಶ: ಉಜ್ಜು Tooth Paste Companyಗೆ ಲಾಭ ಆಗುತ್ತೆ. ನಾನು ಹೇಳಿದ್ದು ಬೆಳಿಗ್ಗೆ

ಸುರೇಶ: ಹೂಂ... ಹೇಳು....

ಪರೇಶ: ಆವಾಗ ಹಾಡುವ ರಾಗಾನೇ ಕರಕರಪ್ರಿಯ. ಆಮೇಲೆ Coffee ಕುಡೀತೀಯಾ ತಾನೇ? ಆಗ "ಚಂದ್ರಮಂಚಕೆ ಬಾ ಚಕೋರಿ" ಅಂತ ಹಾಡುವ ರಾಗ ಕಾಫಿ ರಾಗ.

ಸುರೇಶ: ಕೆಲವರು ಮೊದಲೇ ಕಾಫಿ ರಾಗ ಹಾಡಿ, ನಂತರ ಕರಕರಪ್ರಿಯ ಹಾಡ್ತಾರಲ್ಲವಾ?

ಪರೇಶ: ಹಾಡ್ತಾರೆ. ಅಂಥವರ ಕಚೇರಿಲಿ ಅವರ ಹತ್ರ ಕೂತ್ಕೋಬಾರದು. YNK ಹೇಳಿದ ಹಾಗೆ "ದೂರವಿರು ದೂರ್ವಾಸನೆ, ಬರುತಲಿದೆ ದುರ್ವಾಸನೆ" ಆಮೇಲೆ shave ಮಾಡಿಕೊಳ್ಳುವ ಹಾಡು ರಾಗ "ಮುಖಾರಿ"

ಸುರೇಶ: ಸರಿ, ಹಲ್ಲು, coffee, shave ಆಯಿತು ಮುಂದೆ?

ಪರೇಶ: ಮುಂದೆ ಅಲ್ಲ ಹಿಂದೆ. ಅಂದರೆ Bus stop ನಲ್ಲಿ Q ನಿಲ್ಲುತ್ತೇವಲ್ಲಾ ಆಗ ಹಾಡುವ ರಾಗ ಹಾರೋಳ. ಹಿಂಡ-ಹಿಂದೋಳ.

ಸುರೇಶ: ಸರಿ. Officeಗೆ generally late ಮಾಡಿಕೊಂಡು ಬೇಗ ಬೇಗನೆ ಹೊಗ್ತೀವಲ್ಲಾ ಆಗ ಬೇಗಡೆ ರಾಗಾನಾ ಹಾಡುವುದು?

ಪರೇಶ: ಏಯ್ ಪರವಾಗಿಲ್ಲ ಕಣೋ. Guess ಮಾಡಿಬಿಟ್ಟೆ ಆಮೇಲೆ newspaper ಓದುವಾಗಲೂ ಅದೇ. ಬೇಗಡೆ ರಾಗ ಪಾಡಿ title ನಾವ್ ನೋಡಿ ಬೇಗ್ ಬೇಗ್ ನಡಿಯೋದು ನೋಡಿ ದಯಮಾಡಿ ಬಲು ಅಪರೂಪ ನಂ ಜೋಡಿ ಕಚೇರಿಗೆ ಪೋಗೊವಾ ಬೇಗ್ ನಡಿ ಅಂತ Officeಗೆ Late ಆಗಿ ಹೊರಡೋದು.

ಸುರೇಶ: ಸರಿಯಪ್ಪ ಆಮೇಲೆ....

ಪರೇಶ: ಆಮೇಲೆ ಅಂದರೆ, ಪ್ರತಿ ಹಂತದಲ್ಲೂ ಇರಲ್ಲ. ವಿವಿಧ ಸಂದರ್ಭಗಳಲ್ಲಿ, ವಿವಿಧ ರಾಗಗಳು ಅಷ್ಟೆ

ಸುರೇಶ: ಸರಿ. ಬೇರೆ ಸಂದರ್ಭಗಳು ಯಾವುವು ಹೇಳು.

ಪರೇಶ: ಅವರಿವರ ಮೇಲೆ complaint ಮಾಡ್ತೀರಲ್ಲಾ, ಆಗ ಹಾಡುವ ರಾಗ ದೂರ್‌ವಾಣೀ.

ಸುರೇಶ: ಗಂಡ-ಹೆಂಡತಿ ಜಗಳ ಆಡ್ತಾರಲ್ಲ, ಆಗ ಅವರು ಹಾಡುವ duet ರಾಗ ಕದನ ಕುತೂಹಲನಾ?

ಪರೇಶ: ಪರವಾಗಿಲ್ಲ ಕಣೋ, ಅನುಭವಸ್ಥ... ಅದು duet ಅಲ್ಲ duel. ಜಗಳ ಆಡೋದಕ್ಕೆ ರಾಗ ಬೇಕಾದರೆ, ಜಗಳ ಆಡದೆ ಇರೋದಕ್ಕೆ ಬೇಕು ಅನು-ರಾಗ.

ಸುರೇಶ: ಆ ಹೆಸರಿನಲ್ಲಿ ಒಂದು ರಾಗ ಇದೆಯಾ?

ಪರೇಶ: ಇಲ್ಲ, ನಾವದನ್ನು ನಮ್ಮ ಒಳಗಿನಿಂದ ತಂದುಕೋಬೇಕು. ಇರಲಿ. ಕದನ ಕುತೂಹಲ ಅಂದೆಯಲ್ಲಾ?

ಸುರೇಶ: ಅದೇ ಗಂಡ-ಹೆಂಡತಿ ಹಾಡೋದು.

ಪರೇಶ: ಗಂಡ-ಹೆಂಡತಿ ಆಗೋದಕ್ಕೆ ಮುಂಚೆ, ಪ್ರೇಮಿಗಳು ಹಾಡೋ ರಾಗ ಯಾವುದು ಗೊತ್ತಾ ಕದನ ಕುತೂಹಲ ಅಲ್ಲ... ಅದು ಮದನ ಕುತೂಹಲ.

ಸುರೇಶ: ಏಯ್ ಪರೇಶ ನಿನ್ನ ಸಹವಾಸ ಮಾಡಿ ಮತ್ತು ಸಂಗೀತ ಕಚೇರಿಗಳನ್ನು ಕೇಳಿ, ನನಗೂ ಕೆಲವು ರಾಗಗಳನ್ನು identify ಮಾಡೋ trick ಗೊತ್ತಾಗಿಬಿಟ್ಟಿದೆ.

ಪರೇಶ: ಏನದು ನಿನ್ನ tricks ಸ್ವಲ್ಪ ಕಕ್ಕು.

ಸುರೇಶ: ನಮ್ಮ ಆಫೀಸಿನಲ್ಲಿ ಒಬ್ಬ ಅಟೆಂಡರ್ ಇದ್ದಾನೆ. ಅವನು ಬಾಸ್‌ಗೆ ಹಾಡೋ ರಾಗ.

ಪರೇಶ: ಶಂಕರಾಭರಣಾನಾ?

ಸುರೇಶ: ಅಲ್ಲ... ಕಿಂಕರಾಭರಣ.

ಪರೇಶ: ಭಗವಂತನ ಭಕ್ತರೂ ಅದೇ ರಾಗ ಹಾಡುವುದು – ಕಿಂಕರಾಭರಣ.

ಸುರೇಶ: ಏಯ್ ಪರೇಶ ಈ ಕುಡುಕರೂ ಹಾಡೋ ರಾಗ ಯಾವುದು ಗೊತ್ತಾ? ರಾಗ್ ದರ್ಬಾರ್...

ಪರೇಶ: ಹಾಗೆಲ್ಲಾ ಅನ್ನಬಾರದು... ಎಂತೆಂಥ ಕೃತಿಗಳು ಈ ರಾಗದಲ್ಲಿವೆ. ಎಂತೆಂಥ ಸಂಗೀತಗಾರರು ಆ ರಾಗಾನ ಅಮರ ಮಾಡಿದಾರೆ.

ಸುರೇಶ: irritate ಮಾಡಿಕೊಬೇಡವ್ವೋ... ಸುಮ್ಮನೆ ತಮಾಷೆಗೆ ಅಷ್ಟೆ ಹಾಗೆ ನೋಡಿದರೆ ಕಿಂಕರಾಭರಣ ಅಂತೆಲ್ಲಿದೆ ರಾಗ? ಇದು ಬರೀ ವಕ್ರದೃಷ್ಟಿ ಅಷ್ಟೆ In lighter vein, very light music.

ಪರೇಶ: ಆದರೆ ನೀನು ಹೇಳಿದ್ದು light music ಅಲ್ಲ, tight music. ಮನುಷ್ಯ tight ಆದ ಹಾಗೂ ರಾಗ loose ಆಗುತ್ತೆ.

ಸುರೇಶ: ನಮ್ಮ ಆಫೀಸ್‌ನಲ್ಲಿ ಒಬ್ಬ ಬಾಸ್ ಇದಾನೆ. ಯಾವಾಗಲೂ ಕಿರಿಕಿರಿ. ಅವನು ತಪ್ಪುಗಳನ್ನು ಕಂಡುಹಿಡಿದು ಅವಮಾನ ಪಡಿಸೋದರಲ್ಲಿ ಎತ್ತಿದ ಕೈ, ಎತ್ತಿದ ಗಂಟಲು. ಅವನು ಹಾಡೋದು ರಾಗಮಾಲಿಕೆ. ಬೈಯೋದರಲ್ಲಿ ಮುಂದು, ಆದ್ದರಿಂದ ಮುಂದೋಳ, ಅಂದರೆ ಮುಂದೆ ಇರುವ ತೋಳ. ಅವನು ಬೈಯುವಾಗ ಅವನ ಧ್ವನಿ, ಹಂಸಧ್ವನಿ Arguments ಜಾಸ್ತಿ.

Bossನ ಮಾಡಿಕೊಂಡೆನ್ನ, save me

Staffಇನ ಸಂಕಟಕ್ಕೆಲ್ಲಾ

Bossನ ಮಾಡಿಕೊಂಡೆನ್ನ, save me ಅಂತ

"ವಾದ' ನಾಮಕ್ರಿಯೆ ರಾಗ ಹಾಡೋದರಲ್ಲಿ expert. ಆದರೆ ಲೇಡಿ ಸ್ಟಾಫ್ ಇರ್ತಾರಲ್ಲ – ರಂಜನಿ, ಶ್ರೀರಂಜನಿ, ಜನರಂಜನಿ, ಶಿವರಂಜನಿ, ಕಲ್ಯಾಣಿ ಅಂತೆಲ್ಲಾ ಅವರುಗಳ ಹತ್ತಿರ 'ಮೋಹನ'ರಾಗ ಹಾಡ್ತಾನೆ ಈ 'ಭೂತ'.

ಪರೇಶ: ದರ್ಬಾರ್ ಅಂದೆಯಲ್ಲಾ ನೀನು. ಅದರ hang overನಲ್ಲಿ ಹೊರಗಡೆ ಬಂದು ಸರ್ಕಲ್ ಸುತ್ತುವಾಗ ಹಾಡುವ ರಾಗ (ಹಾಡು) ಯಾವುದು ಯಾವುದು ಯಾವುದು, ಹಾಡುವ ರಾಗವು ಯಾವುದು?

ಸುರೇಶ: ಅದೇ ಚಕ್ರವಾಕ ಅಲ್ಲವಾ? ಅದೇ ಜನಗಳು ಸೊಟ್ಟ ಸೊಟ್ಟಕ್ಕೆ ನಡೀತಾರಲ್ಲಾ ಆಗ ಅವರು ಹಾಡೋ ವಕ್ರವಾಕ.

ಪರೇಶ: ಪರವಾಗಿಲ್ಲವ್ರೋ. ಈ ಮೂರೂ ರಾಗಗಳ ಪರಿಚಯ ಚೆನ್ನಾಗಿರೋ ಹಾಗೆ ಕಾಣುತ್ತೆ. ಅದರ ಜೊತೆ "ಶೀಷ" ವರ್ಧಿನಿ ಅಂತಾನೂ ಸೇರಿಸಿಕೊಂಡುಬಿಡು. ಅಲ್ಲಿಗೆ ಮಂಗಳ ಹಾಡಿಬಿಡಬಹುದು "ಅವಮಾನ" ಅಂತ.

ಸುರೇಶ: ಅಂದ ಹಾಗೆ ಪರೇಶ! ಈಗ ಎಲ್ಲೆಲ್ಲೂ ಕೊಳ್ಳುಬಾಕ ಸಂಸ್ಕೃತಿ ಜಾಸ್ತಿ. ಸಾಲದಲ್ಲಿ ಮುಳುಗುತ್ತಾ ಇದಾರೆ ಎಲ್ಲರೂ

(ಹಾಡು) ಸಾಲವನ್ನು ತಡೆಯೋರು ಯಾರೂ ಇಲ್ಲ
ಕಾಲುಗಳ ಓಡಿಯೋಕೆ ಇಲ್ಲಿ ಎಲ್ಲ
ನಮ್ಮಿಂದ ಅವರ್ನ, ಅವರಿಂದ ನಮ್ನ
ದೂರ ಮಾಡಲು ಎಂದೂ ಆಗಲ್ಲ

ಇದು ಯಾವ ರಾಗ ಹೇಳು

ಪರೇಶ: ನನ್ನ ಆಪ್ತಮಿತ್ರ. ಇದು "ಆಪತ್ ಮಿತ್ರ" ರಾಗ ಆದರೆ ಒಂದು ರೀತೀಲಿ ಇದೂ ರಾಗಮಾಲಿಕೇನೇ. ನೀನು installmentsಲಿ ತಾನೇ ಸಾಮಾನ್ಯವಾಗಿ ಸಾಲ ತೀರಿಸೋದು.

ಸುರೇಶ: ಹೌದು... ತೀರಿಸಿದರೆ... ಅದು installmentsನಲ್ಲೇ... ಕಂತುಗಳಲ್ಲೇ.

ಪರೇಶ: ಆಗ ಹಾಡುವ ರಾಗಾನೇ "ಕಂತುವರಾಳಿ" ಎಲ್ಲಾ ಕಂತುಗಳೂ ತೀರಿದ ಮೇಲೆ "ಶುಭ ಕಂತುವರಾಳಿ" ಇಲ್ಲದಿದ್ದರೆ "ಪುರಾಣ" ರಾಗ ಹಾಡಬೇಕಾಗುತ್ತದೆ.

ಸುರೇಶ: ಸರಿಯಪ್ಪ ಲೇಟ್ ಆಗ್ತಾ ಇದೆ. ಹೊರಡೋಣ. ಇನ್ನು ಕೊನೆಯದಾಗಿ, ನಮ್ಮ ಬದುಕಿನ ವಿವಿಧ ಸಂದರ್ಭಗಳಲ್ಲಿ ವಿವಿಧ ರಾಗಗಳು ಹಾಸು ಹೊಕ್ಕಾಗಿ ಇದ್ದು ಕೊನೆಗೆ, ಅಂತಿಮ ಯಾತ್ರೆ ಸಮಯದಲ್ಲಿ ಹಾಡುವ ರಾಗ ಯಾವುದು?

ಪರೇಶ: ಅದೇ ಕಣೋ.... ರಾಗ "ಸಾವೇರಿ" ...ಸಾವೇ...ರೀ... 'ಶುದ್ಧ ಸಾವೇರಿ...'

ಉದ್ಭವ - ಬಿದ್ಭವ

ಬೆಳೆ
ಉದ್ಭವ
ಬೆಳವ ರೈತ
ಮಾತ್ರ
ಬಿದ್ಭವ

- ಎನ್. ಪ್ರಕಾಶ್

ಶುಭಸ್ಯ ಶೀಘ್ರಂ!

• ಓಂ ಪ್ರಕಾಶ್

ಇದೇ ಹೆಸರಿನ ಒಂದು ಸ್ಪರ್ಧೆ ಏರ್ಪಾಡು ಮಾಡಿದ್ದೆವು. ನೀವು, ನಿಮ್ಮ ಭಾವೀ ಪತಿ ಯಾ ಪತ್ನಿಯನ್ನ ಹೇಗೆ ಭೇಟಿ ಮಾಡಿದಿರಿ? ಆ ಸಂದರ್ಭವನ್ನು ರಸವತ್ತಾಗಿ ವಿವರಿಸಿ. ಅಂತ ಸವಾಲ್ ಎಸೆದಿದ್ದೆವು. ಬೆಸ್ಟ್ ಎಂಟ್ರಿಗೆ 2 ವರ್ಷ ಅಪರಂಜಿ subscription ಅಂತಾನೂ ಆಸೆ ತೋರಿದ್ವಿ! ಒಟ್ಟು ಹನ್ನೆರಡು ಪತ್ರಗಳು ಬಂದವು. ಅದನ್ನೆಲ್ಲ ಓದಿ, ಮೂರು ಬಲು ಚೆನ್ನಾಗಿ ಮೂಡಿಬಂದ ಅನುಭವಗಳನ್ನ ಇಲ್ಲಿ ನೀವು ಓದಬಹುದು!

ಪ್ರಥಮ ಬಹುಮಾನ: ಡಾ|| ಸ.ನಾ., ಮೈಸೂರು

ನಾನೊಬ್ಬ E.N.T. ಸರ್ಜನ್, ಕಾರಣಾಂತರದಿಂದ ಮದುವೇನ ಮುಂದೂಡ್ತಾ ಬಂದೆ. ನನ್ನ ತಂಗೀಗೆ ಮದುವೆ ಆದ ಮೇಲಂತೂ, Pressure ಜಾಸ್ತಿಯಾಯ್ತು. ನಿನಗೇನೊ actor ತರಹಾ ಇದೀಯ, ನಿನ್ ಹೆಂಡ್ತಿ ಆಗೋಳು ಪುಣ್ಯ ಮಾಡಿರಬೇಕು ಅಂತ comments ಬೇರೆ! ನಾನಾ ದೇವರುಗಳಿಗೆ ಅಮ್ಮ ಪಾಪ ಹರಕೆ ಮಾಡಿದ್ದೂ ಆಯ್ತು. ಆದರು ಆ ನಿರ್ದಯಿ ಕ್ಯುಪಿಡ್ ನನ್ನ (ನಮ್ಮ!) ಕಡೆ ಕೃಪಾಕಟಾಕ್ಷ ಬೀರಲಿಲ್ಲ.

ಒಂದು ದಿನ ಕ್ಲಿನಿಕ್‌ನಲ್ಲಿ ಕೂತಿದ್ದೆ. ಐದಾರು ಜನ ಪೇಷೆಂಟ್ಸ್ ನೋಡಿದ್ದಾಯಿತು. ಸುಮಾರು 25-26 ವಯಸ್ಸಿನ ತರುಣಿ ಬಂದಳು. ಏನಮ್ಮ ತೊಂದರೆ ನಿಮಗೆ ಅಂದೆ. ಅವಳು ನೋಡಿ ಡಾಕ್ಟರೆ, ಸುಮಾರು ಮೂರು ತಿಂಗಳಿಂದ ನನಗೆ ಕಿವೀಲಿ 'ಗುಂ' ಅಂತ ಸದ್ದಾಗುತ್ತೆ, ಅಂದಳು. ನಾನು ಕೂಲಂಕಶವಾಗಿ ಪರೀಕ್ಷೆ ಮಾಡಿದೆ. ಏನೂ ಇಲ್ಲವಲ್ಲಮ್ಮ ಅಂತ ಧೈರ್ಯ ಹೇಳಿದೆ. ಆದರೂ, ವಾರಕ್ಕೆ ಒಂದು ಸಲ Regular ಆಗಿ ಬರ್ತಾ ಇದ್ದಳು. ನನಗೆ ಏಕೋ ಗಾಬರಿ! ಒಂದು ದಿನ ಅವರ ತಂದೇನೂ ಬಂದರು! ಎಲ್ಲ ಪೇಷೆಂಟ್ಸ್ ಮುಗಿಯೋತನಕ ಕೂತೇ ಇದ್ದರು. ಅವಳ ತಂದೆ, ಡಾಕ್ಟ್ರೆ, ರೋಹಿಣಿ ನಿಮ್ಮನ್ನೇ ಮದುವೆ ಮಾಡ್ಕೊಬೇಕು ಅಂತ ಬಲವಂತ ಮಾಡ್ತಿದಾಳೆ! ತಮಗೆ ಮದುವೆ ಆಗಿಲ್ಲ ತಾನೇ? ಅಂದ್ರು. ಇಂತಹ ವಿಚಾರದಲ್ಲಿ ಸುಳ್ಳು ಹೇಳೋದು ತರವಲ್ಲ ಅನ್ನಿಸ್ತು. ಇಲ್ಲ ಅಂದೆ ರೋಹಿಣಿ ಸಂತಸದಿಂದ ನಕ್ಕಳು. ಎರಡೇ ವಾರದಲ್ಲಿ ಮದುವೆ ಆಗೇ ಹೋಯ್ತು ನೋಡಿ, ಎಲ್ಲ ಆ ಕ್ಯುಪಿಡನ ಮೋಡಿ!!

★★★

ಪ್ರಶಂಸೆ ಪಡೆದ ಪತ್ರಗಳು

1. ಪ. ದೇವಿ, ಬೆಳಗಾಂ

ನನಗೆ ಆಗ 24 ವಯಸ್ಸು, ಬಿ.ಕಾಂ., M.C.A. ಮಾಡಿದ್ದೆ, ಒಳ್ಳೆ ಕೆಲಸ ಸಿಕ್ಕಿತ್ತು. ಆದರೆ ನನಗೆ ಮದುವೇ ಅಂದರೆ ಅಲರ್ಜಿ! ನಮ್ಮಪ್ಪ ಆದಾಯ ತೆರಿಗೆಯಲ್ಲಿ ಉನ್ನತ ಅಧಿಕಾರಿ. ಅಮ್ಮ, ಅವರ ಜೊತೆ ದನಿಗೂಡಿಸಿ, ಹೀಗೇ ಕೂತಿರು, ಅದ್ಯಾವ ಮನ್ಮಥ ಬರ್ತಾನೋ ನಿನ್ನ ಹುಡುಕಿಕೊಂಡು, ಅಂತ ರೇಗ್ತಾ ಇದ್ದಳು, ಒಂದು ಸಲ ಒಂದು ಪಾರ್ಟಿಗೆ ಹೋಗಿದ್ದೆವು. ಅಲ್ಲಿ ಒಬ್ಬಾತನ್ನ ನನ್ನ ಗೆಳತಿ Introduce ಮಾಡಿದಳು. ಆತ ನಸುನಗುತ್ತ, you have a fine smile! ಅಂದ. ಯಾಕೋ ಏನೊ ನನ್ನ ಮನಸ್ಸಿನಲ್ಲೆಲ್ಲ ಅಲ್ಲೋಲ, ಕಲ್ಲೋಲ!

ತಲೆ ಚಕ್ಕರ್ ಬಂದಂತಾಗಿ, ಸೋಫದಲ್ಲಿ ಕೂತೆ! ಆತ, ಗಾಬರಿಯಾಗಿ, Are you O.K? ಅಂತ ಕಳಕಳಿಯಿಂದ ಕೇಳಿದ. ನಿಂಬು ಪಾನಿ ತಂದುಕೊಟ್ಟ(ರು). ನನ್ನ ಗೆಳತಿ, Her father is commissioner of Income tax ಅಂತ (ಅಸಂಬದ್ಧ) ಹೇಳಿಕೆ ಕೊಟ್ಟಳು. ಆತ I know your dad, ಅಂದ್ರು! ನನಗೋ ಆಶ್ಚರ್ಯ! ಯಾವಾಗ, ಹೇಗೆ ಅಂತ ತೊದಲಿದೆ. ಅವರು ನಗುತ್ತ, ಹೋದವರ್ಷ Most honest Tax-payer ಅಂತ ನನಗೆ ಅವಾರ್ಡ್ ಕೊಟ್ಟಿದ್ದು ಅವರೇ! ಇನ್ನೇನು ಹೇಳುಕ್ಕೂ ಅಗತ್ಯವಿಲ್ಲ ತಾನೇ? The rest is history!


★★★

2. ಪ್ರೊಫೆಸರ್ ಹೆ.ಬೇ., ಬೆಂಗಳೂರು

ಹೌದು, ಹೆಸರು ಬೇಡ! ನನ್ನ ವಿವಾಹಕ್ಕೂ ಹಾಸ್ಯೋತ್ಸವಕ್ಕೂ ನಿಕಟ ಸಂಬಂಧ ಅಂದ್ರೆ, ನೀವು ನಂಬ್ತೀರೋ ಇಲ್ಲವೋ! ನಿಜವಾಗಿ ನಡೆದದ್ದನ್ನ ಹೇಳ್ತೀನಿ. ನಾನು ಜಿಯಾಲಜಿ Ph.D ಮಾಡಿ, ಈಗ H.O.D. ಆಗಿದೀನಿ. ಹಲವಾರು ಜನ ನನ್ನ guidance ನಿಂದ Ph.D ಮಾಡಿದ್ದಾರೆ. ಆರುವರ್ಷದ ಹಿಂದೆ ಹಾಸ್ಯೋತ್ಸವಕ್ಕೆ ನನ್ನ ಗೆಳೆಯ ಕರೆದ. ನೋಡೋಣ ಹೇಗಿರುತ್ತೆ ಅಂತ ಹೋದೆ. ವ್ಯವಸ್ಥಾಪಕರ ಕೃಪೆಯಿಂದ ನಮಗೆ ಎರಡನೇ Rowನಲ್ಲೇ ಸೀಟು ಸಿಕ್ತು. ಕಾರ್ಯಕ್ರಮ ಬಹಳ ಚೆನ್ನಾಗಿ ನಡೀತಾ ಇತ್ತು. ನನ್ನ ಗೆಳೆಯನಿಗೆ call ಬಂತು. ನಾನು ಮನೇಗೆ ಹೋಗಬೇಕು ಕಣೋ, urgent ಅಂತ ಪಿಸುಗುಟ್ಟಿ ಹೊರಕ್ಕೆ ನಡೆದ, ಅಂದಹಾಗೇ ನಾನು M.E.B.! Most eligible Bachelor! ಗೆಳೆಯ ಹೋದ ನಂತರ ಸ್ವಲ್ಪ ಹೊತ್ತಿನ ನಂತರ, ನನ್ನ ಪಕ್ಕದ ಖಾಲೀ ಸೀಟು ಹಾಗೇ ಉಳಿಯಲಿಲ್ಲ! ಒಂದು ಸುಂದರವಾದ, ನಗು ಮೊಗದ ದೇವತೆ ಬಂದು, May I sit here? ಅಂತ ಕೇಳಿತು! ನಾನು, of course, please! ಅಂತ ತೊದಲಿದೆ. ಹಾಸ್ಯೋತ್ಸವ ಅವಿರತವಾಗಿ ನಡೀತಿತ್ತು. ನೂರಾರು ಜನರ ನಗು, ಚಪ್ಪಾಳೆಗಳು ನನಗೇಕೋ ಅಸ್ಪಷ್ಟವಾಗಿ ಕೇಳಿಬರುತ್ತಿದ್ದವು. ಲಂಚ್ ಬ್ರೇಕಿನಲ್ಲಿ, ಆ ದೇವತೆ (ಅವಳ ಹೆಸರು ದೇವಕಿ) ಬನ್ನಿ ಊಟ ಮಾಡೋಣ ಅಂತ ನಡೆಯಿತು. ತಾನೇ ತನ್ನ ಪರಿಚಯ ಮಾಡಿಕೊಂಡಳು. ನಾನು ಬೊಂಬಾಯಿಯಲ್ಲಿ geology of latur area

ಅಂತ Ph.D study ಮಾಡ್ತಿದೀನಿ ಅಂತ ಅವಳು ಹೇಳಿದಾಗ ನನಗೆ ಸ್ವರ್ಗಕ್ಕೆ ಮೂರೇ ಗೇಣು, ಅಂತ ಅನುಭವ ಆಯಿತು. ನಾನು, ನಾನೂ Geologist, ಅಂತ ನನ್ನ ಹೆಸರು ಹೇಳಿದೆ. ದೇವಕಿ ನನ್ನ ಕಡೆ ನೋಡಿ, ಅಯ್ಯೋ ನೀವೇ ಅಲ್ಲವೇ ಎರಡು Text books ಬರೆದಿರೋದು! ನಿಮ್ಮ ತರಹಾ ಆಗಬೇಕು ಅಂತ ನಾನು ಕನಸು ಕಾಣ್ತಾ ಇದೀನಿ! ಅಂತ Excited ಆಗಿ ಕೂಗಿದಳು.

ಹಾಸ್ಯೋತ್ಸವದ Organisers ಗಳಿಗೆಲ್ಲ ನನ್ನ ಅನಂತಾನಂತ ವಂದನೆಗಳು! ಅವರ ದಯೆಯಿಂದ ನನ್ನ ಬಾಳ ಸಂಗಾತಿ ನನಗೆ ದೊರಕಿದಳು!




ಆಟಿಕೆ ಮಾಡಿ ನೋಡಿ


ದಿನ ಬಳಕೆಯ ವಸ್ತುಗಳಿಂದ ಮಾಡಬಹುದಾದ,
ಶ್ರೀ ಅರವಿಂದ ಗುಪ್ತರು ರಚಿಸಿರುವ ಸುಮಾರು ಇನ್ನೂರ
ಐವತ್ತು ವೈಜ್ಞಾನಿಕ ಆಟಿಕೆಗಳ ಮಾಹಿತಿಯನ್ನು
ಪಿ.ಎಮ್. ಪ್ರಕಾಶ್ ರವರು ಕನ್ನಡಕ್ಕೆ ಭಾಷಾಂತರ ಮಾಡಿ
ಇಂಟರ್ನೆಟ್ಟಿನಲ್ಲಿ ಅಳವಡಿಸಿದ್ದಾರೆ

http://nandiprakash.blogspot.com

ನಿಮ್ಮ ಮಕ್ಕಳೊಂದಿಗೆ ಆಟಿಕೆಗಳನ್ನು ಮಾಡಿ ಆನಂದಿಸಿ



ಇನ್ನೋವೇಟರ್ ಡೈರಿ



ದುಂಡವ್ವನ ಭಕ್ತ ಮಂಡಳಿ

• ಕಾಂ.ಭಾಂ. ಕೃಷ್ಣಮೂರ್ತಿ

ಗಣಪತಿ ಹಬ್ಬ ಬಂತೂಂದ್ರೆ ನಮ್ಮ ಏರಿಯಾದಲ್ಲಿ ಭಕ್ತ ಮಂಡಳಿಗಳು ನಾಯಿಕೊಡೆಗಳ ಹಾಗೆ ಹುಟ್ಟಿಕೊಳ್ಳುತ್ವೆ. ಹಾದಿಗೊಂದು ಬೀದಿಗೊಂದು ಇಂಥಹ ಮಂಡಳಿಗಳ ಜನನ. ಹಿಂಡುಹಿಂಡಾಗಿ ಬಂದು, ಚಂದಾ ವಸೂಲಿ, ಚಪ್ಪರ ಕಟ್ಟಿ ಗಣಪನ್ನ ಕೂಡಿಸದಿದ್ರೆ ಭಕ್ತ ಮಂಡಳಿ ಸದಸ್ಯರಿಗೆ ಸಮಾಧಾನವೇ ಇರುಲ್ಲ. ಈ ಥರಹೆ ಮಂಡಳಿಗಳ ಪೈಕಿ ದುಂಡವ್ವನ ಮಂಡಳಿಯೂ ಒಂದು. ದುಂಡು ದುಂಡಗೆ, ಉದ್ದಿನ ವಡೆಯ ಹಾಗೆ ಊದಿದ್ದ ಧಡೂತಿ ಕಾಯದ ದುಂಡವ್ವನಿಗೆ ಎಲ್ಲವೂ ದೊಡ್ಡ ತರಹವೇ ಆಗಬೇಕು. ಎರಡು ಅಡಿ ಗೌರಿ ತಂದರೆ, ಆರಡಿ ಗಣಪನೇ ಅವರು ಕಟ್ಟುವ ಚಪ್ಪರದಲ್ಲಿ ಕೂಡಬೇಕು. ಎಲ್ಲರೂ ಮೂರು ದಿವಸವೋ, ಆರು ದಿವಸವೋ ಪೂಜೆ ಮಾಡಿ ವಿಘ್ನೇಶ್ವರನನ್ನು ವಿಸರ್ಜಿಸಿದರೆ, ದುಂಡವ್ವನ ಪರಿವಾರದವರು ಅಖಂಡ ಹತ್ತು ದಿನ ಪರ್ಯಂತ ಗಣೇಶನನ್ನು ಕೊಳೆಹಾಕಿ, ಅವನಿಗೆ ಎಲ್ಲಾ ತರಹದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮೈಕಿನ ಮುಖಾಂತರ ಉಣಬಡಿಸಿ, ಹತ್ತನೆಯ ರಾತ್ರಿ ಬಾಜಾಭಜಂತ್ರಿಗಳೊಂದಿಗೆ ಮೆರವಣಿಗೆ ಮಾಡಿ ಊರ ಹೊರಗಿನ ದೊಡ್ಡ ಕೊಳದಲ್ಲಿ ಅವನನ್ನು ವಿಸರ್ಜಿಸುತ್ತಿದ್ದರು. ಆ ಹತ್ತೂ ದಿವಸವೂ ಅಜೂಬಾಜು ಮನೆಗಳವರು, ಕಿವಿಯಲ್ಲಿ ಹತ್ತಿ ತುರುಕಿಕೊಂಡು ಓಡಾಡುತ್ತಿದ್ದರು. ಯಾಕಂದ್ರೆ, ಮುಂಜಾನೆ "ಗಜಮುಖನೆ ಗಣಪತಿಯೆ" ಎಂಬ ಹಾಡಿನಿಂದ ಶುರುವಾಗುತ್ತಿದ್ದ ಕಾರ್ಯಕ್ರಮ ಎಡಬಿಡದೆ ಸಾಗಿ, ರಾತ್ರಿ ಹತ್ತು ಘಂಟೆಗೆ ಮಂಗಳಾರತಿ ಹಾಗೂ ಚರಪಿನ ವಿತರಣೆಯೊಂದಿಗೆ, ಸಂಪನ್ನಾಗುತ್ತಿದ್ದುದರಿಂದ, ಕೇರಿಯ ಜನ ಹತ್ತಿ ಇಟ್ಟುಕೊಳ್ಳದಿದ್ದರೆ ಕಿವಿ ತಮಟೆ ಒಡೆದು ಹೋಗುವ ಸಾಧ್ಯತೆಯಿತ್ತು.

ಆ ದಿನ ದುಂಡವ್ವ ಮಟಮಟ ಮಧ್ಯಾಹ್ನದ ರಣಬಿಸಿಲಿನಲ್ಲಿ ನಮ್ಮ ಮನೆಗೆ ನುಗ್ಗಿದರು. ಬಾಗಿಲು ತೆರೆದೇ ಇತ್ತು. ನಾನು ಒಂದು ಮೂಲೇಲಿ ಕೂತು ಏನೋ ಬರೆಯುತ್ತಿದ್ದೆ. ಒಳ ಬಂದವರೆ ಹಾಲಿನಲ್ಲಿ ಹಾಕಿದ್ದ ಸೋಫಾದ ಮೇಲೆ ದಬಕ್ಕನೆ ಕುಕ್ಕರಿಸಿದರು. ಧಾರಾಕಾರವಾಗಿ ಹರಿಯುತ್ತಿದ್ದ ಬೆವರನ್ನು ತಮ್ಮ ಪುಟ್ಟ ಕರವಸ್ತ್ರದಿಂದ ವರಸಿಕೊಂಡು, ಸೆರಗಿನಿಂದ ಗಾಳಿ ಹಾಕಿಕೊಳ್ಳುತ್ತಾ ಕೂತರು "ಈ ಧಗೀನಾಗೆ ಪಂಕಾನೂ ಚಾಲು ಮಾಡ್ದೆ ಅದು ಹ್ಯಾಂಗೆ ಕುಂತಿದೀರಪ ನೀವು?" ಅಂತ ದಬಾಯಿಸಿದರು. ನಾನು ಕೂಡಲೇ ಎದ್ದು ಫ್ಯಾನ್ ಸ್ವಿಚ್

ಹಾಕಿ ವಿಧೇಯತೆಯಿಂದ ಕೈಕಟ್ಟಿನಿಂತೆ. ದುಂಡವ್ವ ಫ್ಯಾನ್ ಗಾಳಿಗೆ ಮೈ ಒಡ್ಡಿ ಕೂತು ಅರೆಕ್ಷಣ ಸುಧಾರಿಸಿಕೊಂಡರು. ''ನೀವೇನೋ ಕಥಿ, ಕವನ, ಹಾಳು ಮೂಳೂಂತ ಏನೇನೋ ಬರೀಲಿಕ್ಕೆ ಹತ್ತೀರಿಂತ ತಿಳೀತ್ರಿ'' ಎಂದು ಅವರು ಹೇಳಿದಾಗ ನಾನು ಸಂಕೋಚದಿಂದ ಮುದುಡಿಕೊಂಡೆ. ಅವರು ಹಾಳೂ ಮೂಳು ಬರೀತೀನಿ ಅಂದದ್ದು ನನಗೆ ಹಿಡಿಸಲಿಲ್ಲವಾದರೂ, ನಾನೂ ಬರೀತೀನಿ ಅಂಬೋ ವಿಷಯ ಈಕೆಗೆ ಗೊತ್ತಾಗಿದೆಯಲ್ಲಾಂತ ಒಂದು ರೀತೀಲಿ ಹೆಮ್ಮೆಯಾಯಿತು. ''ಏನೋ ಚೂರು ಪಾರು ಬರೀತೀನ್ರಿ'' ಅಂತ ಕೈ ಹೊಸೆಯುತ್ತಾ ಹೇಳಿದೆ. ''ಚೂರೋ ಪಾರೋ ಅಂತೂ ಬರ್‍ಯಾಕೆ ಹತ್ತೀರಲ್ರಿ. ಅದು ಸಾಕ್ರಿ. ಖರೇಂದ್ರೆ ನೀವು ಸಾಹಿತಿ ಆದಂಗಾತು. ನಮ್ಮ ಮಂಡಳಿನಾಗ ಇಂದು ಭಾಷಣದ ಕಾರ್ಯಕ್ರಮ ಐತ್ರಿ. ನೀವು ಮುಖ್ಯ ಅತಿಥಿ ಆಗಿ ಭಾಷಣ ಮಾಡಬ್ಯಾಕ್ರಿ...'' ಅಂತ ದುಂಡವ್ವ ಹೇಳಿದಾಗ ನಾನು ಹೌಹಾರಿದೆ.

''ಅಯ್ಯಯ್ಯೋ ಅದೆಲ್ಲಾ ಆಗೂದಿಲ್ಲ ಇವ್ರೆ. ಭಾಷಣ ಗೀಷಣ ಮಾಡಿ ನನಗೆ ಅಭ್ಯಾಸವೇ ಇಲ್ಲ ದುಂಡವ್ವನವ್ರೆ....'' ನಾನು ಒದರಾಡಿದೆ ನನ್ನ ಒದರಾಟ ಕೇಳಿ ನನ್ನ ಹೆಂಡ್ತಿ ತಾರಮ್ಮ ಅಡುಗೆ ಮನೆಯಿಂದ ಹೊರಗೆ ಬಂದಳು. ಅವಳನ್ನು ನೋಡಿದ ದುಂಡವ್ವ ''ನೀವಾರ ಹೇಳ್ರೀ ನಿಮ್ಮ ಮನೀವರಿಗೆ, ಸಂಜೀ ಮುಂದು, ನಮ್ಮ ಗಣಪತಿ ಮಂಡಳಿನಾಗೆ ಫಂಕ್ಷನ್ ಅದೆ. ನೀವು ಭಾಷಣ ಮಾಡಬ್ಯಾಕ್ರೀಂತ ಹೇಳಿದಕ್ಕೆ ಹೀಗ ಹೊಯ್ಕೊಳ್ಳಿಕ್ಕೆ ಸುರು ಹಚ್ಯಾರೆ. ನೋಡ್ರಿ....'' ಅಂತ ನನ್ನ ಹೆಂಡತಿಗೆ ಹೇಳಿದಳು. ''ನೀನಾದ್ರು ಅವರ್‍ಗೆ ಹೇಳೆ. ನನಗೆ ಭಾಷಣ ಬಿಗಿದು ಅಭ್ಯಾಸ ಇಲ್ಲಾಂತ'' ಎಂದು ನನ್ನ ಹೆಂಡತಿಗೆ ಹೇಳಿದೆ.

''ಹೌದು ಕಣ್ರೆ ದುಂಡಮ್ಮನವ್ರೆ, ನಮ್ಮ ಯಜಮಾನ್ರಿಗೆ ಭಾಷಣ ಮಾಡಿ ಅಭ್ಯಾಸವೇ ಇಲ್ರಿ, ಮನೇಲಿ ಅವರು ಮಾತಾಡೋದೇ ಅಪರೂಪ, ಇನ್ನು ಹತ್ತಾರು ಜನದ ಮುಂದೆ ಹೇಗ್ರಿ ಮಾತಾಡ್ತಾರೆ?'' ಅಂತ ನನ್ನ ಪತ್ನಿ ನನ್ನ ಪರವಾಗಿ ವಕಾಲತ್ತು ವಹಿಸಿದಳು. ''ಅದೆಲ್ಲಾ ಆಗೂಲ್ರಿ ತಾರಬಾಯಿಯೋರೆ. ಕಥಿ, ಕಾವ್ಯ ಬರ್‍ಯೋರು ಭಾಷಣ ಮಾಡ್ಲಿಕ್ಕೆ ಹೀಂಗ ಅಂಜಿಕೆಪಟ್ರೆ ಹ್ಯಾಂಗ್ರಿ. ಅದೂ ಅಧ್ಯಕ್ಷತೆಗೆ ಮಿನಿಸ್ಟ್ರು, ಪ್ರಾಸ್ತಾವಿಕ ಭಾಷಣಕ್ಕೆ ಎಂ.ಎಲ್.ಎ.ಗಳು ಎಲ್ಲೂ ಬರಾಕೆ ಹತ್ಯಾರಲ್ರಿ. ನಿಮ್ಮ ಮನಿಯೋರು ಸ್ಟೇಜ್ ಮ್ಯಾಗೆ ಬಂದು ಎರಡು ಮಾತು ಹೇಳಿದ್ರೆ ಆತಲ್ರಿ. ನಾನು ಬದಿಯಾಗೆ ಇರ್‍ತೀನಲ್ರಿ...'' ಎಂದು ದುಂಡವ್ವ ಹೇಳಿದಾಗ, ನಾನು ನನ್ನಾಕೆ ಉಭ ಶುಭ ಎನ್ನಲಿಲ್ಲ ''ಸಂಜಿ ಐದೂವರೀಗೆ ಮಂಟಪಕ್ಕೆ ಬರ್‍ರೀಯಪ್ಪ. ನೀವೇನಾರ ತೆಲಿ ತಪ್ಪಿಸ್ಕೊಂಡ್ರೆ ನಾನು ಸುಮ್ನೆ ಇರೂ ಆಕಿ ಅಲ್ಲ ನೋಡ್ರಿ ಮತ್ತ'' ಎಂದು ನನ್ನನ್ನು ಬೆದರಿಸಿ ದಡೂತಿ ದೇಹವನ್ನು ಡುಲಾಯಿಸಿಕೊಂಡು ದುಂಡವ್ವ ದುಡು ದುಡು ಹೊರಟೇ ಹೋದರು. ''ಇದೊಳ್ಳೆ ಗ್ರಹಚಾರವಾಯ್ತಲ್ಲಾ'' ಅಂತ ನಾನು ತಲೆಮೇಲೆ ಕೈ ಹೊತ್ತು ಕೂತೆ.

ನನ್ನ ಹ್ಯಾಪು ಮೋರೆ ನೋಡಿಯೆ ನನ್ನ ಪತ್ನಿಗೆ ನನ್ನ ಮೇಲೆ ಅನುಕಂಪ ಮೂಡಿತು. ''ಇದಕ್ಯಾಕೆ ಹೀಗೆ ಗಾಬ್ರಿ ಪಟ್ಕೋತೀರ. ಸಂಜೆ ಐದೂವರೆಗೆ ತಾನೆ ಆಕೆ ನಿಮ್ಮನ್ನ ಬರೋಕೆ ಹೇಳಿರೋದು. ನೀವು ನಾಲ್ಕುವರೆಗೆ ಮನೆ ಬಿಟ್ಟು ಲಾಲ್‌ಬಾಗ್‌ಗೆ ಹೋಗ್ಬಿಡಿ. ಅಲ್ಲೇ

ಕೂತಿದ್ದು ರಾತ್ರಿ ಒಂಭತ್ತಕ್ಕೊ, ಹತ್ತಕ್ಕೋ ಮನೆಗೆ ಬನ್ನಿ, ಆ ವೇಳೆಗೆ ಫಂಕ್ಷನ್ನೆಲ್ಲಾ ಮುಗಿದಿರುತ್ತೆ. ಆಮೇಲೆ ಆಕೆ ಕೇಳಿದ್ರೆ ಏನಾದ್ರೂ ಹೇಳಿದ್ರಾಯ್ತು'' ಅಂತ ನನ್ನ ಮಡದಿ ಹೇಳಿಕೊಟ್ಟಳು. ನಾನೂ ಅದೇ ಸರಿ ಅಂದ್ಕೊಂಡು, ನಾಲ್ಕುವರೆಗೆ ಅಲಂಕಾರ ಮಾಡ್ಕೊಂಡು ಮನೆಯಿಂದ ಹೊರಟೆ. ಗೇಟಿನ ಮುಂದೇನೆ ಇಬ್ಬರು ಧಾಂಡಿಗರು ನಿಂತಿದ್ದರು. ನನ್ನನ್ನು ನೋಡಿ ಹಲ್ಕಿರಿದರು. ''ನಮಸ್ಕಾರ ಸಾರ್. ಐದೂವರೆಗೆ ನಿಮ್ಮನ್ನ ಮಂಟಪಕ್ಕೆ ಕರತರೋದಕ್ಕೆ ಮ್ಯಾಡಂ ಹೇಳಿದಾರೆ ಸಾರ್. ನೀವು ಒನ್ ಅವರ್ ಮುಂಚಿತವಾಗೇ ರೆಡಿಯಾಗಿದ್ದೀರಲ್ಲ ಸಾರ್...'' ಎಂದು ಅವರು ಹೇಳಿದಾಗ ನಾನು ಕಂಗಾಲಾದೆ. ನಾನೆಲ್ಲಿ ಕೈಕೊಡ್ತೇನೋ ಅಂತ ಅನುಮಾನ ಪಟ್ಟು, ದುಂಡಮ್ಮ ನನ್ನ ಮನೆ ಮುಂದೆ ಕಾವಲು ಹಾಕಿರುವುದು ತಿಳಿದು ನಾನು ಅಧೀರನಾದೆ. ''ನೀವು ಹೋಗಿ, ನಾನು ಇನ್ನೂ ಒಂದು ಗಂಟೆ ಬಿಟ್ಟು ಬರ್ತೀನಿ'' ಅಂತ ಅವರನ್ನು ಸಾಗಿಹಾಕಲು ನೋಡಿದೆ. ''ಹಾಗೆ ಆಗೋಲ್ಲ ಸಾರ್. ಜೊತೇಲೆ ಕರ್ಕೊಂಡು ಬರೋ ಹಾಗೆ ಮ್ಯಾಡಂ ಹೇಳಿದಾರೆ. ನೀವು ಯಾವಾಗ ಬೇಕಾದ್ರೂ ಬನ್ನಿಸಾರ್, ನಾವಿಲ್ಲೇ ವೆಯಿಟ್ ಮಾಡ್ತೀವಿ'' ಅಂತ ಹೇಳಿ ಆ ಜಗಭಂಡರು, ಗೇಟಿನ ಇಕ್ಕೆಲದಲ್ಲೂ ನಿಂತುಕೊಂಡರು.

ದುಂಡವ್ವನ ಕಪಿ ಮುಷ್ಟಿಯಿಂದ ತಪ್ಪಿಸಿಕೊಳ್ಳುವ ಹಾಗೇ ಇರಲಿಲ್ಲ. ಯಜ್ಞ ಪಶುವಿನಂತೆ ತಲೆ ತಗ್ಗಿಸಿ ಹೊರಟೆ. ವೇದಿಕೆಯ ಮೇಲೆ ಮದಗಜದಂತೆ ಓಡಿಯಾಡುತ್ತಿದ್ದ ದುಂಡವ್ವ ನನ್ನನ್ನು ನೋಡಿ, ಹಲ್ಲು ಕಿರಿದು ''ಬರ್ರಿ... ಬರ್ರಿ... ವೇದಿಕೆ ಮ್ಯಾಗೆ ಬರ್ರಿ...'' ಅಂತ ಬರಮಾಡಿಕೊಂಡು ವೇದಿಕೆಯ ಮೇಲಿದ್ದ ಕುರ್ಚಿಯೊಂದರಲ್ಲಿ ನನ್ನನ್ನು ಕೂಡಿಸಿದರು. ''ಈ ದಿನದ ಚರಪು, ಒಬ್ಬರಿಗೆ ಒಂದು ದೊನ್ನೆ ಭರ್ತಿ ಬಠಾಣಿ ಉಸ್ಲಿ'' ಅಂತ ಬೋರ್ಡು ಹಾಕಿದ್ದರಿಂದಲೋ ಏನೋ, ಸಭೆ ಭಕ್ತವೃಂದದಿಂದ ಕಿಕ್ಕಿರಿದು ತುಂಬಿತ್ತು. ಘಂಟೆ ಆರಾಯಿತು, ಏಳಾಯಿತು, ಏಳೂವರೆಯೂ ಆಯಿತು. ದುಂಡವ್ವನವರು ವೇದಿಕೆಯ ಮೇಲೆ ಅತ್ತಲಿಂದಿತ್ತ, ಇತ್ತಲಿಂದತ್ತ ತಾರಾಡುತ್ತಿದ್ದರು. ಮಿನಿಸ್ಟ್ರಾಗಲಿ, ಎಮ್ಮೆಲ್ಲೆಗಳಾಗಲಿ ಯಾರ ಸುಳಿವೂ ಆಗಲಿಲ್ಲ. ಘಂಟೆ ಎಂಟಾದಾಗ ಸಭಿಕರು ಬಟಾಣಿ ಗುಗ್ಗರಿಯನ್ನು ಸವಿಯಲು ಹೊತ್ತಾಗುತ್ತಿರುವುದನ್ನು ಕಂಡು ತಾಳ್ಮೆ ಕಳೆದುಕೊಂಡರು. ''ಸುರು ಮಾಡ್ರೀ ಬ್ಯಾಗ...'' ಎಂದು ಸೀಟಿ, ಶಿಳ್ಳೆ ನಾಯಿ ಬೆಕ್ಕುಗಳ ಕೂಗುಗಳೊಂದಿಗೆ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದರು. ಇನ್ನು ಡಿಲೆ ಮಾಡಿದರೆ ಕಲ್ಲುಗಳು ಬಿದ್ದಾವೆಂದು ಹೆದರಿದ ದುಂಡವ್ವನವರು, ಧಾವಿಸಿ ಬಂದು ನನ್ನ ಕಿವಿಯಲ್ಲಿ ಹೇಳಿದರು. ''ಯಾರೂ ಬರೂ ಹಾಂಗೆ ಕಾಣ್ತೆಲ್ಲ. ನೀವೆ ಎಲ್ಲ ಮಂದಿಯ ಭಾಷಣ ಮಾಡಿ ಮುಗ್ಸಿಯಪ್ಪ'' ಅಂತ ಅವರು ಹೇಳಿದಾಗ ನನ್ನೆದೆ ಧಸಕ್ಕೆಂದಿತು. ಕೇವಲ ಮುಖ್ಯ ಅತಿಥಿ ಭಾಷಣ ಮಾಡ್ಲಿಕ್ಕೆ ಹೆದರಿ ಮುಖ್ಯ ಪ್ರಾಣನ ಮೂತಿ ಮಾಡಿಕೊಂಡಿದ್ದ ನನಗೆ ಆಕೆ ಎಲ್ಲರ ಭಾಷಣಾನು ನೀವೆ ಮಾಡಿ ಅಂದಾಗ ಜಂಘಾಬಲವೇ ಬಿದ್ದುಹೋಯಿತು, ತಲೆ ಗಿರಗಿರನೆ ತಿರುಗಿದಂತಾಯಿತು. ಕಾಲುಗಳು ಗಡಗಡ ನಡುಗಲು ಶುರುವಾಯಿತು. ಅದರು ವಾಯು ಬಂದವನಂತೆ ಕಂಪಿಸುತ್ತ

ಕುರ್ಚಿಯಿಂದ ಮೇಲೆದ್ದು ಮೈಕಿದ್ದ ಕಡೆಗೆ ಹೊರಟೆ. ಹೆಂಡ ಕುಡಿದವನಂತೆ ತಾರು ಮಾರು ಹೆಜ್ಜೆ ಹಾಕಿದೆ. ಏಳರ ಚಳಿ ಬಂದವನಂತೆ ತರತರನೆ ನಡುಗುತ್ತಿದ್ದೆ. ಹಾಗೂ ಹೀಗೂ ಮೈಕಿನ ಬಳಿ ಬರುತ್ತಿದ್ದಂತೆ ಗಂಟಲ ದ್ರವ ಆರಿಹೋಗಿ, ಕಣ್ಣು ಕತ್ತಲಿಟ್ಟಂತಾಯ್ತು. ನನ್ನ ಕೈಗಳಿಂದ ಭದ್ರವಾಗಿ ಮೈಕನ್ನು ಹಿಡಿದುಕೊಳ್ಳಲು ಹೋದ ನಾನು, ಕಣ್ಣು ಮಂಜಾದ್ದರಿಂದ, ಪಕ್ಕದಲ್ಲೇ ನಿಂತಿದ್ದ ದುಂಡವ್ವನನ್ನು ಹಿಡಿದುಕೊಂಡು ಬಿಟ್ಟಿದ್ದೆ.

ಈ ಅಪೂರ್ವ ದೃಶ್ಯವನ್ನು ನೋಡಿದ ಸಭೆಯೇ ಹುಚ್ಚೆದ್ದು ಕುಣಿಯಿತು. ಸಿಳ್ಳು ಕೂಗು, ಕ್ಯಾಟ್ ಕಾಲುಗಳು ಸಿಡಿಯಿತು. ಇಡೀ ಸಭೆಯಲ್ಲಿ ಅಲ್ಲೋಲಕಲ್ಲೋಲವಾಗಿ ಹೋಯಿತು. ನಾನು ಈ ಗಲಾಟೆಯಲ್ಲಿ, ವೇದಿಕೆಯಿಂದ ಧುಮುಕಿ ಹೇಗೋ ಪಾರಾದೆ. ಈ ಘಟನೆ ನಡೆದು ಹಲವಾರು ವರ್ಷಗಳೇ ಉರುಳಿ ಹೋಗಿದ್ದರೂ, ಈಗಲೂ ನನ್ನನ್ನು ದುಂಡವ್ವ ಎಲ್ಲಾದರೂ ಭೇಟಿಯಾದರೆ, ಹಳೆಯದನ್ನು ನೆನಸಿಕೊಂಡು ನಾಚಿ ನೀರಾಗುತ್ತಾಳೆ.

ಗಣೇಶ ಅಂದರೆ ಇರಲೇಬೇಕು ದೊಡ್ಡ ಹೊಟ್ಟೆ
ಅಂತೆಯೇ ಇರಬೇಕು ನಮ್ಮ ರಾಜಕಾರಿಣಿಗೂ
ತನ್ನ ಹೊಟ್ಟೆ ಭಾರವನ್ನೇ ಹೊರಲಾರದವನು
ದೇಶದ ಸಮಸ್ಯೆಯ ಭಾರವನ್ನೆಲ್ಲಿ ಹೊತ್ತಾನು

***

ಆನೆ ಇದ್ದರೂ ಸಾವಿರ ಸತ್ತರೂ ಸಾವಿರ ಅನ್ನುವಂತೆ
ರಾಜಕಾರಿಣಿ ಗೆದ್ದರೂ ಗೆದ್ದಂತೆ ಸೋತರೂ ಗೆದ್ದಂತೆ
ಗೆದ್ದರಂತೂ ಎಂದಿನಂತೆ ಸಿಕ್ಕೇಸಿಗುತ್ತದೆ ಮಂತ್ರಿಗಿರಿ
ಸೋತರೆ ನಿಜ ಕಾಯುತ್ತಿರುತ್ತದೆ ರಾಜ್ಯಪಾಲಗಿರಿ

***

ಈಗ ಮಹಾ ವಿಷಯ ಮಹಿಳಾ ಮೀಸಲಾತಿ
ಬಸ್ಸಿನಲ್ಲೂ ಬಿಟ್ಟುಕೊಡಬೇಕು ಅವರಿಗೆ ಸೀಟು
ರಾಜಕೀಯದಲ್ಲೂ ಉಂಟು ಮೀಸಲಾತಿ ಸೀಟು
ಇದೇ ಅಂತೆ ಭವ್ಯಭಾರತದ ದೊಡ್ಡ ಗೇಟು

– **ಬೇಲೂರು ರಾಮಮೂರ್ತಿ**

ಚಂದ್ರನ ಮೇಲೆ ನೀರು!

• ಸಿ.ಆರ್. ಸತ್ಯ

ಭಾರತದ ಬಾಹ್ಯಾಕಾಶ ಸಂಸ್ಥೆಯ ಚಂದ್ರಯಾನ - 1 ಚಂದ್ರಗ್ರಹದ ಮೇಲೆ ನೀರನ್ನು ಕಂಡು ಹಿಡಿದಿದೆ - ಎಂಬ ಸುದ್ದಿ ಹೊರಗೆ ಬಿದ್ದೊಡನೆ, ಸುಮಾರು ಇಪ್ಪತ್ತೈದು ಜನ ಹೆಂಗಸರು ಕೈಯಲ್ಲಿ ಬಿಂದಿಗೆಗಳನ್ನು ಹಿಡಿದುಕೊಂಡು ಇಸ್ರೋ ಅಧ್ಯಕ್ಷರ ಮುಂದೆ ನಿಂತು ''ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ...'' ಅಂತ ಹಾಡು ಹೇಳಿದರಂತೆ. ಪಾಪ, ಅಧ್ಯಕ್ಷರಿಗೆ ಕನ್ನಡ ಅರ್ಥವಾಗದಿದ್ದರಿಂದ, ಅವರ ಸಿಬ್ಬಂದಿಯೊಬ್ಬರು ಹೆಂಗಸರನ್ನು ವಿಚಾರಿಸಿದ್ದಕ್ಕೆ, ಆ ಗುಂಪಿನ ನಾಯಕಿ, ಶ್ರೀರಾಮಪುರದ ವೆಂಕಮ್ಮ ''ನಮ್ಮ ರೋಡುಗಳಲ್ಲಿ ಇಟ್ಟಿರೋ ನಲ್ಲೀಗಳಲ್ಲಿ ನೀರು ಬಂದು ಎಷ್ಟೋ ತಿಂಗಳುಗಳು ಆಗ್ಹೋಯ್ತು ಬುದ್ಧಿ. ಚಂದ್ರನಾಗೆ ನೀರಿದೆ, ಅಲ್ಲಿಗೇ ಓಗೋಣ ಅಂದುಕೊಂಡ್ವಿ. ಆ ''ಯಪ್ಪ' - ಅಧ್ಯಕ್ಷರು ನಮ್ಮನ್ನು ಅಲ್ಲಿಗೆ ಕರ್‍ಕೊಂಡು ಓಯ್ತಾರಾ?'' ಅಂತ ಕೇಳಿದ್ಲಂತೆ ಆ ''ಯಪ್ಪ' - ಅಧ್ಯಕ್ಷರು ಅಷ್ಟೊತ್ತಿಗೆ ತಮ್ಮ ಆಫೀಸಿಗೆ ಓಡ್ಹೋಗಿ ಒಳಗಿನಿಂದ ಬೀಗ ಹಾಕ್ಕೊಂಡ್ರಂತೆ!

★★★

ಚಂದ್ರನ ಮೇಲೆ ನೀರು ಅಂತ ಕೇಳ್ತಾನೇ, ನಮ್ಮ BWSSB ಕರ್ನಾಟಕದ ಜನರ ಹಿತಾಶಕ್ತಿಯ ಬಗ್ಗೆ ಮುಂದಾಲೋಚನೆ ನಡೆಸಿ, ಚಂದ್ರನ ಮೇಲೆ ಒಂದು ದೊಡ್ಡ ವಾಟರ್ ಟ್ಯಾಂಕ್, ನೀರಿನ ಪಂಪು, ಮೋಟರ್ ಎಲ್ಲಾ ರಾತ್ರೋರಾತ್ರಿ ಸ್ಥಾಪಿಸಿ, ''ಇನ್ನು ಮೇಲೆ ಬಾಯಾರಿದ ಬೆಂಗಳೂರಿಗೆ ಚಂದ್ರನ ನೀರು!'' ಅಂತ ಘೋಷಿಸಿದ್ದು ನಿಮಗೆ ಜ್ಞಾಪಕವಿದೆ ತಾನೆ?

ಯಾಕೋ ಆ ಯೋಜನೆ ಅಲ್ಲಿಗೇ ನಿಂತಿತಂತೆ. ಕಾರಣ: KEBಯವರು ಆ ಪಂಪಿನ ಮೋಟರ್‌ಗೆ ಕನೆಕ್ಷನ್ ಕೊಡಲಿಲ್ಲವಂತೆ, ನಮಗೂ ಚಂದ್ರನಿಗೂ ಯಾವ ಸಂಬಂಧವೂ ಇಲ್ಲ; ಸಧ್ಯ ನಮಗೆ ಮಂತ್ರಿಗಳ ಮನೆಗೆ ವಿದ್ಯುತ್ ಒದಗಿಸೋದರಲ್ಲೇ ಸಾಕಾಗಿದೆ. ಸಾವಿರಾರು ಅಪ್ಲಿಕೇಷನ್‌ಗಳು ''ಪೆಂಡಿಂಗ್'' ಇರೋವಾಗ, ಅಷ್ಟು ದೂರ ನಮ್ಮ ಕೈಲಿ ಲೈನ್ ಎಳೆದು ಟ್ರಾನ್ಸ್‌ಫಾರ್ಮರ್ ಕೂಡಿಸೋಕ್ಕೆ ಅಸಾಧ್ಯ ಅಂತ ಮರು ಘೋಷಣೆ ಮಾಡಿದ್ರಂತೆ!

★★★

ಇಸ್ರೋ ಅಧ್ಯಕ್ಷರು 'ತಾರಕ್ಕ ಬಿಂದಿಗೆ' ಇಂದ ಸುಧಾರಿಸಿಕೊಂಡು, ತಮ್ಮ

ವಿಜ್ಞಾನಿಗಳನ್ನೆಲ್ಲಾ ಒಂದು ಸಮಾಲೋಚನೆಗೆ ಕರೆದು "ಇನ್ನೇನು ಚಂದ್ರಯಾನ-2 ನ್ನೂ ಉಪಾವಣೆ ಮಾಡೋ ಸಮಯ ಬಂತು. ಚಂದ್ರನ ಮೇಲೆ ಯಾವ ಸ್ಥಳದಲ್ಲಿ ಇಳಿಸೋಣ?" ಅಂತ ಪ್ರಶ್ನೆ ಹಾಕಿದರಂತೆ. ಅದಕ್ಕೆ ಹಿರಿಯ ವಿಜ್ಞಾನಿಯೊಬ್ಬರು "ಇದು ಸಾಧ್ಯವಿಲ್ಲ ಸಾರ್; ಚಂದ್ರಯಾನ-1 ಹಿಡಿದ ಛಾಯಾ ಚಿತ್ರಗಳನ್ನು ನೋಡ್ತಾ ಇದ್ದೆ. ನೀರಿರೋ ಜಾಗದಲ್ಲೆಲ್ಲಾ 30'x40', 40'x60' ಸೈಟ್‌ಗಳನ್ನು ಮಾಡಿ, ಬೇಲಿ ಹಾಕಿ, "ಮಧುಚಂದ್ರ ಡೆವಲಪರ್‍ಸ್ - ನಿವೇಶನಗಳು ಮಾರಾಟಕ್ಕಿವೆ" ಅಂತ ಯಾರೋ ಬೋರ್ಡ್ ಹಾಕಿದ್ದಾರೆ" ಅಂತ ಅಂದ್ರಂತೆ. ಪಾಪ, ಈಗ ಇಸ್ರೋ ಏನು ಮಾಡುತ್ತೋ?

★★★

ನಮ್ಮನೆ ಪಕ್ಕದ ಮನೆಯವರು ಧೋಬೀಗೆ ಅರ್ಜೆಂಟ್ ವಾಷ್‌ಗೆ ಅಂತ ಕೊಟ್ಟ ಬಟ್ಟೆಗಳನ್ನು ಎರಡು ವಾರಗಳಾದ್ರೂ ಅಗಸ ತರಲೇ ಇಲ್ಲ. ಕೊನೇಗೂ ಪ್ರತ್ಯಕ್ಷವಾದಾಗ, ಯಾಕಪ್ಪಾ ಇಷ್ಟು ತಡ ಮಾಡಿದೆ ಅಂತ ಕೇಳಿದ್ರು, ಅದಕ್ಕೆ ಅವನು "ಏನು ಮಾಡಲಿ ಸಾರ್? ಬೆಂಗ್ಳೂರಿನ ಯಾವ ಧೋಬೀ ಘಾಟ್‌ನಲ್ಲೂ ಒಗೆಯೋಕ್ಕೆ ನೀರಿಲ್ಲ, ಅದಕ್ಕೇ ನಾವೆಲ್ಲಾ ಚಂದ್ರನ ಮೇಲೇ ಬಟ್ಟೆ ಒಗೆಯೋಕ್ಕೆ ಹೋದ್ವು. ದೂರ ಜಾಸ್ತಿ ಅಂತ ನಮ್ಮ ಕತ್ತೆಗಳು ಅಲ್ಲಿಗೆ ಬರೋಕ್ಕೆ ನಕಾರ ಎತ್ತಿದ್ವು. ನಾವೇ ಹೋಗಿ ಬಂದಿದ್ವು ಸ್ವಲ್ಪ ಟೈಮ್ ಹಿಡೀತು" ಅಂತ ವಿವರಣೆ ಕೊಟ್ಟ!

★★★

ಈ ಸಂಗತಿ ನನಗೆ ಇನ್ಯಾರೋ ಹೇಳಿದ್ದು, ಶುದ್ಧ ಸುಳ್ಳು ಅಂತ ಅಂದ್ಕೋತೀನಿ. ಆದರೂ ನಾನು ಕೇಳಿದ್ದನ್ನ ನಿಮಗೆ ಒಪ್ಪಿಸಲೇ ಬೇಕು. ವಿಜಯಮಲ್ಯ ಕಡೆ ಅಧಿಕಾರಿಯೊಬ್ರು ಟೀವಿಯಲ್ಲಿ ಚಂದ್ರನ ಮೇಲೆ ನೀರ್! ಅಂತ ಅರ್ಧಂಬರ್ಧ ವಿಷಯವನ್ನು ಕೇಳಿಸಿಕೊಂಡು, ಗಾಬರಿಯಾಗಿ ಇಸ್ರೋ ಆಫೀಸಿಗೆ ಫೋನ್ ಮಾಡಿ "ನೀವು ಹೇಳಿದ್ದು ನೀರೋ ಇಲ್ಲಾ ಬೀರೋ...?" ಅಂತ ಕೇಳಿದ್ರಂತೆ. ಇಸ್ರೋ ವಿಜ್ಞಾನಿ "ನೀರು" ಅಂತ ಸಮರ್ಥಿಸಿಕೊಂಡಿದ್ದನ್ನು ಕೇಳಿ "ಸಧ್ಯ, ಬದುಕಿದೆವು!" ಅಂತ ನಿಟ್ಟುಸಿರು ಬಿಟ್ರಂತೆ! ಅಲ್ಲ, ಈ ಹಾಳು ಕಾಂಪಿಟಿಷನ್ ಅನ್ನೋದು ಎಷ್ಟರ ಮಟ್ಟಿಗೆ ಆಗಿದೆ ನೋಡಿ!

★★★

ಈ ಮಧ್ಯೆ ದೆಹಲಿಯಲ್ಲಿ ಎಡಪಕ್ಷದವರು "ಇಸ್ರೋ ಚಂದ್ರನ ಮೇಲೆ ನೀರನ್ನು ನೋಡಿರೋದು ಶುದ್ಧ ಸುಳ್ಳು. ಇದು ಸರ್ಕಾರದ ವಂಚನೆ!" ಅಂತ ಹೊಡೆದಾಡಿದಾಗ, ಸೋನಿಯಾಗಾಂಧಿ ತಾವೇ ಸ್ವತಃ (ಎಕಾನಮಿ ಕ್ಲಾಸಿನಲ್ಲಿ) ಬೆಂಗಳೂರಿಗೆ ಬಂದು ಇಸ್ರೋ ವಿಜ್ಞಾನಿಗಳಿಗೆ ಈ ಬಾರಿ ಚಂದ್ರಯಾನ-2 ರಲ್ಲಿ ಒಂದು ಬಕೆಟ್ ಕೊಂಡು ಹೋಗಿ, ಅಲ್ಲಿಯ ನೀರಿನ ಸ್ಯಾಂಪಲ್ ಅನ್ನು ತಂದು ಈ ಎಡಪಕ್ಷದವರ ತಲೆಗೆ ಎರಚಿ ಎಂದು ಸೂಚಿಸಿದರಂತೆ. ಇಸ್ರೋ ಸೂಕ್ತ ಬಕೆಟ್‌ಗಾಗಿ ಬೆಂಗಳೂರನ್ನೆಲ್ಲಾ ತಡಕಾಡಿ ಕೊನೆಗೆ ಮಲ್ಲೇಶ್ವರದ 8ನೇ ಕ್ರಾಸಿನಲ್ಲಿ ದೊರೆತ ಸರಿಯಾದ ಮಾಡೆಲ್ ಬಕೆಟ್ ಕೊಂಡುಕೊಂಡು ಅದನ್ನು

ಚಂದ್ರಯಾನ-2 ರಲ್ಲಿ ಅಳವಡಿಸ್ತಿದ್ದಾರಂತೆ. ಇಲ್ಲಿಯ ತನಕ ಈ ಕಾರ್ಯ ಸುಗಮವಾಗಿ ನಡೆಯುತ್ತಿದ್ದು, ಈ ಬಕೆಟ್ ಸಧ್ಯದಲ್ಲೇ ಶ್ರೀಹರಿಕೋಟಾ ಉಡಾವಣಾ ಕೇಂದ್ರಕ್ಕೆ ಪೋಲೀಸ್ ವ್ಯವಸ್ಥೆಗಳೊಂದಿಗೆ, ಸುರಕ್ಷಿತವಾಗಿ ಹೋಗಲಿದೆ...

★★★

ಬೆಂಗಳೂರಿನ ಸೇಠ್‌ಜೀ ಒಬ್ಬರು ತಮ್ಮ ಮಗನ ಮದುವೆ ಅದ್ದೂರಿಯಿಂದ ನಡೆಸಿ, ಮಗ ಸೊಸೆಗೆ ಮಧುಚಂದ್ರಕ್ಕೆ ಚಂದ್ರ ಗ್ರಹಕ್ಕೇ ಹೋಗಲಿ ಅಂತ ಎಲ್ಲಾ ವ್ಯವಸ್ಥೆ ಮಾಡಿದರಂತೆ. ಬೀಳ್ಕೊಡುವಾಗ, ಸೇಠ್‌ಜೀ ಹೆಂಡ್ತಿ - ಪ್ರಾಕ್ಟಿಕಲ್ ಲೇಡಿ - ಬಾಲಿವುಡ್ ಸಿನಿಮಾಗಳನ್ನು ನೋಡೋ ಚಟ - ನೂತನ ದಂಪತಿಗಳಿಗೆ: "ಹುಷಾರಾಗಿರಿ, ಚಂದ್ರನ ಮೇಲೆ ಹಾಡು ಹೇಳ್ಕೊಂಡು ಹೇಗೇಗೋ ಡ್ಯಾನ್ಸ್ ಮಾಡ್ಬೇಡಿ. ತುಂಬಾ ಕೊಚ್ಚೆಯಿದೆಯಂತೆ ಅಲ್ಲಿ; ಜಾರಿಗೀರಿ ಬಿದ್ದೀರ ಜೋಕೆ!" ಅಂತ ಬುದ್ಧಿವಾದ ಹೇಳ್ತಿದಿದ್ದು ನಾನು ಏರ್‌ಪೋರ್ಟ್‌ನಲ್ಲಿ ಕೇಳಿಸಿಕೊಂಡೆ!

ಅತ್ತರು!

ಒಬ್ಬರೊಬ್ಬರ ಜುಟ್ಟು ಕಿತ್ತರು
ಹೋಗಿ ದೆಹಲಿಗೆ
ಗಳಗಳನೆ ಅತ್ತರು
ಮರಳಿ ಊರಿಗೆ
ಹುರಿದ ಸ್ನೇಹದ
ಬೀಜ ಬಿತ್ತರು
ಏನು ಗಮಗಮ
ಹುಸಿ ನಗೆಯ ಅತ್ತರು!

★★★

ತತ್ಸಮ - ತದ್ಭವ

ನಾನೂ ನೀನೂ
ಸಮಾ ಸಮಾ
ಒಂದೇ ಸಮ
- ತತ್ಸಮ
ನಮ್ಮ ಮಗು
ತದ್ಭವ

- ಎನ್. ಪ್ರಕಾಶ್

ಪಾದಚಾರಣ

• ಹೆಚ್.ಆರ್. ಪ್ರಭಾಕರ್

ಶೀರ್ಷಿಕೆ 'ತಲೆ ಶಿರೋಭಾರದಂತಿದೆಯಲ್ಲವೆ - ಇರಲಿ ಬಿಡಿ. ಬೆಂಗಳೂರಿನ ಪಾದಚಾರಿಗಳು ಗುಡ್ಡಗಾಡುಗಳಲ್ಲಿ ಚಾರಣ ಮಾಡುವವರಷ್ಟೇ ಸಾಹಸಿಗಳು,. ಇಲ್ಲದಿದ್ದರೆ ಬೆಂದಕಾಳೂರಿನಲ್ಲಿ ಅವರ ಬೇಳೆ ಬೇಯುವುದಿಲ್ಲ. ನಿಂತಲ್ಲೇ ನಿಂತಿರಬೇಕಾಗುತ್ತದೆ ಇಲ್ಲವೇ ಸ್ವರ್ಗಕ್ಕೆ ಧಾವಿಸಬೇಕಾಗುತ್ತದೆ. ಪಾದಚಾರಿಗಳು ಪ್ರಮೋಷನ್ ದಕ್ಕಿಸಿಕೊಂಡು ದ್ವಿಚಕ್ರಿಗಳಾಗಿಯೋ ಅಥವಾ ಚತುಶ್ಚಕ್ರಿಗಳಾಗಿಯೋ ಬೆಂಗಳೂರಿನ ರಸ್ತೆಗಳಲ್ಲಿ ಉಳ್ಳಾಗೆಡ್ಡೆಯಂತೆ ಉರುಳಾಡಲು ಹಾತೊರೆಯುತ್ತಿರುತ್ತಾರೆ. ಕೆಲವರಂತೂ ಚಕ್ರಗಳಡಿ ಹೊಕ್ಕು ಪ್ರಮೋಷನ್ ಪಡೆದು ಮೇಲ್ಮನೆಗೇ ಹೋಗುತ್ತಿದ್ದಾರೆ. ಹೀಗಾಗಿ ಇವರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಈ ತಳಿ ಸಧ್ಯದಲ್ಲೇ ನಶಿಸಿಹೋದರೆ ಆಶ್ಚರ್ಯವಿಲ್ಲ. ಇದಕ್ಕೆ ಯಾರಾದರೂ ಕಾರಣರಾಗಿದ್ದರೆ ಅದು ಚಾರ್ಲ್ಸ್ ಡಾರ್ವಿನ್ ಮತ್ತು ಅವನ ವಿಕಾಸವಾದ; ನಮ್ಮ ನಗರ ಸಭೆಯವರನ್ನು ಖಂಡಿತ ದೂಷಿಸಬಾರದು. ಐಟಿ ಬಿಟಿಗಳಲ್ಲಿ ಹಗಲೂ ರಾತ್ರಿ ದುಡಿಯುವ ಬುದ್ಧಿಜೀವಿಗಳ ಕಾರುಗಳಿಗಾಗಿ ರಸ್ತೆಗಳನ್ನು ಅಗಲಿಸಿ ಹಾರು ಸೇತುವೆ ಮತ್ತು ತೂರು ಸೇತುವೆಗಳನ್ನು ನಿರ್ಮಿಸುವುದಕ್ಕೆ ಅವರು ಕಂಕಣಬದ್ಧರು. ಈ ಮಧ್ಯೆ ಕಾಲುದಾರಿಗಳು ಕಣ್ಮರೆಯಾದರೆ ಅವರೇನು ಮಾಡಬಲ್ಲರು? ಸಾವಿರಾರು ಮರಗಳನ್ನು ಕಡಿಯುವುದಕ್ಕೆ ಅವರೇನು ಅರ್ಜುನನಂತೆ ವಿಷಾದಿಸುವುದಿಲ್ಲ. ಅವರು ಕೇವಲ ನಿಮಿತ್ತ ಮಾತ್ರರು. ಅವುಗಳ ಮೃತ್ಯುವನ್ನು ಕಾರು, ಲಾರಿ, ಬಸ್ಸುಗಳ ನಿರ್ಮಾಪಕರು ಮತ್ತು ಗುತ್ತಿಗೆದಾರರು ಈ ಮೊದಲೇ ನಿರ್ಧರಿಸಿದ್ದಾರೆ. ಸತ್ತವರ ಸಾವಿಗಾಗಿ ಅಳುವುದು ಮೂರ್ಖತನವಲ್ಲವೆ? ನಿಮಗೆ ಮರಗಳ ನೆರಳು, ಹಸಿರು, ಉಸಿರು ಬೇಕಿದ್ದಲ್ಲಿ ಊರಾಚೆ ಹೋಗಿ - ಮರಗಳಿಗಾಗಿ ಮೀಸಲಿಟ್ಟ ಸುರಕ್ಷಿತ ಪ್ರದೇಶಗಳಿಗೆ. ಊರು ಇರುವುದು ಕಾಂಕ್ರೀಟ್ ಕಟ್ಟಡಗಳು, ವಾಹನಗಳು ಮತ್ತು ರಸ್ತೆಗಳಿಗಾಗಿ.

ವಿಕಾಸವಾದದ ಪ್ರಕಾರ ಪರಿಸ್ಥಿತಿಗೆ ಹೊಂದಿಕೊಳ್ಳದ ಪ್ರಾಣಿಗಳು ಅಳಿಯುವುವು. ಬೇಟೆ ಮತ್ತು ಬೇಟೆಗಾರ ಪ್ರಕೃತಿಯಲ್ಲಿ ಒಂದು ಸಮತೋಲನವನ್ನು ಕಾಯ್ದಿರಿಸಿರುತ್ತಾರೆ. ಬೇಟೆಗಾರರ ಸಂಖ್ಯೆ ಹೆಚ್ಚಾದಂತೆ ಬೇಟೆ ನಶಿಸಿಹೋಗುತ್ತದೆ. ಹಾಗೆಯೇ ವಾಹನಗಳ ಸಂಖ್ಯೆ ಹೆಚ್ಚಾಗಿ, ಫುಟ್‌ಪಾತ್‌ಗಳು ಕಿರಿದಾಗಿ ಪಾದಚಾರಿಗಳು ರಸ್ತೆಗೋ ಇಲ್ಲ ಚರಂಡಿಗೋ ಇಳಿಯಬೇಕಾಗುತ್ತದೆ. ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ ಅವರ ಸ್ಥಿತಿ. ಪೊಲೀಸರು

ಪಾದಚಾರಿಗಳನ್ನು ನಿರಾದಾಯದಾಯಕ ಉಪದ್ರವಿಗಳೆಂದು ನಿಕೃಷ್ಟವಾಗಿ ಕಾಣುತ್ತಾರೆ. ಕೇವಲ ಹತ್ತು ಸೆಕೆಂಡುಗಳಲ್ಲಿ ಪಾದಚಾರಿಗಳು ರಸ್ತೆ ದಾಟಬೇಕು - ಇದರಲ್ಲಿ ಮುದುಕರು, ಮಕ್ಕಳು, ಕುರುಡರು, ಕುಂಟರು ಎಂಬ ಬೇಧ ಭಾವವಿಲ್ಲ. ಈ ಹತ್ತೂ ಕ್ಷಣಗಳಲ್ಲಿ ವಾಹನಗಳು ಮುನ್ನುಗ್ಗಿದರೂ ಪೊಲೀಸರು ಸುಮ್ಮನೆಯೇ ಇರುತ್ತಾರೆ. ದ್ವಿಚಕ್ರಿಗಳು ಕಾಲುಹಾದಿಯನ್ನು ಏರಿದಾಗಲೂ ಅವರು ಮೂಕ ಪ್ರೇಕ್ಷಕರೇ.

ಕಾಲು ಹಾದಿಗಳು ಪಾದಚಾರಿಗಳನ್ನುಳಿದು ಸರ್ವರ ಸ್ವತ್ತು. ಥಳ ಥಳ ಹೊಳೆಯುವ ಷೋರೂಂಗಳ ಮಾಲೀಕರ ಐಷಾರಾಮಿ ಕಾರುಗಳಿಗೆ ಫುಟ್‌ಪಾತ್‌ಗಳೇ ಪಾರ್ಕಿಂಗ್ ಜಾಗ. ಆಸ್ಪತ್ರೆಗಳು, ಐಟಿ ಕಾರ್ಯಾಲಯಗಳು, ಬ್ಯಾಂಕುಗಳು ಮುಂತಾದವುಗಳ ಉದ್ದಿಮೆದಾರರಿಗೆ ಮತ್ತು ಅದರ ಗ್ರಾಹಕರಿಗೆ ಪಾರ್ಕಿಂಗ್ ಪ್ಲೇಸ್ ಫುಟ್‌ಪಾತೇ. ದರ್ಶಿನಿಗಳ ಪೋಷಕರಿಗೆ ಕಾಲುದಾರಿಗಳೇ ಪಿಕ್‌ನಿಕ್ ಸ್ಥಳಗಳು. ಇಡ್ಲಿ, ದೋಸೆ, ಖಾರಾಬಾತ್, ಪಾನೀಪೂರಿ, ಪುಲಾವ್, ಗೋಬಿ ಮಂಚೂರಿ ಮುಂತಾದವುಗಳ ಇಮ್ಮಡಿ ರುಚಿಗೆ ರಸ್ತೆಯ ಪಕ್ಕಗಳಲ್ಲಿ ಇನ್ನೂ ಅಳಿದುಳಿದಿರುವ ಮರಗಳ ಮೇಲೆ ಚಿಲಿಪಿಲಿಗುಟ್ಟುವ ಪಕ್ಷಿ ಸಂಕುಲಗಳೇ ಕಾರಣ ಎಂಬುದನ್ನು ಇವರು ನಂಬುವುದಿಲ್ಲ. ಜನಪ್ರಿಯ ನಾಯಕರು ತಮ್ಮ ಪ್ರೀತಿಯ ಪ್ರಜೆಗಳಿಗೆ ಯುಗಾದಿ, ಸಂಕ್ರಾಂತಿ, ಕ್ರಿಸ್‌ಮಸ್, ಬಕ್ರೀದ್ ಮುಂತಾದ ಹಬ್ಬಗಳ ಸಮಯದಲ್ಲಿ ಶುಭ ಕೋರುವ ಬ್ಯಾನರ್‌ಗಳನ್ನು ಪ್ರದರ್ಶಿಸುವುದು ಫುಟ್‌ಪಾತ್‌ನಲ್ಲಿಯೇ. ಈ ಮಹನೀಯರು ತಮ್ಮ ಜನ್ಮ ದಿನಗಳನ್ನು ಜಾಹೀರಾತುಪಡಿಸಿ ಪರಸ್ಪರ ಬೆನ್ನು ತುರಿಸಿಕೊಳ್ಳುವುದೂ ಫುಟ್‌ಪಾತ್‌ನಲ್ಲಿಯೇ. ಆದರೆ ಪರಸ್ಪರ ಕಾಲೆಳೆಯಲು ಕಾಲುದಾರಿಗಳಲ್ಲಿ ಜಾಗ ಸಾಲದು. ಅದಕ್ಕೆ ಪಂಚತಾರಾ ರಿಸಾರ್ಟ್‌ಗಳೇ ಬೇಕು. ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರುಗಳು, ಟೆಲಿಫೋನ್ ಉಪಕರಣಗಳು, ಮೊಬೈಲ್ ಹಣ್ಣು ತರಕಾರಿ ಅಂಗಡಿಗಳು, ಚೀನಾ, ಕೊರಿಯಾ, ಥೈಲ್ಯಾಂಡ್ ದೇಶಗಳಿಂದ ಬಂದ ಕಡಿಮೆ ಬೆಲೆಯ ಆಟಿಕೆಗಳು ಮತ್ತು ನಿತ್ಯೋಪಯೋಗಿ ವಸ್ತುಗಳು ಎಲ್ಲವೂ ಫುಟ್‌ಪಾತ್‌ಗಳ ಆಶ್ರಯವನ್ನೇ ಅವಲಂಬಿಸಿವೆ.

ನಗರ ಸಾರಿಗೆ ಸಂಸ್ಥೆಯ ಬಸ್ ತಂಗುದಾಣಗಳಿಗೂ ಕಾಲುದಾರಿಗಳಲ್ಲೇ ಜಾಗ. ಆಧುನಿಕ ತಂಗುದಾಣಗಳನ್ನು ಪ್ರಯಾಣಿಕರಿಗೆ ಬಿಸಿಲು ಮಳೆಗಳಿಂದ ರಕ್ಷಣೆ ಕೊಡಲು ನಿರ್ಮಿಸಿಲ್ಲ. ಇವುಗಳ ಮುಖ್ಯ ಉದ್ದೇಶ ಜಾಹೀರಾತುಗಳಿಂದ ಹಣ ಸಂಪಾದಿಸುವುದು. ಅಲ್ಲಿ ನಿಲ್ಲುವ ಬಸ್‌ಗಳ ಸಂಖ್ಯೆಗಳನ್ನು ನಿಲ್ದಾಣದಲ್ಲಿ ಬರೆಯಬಾರದೆಂಬ ಕಾನೂನು ಜಾರಿಯಲ್ಲಿದ್ದಂತಿದೆ. ಬಸ್‌ಗಳು ನಿಲ್ಲುವ ಸ್ಥಳಗಳಿಗೂ ಮತ್ತು ತಂಗುದಾಣಗಳಿಗೂ ಸಂಬಂಧವಿರಬೇಕೆಂಬ ನಿಯಮವೇನೂ ಇಲ್ಲ. ಆದರೂ ಬಸ್‌ಸ್ಟಾಪ್‌ಗಳನ್ನು ಗುರುತಿಸುವುದು ಸುಲಭ. ಹತ್ತಿಪ್ಪತ್ತು ಜನರ ಗುಂಪು 25% ರಸ್ತೆಯನ್ನು ಆಕ್ರಮಿಸಿ ತಮ್ಮ ಕತ್ತುಗಳನ್ನು ಬಲಕ್ಕೆ ತಿರುಗಿಸಿ, ಹುಬ್ಬು ಗಂಟಿಕ್ಕಿಕೊಂಡು ರಸ್ತೆಯುದ್ದಕ್ಕೂ ತೀಕ್ಷ್ಣನೋಟ ಬೀರುತ್ತಿದ್ದರೆ ಅದೇ ಬಸ್ ಸ್ಟಾಪು. ನೀವು ಸೂಕ್ಷ್ಮವಾಗಿ ಗಮನಿಸಿದರೆ ಬೆಂಗಳೂರಿನ ಶ್ರೀ ಸಾಮಾನ್ಯಳ/ನ ಕತ್ತೂ ಕೊಂಚ ಬಲಕ್ಕೆ ಹೊರಳಿರುವುದನ್ನು ಕಾಣಬಹುದು.

ಪಾದಚಾರಿಗಳನ್ನು ದೇವರು ಕೈಬಿಟ್ಟಿಲ್ಲ. ಅವರ ಮೋಕ್ಷಕ್ಕಾಗಿ ನಾನಾ ವಿಧದ - ಬಲಮುರಿ, ವಿಘ್ನನಿವಾರಕ, ಪರೀಕ್ಷಾ ಪಾಸುಕ, ಪ್ರಮೋಷನ್ ದಾಯಕ ಇತ್ಯಾದಿ ಗಣಪತಿಗಳು, ಶನಿಮಹಾತ್ಮ ನವಗ್ರಹಗಳು, ಮಾರಮ್ಮ ಪ್ಲೇಗಮ್ಮ ಪಟ್ಟಾಳಮ್ಮ ಇನ್ನೂ ಮುಂತಾದ ಸಂವೇದನಾಶೀಲ ದೇವ ದೇವಿಯರು ಫುಟ್‌ಪಾತ್‌ಗಳಲ್ಲಿಯೇ ನೆಲೆಸಿ ಪಾದಚಾರಿಗಳನ್ನು ಹರಸುತ್ತಿರುವರು. ಇವರ ಕೃಪಾ ಕಟಾಕ್ಷದಿಂದಲೇ ಪಾದಚಾರಿಗಳು ಇನ್ನೂ ಜೀವಿತವಾಗಿದ್ದಾರೆಂದು ಈ ಗುಡಿಗಳ ಅರ್ಚಕರು ಮತ್ತು ಮಾಲೀಕರುಗಳ ಅಚಲ ನಂಬಿಕೆ.

ಹಿಂದೆ ರಸ್ತೆಯ ಮಧ್ಯೆ ವಿರಾಜಿಸುತ್ತಿದ್ದ ಕನ್ನಡ ತಾಯಿ ಭುವನೇಶ್ವರಿಯ ಧ್ವಜಸ್ತಂಭಗಳು ಈಚೆಗೆ ಫುಟ್‌ಪಾತ್‌ಗಳಲ್ಲಿ ರಾರಾಜಿಸುತ್ತಿವೆ. ಅಭಿಮಾನಿಗಳು ನಟಸಾರ್ವಭೌಮ ದಿ. ಡಾ|| ರಾಜ್‌ಕುಮಾರ್ ರವರ "ಕಲಾತ್ಮಕ" ಪುತ್ಥಳಿಗಳನ್ನು ಫುಟ್‌ಪಾತ್‌ಗಳಲ್ಲಿ ಸ್ಥಾಪಿಸಿ ತಮ್ಮ ಕಲಾಭಿರುಚಿ ಮತ್ತು ಸಂಸ್ಕೃತಿಗಳನ್ನು ಜಗತ್ತಿಗೇ ಸಾರುತ್ತಿದ್ದಾರೆ.

ಸಾರ್, ರಸ್ತೆಮಧ್ಯೆ ಹೋಗ್ಬೇಡಿ, ಬನ್ನಿ ಫುಟ್‌ಪಾತ್‌ನಲ್ಲೇ ಹೋಗೋಣ... ಸ್ವಲ್ಪ ಹುಷಾರ್, ಅಲ್ಲಿ ಒಂದು ಸಿಮೆಂಟ್ ಚಪ್ಪಡಿ ಒಡೆದುಹೋಗಿದೆ, ಚರಂಡಿಯಲ್ಲಿ ಬಿದ್ದೀರಿ ಜೋಕೆ... ಹಾಗೆ, ನಿಧಾನಕ್ಕೆ ನೋಡ್ಕೊಂಡು ಬನ್ನಿ.... ಏನು, ಭೂಕಂಪವೇ? ಅಯ್ಯೋ, ಇನ್ನೊಂದು ಚಪ್ಪಡಿ ಅಲ್ಲಾಡುತ್ತಿದೆ, ಅಷ್ಟೇ... ಓ, ಅದೇ, ಅಲ್ಲಿ ನೀರು ಲೀಕಾಗುತ್ತಿದೆ, ಅಗೆದಿದ್ದಾರೆ. ಸ್ವಲ್ಪ ಈ ಕಡೆ ಬನ್ನಿ... ಅಲ್ಲಿ ನೋಡಿ, ಈ ಬಂಗಲೆಯಲ್ಲಿ ಕಾರು ಹೋಗಲು ಅನುಕೂಲವಾಗಲೆಂದು ಕಾಲುದಾರಿ ಒಂದು ಅಡಿ ಕೆಳಗೆ ಹೋಗಿದೆ ಮಂಡಿ ಉಳುಕೀತು... ಇಲ್ಲಿ ಸ್ವಲ್ಪ ಮೂಗು ಮುಚ್ಚಿಕೊಂಡು ಬನ್ನಿ, ಇದು ಕಸ ಹಾಕುವ ಜಾಗ, ಏನ್ಮಾಡುಕ್ಕಾಗುತ್ತೆ ಸ್ವಲ್ಪ ಅಡ್ಜಸ್ಟ್ ಮಾಡಿಕೋಬೇಕು... ಓ ಜಾಗ ಇಲ್ವಾ, ಟ್ರಾಫಿಕ್ ಸಿಗ್ನಲ್ ಕಂಬ, ಲೈಟ್ ಕಂಬ, ಟೆಲಿಫೋನ್ ಕಂಬ, ಮರ, ಬೋರ್ಡ್ ಎಲ್ಲಾ ಅಲ್ಲೇ ಇವೆಯೇ? ಪರ್ವಾಗಿಲ್ಲ, ಬನ್ನಿ, ನನ್ನ ಕೈಹಿಡಿದುಕೊಳ್ಳಿ, ರಸ್ತೆಯಲ್ಲೇ ಹೋಗೋಣ.... ಭರ್‍ರ್‍ರ್.... ಧಡ್.... "ರೀ ಯಾರ್‍ರೀ ಅದು, ಮನೇಲಿ ಹೇಳ್ಬಂದೀದಿರೇನ್ರಿ - ಏನಾದರೂ ಬುದ್ಧಿಗಿದ್ಧಿ ಇದೆಯಾ? ಇಷ್ಟು ವಯಸ್ಸಾಗಿದೆ, ಸುಮ್ನೆ ಮನೇಲಿ ಬಿದ್ದಿರೂದ್ಬಿಟ್ಟು ಬೀದಿಗ್ಯಾಕ್ಬರ್‍ತೀರ್‍ರಿ, ಹೋಗ್ರೀ ಆಕಡೆ" ಭರ್‍ರ್‍ರ್....

ಹುಷ್ಪಪ್ಪ ಏನ್ಸಾರ್, ಬೆವರ್ತಾ ಇದೀರ, ಹೋಗಲಿ ಬನ್ನಿ, ಜೀವ ಉಳೀತು. ಅಲ್ಲೇ ಗಟಾರದ ಗಣೇಶಂಗೆ ಒಂದ್ನಮಸ್ಕಾರ ಹಾಕಿ ಮನೆ ಸೇರ್ಕಳೋಣ.

ಚಂದ್ರನಿಂದ
ಚಂದ್ರಿಕೆ
ರವಿಯಿಂದ
ರವಿಕೆ?

- ಎನ್. ಪ್ರಕಾಶ್

ಪ್ರಳಯ

• ಎಂ.ಎಸ್. ನರಸಿಂಹಮೂರ್ತಿ

ವಿಶ್ವ ಸಿನಿಮಾ ನೋಡಿ ಬಂದವನೇ ತುಂಬಾ ಸಪ್ಪಗೆ ಕೂತ. ವಿಶಾಲೂಗೆ ಆಶ್ಚರ್ಯವಾಯಿತು.

''ಯಾಕ್ರೀ, ಸಿನಿಮಾ ನೋಡಿ ಬಂದವರು ಖುಷಿಯಾಗಿರೋದು ಬಿಟ್ಟು, ಮಂಕು ಬಡಿದವರ ಹಾಗೆ ಇದ್ದೀರ?''

''ನಾನು ಹೊಗೊಲ್ಲ ಅಂತ ಬಡ್ಕೊಂಡೆ. ನೀನು ಎಲ್ಲಿ ಕೇಳ್ತೀಯಾ? ಹೋಗು ಹೋಗು ಅಂತ ಮನೆಯಾಚೆ ದಬ್ಬಿದೆ. ಸಿನಿಮಾ ನೋಡಿ... ನನ್ನ ತಲೆ ಕೆಟ್ಟು ಹೋಗಿದೆ... ಸಾಕಪ್ಪಾ ಈ ಜೀವನ ಅನ್ನಿಸಿದೆ.''

''ಯಾಕೆ? ಏನಾಯ್ತು? ಚೆನ್ನಾಗಿರಲಿಲ್ಲವಾ? ಡ್ಯಾನ್ಸು ಗೀನ್ಸು ಎಲ್ಲಾ ಇರುತ್ತಲ್ಲಾ? ಅವರು ಸರಿಯಾಗಿ ಮಾಡ್ಲಿಲ್ವಾ? ಅಥವಾ ಸೆನ್ಸಾರ್ ಕತ್ತರಿಗೆ ಸಿಕ್ಕಿ ಸಿನಿಮಾಗಿಂತ ವಾಲ್‌ಪೋಸ್ಟರ್ರೇ ಚೆನ್ನಾಗಿತ್ತಾ?''

ವಿಶ್ವ ದನಿ ತಗ್ಗಿಸಿ, ತಲೆ ತಗ್ಗಿಸಿ ವಿಶಾಲೂ ಕೈಗಳನ್ನು ಹಿಡಿದುಕೊಂಡ.

''ವಿಶಾಲೂ, ನಾನು ತುಂಬಾ ತಪ್ ಮಾಡಿದ್ದೀನಿ... ಇನ್ನೆಷ್ಟು ವರ್ಷ ನಾನು ನೀನು?''

''ಏನ್ರೀ ಇದು ಆಶ್ಚರ್ಯ? ಸಿನಿಮಾದಲ್ಲಿ ವೇದಾಂತ ಇತ್ತಾ?''

ವಿಶ್ವ ಕ್ಯಾಲೆಂಡರ್ ನೋಡಿದ. ಬೆರಳೆಣಿಸಿದ.

''ಇದು ಡಿಸೆಂಬರ್ರು.. ಮುಂದಿನ ಡಿಸೆಂಬರ್ರು, ಅದರ ಮುಂದಿನ ಡಿಸೆಂಬರ್ರು.. ಮುಗೀತು ಕತೆ.. 24 ತಿಂಗಳು ಬಾಕಿ. ಆಮೇಲೆ ನೀನೆಲ್ಲೋ, ನಾನೆಲ್ಲೋ...''

ವಿಶಾಲೂಗೆ ಗಾಬರಿಯಾಯಿತು. ಡೈವೋರ್ಸ್ ನೆನಪಾಯಿತು. ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರೆ 24 ತಿಂಗಳು ಬೇಕಾಗುತ್ತೆ.

''ಬಿಡ್ತು ಅನ್ನಿ... ಅಲ್ರೀ, ಸಪ್ತಪದಿ ತುಳಿಯೋವಾಗ ಕಾಯೇನ ವಾಚಾ ಮನಸಾ ಅಂತ ಹೇಳಿ, ನನಗೆ ಎಲ್ಲಾ ಥರದ ಅಶ್ಯೂರೆನ್ಸೂ ಕೊಟ್ಟು ಈಗ ನೋಡಿದ್ರೆ 'ನೀನೆಲ್ಲೋ ನಾನೆಲ್ಲೋ' ಅಂತೀರಲ್ಲಾ? ನನಗೆ ನಿಮ್ಮನ್ನ ಬಿಟ್ರೆ ಇನ್ಯಾರಿದ್ದಾರೆ? ನಿಮಗೆ ಸಿನಿಮಾಗೆ ದುಡ್ಡು ಕೊಟ್ಟು ಕಳಿಸಿದವಳು ನಾನು. ಯಾವ ಸಿನಿಮಾಗೆ ಹೋಗಿದ್ರಿ? 'ಮಡದಿ ತವರಿಗೆ, ಗಂಡ ಗಟಾರಕ್ಕೆ' ಸಿನಿಮಾ ಅಲ್ಲ ತಾನೇ?

''ಗಂಡ ಗಟಾರ ಆದರೆ ಮಾಂಗಲ್ಯ ಉಳಿಯುತ್ತೆ. ಗಂಡ ಡಮಾರ್ ಆದರೆ ಗತಿ ಏನು?''

''ಏನು ಹೇಳ್ತಿದ್ದೀರಾ?'' ವಿಶಾಲೂಗೆ ಗಾಬರಿ.

''ಅದು ಮಾತ್ರ ಕೇಳಬೇಡ.. ಸುಮ್ಮನೆ ಇದ್ದುಬಿಡು... ಒಂದು ವೇಳೆ... ನೀನು ಬೇರೆಕಡೆ ಕೊಚ್ಕೊಂಡು ಹೋಗಿ, ನಾನು ಬೇರೆಕಡೆ ಕೊಚ್ಕೊಂಡು ಹೋದ್ರೆ ಏನು ಗತಿ?''

''ನಾನಂತೂ ನಿಮ್ಮನ್ನ ಬಿಟ್ಟು ಹೋಗೊಲ್ಲ.. ನೀವು ನನ್ನ ಬಿಟ್ಟು ಹೋದ್ರೆ ಬೇರೆ ಏನೂ ಮಾಡೋಕೆ ಆಗೊಲ್ಲ...''

''ನಿನಗೆ ಹೇಳದೆ ಕೆಲವು ತಪ್ಪುಗಳನ್ನ ಮಾಡಿದ್ದೀನಿ. ಕೂತ್ಕೋ ಎಲ್ಲಾ ಹೇಳಿ ಬಿಡ್ತೀನಿ...''

''ನನಗೆ ನಿಮ್ಮ ವರ್ತನೇನೇ ಅರ್ಥವಾಗ್ತಿಲ್ಲ.. ಯಾಕೆ ಹೀಗಾಡ್ತಾ ಇದ್ದೀರಾ ಅಂತ ಮೊದಲು ಹೇಳಿ..''

''2012 ಡಿಸೆಂಬರ್ 21ಕ್ಕೆ ನಾವೆಲ್ಲಾ ಸತ್ತು ಹೋಗ್ತೀವಿ ಕಣೇ... ನೀರಲ್ಲಿ ಕೊಚ್ಚಿ ಹೋಗ್ತೀವಿ ಚಿನ್ನಾ''

''ಹೌದಾ? ಏನಾಗುತ್ತೆ ರೀ ಅವತ್ತು?''

''ಯಾರೂ ಇರೊಲ್ಲ.. ನಾನು ನೀನು ಪಕ್ಕದ ಮನೆ ಶ್ಯಾಂಭಟ್ಟರು...''

''ಎದುರು ಮನೆ ಭಾಗೀರಥಿ? ಆ ಮೂಲೆಮನೆ ಪಂಕಜ?''

''ಎಲ್ಲಾ ಹೊರಟು ಹೋಗ್ತಾರೆ ಕಣೇ...''

''ಹೇಗೆ ಸಾಧ್ಯ? ಏನು ವಾಟರ್‌ಟ್ಯಾಂಕ್‌ಗೇ ವಿಷ ಬೆರೆಸ್ತಾರೋ ಹೇಗೆ?''

''ಪ್ರಳಯ!... ಆಗಿಂದಾಗ್ಗೇ, ಇದರ ಬಗ್ಗೆ ಅನುಮಾನಗಳಿತ್ತು.. ಆದರೆ ಗೋಡೆಮೇಲೆ ಬರೆದಷ್ಟು ಗ್ಯಾರಂಟಿ ಆಗೋಯ್ತು... 2012 ಡಿಸೆಂಬರ್ ತಿಂಗಳು ಹಾಸ್ಯೋತ್ಸವ ನೋಡೋ ಮೊದಲೇ ಎಲ್ಲರೂ ಢಮಾರ್!''

''ಶಿವಕುಮಾರು? ಬೇಲೂರು?''

''ಅವರೂ ಇಲ್ಲ ಕಣೇ. ತಿಥಿಮಾಡೋ ಶ್ಯಾಂಭಟ್ಟರೇ ಹೋಗ್ತಾರೆ ಅಂದೆ. ಅಮೇರಿಕದ ವೈಟ್‌ಹೌಸ್ ಕೂಡ ಇರೋದಿಲ್ಲ... ದಬಾರ್ ಅಂತ ಬಿದ್ದು ಹೋಗುತ್ತೆ...''

ವಿಶಾಲೂಗೆ ಯೋಚನೆ ಶುರುವಾಯಿತು...

''ಇದೆಲ್ಲಾ ನಿಜಾನಾ?'' ಎಂದು ಮತ್ತೆ ಮತ್ತೆ ಯೋಚಿಸಿದಳು. ಮಾಂಗಲ್ಯ ಮುಟ್ಟಿಕೊಂಡಳು.

''ನೂರಕ್ಕೆ ನೂರುಪಾಲು ನಿಜ. ನೋಡು ಇನ್ನು ಉಳಿದಿರೋ ಕೆಲವು ದಿನದಲ್ಲಿ ನಾನು ನಿನ್ನನ್ನ ತುಂಬಾ ಪ್ರೀತಿ ಮಾಡಬೇಕು ಅಂತ ಇದ್ದೀನಿ. ಪ್ರಳಯದ ವಿಷಯ ಇದ್ದ ಸಿನಿಮಾಗೆ ಹೋಗಿದ್ದೆ... 2012ಕ್ಕೆ ಜಗತ್ತೇ ಹೊರಟು ಹೋಗುತ್ತೆ ಅಂತ ಡೈರೆಕ್ಟರು ಸ್ಕ್ರೀನ್ ಮೇಲೆ ಪ್ರಮಾಣ ಮಾಡಿ ಹೇಳಿದರು.''

ವಿಶಾಲೂಗೆ ಆತಂಕ ಶುರುವಾಯಿತು.

''ನೀನು ಚಿನ್ನದ ಸರ ಕೇಳಿದೆ. ಬೆಲೆ 17 ಸಾವಿರ ದಾಟಿದೆ ಈಗ ಬೇಡ ಅಂತ ನಾನು ಅಂದೆ. ನೀನು ರೇಷ್ಮೆ ಸೀರೆ ಕೇಳಿದೆ. ರೇಷ್ಮೆ ಹುಳಗಳನ್ನ ಕೊಂದು ಸೀರೆ ಮಾಡಿರ್ತಾರೆ. ಉಡಬೇಡ ಅಂತ ನಾನು ನಿನಗೆ ತಾಕೀತು ಮಾಡಿದೆ. ನೀನು ಕೊಡೈಕೆನಾಲ್‌ಗೆ ಹೋಗಬೇಕು

ಅಂತ ಹೇಳಿದೆ. ಅಲ್ಲಿ ಛಳಿ ಜಾಸ್ತಿ, ರಗ್ ಹೊದ್ಕೊಳ್ಳೋಕೆ ಅಲ್ಲೀವರೆಗೂ ಯಾಕೆ ಹೋಗಬೇಕು ಬೆಡ್‌ಶೀಟ್ ಹೊದ್ದುಕೊಂಡು ಇಲ್ಲೇ ಇರೋಣ ಅಂತ ನಾನಂದೆ. ನನ್ನಿಂದ ತಪ್ಪಾಗಿದೆ. ನಿನ್ನ ಎಲ್ಲ ಆಸೆಗಳನ್ನ ನೆರವೇರಿಸ್ತೀನಿ ವಿಶಾಲೂ...'' ಎಂದು ವಿಶ್ವ ನೊಂದು ನುಡಿದ. ವಿಶಾಲು ಸಹ ಬಿಕ್ಕಿದಳು.

''ಹೌದ್ರೀ, ನೀವು ಕಳೆದ ಭಾನುವಾರ ಮೆಣಸಿನಕಾಯಿ ಬೋಂಡ ಮಾಡು ಅಂತ ಅಂದ್ರಿ... ನಾನು ಎಣ್ಣೆ ಇಲ್ಲ ಅಂತ ಸುಳ್ ಹೇಳಿದೆ. ನೀವು ಮಸಾಲೆ ದೋಸೆ ಮಾಡು ಅಂದ್ರಿ. ಆಲೂಗೆಡ್ಡೆ ರೇಟ್ ಜಾಸ್ತಿ ಆಗಿದೆ ಅಂತ ನಾನು ನಿಮ್ಮ ಪತ್ರ ಓಳು ಹೊಡೆದೆ.''

''ಇರೋ ಸ್ವಲ್ಪದಿನದಲ್ಲಿ ಯಾಕೆ ಈಥರ ಪರಸ್ಪರ ಅಪನಂಬಿಕೆಗಳು?''

''ರೀ, ಇವತ್ತಿಂದ ನಾನು ನಿಮ್ಮನ್ನ 24 ಗಂಟೆ, ನನ್ನ ಕಣ್ಣಲ್ಲಿಟ್ಟು ಕಾಪಾಡ್ತೀನ್ರೀ...'' ಎಂದು ಎರಡೂ ಪಾದಗಳಿಗೆ ನಮಸ್ಕಾರ ಮಾಡಿದಳು.

ವಿಶ್ವನಿಗೆ ಆಶ್ಚರ್ಯವಾಯಿತು. ''ಏನೇ ಇದು? ನಮಸ್ಕಾರ ?''

''ನನಗೂ ಕೂಡ ಶಾಂತಮ್ಮನವರು ಫೋನ್ ಮಾಡಿ ಹೇಳಿದರು. 2012ಕ್ಕೆ ಜಗತ್ತು ಹೊರಟು ಹೋಗುತ್ತಂತೆ. ದಾಖಲೆಗಳ ಸಮೇತ ಸಿನಿಮಾ ಮಾಡಿದ್ದಾರೆ ಅಂತ ಅಂದ್ರು. ಅಂಥ ಭಯೋತ್ಪಾದಕ ಸಿನಿಮಾಕ್ಕೆ ನೀವು ಹೋಗಬಾರದಿತ್ತು ರೀ...''

''ನಾನು ಕನ್ನಡ ಸಿನಿಮಾಗೇನೇ ಹೋದೆ... ಮೊದಲ ದಿನ ಅಲ್ವಾ ರಷ್ ಜಾಸ್ತಿ ಇತ್ತು. ಬೇಡ ಅಂತ ಪಕ್ಕದ ಥಿಯೇಟರ್‌ಗೆ ಹೋದೆ... ಏನೋ ಪ್ರಳಯದ ಸಿನಿಮಾ ಸಿಕ್ತು...''

ಆ ಕ್ಷಣದಿಂದ ವಿಶಾಲು ಅತ್ಯಂತ ಪ್ರೀತಿಯಿಂದ ಗಂಡನನ್ನು ನೋಡಿಕೊಳ್ಳಲು ಶುರು ಮಾಡಿದಳು. ದಿನ ಕಳೆಯಿತು. ದಿನ ಕಳೆಯಿತು. ವಿಶ್ವನಿಗೆ ಖುಷಿಯೋ ಖುಷಿ. ಹೊಸ ಪ್ರೇಮಿಗಳಂತೆ ಬದುಕಲು ಶುರು ಮಾಡಿದರು. ಮುಂದಿನ ದಿನ ಸಾವನ್ನು ಮರೆತರು. ಒಮ್ಮೆ ವಿಶ್ವನ ಹಳೇ ಷರ್ಟನ್ನು ಒಗೆಯುವಾಗ ವಿಶಾಲೂಗೆ ಟಿಕೇಟ್ ಸಿಕ್ಕಿತು.

''ರೀ ನೀವು ಹನ್ನೆರಡನೇ ತಾರೀಖು ಹೋಗಿದ್ದು ಕನ್ನಡ ಸಿನಿಮಾಗೆ... ನನ್ನ ಹತ್ರಾನೇ ಸುಳ್ ಹೇಳ್ತೀರಾ ?''

''ಆಂ? ಯಾರು ನಿನಗೆ ಹೇಳಿದ್ದು?''

''ಹೌದ್ರೀ... ಎದುರುಮನೆಯಾಕೆ ಆದಿನ ನೀವು ಆ ಸಿನಿಮಾಗೆ ಹೋಗಿಲ್ಲ, ನೀವು ಹೋಗಿದ್ದೇ ಬೇರೆಕಡೆಗೆ ಅಂತ ಹೇಳಿದರು. ನಿಜ ಹೇಳಿ, ಯಾಕೆ ಹೀಗೆ ಮಾಡಿದ್ರಿ?''

ವಿಶ್ವ ಸಿಕ್ಕಿಬಿದ್ದ.

''ಅಲ್ವೇ, ಇರೋ ಸ್ವಲ್ಪ ದಿನದಲ್ಲಿ ಹಾಯಾಗಿರೋಣ ಅಂತ ನಾನು ನಿನ್ನ ಹತ್ರ ಸುಳ್ ಹೇಳಿದೆ...''

ವಿಶಾಲೂಗೆ ಯೋಚನೆ ಶುರುವಾಯಿತು. ''ನಿಜ, ನಾವು ಇನ್ನೆಷ್ಟು ವರ್ಷ ಇರ್ತೀವಿ? ಪ್ರಳಯ ಆಗ್ಲಿ ಬಿಡ್ಲಿ. ಸಾಯೋವರೆಗೂ ಸಂತೋಷವಾಗಿ ಇರಬೇಕಲ್ವಾ? ಬನ್ನಿ ಆಚೆ ಸುತ್ತಾಡಿಕೊಂಡು ಬರೋಣ..'' ಎಂದು ಗಂಡನ ಕೈ ಹಿಡಿದು ಹೊರಗಡೆ ನಡೆದಳು.

ಸಂಶಯ ಪಿಶಾಚಿ

• ಎಸ್. ರಾಮಮೂರ್ತಿ

ಗಂಡನನ್ನು ನಂಬೋ ಹೆಂಡತಿಯರ ಸಂಖ್ಯೆ ಅಪಾರ. ಆದರೆ ಅಂಥವರಾರೂ ಇನ್ನೂ ಹುಟ್ಟಿಲ್ಲ, ಅಥವಾ ಹುಟ್ಟಿದ್ದೇ ಆಗಿದ್ದರೆ ಅಂಥವರಾರೂ ಬದುಕಿಲ್ಲ. ಹಾಗಾಗಿ, ಈ ಭೂಲೋಕದಲ್ಲಿ ಉಳಿದಿರೋ ಯಾವ ಹೆಂಡತಿಯೂ ಗಂಡನನ್ನು ಹಾಗೂ ಆ ಗಂಡ ಅಂಬೋ ಪ್ರಾಣಿಯ ಮಾತನ್ನು ನಂಬೋದಿಲ್ಲ. ಇದು ಸಾರ್ವಕಾಲೀಕ ಸತ್ಯ ಅನ್ನೋದನ್ನು ಮದುವೆಯಾದ ಸ್ವಲ್ಪ ದಿನಗಳಲ್ಲೇ ಕಂಡುಕೊಂಡುಬಿಟ್ಟೆ. ಆದರೆ, ಇದು ಶಾಶ್ವತವಲ್ಲ, ಗಂಡ ಅಥವಾ ಹೆಂಡತಿ ಇಬ್ಬರಲ್ಲಿ ಒಬ್ಬರು ಸಾಯೋವರೆಗೂ ಅಷ್ಟೇ! ಅಲ್ಲಿಯವರೆಗೂ ಈ ಸಂಶಯ ಪಿಶಾಚಿ ಅನ್ನೋದು ಚಿರಂಜೀವಿ.

ಇದಕ್ಕೆ ನನ್ನ ಹೆಂಡತಿಯೇನೂ ಅಪವಾದವಲ್ಲ. ಹಾಗೇನಾದರೂ ಅಪವಾದ ಆಗಿದ್ದಿದ್ದರೆ, ಅವಳು ಗಿನ್ನೆಸ್ಸನ್ನು ಮೀರಿ ಅಜರಾಮರಳಾಗಿಬಿಡುತ್ತಿದ್ದಳು. ಹೂವಿನ ಜೊತೆ ನಾನೂ ಸೇರಿಬಿಡುತ್ತಿದ್ದೆ ಗಿನ್ನೆಸ್ ಎಂಬ ಆ ಪರಮ-ಪದಕ್ಕೆ.

ಆ ವಿಷಯ ಬಿಡಿ.

ನನ್ನ ಪೀಕಲಾಟದ ವಿಷಯಕ್ಕೆ ಬರೋಣ.

ಹೀಗೇ ಒಂದು ದಿನ 'ರೀ, ಬನ್ನಿ, ಕೂತ್ಕೊಳ್ಳಿ, ಒಂದು ವಿಷಯ' ಅಂತ ನನ್ನನ್ನು ತನ್ನ ಮುಂದೆ ಕೂರಿಸಿಕೊಂಡಾಗ, 'ಏನೋ ಬಹಳ ಸೀರಿಯಸ್ ವಿಷಯಾನೆ ಇರಬೇಕು' ಅನ್ನಿಸಿತು. 'ನೋಡೀ, ಪೇಪರ್ನಲ್ಲಿ ಒಂದು ಆ್ಯಡ್ ಬಂದಿತ್ತು. ಗಂಟೆಗೆ ಸಾವಿರ ಸಂಪಾದಿಸೋದು ಹೇಗೆ ಅಂತ. ಒಂದು ದಿನದ ಕಮ್ಮಟ. ಫೀಸೂ ಕಟ್ಟಿ ಬಂದಿದೀನಿ. ಹೋಗಿ ಬನ್ನಿ. ಸಾವಿರ ಅಲ್ಲದಿದ್ದರೆ ಹತ್ತಾದರೂ ಸಂಪಾದನೆ ಮಾಡಿಕೊಂಡು ಬರೋದನ್ನ ಕಲ್ತುಕೊಂಡು ಬನ್ನಿ. ಕೊತ್ತಂಬರಿ ಸೊಪ್ಪಿಗಾದರೂ ಆಗತ್ತೆ' ಅಂತ ಅಪ್ಪಣೆಸಿದಳು. ರಿಟೈರ್ ಆದ ಮೇಲೆ ಇಂತಹ ಅವಕಾಶಗಳು ಕಡಿಮೇನೇ. ಫ್ಯಾಕ್ಟರೀಲಿದ್ದಾಗ ಇಂತಹ ಯಾವಯಾವುದೋ ಕಮ್ಮಟಗಳಿಗೆ ರಿಲೀಸ್ ಕೊಟ್ಟು ಕಳಿಸ್ತಾ ಇದ್ದರು. ಬಿಡಿ, ಆ ಫ್ಯಾಕ್ಟರೀ ದಿನಗಳ ಮಜವೇ ಬೇರೆ. ಆ ದಿನಗಳನ್ನು ನೆನಪಿಸಿದ ಪದ್ದಿಗೆ ಮನದಲ್ಲೇ ಥ್ಯಾಂಕ್ಸ್ ಹೇಳಿಕೊಂಡೆ. ನಾನು ಖುಷಿ ಆದೆ ಅಂತ ಅವಳಿಗೆ ಗೊತ್ತಾದರೆ, ಅವಳಿಗೆ ಎರಡು ಕೊಂಬುಗಳು ಬೆಳೆದುಬಿಡತ್ತಲ್ವಾ. ಅದಕ್ಕೆ, ನಿರ್ಲಿಪ್ತನಂತೆ ಆಡಿಸಿಯೂ ಆಡಿಸದಂತೆ ತಲೆ ಆಡಿಸಿದೆ.

ನನ್ನನ್ನು ತನ್ನ ಮುಂದೆ ಕೂರಿಸಿಕೊಂಡ ಕೆಲಸ ಮುಗಿಯಿತೆಂದು ತಿಳಿದು ಮೇಲಕ್ಕೆದ್ದೆ. 'ನೋಡೀ' ಅಂತ ನನ್ನನ್ನು ತಡೆದು ನಿಲ್ಲಿಸಿದಳು. ಹಾಗೇ ನಿಂತು ಅವಳತ್ತ ಮುಖ ಮಾಡಿದೆ. 'ಸರ್ಟಿಫಿಕೇಟ್ ಕೊಡ್ತಾರಂತೆ ಕೊನೇಲಿ. ಇಸ್ಕೊಂಡು ಬನ್ನಿ. ಬರೀ ಕೈಲಿ ವಾಪಸ್ ಬಂದು ಮರೆತುಬಿಟ್ಟೆ ಅಂತ ಕೈ ಆಡಿಸಿಬಿಡಬೇಡಿ' ಅಂತ ತೋರುಬೆರಳನ್ನು ಉಲ್ಟಾ ಲೋಲಕದಂತೆ ಆಡಿಸುತ್ತ 'ಎಚ್ಚರಿಕೆ' ಕೊಟ್ಟಳು. ನಾನು ತೊಗೊಂಡೆ.

ಗಂಡ ಎಲ್ಲೇ ಹೊರಗಡೆ ಹೋಗಲಿ, ಬೇಡ ಅನ್ನೋಲ್ಲ. ಆದರೆ ಹಾಗೆ ಹೊರಗೆ ಹೋದಾಗಲೆಲ್ಲಾ ಹೋಗಿದ್ದಕ್ಕೆ ಹೆಂಡತಿಗೆ ಪ್ರೂಫ್ ಕೊಡಬೇಕಾದದ್ದು ಪ್ರತಿಯೊಬ್ಬ ಗಂಡನ ಧರ್ಮ. ಇದು ಸುಖೀ ದಾಂಪತ್ಯಕ್ಕೆ ಪಾಲಿಸಬೇಕಾದ ಅರವತ್ನಾಲ್ಕು ಧರ್ಮಗಳಲ್ಲಿ ಒಂದು. ಅದನ್ನ ನಮ್ಮಪ್ಪ ನನಗೆ ಬೋಧನೆ ಮಾಡಿದ್ದರು. ಮದುವೆಗೆ ಹೋದರೆ ತಾಂಬೂಲ, ಸಿನಿಮಾಕ್ಕೆ ಒಬ್ಬನೇ ಹೋದರೆ (ಅದು ಅಪರೂಪ ಬಿಡಿ) ಟಿಕೆಟ್ಟಿನ ಉಳಿದರ್ಧ, ರಾಯರ ಆರಾಧನೆಗೆ ಹೋದರೆ, ಹಣೆ ಮೇಲೆ ಗಂಧ, ಇತ್ಯಾದಿ ಇತ್ಯಾದಿ.

ಕಮ್ಮಟವೇನೋ ಚೆನ್ನಾಗಿತ್ತು, ಆದರೆ ಕೇಳೋಕೆ ಮಾತ್ರ. ಮಾಡೋಕೆ ಹೇಗಿರತ್ತೋ ಅದು ಮಾಡೋಕೆ ಹೋದ ಮೇಲೇನೇ ಗೊತ್ತಾಗೋದು ಅಂತಿಟ್ಟುಕ್ಕೊಳ್ಳಿ. ಕಮ್ಮಟ ಮುಗಿಯೋಕೆ ಇನ್ನೆರಡು ಗಂಟೆ ಬಾಕಿ ಇತ್ತಷ್ಟೇ. ಟೀ ಬ್ರೇಕು, ಬ್ರೇಕಿಂಗ್ ನ್ಯೂಸೊಂದು ಬಂತು. 'ಡೈರೆಕ್ಟರ್ ಸಾಹೇಬರು ಎಲ್ಲೋ ಕೆಲಸದ ಮೇಲೆ ಹೋಗಿದ್ದಾರೆ. ಅವರ ಸೈನ್ ಇಲ್ಲದೇ ಸರ್ಟಿಫಿಕೇಟು ಕೊಡೋಕಾಗೋಲ್ಲ. ಅವನ್ನು ನಿಮ್ಮ ಮನೆಗಳಿಗೆ ಸ್ಪೀಡ್ ಪೋಸ್ಟ್‌ನಲ್ಲಿ ಕಳುಹಿಸಲಾಗುವುದು' ಎಂದು ಕಮ್ಮಟದ ನಿರ್ವಾಹಕಿ ಘೋಷಿಸಿದಾಗ ನನ್ನ ಮೈ ಥರಥರ ನಡುಗಿ ಹೋಯಿತು. ಎಲ್ಲೋ ಒಂದು ಕಡೆ ಸಂಕಟ ಷುರುವಾಯಿತು. (ಕ್ಷಮಿಸಿ, ಈ 'ಎಲ್ಲೋ ಒಂದು ಕಡೆ' ಅನ್ನೋ ಪದಪುಂಜ ಟೀವಿಯ ಪ್ರಭಾವದಿಂದ ಕಲಿತದ್ದು). ಟೀ ಜೊತೆಗಿದ್ದ ಕ್ರಾಕ್ ಜಾಕ್ ಬೇಡವಾಯಿತು, ಟೀ ರುಚಿಸಲಿಲ್ಲ, ನಿಂತಲ್ಲಿ ನಿಲ್ಲಲಾಗಲಿಲ್ಲ, ತಳಮಳ ಹೆಚ್ಚಾಯಿತು. ದಿನದ ಸಮಾರೋಪ ಭಾಷಣದ ಯಾವ 'ಎರಡು ಮಾತು'ಗಳೂ ತಲೆಯೊಳಗೆ ಹೋಗಲಿಲ್ಲ. ತಲೆಯ ತುಂಬಾ ಸರ್ಟಿಫಿಕೇಟ್ ಕೊಡದೇ ಇರೋ ವಿಷಯಾನೇ ತುಂಬಿರುವಾಗ ಇವಕ್ಕೆಲ್ಲ ಎಲ್ಲಿ ಜಾಗ?

ಸಮಾರೋಪ ಮುಗಿಯುತ್ತಾ ಬಂತು. ಪ್ರಮಾಣ ಪತ್ರ ಗ್ಯಾರಂಟೀ ಸಿಗೋಲ್ಲ ಅನ್ನೋದು ಗ್ಯಾರಂಟೀ ಆಗ್ತಿದ್ದ ಹಾಗೇ, ಹಾರ ಹಾಕಿಸಿಕೊಂಡು ಕಸಾಯಿ ಖಾನೆಗೆ ಹೋಗ್ತಾ ಇರೋ ಕುರಿ ಹಾಗೆ ನನ್ನನ್ನು ನಾನೇ ಕಲ್ಪಿಸಿಕೊಂಡು....

'ನೀವೆಲ್ಲ ತುಂಬ ಲಕ್ಕಿ. ಡೈರೆಕ್ಟರ್ ಸಾಹೇಬರು ಬಂದರು. ನಿಮ್ಮ ಸರ್ಟಿಫಿಕೇಟುಗಳಿಗೆ ಸೈನೂ ಮಾಡಿಬಿಟ್ಟರು' ಅಂತ ನಿರ್ವಾಹಕಿಯಮ್ಮ ನಗುಮೊಗದಿಂದ ಬಲಗಾಲಿಟ್ಟು ಒಳಗೆ ಬರುತ್ತ ಅನೌನ್ಸ್ ಮಾಡಿದಾಗ, 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ನೆನಪಿಗೆ ಬಂತು. ದೇವರು ಒಂದೊಂದು ಸಲ ಹೀಗೆ ತುಂಬಾ ದಯಾಮಯನಾಗಿಬಿಡ್ತಾನೆ, ದೊಡ್ಡವನೂ ಆಗಿಬಿಡ್ತಾನೆ. ನನಗಾದ ಸಂತೋಷವನ್ನು ನಿಮಗೆ

ಪದಗಳಲ್ಲಿ ಬಣ್ಣಿಸಿ ಹೇಳಲಾರೆ. ಪ್ರಮಾಣ ಪತ್ರ ನನ್ನ ಕೈಯನ್ನೂ ಸೇರಿತು. ಅದರ ಸ್ಪರ್ಶ ನನ್ನಲ್ಲಿ ತಂದ ಸುಖಕ್ಕೆ ಏನಂತ ಕರೆಯುತ್ತಾರೋ ನಾನರಿಯೆ. ಹೀಲಿಯಂ ತುಂಬಿದ ಬಲೂನಾದೆ. ಮೇಲಮೇಲಕ್ಕೆ ಹಾರಿದ, ಅಲ್ಲೆಲ್ಲಾ ಹಾರಾಡಿದ ಅನುಭವ.

ಆದರೆ, ನನ್ನ ಮಿತ್ರ ಚೇಲ ಮಾತ್ರ ತನ್ನ ಬಲೂನಿಗೆ ಕಾರ್ಬನ್-ಡೈ-ಆಕ್ಸೈಡ್ ತುಂಬಿಕೊಂಡು ಭೂಮಿ ಮೇಲೇ ಇದ್ದ. ಉತ್ಸಾಹ, ಉಲ್ಲಾಸ, ಪುಲಕಗಳಿರಲಿ, ಒಂದು ಕಿರುನಗೆಯ ಗೆರೆಯೂ ಅವನ ಮುಖದ ಮೇಲೆ ಕಾಣಿಸಿಕೊಳ್ಳಲಿಲ್ಲ. ಆಶ್ಚರ್ಯವಾಯಿತು. ಪ್ರಮಾಣ ಪತ್ರ ಕೈಗೆ ಬಂದರೂ ಇಂತಹ ಬೇಸರಿಕೆಯೇ? ನನಗೇನೋ ಅವನ ಬಗ್ಗೆ ಅನುಮಾನ ಷುರುವಾಯಿತು. ಆ ಅನುಮಾನ ನಿಧಾನವಾಗಿ ನನ್ನನ್ನ ಕಾಡೋಕೂ ಷುರುವಾಯಿತು. ನೇರವಾಗಿ ಕೇಳೇಬಿಟ್ಟೆ 'ಯಾಕೋ ಚೇಲ ಹೀಗಿದ್ದೀಯಾ? ಸರ್ಟಿಫಿಕೇಟು ಬಂತಲ್ಲ. ಇನ್ನೂ ಏನು ನಿನ್ನ ಚಿಂತೆ?' ಅಂತ.

'ಅಯ್ಯೋ ಬಿಡಪ್ಪ, ನನ್ನ ಕಥೇನೇ ಬೇರೆ' ಅಂದ ವ್ಯಥೆ ತುಂಬಿದ ಧ್ವನಿಯಲ್ಲಿ.

'ಯಾಕೇ, ಕಮ್ಮಟಕ್ಕೆ ಬಂದಿರೋದಕ್ಕೆ ಈ ಸರ್ಟಿಫಿಕೇಟಿನ ಪ್ರೂಫು ಸಾಲದಂತಾ ನಿಮ್ಮ ಮನೆಯವರಿಗೇ?'

ಅದೇ ಧ್ವನಿಯಲ್ಲಿ ಹೇಳಿದ 'ಇದನ್ನ ಪ್ರೂಫು ಅಂತ ತೋರಿಸಿದರೆ...'

'ತೋರಿಸಿದರೆ?'

'ಇದಕ್ಕೆ ಎಷ್ಟು ಕುಕ್ಕಿದಿರಿ ಅಂತ ಕೆಕ್ಕರಿಸಿ ಕೇಳ್ತಾಳಯ್ಯಾ?' ಅಂದ ಅವನತಮುಖಿಯಾಗಿ.

'ನಾನೇ ಭಾಗ್ಯವಂತ, ನಾನೇ ಪುಣ್ಯವಂತ' ಅಂತ ಸುತ್ತಲೂ ಕಮ್ಮಟಾರ್ಥಿಗಳು ಇದ್ದದ್ದನ್ನೂ ಮರೆತು ಕುಣಿದಾಡಿಬಿಟ್ಟೆ.



ಪ್ಯೂರ್ ಕನ್ನಡದ ಸವಿರುಚಿ

ಪ್ರತಿ ದಿನ 12.30 ಆಯಿತು ಎಂದರೆ ಜಿಹ್ವಾ ಚಾಪಲ್ಯ ಶುರುವಾಗುತ್ತದೆ. ಅಂದರೆ ಏನಾದರೂ ತಿನ್ನಲು ಅಲ್ಲ, (ಮುಂದೊಂದು ದಿನ) ತಿನ್ನಲು ಏನಾದರು ಮಾಡುವದನ್ನು ತಿಳಿಯಲು. ಅಂದರೆ ಟೀವಿಯಲ್ಲಿ ಪ್ರಸಾರವಾಗುವ ಅಡಿಗೆ ಕಾರ್ಯಕ್ರಮವನ್ನು ನೋಡಲು.

ಚೋಪ್ರಾ ಯುಗದಲ್ಲಿ ರಾಮಾಯಣ ಎಂಬ ಪವಿತ್ರ ಧಾರಾವಾಹಿಯನ್ನು ಸಡಗರದಿಂದ ನೋಡುತ್ತಿದ್ದ ಹಾಗೆ ಈಗ ಈ ರುಚಿರುಚಿ ಯುಗದಲ್ಲಿ ಕಿಚನ್‌ನಿಂದ ನೇರವಾಗಿ ಪ್ರಸಾರವಾಗುವ ಅಡಿಗೆ ಮನೆ ಪ್ರಾತ್ಯಕ್ಷಿಕೆ ಮತ್ತು ಸಾಹಿತ್ಯವನ್ನು ನನ್ನ ಹೆಂಡತಿ ಅದೇ ಭಕ್ತಿ ಭಾವಗಳಿಂದ ನೋಡುತ್ತಾಳೆ. ಫಾರ್ ಫ್ಯೂಚರ್ ಯೂಸ್ ಎಂದು ನೋಟ್ಸ್ ಸಹ ಮಾಡಿಕೊಳ್ಳುತ್ತಾಳೆ.

ಅಡಿಗೆ ಮನೆಯಿಂದ ಈ ನೇರ ಪ್ರಸಾರದ ಸಮಯದಲ್ಲಿ ನಾನು ನನ್ನ ಶ್ರೀಮತಿಗೆ, ಕಿರುತೆರೆಯ ಮೇಲೆ ಕುಕ್ ಮಾಡುವ ಸಾಮಾನ್ಯ/ಗಣ್ಯರಿಗೆ, ಮತ್ತು ವಾ! ಹೌ ನೈಸ್ ಎಂದೋ ಅಥವಾ ಯಮ್! ಎಂದೋ ಕೊನೆಯಲ್ಲಿ ಬಾಯಿ ಚಪ್ಪರಿಸುತ್ತಾ ಹೇಳುವ ನಿರೂಪಕರಿಗೆ ಕಂಪನಿ ಕೊಡುತ್ತೇನೆ.

ಅಡಿಗೆಗೆ ಸಂಬಂಧಿಸಿದ ಟಿಪ್ಸ್‌ಗಳನ್ನು ನನ್ನ ಹೆಂಡತಿ ಬರೆದುಕೊಂಡರೆ ನಾನು ಈ ಹೊಸರುಚಿಯ ಪರಿಭಾಷೆಯನ್ನು (ವಿರೋಧ ಪಕ್ಷದವರು ಆಳುವ ಪಕ್ಷದವರತ್ತ ಗಮನ ಕೊಡುವ ಹಾಗೆ) ಗಮನಿಸುತ್ತೇನೆ. ಅದು ಕನ್ನಡದಲ್ಲಿ ಇಂಗ್ಲಿಷ್ ಬೆರೆತಿದೆಯೋ ಅಥವಾ ಇಂಗ್ಲಿಷ್‌ನಲ್ಲಿ ಕನ್ನಡ ಬೆರೆತಿದೆಯೋ ತಿಳಿಯದೆ (ಜಾಹೀರಾತಿನ ಮಧ್ಯೆ ಸಿನಿಮಾವೋ ಅಥವಾ ಸಿನಿಮಾ ಮಧ್ಯೆ ಜಾಹೀರಾತೋ ಎಂದು ಕನ್‌ಫ್ಯೂಸ್ ಆಗುವ ಹಾಗೆ) ಗೊಂದಲ ಪಡುತ್ತೇನೆ.

ನನ್ನ ನೋಟ್ಸ್‌ಗಳಿಂದ ಆಯ್ದವು:

ನೀವು ಈ ಕಾರ್ಯಕ್ರಮಕ್ಕೆ ಬರೋದಿಕ್ಕೆ ಟೈಂ ಸ್ಪೇರ್ ಮಾಡಿದ್ದಕ್ಕೆ ತುಂಬಾ ಥ್ಯಾಂಕ್ಸ್

ಈಗ ನೀವು ಮಾಡೋ ಅಡಿಗೆಗೆ ಏನೇನು ಇನ್‌ಗ್ರೇಡಿಯೆಂಟ್ಸ್ ಬೇಕು?

ಪ್ರ: ಅಂದಹಾಗೆ ನೀವು ಈ ಕುಕಿಂಗ್ ಎಲ್ಲಾ ಎಲ್ಲಿ ಕಲಿತಿರಿ?

ಉ: ನಮ್ಮ ಮದರ್ರೋ / ನಮ್ಮ ಮದರ್ ಇನ್ ಲಾ / ಅಥವಾ (ರೇರ್ ಕೇಸಸ್‌ನಲ್ಲಿ) ನಮ್ಮ ಹಸ್ಬೆಂಡೇ ಹೇಳಿಕೊಟ್ಟರು.

ಪ್ರ: ನೀವು ಈ ವೆಜಿಟಬಲ್ಸ್ ಎಲ್ಲಾ ಎಲ್ಲಿ ಕೊಳ್ತೀರಿ?

ಉ: ನಾವು ಫ್ರೆಷ್ ಆಗಿ ಎಲ್ಲಾ ಮಾರ್ಕೆಟ್‌ನಲ್ಲಿ ಬಯ್ ಮಾಡ್ತೀವಿ.

ಪ್ರ: ಇದು ಮಾರ್ನಿಂಗ್ ಬ್ರೇಕ್‌ಫಾಸ್ಟ್‌ಗೆ ಸರಿ?

ಉ: ನೋ ನೋ ಇದು ಲಂಚ್ ಟೈಂಗೆ ಸಹ.

ಪ್ರ: ಕ್ಯಾರೆಟ್ ಹೀಗೆ ಸ್ಮಾಲ್ ಪೀಸೆಸ್ ಮಾಡಬೇಕಾ?

ಉ: ಹೌದು ಹೀಗೆ ಕಟ್ ಮಾಡಿದರೇನೇ ಹೆಚ್ಚು ಟೇಸ್ಟ್ ಇರುತ್ತದೆ (ಎಂದು ಮಾಡಿದ ಅಡಿಗೆಗೆ ಒಂದು ಪಿಂಚ್ ಆಫ್ ಸಾಲ್ಟ್ ಹಾಕುತ್ತಾ ಹೇಳುತ್ತಾರೆ).

ಕೋಕೋನೆಟ್ ಈಗ ತುಂಬಾ ಕಾಸ್ಲಿ ನೋಡಿ ಅದಕ್ಕೇ ನಾವು ಬೇರೆ ಸಬ್‌ಸ್ಟಿಟ್ಯೂಟ್ ಯೂಸ್ ಮಾಡ್ತೀವಿ.....ನಮ್ಮ ಮನೇಲಿ ಯಾರೂ ಕೋಕೋನೆಟ್ ಲೈಕ್ ಮಾಡೊಲ್ಲ....

ಈವನಿಂಗ್ ಸ್ನ್ಯಾಕ್ ಆಗಿ ಇದನ್ನು ಪ್ರಿಪೇರ್ ಮಾಡಿದರೆ ಮಕ್ಕಳೆಲ್ಲ ತುಂಬಾ ಲೈಕ್ ಮಾಡ್ತಾರೆ.

.....ಬೇಕಾದರೆ ನೀವು ಗ್ರೌಂಡ್‌ನಟ್ ಬಳಸಬಹುದು.....

ಈ ಆಯಿಲ್ ಇಷ್ಟು ಹೀಟ್ ಆದರೆ ಸಾಕಾ? ಇದನ್ನು ಮತ್ತೆ ರಿ ಯೂಸ್ ಮಾಡಬಹುದಾ?

ಅಂದಹಾಗೆ ನೀವು ಮ್ಯೂಸಿಕ್ ಎಲ್ಲಿ ಕಲಿತಿದ್ದು? ಯಾವುದಾದರೂ ಒಂದು ಸಾಂಗ್ ಹೇಳ್ತೀರಾ?

ನಿಮ್ಮ ಹಸ್ಬೆಂಡ್ ಸಪೋರ್ಟ್ ನಿಮಗೆ ಇದೆಯೆ?

ಓಕೆ...ನಾವು ನಿಮ್ಮ ನೆಕ್ಸ್ಟ್ ಐಟಂ ಏನು ಅಂತ ತಿಳಿದುಕೊಳ್ಳೋಣ.

ವಾ! ಹೌ ಟೇಸ್ಟಿ?

ಬಂದಾಕಿ ಸಿನೆಮಾ ತಾರೆ ಆಗಿದ್ದರೆ: ಫಿಲ್ಮಂ ಇಂಡಸ್ಟ್ರಿಗೆ ನಿಮ್ಮ ಎಂಟ್ರಿ ಹೇಗಾಯಿತು?

ತಾರೆ: ನಾನು ....ಚಿತ್ರದ ಮೂಲಕ ಎಂಟ್ರಿ ಕೊಟ್ಟೆ

ಶೂಟ್ ಮಾಡುವಾಗ ಇನ್ ಫ್ರಂಟ್ ಆಫ್ ಕ್ಯಾಮೆರಾ ನಿಮಗೆ ಹೇಗೆ ಅನಿಸಿತು?

ಕನ್ನಡ ಫಿಲಂ ಇಂಡಸ್ಟ್ರಿಗೂ ಬೇರೆ ಫಿಲಂ ಇಂಡಸ್ಟ್ರಿಗೂ ಏನು ಡಿಫರೆನ್ಸ್ ಇದೆ? ಅಲ್ಲಿ ಎನ್ವಿರನ್ಮೆಂಟ್ ಹೇಗಿತ್ತು? ಕಂಫರ್‌ಟ್‌ನೆಸ್ ಹೇಗೆ?

ತೆಲುಗಿನಲ್ಲಿ ಒಂದು ಸಾಂಗ್ ತ್ರೀ ಫೋರ್ ಡೇಸ್ ಶೂಟ್ ಮಾಡ್ತಾರೆ.

ನೀವು ಬಂದು ಇಲ್ಲಿ ಟೈಂ ಸ್ಪೆಂಡ್ ಮಾಡಿದ್ದಕ್ಕೆ ತುಂಬಾ ಥ್ಯಾಂಕ್ಸ್.

• ಕನ್ನಡದಲ್ಲೇ ಕೇಳಿಸಿಕೊಂಡವರು: ಆನಂದ

ತುಂತುರು

• ದುಂಡಿರಾಜ್

- ಕೂದಲೇ ಇಲ್ಲದವನಿಗೆ ಡ್ಯಾಂಡ್ರಫ್ ಚಿಂತೆ ಯಾಕೆ?
- Happiness is in the journey not in the destination.
- 'ಜಬ್ ವಿ ಮೆಟ್' ಚಿತ್ರದ ಉತ್ತರಾರ್ಧ: 'ಜಬ್ ವಿ ಫೆಲ್ ಔಟ್' ಇರಬಹುದೆ?
- ಬದುಕು - ಇದರ ವಿರುದ್ಧ ಪದ ಸಾವು ಅಲ್ಲ; ಬೇಸರ.
- The opposite of a correct statement is a false statement. The opposite of a profound truth may well be another profound truth.
- ಬಸ್ ಸ್ಟಾಂಡ್‌ನಲ್ಲಿ ಮದುವೆಯಾದರೆ ಮನೆಯಲ್ಲಿ ಹೆರಿಗೆ ಆಗುವುದಿಲ್ಲ.
- The difficulty of literature is not to write but to write what you mean.
- ತಲೆ ಕೂದಲಿಗೆ ಬಣ್ಣ ಹಚ್ಚುವುದು ಜಗತ್ತಿಗೆ ಮೋಸ ಮಾಡಿದಂತಲ್ಲವೆ?
- You should know when to say no.
- ನೀವು ಓದಲೇಬೇಕಾದ ಪುಸ್ತಕವೊಂದು ಇದ್ದು ಅದನ್ನು ಇನ್ನೂ ಯಾರೂ ಬರೆದಿಲ್ಲದಿದ್ದರೆ ನೀವೇ ಅದನ್ನು ಬರೆಯಬೇಕು.
- Books had instant replay long before televised sports.
- ಅಂಬಾನಿ ಅಂತಹವರ ಉವಾಚ: ಐ ಆಯಾಮ್ ನಾಟ್ ಅ ಬುಸಿನೆಸ್ ಮ್ಯಾನ್, ಐಯಾಮ್ ಬುಸಿನೆಸ್, ಮ್ಯಾನ್.
- ದೇವರಿಗೂ ಸಂಪಾದಕನಿಗೂ ಇರುವ ಒಂದು ವ್ಯತ್ಯಾಸ ಎಂದರೆ ದೇವರು ತಾನು ಸಂಪಾದಕ ಎಂದುಕೊಳ್ಳುವುದಿಲ್ಲ.
- Third law of Delhi's physics: The number of friends varies in direct proportion to your perceived level of power.
- ಧೈರ್ಯ ಎಂದರೆ ನಾನು ಸೋಲುತ್ತೇನೆ ಎಂದು ಕಂಡುಕೊಳ್ಳುವುದಲ್ಲ, ಸೋಲುತ್ತೇನೆ ಎಂದು ಗೊತ್ತಿದ್ದರೂ ಪ್ರಯತ್ನಿಸುವುದು.
- ಕುರುಡರು ಗೇಲಿಗೊಳಗಾಗರು. ಆದರೆ ಕಿವುಡರೇಕೆ ಗೇಲಿಗೊಳಗಾಗುತ್ತಾರೆ?

ಅಚ್ಚತ್ತೆಯ ನೆನಪುಗಳು

• ಎಚ್. ಗೋಪಾಲಕೃಷ್ಣ

ಗವಾಸ್ಕರ್‌ಗಿಂತಲೂ ಸಚಿನ್ ಆಟ ಮೋರ್ ಕ್ರಿಕೆಟ್ಟು, ವಿಶ್ವನಾಥ ಈಗ ಬ್ಯಾಟ್ ಮಾಡಿದ್ದರೆ ಸೆಹವಾಗ್ ಅವನ ಮುಂದೆ ಏನು? ಪ್ರಸನ್ನನಿಗೆ ಒಂದು ನಲವತ್ತು ವಯಸ್ಸು ಕಮ್ಮಿ ಇದ್ದಿದ್ದರೆ ಅವನು ಈಗಿರೋ ಎಲ್ಲಾ ಸ್ಪಿನ್ನರುಗಳನ್ನೂ ಮಿಂಚಿಸಿಬಿಡುತ್ತಿದ್ದ, ಚಂದ್ರಶೇಖರನ ಥರಹ ಗೂಗ್ಲೀ ಮಾಡೋನು ಮತ್ತೊಬ್ಬ ಹುಟ್ಟಲೇ ಇಲ್ಲವಲ್ಲಾ.....

ಕ್ರಿಕೆಟ್ ಮ್ಯಾಚುಗಳನ್ನು ಟೀವಿ ಪರದೆಯ ಮೇಲೆ ನೋಡುತ್ತಾ ಈ ವಾಕ್ಯಗಳು ನಿಮ್ಮ ಕಿವಿಯ ಮೇಲೆ ಬಿದ್ದಿದ್ದೇ ಆದರೆ ಅದು ಖಂಡಿತ ನಮ್ಮ ಅಚ್ಚತ್ತೆಯ ಮಾತುಗಳೇ ಅಂತ ಸಾವಿರಕ್ಕೆ ಹತ್ತುಸಾವಿರ ಬಾಜಿ ಕಟ್ಟಿ ಹೇಳಿಬಿಡಬಹುದು. ಅಚ್ಚತ್ತೆ ವಿಷಯ ನಿಮಗಿನ್ನೂ ನಾನು ಹೇಳಿಲ್ಲ ಅಂದರೆ ಅದಕ್ಕೆ ಅವಕಾಶ ಸಿಕ್ಕಿರಲಿಲ್ಲ ಅಷ್ಟೇ. ಅಚ್ಚಮ್ಮಜ್ಜಿ ಆಲಿಯಾಸ್ ಅಚ್ಚತ್ತೆ ನಮ್ಮ ತಾಯಿ. ಸುಮಾರು ತೊಂಬತ್ತು ವರ್ಷವಾದರೂ ಚಿಕ್ಕ ಮಕ್ಕಳ ಜೀವನೋತ್ಸಾಹವನ್ನು ತನ್ನಲ್ಲಿ ಹುದುಗಿಸಿ ಇಟ್ಟುಕೊಂಡಿದ್ದರು ಅವರು.

ರಾಜ್‌ಕುಮಾರ್ ಸಿನೇಮಾಗಳನ್ನ ಕೈಯಲ್ಲಿ ಆಗುವವರೆಗೆ ಮೊದಲನೇ ವಾರವೇ ನೋಡಿಬಿಡುತ್ತಿದ್ದರು. ಹಾಗೆ ನೋಡಿದರೆ ರಾಜಕುಮಾರ್ ಸಿನಿಮಾಗಳು ಒಂದೇ ಅಲ್ಲ ಅವರಿಗೆ ಆ ಕಾಲದ ಹೀರೋಗಳಾದ ಎಂಜಿಆರ್, ಎನ್‌ಟಿಆರ್, ದಿಲೀಪ್ ಕುಮಾರ್ ದೇವಾನಂದ್... ಹೀಗೆ ಎಲ್ಲರ ಸಿನಿಮಾಗಳೂ ವೀಕ್ಷಣೆಗೆ ಅರ್ಹ ಅಂತ ಅನಿಸಿ ಅವುಗಳನ್ನು ನಮ್ಮನ್ನೂ ಜತೆಯಲ್ಲಿ ಎಳೆದುಕೊಂಡು ಹೋಗಿ ನೋಡುತ್ತಿದ್ದರು. ಇದು ಒಂದು ಮುಖವಾದರೆ ಕನ್ನಡ ಕಾದಂಬರಿಗಳನ್ನು ಅವರು ಮನಸ್ಸಿಟ್ಟು ಓದುತ್ತಿದ್ದ ರೀತಿ. ಇದು ಮೊದಮೊದಲು ಅಷ್ಟು ನಮ್ಮ ಗಮನವನ್ನು ಸೆಳೆದಿರಲಿಲ್ಲ. ಮನೆಗೆ ಸೊಸೆಯಂದಿರು ಬಂದು ವಿರಾಮ ಸಿಕ್ಕಿದೆ ಅನ್ನಬೇಕಾದರೆ ನಮಗೆ ತಿಳೀದ ಹಾಗೆ ಅವರು ಸಮಯ ಹೇಗೆ ಕಳಿತಾರೆ ಎನ್ನುವುದರ ಬಗ್ಗೆ ಕೊಂಚ-ಕೊಂಚವೇ-ಗಮನ ಹರಿಸುತ್ತಿದ್ದೆವು. ಅಂಗಳದಲ್ಲಿ ಹರಡಿರುವ ಎಳೆ ಬಿಸಿಲಿಗೆ ಮೈಒಡ್ಡಿ ಕೂತು ಮೈಮೇಲೆ ಒಂದು ಶಾಲನ್ನೂ ಹೊದ್ದು ಬಲಗಡೆ ಒಂದು ದೊಡ್ಡ ಲೋಟದಲ್ಲಿ ಬಿಸಿ ಬಿಸಿ ಹಬೆಯಾಡುತ್ತಿರುವ ಕಾಫಿ ಇಟ್ಟುಕೊಂಡು ಮನೆಗೆ ಬರುತ್ತಿದ್ದ ತಾಯಿನಾಡು, ಪ್ರಜಾವಾಣಿ ಓದುತ್ತಾ ಅವರು ಕೊಡುತ್ತಿದ್ದ ರನ್ನಿಂಗ್ ಕಾಮೆಂಟರಿ ಕೇಳುವುದೇ ಒಂದು ರೀತಿಯ ಖುಷಿ ನೀಡುತ್ತಿತ್ತು. ಎರಡು ಪತ್ರಿಕೆ ಓದಿ ಮುಗಿಸುವಷ್ಟರಲ್ಲಿ

ನಾಲ್ಕು ಲೋಟ ಕಾಫಿ ಖಾಲಿಯಾಗಿರುತ್ತಿತ್ತು. ಪೇಪರು ಓದಿ ಮುಗಿಸಿದ ನಂತರ ಕಾದಂಬರಿಗಳು ಅವರ ಕೈ ಸೇರುತಿತ್ತು. ಅನಕೃ, ತರಾಸು, ರಾಮಮೂರ್ತಿ ಇವರೆಲ್ಲರ ಕಾದಂಬರಿಗಳ ಯಾವ ಪಾತ್ರ ಕೇಳಿ ಅದು ಅಚ್ಚುತ್ತೆ ಬಾಯಿಯಲ್ಲಿ ಕಾದಂಬರಿಯಲ್ಲಿ ಮೂಡಿದ ಹಾಗೆಯೇ ಮೂಡುತ್ತಿತ್ತು. ಅದರ ಜತೆಗೆ ಪಾತ್ರ ವಿಶ್ಲೇಷಣೆ-ಬಹುಶಃ ಈಗಿನ ವಿಮರ್ಶಕರುಗಳು ಈ ಮಾತುಗಳನ್ನು ಆಲಿಸಿದ್ದರೆ ವಿಮರ್ಶೆಗಳಿಗೆ ಹೊಸಾ ಆಯಾಮ ಸಿಕ್ಕುತ್ತಿತ್ತೇನೋ ಎಂದು ಹಲವು ಬಾರಿ ಅಂದುಕೊಂಡಿದ್ದೇನೆ. ಹಾಗೆ ನೋಡಿದರೆ ನಮ್ಮಮ್ಮ ಯಾವುದೇ ಕಾಲೇಜಿಗೂ ಹೋದವಳೇ ಅಲ್ಲ-ಯಾವುದೇ ಡಿಗ್ರೀಯನ್ನು ಪಡೆದವಳಲ್ಲ. ಆದರೆ ಜೀವನಾನುಭವ ಹೊಂದಿದ್ದವಳು. ಅನಕೃ ಕಾದಂಬರಿಗಳನ್ನು ಓದುವಷ್ಟೇ ಆಸಕ್ತಿಯಿಂದ ಪುರಂದರದಾಸರ ಹಾಡುಗಳನ್ನೂ ಅಮ್ಮ ಹೇಳುತ್ತಿದ್ದಳು. ದಾಸರ ಪದಗಳು ಮತ್ತು ತೊಟ್ಟಿಲು ತೂಗುವ ಹಾಡುಗಳು ಅಮ್ಮನ ಬಾಯಿಂದಲೇ ನಮಗೆ ಮೊದಲು ಪರಿಚಯವಾಗಿದ್ದು. ನನ್ನ ಮದುವೆಯಾಗಿ ಮಕ್ಕಳೂ ಆದ ನಂತರ ನಾನು ತೊಟ್ಟಿಲ ಹಾಡುಗಳನ್ನೂ ದಾಸರ ಪದಗಳನ್ನೂ ಮಕ್ಕಳನ್ನು ಮಲಗಿಸಲು ಹೇಳಿದ್ದೇನೆ ಮತ್ತು ಅಕ್ಕ ಪಕ್ಕದವರು ಏಕ್ರೀ ನಿಮ್ಮ ಗಂಡ ಹಾಗೆ ಕೀಚಲು ದನೀಲಿ ಯಾವಾಗಲೂ ಅಳ್ತಾ ಇರುತ್ತೆ ಅಂತ ನನ್ನಾಕೆಯನ್ನು ಪ್ರಶ್ನಿಸುವ ಹಾಗೂ ಖ್ಯಾತಿವಂತನಾಗಿದ್ದೆ. ಅದೇಕೋ ನಂತರ ಸಂಗೀತ ಕಲಿಯದೆ ಸುಮಾರು ಜನರ ಆರೋಗ್ಯಕ್ಕೆ ಕಾರಣನಾಗಿದ್ದೇನೆ.

ಹಾಗೆ ನೋಡಿದರೆ ನಮ್ಮಲ್ಲಿ ಓದುವ ಅಭಿರುಚಿಯನ್ನು ಬೆಳೆಸಿದ್ದು ನಮ್ಮ ತಾಯಿಯೇ. ಅನಕೃ ಕಾದಂಬರಿಗಳು ಕಾರ್ಖಾನೆಯಿಂದ ಬಂದಹಾಗೆ ಬರುತ್ತಿದ್ದ ಕಾಲ ಅದು. ಪುಸ್ತಕ ಅಂಗಡಿಗೆ ಬರುತ್ತಿದ್ದ ಹಾಗೇ ಅಪ್ಪ ಅದನ್ನು ಮನೆಗೆ ತರುವುದು-ಅಮ್ಮ ಅದನ್ನು ಓದಿ ಸುತ್ತಮುತ್ತಲಿನವರಿಗೆ ಅದರ ಕಥೆಯನ್ನು ಹೇಳುವುದು-ಚಿಕ್ಕವರಾಗಿದ್ದ ನಾವೂ ಅಲ್ಲೇ ಕೂತು ಕಥೆ ಕೇಳಿ ನಂತರ ಪುಸ್ತಕ ತೆರೆದು ಕಥಾಭಾಗ ಅರಿಯಲು ಯತ್ನಿಸುವುದು ಹೀಗೆ ಓದುವ ಹುಚ್ಚು ಅಂಟಿಸಿಕೊಂಡಿದ್ದು. ಅನಕೃ, ರಾಮಮೂರ್ತಿ, ತರಾಸು ಹೀಗೆ ಒಬ್ಬೊಬ್ಬರ ಪರಿಚಯಗಳು ಕಾದಂಬರಿಗಳ ಮೂಲಕವಾಗಿದ್ದು ನಾವು ಹೈಸ್ಕೂಲು ಓದುವ ಸಮಯದಲ್ಲಿ, ಆಗಾಗ್ಗೆ ನರಸಿಂಹಯ್ಯ ಅವರ ಪುರುಷೋತ್ತಮನ ಸಾಹಸದ ಕಾದಂಬರಿಗಳು ಮನೆಗೆ ಬರುತ್ತಿತ್ತು. ಪುರುಷೋತ್ತಮನ ಎರಡನೇ ಸಾಹಸ, ಮೂರನೇ ಸಾಹಸ, ನೂರ ಅರವತ್ತನೇ ಸಾಹಸ.... ಹೀಗೆ ಸಾಹಸಗಳು ನಮ್ಮ ತಲೆಯಲ್ಲಿ ಅಚ್ಚೊತ್ತಿಬಿಟ್ಟಿದ್ದವು.

ಪುರುಷೋತ್ತಮನ ಸಾಹಸಗಳನ್ನು ಓದಿಯೇ ಒಂದು ಪತ್ತೇದಾರಿ ಕಾದಂಬರಿಯನ್ನು ಬರೆಯಲು ಮಿಡಲ್ ಮೂರನೇ ತರಗತಿಯಲ್ಲಿದ್ದಾಗಲೇ ನಾನು ಯತ್ನಿಸಿದ್ದೆ. ಯಾರಿಗೂ ಹೀಗೆ ಬರೆಯುತ್ತಿದ್ದೇನೆ ಎಂದು ಹೇಳಿಕೊಳ್ಳಲು ಸಂಕೋಚ-ಅದರಿಂದ ಸ್ಕೂಲಿನಲ್ಲಿ ಎರಡು ಮೂರು ಪೀರಿಯಡ್ಡು ಚಕ್ಕರ್ ಹಾಕಿ ಸರಸ್ವತಿ ಸೇವೆ ಮಾಡುತ್ತಿದ್ದೆ. ಒಂದು ವಾರದಲ್ಲಿ ಅರವತ್ತು ಪುಟಗಳ ಉತ್ಕೃಷ್ಟ ಸಾಹಿತ್ಯ ಸಿದ್ಧವಾಗಿತ್ತು. ನಾಲ್ಕು ಕೊಲೆಯಾಗಿತ್ತು, ಎರಡು ದರೋಡೆಯಾಗಿತ್ತು. ಊರಿನ ಪೋಲೀಸರು ದಿಕ್ಕು ಕೆಟ್ಟು ಅಮಾವಾಸ್ಯೆಯ ಕಗ್ಗತ್ತಲಿನ ಕರಾಳ ರಾತ್ರಿಯಲ್ಲಿ ಭಯಭೀತರಾಗಿ ಮೈ ತುಂಬಾ ಉಲ್ಲನ್ ಸ್ವೆಟರನ್ನು ತೊಟ್ಟು ಕೈಯಲ್ಲಿನ

ಲಾಠಿಯನ್ನು ನೆಲಕ್ಕೆ ಟಕ್ ಟಕ್ ಶಬ್ದ ಬರುವಂತೆ ಕುಟ್ಟುತ್ತಾ ಬಾಯಲ್ಲಿ ವಿಷಲ್ ಇಟ್ಟುಕೊಂಡು ಜೋರಾಗಿ ಸಿಳ್ಳು ಹಾಕುತ್ತಾ ಓಡಾಡುತ್ತಿದ್ದರು. ಸದರಿ ಕೃತಿ ಪ್ರಕಟಗೊಂಡು ಇಡೀ ಸಾಹಿತ್ಯಲೋಕ ಅದನ್ನು ಮೆಚ್ಚಿ ನನಗೆ ಕಿರೀಟ ತೊಡಿಸುವ ಕನಸು ಕಾಣುತ್ತಿದ್ದೆ. ಕನಸು ಕಾಣುತ್ತಾ ಮಾಡಿಯ ಮೇಲಿದ್ದೆ. ಈ ಸಮಯದಲ್ಲಿಯೇ ದಾಸಪ್ಪ ಎನ್ನುವ ನಮ್ಮ ಮೇಷ್ಟರು ನಮ್ಮ ಮನೆಗೆ ಬಂದರು. ವಿಧಿ ಕಿಟಕಿ ಪಕ್ಕ ನಿಂತು ನಗುತ್ತಾ ಇದೆ ಅಂತ ನನಗೆ ಆಗ ಗೊತ್ತಿರಲಿಲ್ಲ. ದಾಸಪ್ಪ ಅವರು ಬಂದಿರುವುದೂ ನನಗೆ ತಿಳೀದು. ತಿಳಿದಿದ್ದರೆ ಆಗಲೇ ಮನೆ ಬಿಟ್ಟು ಓಡಿ ತಪ್ಪಿಸಿಕೊಂಡು ಬಿಡುತ್ತಿದ್ದೆ .

ಮನೆಗೆ ಬಂದ ದಾಸಪ್ಪ ಅಪ್ಪನ ಸಂಗಡ ಅದೇನೋ ಮಾತನಾಡಿದರು. ಮನೇಲೇ ಇದ್ದನಲ್ಲಾ ಅಂತ ಅಪ್ಪ ಹೇಳಿದ್ದು ಕೇಳಿಸಿತು. ಲೋ ಎಲ್ಲಿದ್ದೀಯೋ ಅಂತ ಅಪ್ಪ ಕೂಗಿದ್ದೂ ಕೇಳಿಸಿತು. ದಡ ದಢ ಇಳಿದು ಬಂದೆ. ಎದುರಿಗೆ ದಾಸಪ್ಪ ಮೇಷ್ಟರು ಕುರ್ಚಿಮೇಲೆ ಕೂತಿದಾರೆ-ಅವರ ಕೈಯಲ್ಲಿ ಕಾಫಿ ಲೋಟವಿದೆ, ಎದುರಿಗೆ ಅಪ್ಪ ಕೂತಿದಾರೆ ಅವರ ಕೈಲೂ ಕಾಫಿ ಲೋಟ. ಅಪ್ಪನಮುಖ ಉರೀತಿದೆ ಅನಿಸಿತು. ಅಡಿಗೆ ಮನೆ ಬಾಗಿಲಿನಲ್ಲಿ ಅಮ್ಮ ಚಿಂತೆ ಹೊತ್ತು ನಿಂತಿದಾಳೆ.

ಏಕೋ ಒಂದು ವಾರದಿಂದ ಸ್ಕೂಲಿಗೆ ಹೋಗಿಲ್ಲವಂತೆ? ಅಪ್ಪನ ಪ್ರಶ್ನೆ.

ಒಂದು ವಾರ ಅಲ್ಲ ಬರೀ ಐದು ದಿವಸ ಮಧ್ಯಾಹ್ನ ಹೋಗಿಲ್ಲ ಅಷ್ಟೇ ಅಂದೆ. ಒಂದು ವಾರಕ್ಕೂ ಐದು ದಿವಸಕ್ಕೂ ವ್ಯತ್ಯಾಸವಿಲ್ಲವೇ?

ಓಹೋ ಐದು ದಿನ ಹೋಗಿಲ್ಲವ್ರೋ ಯಾಕೆ ಏನು ಅಂಥಾ ಕೆಲಸ ಮನೇಲಿ ಸಾಹೇಬರದ್ದು ?

ಕಾದಂಬರಿ ಬರೀತಿದೀನಿ ಅಂತ ಹೇಳಲೇ? ತೆಪ್ಪಗೆ ತಲೆ ಬಗ್ಗಿಸಿ ನಿಂತೆ.

ಇಷ್ಟು ಹೊತ್ತಿಗೆ ದಾಸಪ್ಪ ಮೇಷ್ಟರು ಕಾಫಿ ಕುಡಿದಿದ್ದರು. ನಾನು ಹೋಗಿಬರ್ತೀನಿ ಸುಮ್ಮನೆ ವಿಚಾರಿಸಿ, ಹೊಡೆದೂ ಗಿಡಿದೂ ಮಾಡಬೇಡಿ, ಹುಡುಗ ಒಳ್ಳೇವ್ನೇ... ಕೆಟ್ಟ ಸಹವಾಸಕ್ಕೆ ಬಿದ್ದಿದಾನಾ ಅಂತ....

ಅಪ್ಪ ಇನ್ನೊಂದೆರಡು ಸಲ ಕೇಳಿದರು. ನಾನು ಉತ್ತರಿಸದೇ ಹಾಗೇ ತಲೆ ತಗ್ಗಿಸಿ ನಿಂತಿದ್ದೆ. ಅಪ್ಪನ ಗಮನ ಅಮ್ಮನ ಕಡೆ ಹರೀತು. ಮನೇಲೆ ಇರ್ತೀಯಾ, ಬೇಗ ಬಂದರೆ ಯಾಕೆ ಬಂದ ಅಂತ ಕೇಳಬಾರದೇ?

ಅವನು ಬೇಗ ಬಂದಿದ್ದು ಗೊತ್ತಿಲ್ಲಾ? ಸ್ಕೂಲಿಂದ ಬರೋ ಸಮಯಕ್ಕೆ ಸರಿಯಾಗಿ ಮಾಡಿ ಮೇಲಿಂದ ಇಳಿದು ಬರ್ತಾಇದ್ದ. ನಾನು ಒಳಗಿದ್ದಾಗ ಬಂದು ಮೇಲೆ ಹೋದನೇನೋ ಅಂತ ಅಂದುಕೊಂಡಿದ್ದೆ...

ಅಪ್ಪ ದುರು ದುರು ನನ್ನನ್ನ ನೋಡಿದರು-ಎರಡು ಬಾರಿಸಲು ಎದ್ದರು-ನಾನು ಅಲ್ಲಿಂದ ಓಡಿದೆ. ಸಂಜೆ ಏಳಕ್ಕೆ ಮನೇಗೆ ಬಂದೆ. ಅಣ್ಣಂದಿರು, ಅಕ್ಕ, ಅಮ್ಮ ಎಲ್ಲರ ಮುಖದಲ್ಲಿಯೂ – ಒಂದು ರೀತಿಯ ನಗೆ-ಕುಹಕವಾದ್ದೋ ಸಂತೋಷದ್ದೋ ಅದು ನನಗೆ ತಿಳಿಯದ

ವಯಸ್ಸು, ಊಟಕ್ಕೆ ಕೂತು ಊಟ ಮುಗಿಸಿ ಏಳಬೇಕಾದರೆ ನನ್ನ ದೊಡ್ಡ ಅಣ್ಣ ಗೋಪಾಲ ಸಿಂಹನ ಮೊದಲನೇ ಸಾಹಸದ ಕಥೆ ಕೇಳೀದೀರಾ ಯಾರಾದರೂ? ಅಂತ ಕೇಳಿದ.

ನನ್ನ ಪತ್ತೇದಾರನ ಹೆಸರೂ ಗೋಪಾಲಸಿಂಹ ಅಂತಲೇ. ಆಶ್ಚರ್ಯದಿಂದ ಅವನೆಡೆಗೆ ನೋಡಿದೆ. ನಾನು ಹುಟ್ಟುಹಾಕಿದ್ದ ಗೋಪಾಲಸಿಂಹನ ಮೊದಲನೇ ಸಾಹಸದ ಕಥೆ ನಾನು ಬರೆದ ಅಪಕ್ವ ರೀತಿಯಲ್ಲಿಯೇ ಅಲ್ಲಿ ಜಾಹೀರಾತಾಗಿಬಿಟ್ಟಿತು ಮತ್ತು ಮನೆಯವರೆಲ್ಲರೂ ನನ್ನ ಅಪ್ರಕಟಿತ ಕಾದಂಬರಿಯನ್ನು ಓದಿ ಲೇವಡಿ ಮಾಡಿದ್ದೂ ಮಾಡಿದ್ದೇ. ಯಾರು ನನ್ನ ಹೆಸರು ಹಿಡಿದು ಕೂಗಿದರೂ ಲೇವಡಿ ಮಾಡಲೆಂದೇ ಕರೀತಿದಾರೆ ಅಂತ ಅನಿಸಿಬಿಟ್ಟಿತ್ತು – ಸುಮಾರು ತಿಂಗಳುಗಳು. ಇಷ್ಟೇ ಆಗಿದ್ದರೆ ಸರಿ: ಮನೆಗೆ ಯಾರೇ ಬರಲಿ ಅವರೆದುರು ನನ್ನ ಅಪ್ರಕಟಿತ ಕಾದಂಬರಿಯ ಪಾತ್ರಗಳು ಹೆಚ್ಚಾಗಿ ಕುಣಿಯತೊಡಗಿದವು ಮತ್ತು ಬಚ್ಚಿಟ್ಟಿದ್ದ ಪುಸ್ತಕ ಇಡೀ ಜಗತ್ತಿಗೆ ಜಗಜ್ಜಾಹೀರಾಗಿಹೋಯಿತು. ಯಾರೇ ನನ್ನನ್ನು ನೋಡಿದರೂ ನೋಡೀ ಇವನೇ ಗೋಪಾಲ ಸಿಂಹನ ಮೊದಲನೇ ಸಾಹಸ ಬರೆಯಲು ಹೊರಟವನು ಅಂತ ಪರಿಚಯಿಸುವಷ್ಟು ಖ್ಯಾತನನ್ನಾಗಿ ನಮ್ಮ ಮನೆಯವರು ನನ್ನನ್ನು ಮಾಡಿದ್ದರು-ಅಂದರೆ ನಾನು ತಲೆ ಎತ್ತಿಕೊಂಡು ತಿರುಗದ ಹಾಗೆ ಆಗಿಬಿಟ್ಟಿತ್ತು.

ಇಷ್ಟು ಅವಮಾನ ಸಹಿಸಿದ ನಂತರ ನನ್ನ ಮನೆಯವರು ನನಗೊಂದು ಸಲಹೆ ನೀಡಿದರು-ಅದು ಎಲ್ಲರ ಮನೇಲೂ ನೀಡುತ್ತಾರೆ ಆ ವಯಸ್ಸಿಗೆ ಅಂತ ನನಗೆ ಈಗ ತಿಳೀತಿದೆ. ಸಲಹೆ ಏನು ಗೊತ್ತಾ? ಮೊದಲು ಓದು ಮುಗಿಸು, ಕೆಲಸ ಪಲಸಕ್ಕೆ ಸೇರಿಕೊ ಇನ್ನೂ ಹೆಚ್ಚು ಓದು ಅವಾಗಲೂ ನಿನಗೆ ಬರೀಬೇಕು ಅನಿಸಿದರೆ ಬರಿ, ಆದರೆ ನೀನು ಬರೆದದ್ದನ್ನು ಯಾರಿಗೂ ಓದಲು ಬಲವಂತ ಪಡಿಸಬೇಡ.– ಈ ನೆನಪು ಯಾಕೆ ನುಗ್ಗಿ ಬಂತು ಅಂದರೆ ಒತ್ತಡ ಇಲ್ಲವಾದರೆ ಬರೀಬೇಡಿ ಅಂತ ನನಗೆ ಕಾಲೇಜಿನಲ್ಲಿ ಕನ್ನಡ ಕಲಿಸಿದ ಗುರುಗಳು ಹೇಳಿದ್ದರು. ಕಾಲೇಜಿನಲ್ಲಿ ಮೇಷ್ಟರು ಹೇಳುವುದನ್ನು ನನಗೆ ಆಗಲೇ ನಮ್ಮ ಮನೆಯಲ್ಲಿ ಕಾಲೇಜು ಮೆಟ್ಟಲೇ ಹತ್ತಿಲ್ಲದ ನಮ್ಮ ಮನೆಯವರು ಹೇಳಿದರಲ್ಲಾ ಆ ಮಾತು.

ಇದು ನಡೆದು ಅದೆಷ್ಟೋ ವರ್ಷ ನಾನು ಬರೆಯುವ ಹಂಬಲಕ್ಕೆ ತಡೆ ಹಾಕಿದ್ದೆ. ಒತ್ತಡ ಮೀರಿದಾಗ ಬರೆಯಲು ಆರಂಭಿಸಿದೆ ನೋಡಿ, ಅದು ಹೇಗೆ ನನ್ನ ಲೆಕ್ಕಪಕ್ಕವನ್ನೂ ಮೀರಿ ಒತ್ತಿಕೊಂಡು ಬಂದಿತೋ ನನಗೇ ಅರಿವಾಗಲಿಲ್ಲ. ಆಗಲೂ ಅಚ್ಚತ್ತೆ ನಾನು ಬರೆದ ಪ್ರತಿಯೊಂದು ಲೇಖನವನ್ನೂ ಓದಿ ಎಷ್ಟು ಚೆನ್ನಾಗಿ ಬರೆದಿದೀಯೋ ಅಂತ ಉದ್ಗಾರ ತೆಗೀತಿದ್ದದು ನನಗೆ ಈಗಲೂ ಹಸಿರು ಹಸಿರು. ಇದು ಅಚ್ಚತ್ತೆಯ ಒಂದು ಮುಖ ಮಾತ್ರ. ಇಡೀ ರಸ್ತೆಯ ಮಕ್ಕಳು ಅಮ್ಮನ ತೊಡೆಯ ಮೇಲೆ ಬೆಳೆದಿದ್ದು ಮತ್ತು ಅವುಗಳಿಗೆ ನಾಟಿ ಔಷಧಿಯನ್ನು ಅಮ್ಮ ನೀಡುತ್ತಿದ್ದುದನ್ನು ಮತ್ತೊಮ್ಮೆ ತಮಗೆ ವಿವರಿಸುತ್ತೇನೆ.

ನೀವೇನು, ನಿಮ್ಮ ವಯಸ್ಸೇನು....?

• ವೈ.ಎನ್. ಗುಂಡೂರಾವ್

ಬಿಡಿ, ಹುಟ್ಟಿದ ಮೇಲೆ ಬೆಳೆದು ದೊಡ್ಡವರಾಗ್ತೇವೆ, ಓದು ಬರೆದು ಮಾಡಿ ಕೆಲಸ ಸಂಪಾದಿಸಿಕೊಳ್ಳುತ್ತೇವೆ. ವಯಸ್ಸಾದಂತೆ ಒಂದು ದಿವಸ ರಿಟೈರ್ ಕೂಡಾ ಆಗಿಬಿಡುತ್ತೇವೆ. ಆಗಲೇ ನಮಗೆ ಇಷ್ಟೊಂದು ವಯಸ್ಸಾಗಿಬಿಟ್ಟಿತಾ ಎನಿಸಿಬಿಡುತ್ತದೆ. ಓದುವಾಗ ಒಂದು ರೀತಿ ಸದಾ ಬಿಜಿಯಾಗಿದ್ದರೆ, ಕೆಲಸಕ್ಕೆ ಸೇರಿದ ನಂತರ ಮತ್ತೊಂದು ರೀತಿ ಬಿಜಿಯಾಗಿಬಿಡುತ್ತೇವೆ. ಆಫೀಸು, ಮೀಟಿಂಗು, ಬಜೆಟ್ಟು, ಟಾರ್ಗೆಟ್ಟು ಇವುಗಳ ಮಧ್ಯೆ ಮದುವೆ ಮಕ್ಕಳು, ಸ್ಕೂಲು, ಮುಂಜಿ ಮತ್ತೊಂದು ಎಂದು ಎಲ್ಲಕ್ಕೂ ಟೈಂ ಹೊಂದಿಸುವಲ್ಲಿ ಹೆಣಗಾಟ. ಅಲ್ಪಸ್ವಲ್ಪ ವಿರಾಮ ಸಿಕ್ಕರೆ ನೋಟ, ಪರವೂರಿನತ್ತ ಓಟ. ಹೀಗೆ ಕಾಲ ಓಡೋಡಿ ಬಂದುಬಿಟ್ಟು ಹೊಸ್ತಿಲಲ್ಲಿ ನಿಂತು 'ನಿವೃತ್ತಿಯ ವೇಳೆ ಸಮೀಪಿಸಿತಯ್ಯಾ' ಎಂದಾಗ ಆಶ್ಚರ್ಯಕ್ಕೆ ಬೀಳುತ್ತೇವೆ. ಅರೆ, ನನಗೆ ರಿಟೈರ್‌ಮೆಂಟ್ ವಯಸ್ಸಾಗಿಬಿಟ್ಟಿತಾ ಎಂದು ಯೋಚಿಸಲಾರಂಭಿಸುತ್ತೇವೆ. ಎಷ್ಟೋವೇಳೆ ಕೆಲವರು ನಿವೃತ್ತಿಯ ನಂತರ ಕಾಲ ಕಳೆಯಲು ಯಾವ ಯೋಜನೆಯೂ ಮಾಡಿಕೊಂಡಿರದಿದ್ದರೆ ಒಂದು ರೀತಿಯ ಮಾನಸಿಕ ಒತ್ತಡಕ್ಕೆ ಸಿಕ್ಕಿ ಖಿನ್ನತೆಗೊಳಗಾಗುವುದೂ ಉಂಟು. ಅದಕ್ಕೆ ಹೇಳುವುದು, ಯಾವುದಾದರೊಂದು ಹವ್ಯಾಸವನ್ನು ಬೆಳೆಸಿಕೊಂಡಿದ್ದರೆ ನಿವೃತ್ತಿಯ ನಂತರ ಕಾಲ ಕಳೆಯುವುದು ಅಷ್ಟೇನು ಕಷ್ಟವಾಗುವುದಿಲ್ಲ. ಆದರೆ ಕೆಲವು ಕುಟುಂಬಗಳಲ್ಲಿ ಗಂಡಸು ಹೊರಗಡೆ ದುಡಿಯುತ್ತಿದ್ದಾಗ ಇದ್ದ ಮರ್ಯಾದೆ ನಿವೃತ್ತಿಯ ನಂತರ ಸಿಕ್ಕದೆ ಹೋಗಿ ನಗಣ್ಯರಾಗಿಬಿಡುತ್ತಾರೆ. ಖಿನ್ನತೆಗೆ ಇದೂ ಒಂದು ಕಾರಣವಾಗಬಹುದು.

ನಾನು ರಿಟೈರ್ ಆದದ್ದೇ ತಡ ನಮ್ಮ ಮನೆ ಮಂದಿಯೆಲ್ಲ ಸ್ಪರ್ಧೆಗೆ ಬಿದ್ದವರಂತೆ ಹೇಗಾದರೂ ಮಾಡಿ ನನ್ನನ್ನು ಮೂಲೆಗೆ ಕೂಡಿಸಬೇಕೆಂದು ಹುನ್ನಾರ ನಡೆಸಿದ್ದು ನನಗೇನು ತಿಳಿಯದಿರಲಿಲ್ಲ. ಇದನ್ನು ನಿವಾರಿಸಿಕೊಳ್ಳಲು ನಾನೂ ಪ್ರತಿ ತಂತ್ರ ಮಾಡತೊಡಗಿದೆ.

ಇದಕ್ಕೆ ಸರಿಯಾಗಿ ಒಂದು ದಿನ ಬೆಳಿಗ್ಗೆ ಸ್ನಾನ ಮಾಡಿಕೊಂಟು ಟವೆಲ್ಲಿನಿಂದ ಕಾಲು ಒರೆಸಿಕೊಳ್ಳಲು ಹಂಡೆ ಕಟ್ಟೆ ಮೇಲೆ ಕಾಲಿಟ್ಟಿದ್ದೇ 'ಕಳಕ್' ಎನ್ನಲು ಕಾರಣವಾಗಿತ್ತು. ನೋವು ಪ್ರಾರಂಭವಾದ ಕೂಡಲೇ ಕಾಲನ್ನು ಎತ್ತಿ ಕೆಳಗಿಡೋಣವೆಂದುಕೊಂಡು ಕಾಲೆತ್ತಲು ಹೋದಾಗ ಪ್ರಾಣ ಹೋಗುವಂತಹ ನೋವು ಪ್ರಾರಂಭವಾಗಬೇಕೇ? ಹೇಗೋ ಕೊಂಚ ಸುಧಾರಿಸಿಕೊಂಡು ಕಾಲು ಕೆಳಗಿಟ್ಟು ನೋವಿದ್ದರಿರಲಿ ಎಂದರೆ ಸೊಂಟ ಮುಂದಕ್ಕೆ ಬಗ್ಗಿ ಎಳೆದುಬಿಟ್ಟಂತಾಗಿ, ನೆಟ್ಟಗೆ ನಿಲ್ಲಲಾಗಲೇ ಇಲ್ಲ. ಇದೊಳ್ಳೇ ಗ್ರಹಚಾರಕ್ಕೆ ಬಂತಲ್ಲ ಎಂದು

ಟವೆಲ್ ಸುತ್ತಿಕೊಂಡು ಹಾಗೆ ಬಗ್ಗಿಕೊಂಡು ಬಚ್ಚಲು ಮನೆ ಬಾಗಿಲು ತೆಗೆದು ನನ್ನವಳನ್ನು ಕೂಗಿಕೊಂಡೆ.

ನನಗೇನೋ ಆಗಿಬಿಟ್ಟಿದೆ ಎಂದು ಗಾಬರಿಯಿಂದ, ಅಡಿಗೆ ಮನೆಯಲ್ಲಿದ್ದವಳು ಓಡೋಡಿ ಬಂದಳು.

''ಯಾಕ್ರೀ ಏನಾಯ್ತು?'' ಎಂದಳು.

''ಸೊಂಟ ಹಿಡಿದುಕೊಂಡುಬಿಟ್ಟಿದೆ ಕಣೆ'' ಎಂದೆ. ಅವಳ ಭುಜ ಹಿಡಿದು ಹಾಗೇ ಕಷ್ಟಪಟ್ಟು ಬಟ್ಟೆಯುಟ್ಟು ಮಂಚದ ಮೇಲೆ ಉರುಳಿಕೊಂಡೆ.

''ಕಾವು ಕೊಡ್ಲಾ'' ಎಂದಳು.

ಕಾವು-ಪಾವು, ಇದ್ದಬದ್ದ ಆಯಿಂಟ್‌ಮೆಂಟ್ಸ್, ಓಲಿನಿ ಮಾಲಿನಿ ಜೆಲ್ ಎಲ್ಲಾ ಬಳಿದುಕೊಂಡದ್ದಾಯ್ತು. ಆದರೂ ಹಿಡಿದ ಸೊಂಟ ಬಿಡಲಿಲ್ಲ. ಉಡದ ಹಿಡಿತದ ಹಾಗಿತ್ತು, ಮಕ್ಕಳು ಮನೆಗೆ ಬಂದ ತಕ್ಷಣ ರಿಪೋರ್ಟ್ ಹೋಯಿತು. ಮನೆಯ ಹೊರಗಡೆ ತನಕ ಹೇಗೋ ಸೊಂಟ ಹಿಡಿದುಕೊಂಡು ಹೊರಬಂದಾಗ ಕಾರಿನಲ್ಲಿ ಡಾಕ್ಟರ್ ಶಾಪಿಗೆ ಹೊತ್ತೊಯ್ದರು. ಇಂಜಕ್ಷನ್ ಚುಚ್ಚಿಸಿಕೊಂಡು ಬಂದದ್ದಾಯ್ತು. ಮತ್ತೆ ಮಾತ್ರೆ, ಓಲಿನಿ... ನಾಲ್ಕು ದಿವಸ ಪಟ್ಟಾಗಿ ಮಲಗಿ ಚಾವಣಿ ನೋಡಿದ್ದಾಯ್ತು. ಐದನೆಯ ದಿವಸ ಪರವಾಗಿಲ್ಲ ಎನಿಸಿತು.

ಸರಿಹೋಯ್ತಲ್ಲ ಎಂದುಕೊಂಡು ಸ್ವಲ್ಪ ಓಡಾಡಿದೆ. ನಿವೃತ್ತಿಯ ಹಣವನ್ನು ಲಾಭದಾಯಕವಾಗಿ ಎಲ್ಲಿ ಹೂಡುವುದು, ಎಂಬ ಸಲಹೆಗಾಗಿ ಓಡಾಟ, ಬ್ಯಾಂಕಿನ ಕೆಲಸ ಅದು-ಇದು ಎಂದು ಓಡಾಡಿದ್ದೆ ಮಾರನೆಯ ದಿನ ಬೆಳಗಾಗೆದ್ದರೆ ಏಳಲೇ ಬಿಡದ ಸೊಂಟ ಪುನಃ ತನ್ನ ಹಿಂದಿನ ಕರಾಮತ್ತು ತೋರಿಸಿಬಿಡುವುದೇ!

ಈ ಸಾರೆ ಮೂಳೆ ತಜ್ಞರನ್ನೇ ಕಾಣೋಣವೆಂದು ಹೋದದ್ದಾಯ್ತು. ಎಕ್ಸ್‌ರೇ, ಎಂ.ಆರ್.ಐ. ಅದೂ-ಇದು ಎಂದು ಬೇಕಾದ-ಬೇಡದ ಎಲ್ಲ ರೀತಿಯ ಪರೀಕ್ಷೆಗಳಿಗೂ ಒಳಗಾಗಬೇಕಾಯಿತು.

ರಿಪೋರ್ಟ್ ನೋಡಿದ ಡಾಕ್ಟರು ಬಿಡಿ, ನಿಮ್ಗೇನಾಗಿಲ್ಲ, ಇವೆಲ್ಲ ಕಾಮನ್ನು. ನಿಮ್ಮ ವಯಸ್ಸಿಗೆ ಇದೆಲ್ಲ ಬರುವಂತದ್ದೇ. ಎಂಟು ದಿವಸ ಫಿಸಿಯೋಥೆರಪಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಿ, ನಂತರ ವ್ಯಾಯಾಮ ಹೇಳಿಕೊಡುತ್ತೇವೆ ಸರಿಹೋಗುತ್ತದೆ ಎಂದರು. ಫಿಸಿಯೋಥೆರಪಿಯೂ ಆಯಿತು. ಎಂಟಿಂಚಿನ ಬೆಲ್ಟ್ ಕೊಟ್ಟಿದ್ದರು. ಈ ಒಡ್ಯಾಣವನ್ನು ನಡುವಿಗೆ ಸುತ್ತಿಕೊಳ್ಳುವುದೇ ಒಳ್ಳೆಯದೆಂದು ಸೂಚಿಸಿದರು.

ಹೊರಗಡೆ ಓಡಾಡಬೇಕಾದರೆ ಬೆಲ್ಟ್ ಹಾಕಿಕೊಂಡು ಹೋಗಿ, ಆದರೂ ಇನ್ನುಮುಂದೆ ನೀವು ಹುಷಾರಾಗಿರುವುದು ಒಳ್ಳೆಯದು. ಸ್ವಲ್ಪ ಮುನ್ನೆಚ್ಚರಿಕೆ ವಹಿಸಿ ಎಂದು ಕಿವಿಮಾತು ಹೇಳಿದರು.

''ಹೇಗೆ? ಹುಷಾರಾಗಿರಿ ಅಂದ್ರೆ ಎಂಥ ಮುನ್ನೆಚ್ಚರಿಕೆ ಸರ್?'' ಎಂದೆ.

ದ್ವಿಚಕ್ರವಾಹನ ಸವಾರಿ ಅಷ್ಟೊಂದು ವಿಹಿತವಲ್ಲ, ಅದರಲ್ಲೂ ಬಜಾಜ್ ಗುಂಪಿನ ವಾಹನ, ಸ್ಕೂಟರ್ ಬೇಡವೇ ಬೇಡವೆಂದು ಷರಾ ಬರೆದರು.

ಇದ್ಯೊಳ್ಳೆ ಡಾಕ್ಟರ್ ಸಹವಾಸವಾಯ್ತಲ್ಲ, ಬಹುಶಃ ಇವರು ಬಜಾಜ್ ಗುಂಪಿನ ವಾಹನಗಳ ದ್ವೇಷಿಯಿರಬಹುದು ಎನ್ನಿಸಿತು. ಆದರೆ ಹಾಗೆ ಬಾಯಿಬಿಟ್ಟು ಹೇಳಲಾರದೆ ಅವರ ಮುಖ ನೋಡಿದೆ. ಬಹುಶಃ ನನ್ನ ಅನುಮಾನ ಅವರಿಗೆ ಅರ್ಥವಾದಂತೆ ಕಂಡಿರಬೇಕು.

ನೋಡಿ ಇವ್ರೆ, ಯಾಕೆ ಬೇಡಾಂದೆ ಅಂದ್ರೆ, ಸ್ಕೂಟರನ್ನು ನಿಲ್ಲಿಸುವಾಗ ಹಿಂದಕ್ಕೆ ಎಳೆದು ಸ್ಟ್ಯಾಂಡ್ ಹಾಕಬೇಕು, ತೆಗೆಯುವಾಗ ಬಲ ಉಪಯೋಗಿಸಿ ಮುಂದಕ್ಕೆ ತಳ್ಳಬೇಕು. ಇದರಿಂದ ಬೆನ್ನು ಹುರಿಯ ಮೇಲೆ ಮತ್ತು ಅದರ ಬುಡದ ಮೇಲೆ ಒತ್ತಡ ಬಿದ್ದು ಮೊದಲಿನಂತೆ ಕ್ರ್ಯಾಂಪ್ ಆಗಬಹುದು. ಬಲು ಎಚ್ಚರಿಕೆಯಿಂದ ಇರಬೇಕು. ಎಂದರು. ಸರಿ ಎಂದು ತಲೆಯಾಡಿಸಿ,

''ಮತ್ತಿನ್ನೇನು ಎಚ್ಚರಿಕೆ ತೆಗೆದುಕೊಳ್ಳಬೇಕು ಸರ್?'' ಎಂದೆ.

ಮತ್ತೆ ಮೆಟ್ಟಿಲು ಹತ್ತಬಾರದು, ಏಣಿ ಹತ್ತಬಾರದು, ಮರ ಹತ್ತಬಾರದು, ಬಸ್ಸಿನಲ್ಲಿ ನಿಂತು ಪ್ರಯಾಣಿಸಬಾರದು, ಆದರೂ ಸಿಟಿಯೊಳಗೆ ಪರವಾಗಿಲ್ಲ, ದೂರದ ಪ್ರದೇಶದ ಬಸ್ಸಿನಲ್ಲಿ ಪ್ರಯಾಣ ಸದ್ಯಕ್ಕೆ ಸುತರಾಂ ಬೇಡವೇ ಬೇಡವೆಂದುಬಿಟ್ಟರು.

ಈ ಸಲಹೆ ಕೇಳಿ ಎದೆ ಧಸಕ್ಕೆಂದಿತು. ರಿಟೈರ್ ಆದಮೇಲಾದರೂ ಕೆಲವು ಸ್ಥಳಗಳನ್ನು ನೋಡಲೇಬೇಕೆಂದು ಆಸೆ ಪಟ್ಟಿದ್ದೆ. ರಜ ತೆಗೆದುಕೊಂಡರೆ ನಗದಾಗಿಸಲಾಗದೆ ರಿಟೈರ್ ಆದಾಗ ದುಡ್ಡು ಬರುವುದು ಕಡಿಮೆಯಾಗುತ್ತದೆಂದು, ಹಣ ಉಳಿಸುವುದಕ್ಕಿಂತಲೂ ಹೆಚ್ಚಾಗಿ ರಜಾ ಉಳಿಸಿ, ಹಣಕ್ಕೆ ಪರಿವರ್ತಿಸುವ ಯೋಜನೆ ಹಾಕಿದ್ದೆ. ಹೀಗೆ ಉಳಿಸಿದ ರಜಾದಿಂದ ಬಂದ ಹಣದಲ್ಲಿ ಶಿವಗಂಗೆ ಬೆಟ್ಟ ಹತ್ತುವ, ಶಬರಿಮಲೆ ಗಿರಿ ಏರುವ, ಮಲೆಮಹಾದೇಶ್ವರನನ್ನು ನೋಡುವ ಅಷ್ಟೇಕೆ ರಾಮನಗರದ ಹೆಬ್ಬಂಡೆ..... ಸಾವನದುರ್ಗದ ಮಹಾ ಬಂಡೆಗಳನ್ನೇರುವ ಬಯಕೆ ಈ ಜನ್ಮದಲ್ಲೇ ಸಾಧ್ಯವಿಲ್ಲವೆನಿಸಿದಾಗ ಮನಸ್ಸಿಗಾದ ಆಘಾತವೆಂತಹುದು ಎಂಬುದನ್ನು ನಾನು ವರ್ಣಿಸಿ ನಿಮ್ಮನ್ನು ದುಃಖಿಗಳನ್ನಾಗಿ ಮಾಡಲಾರೆ. ಆ ದುಃಖ ನನಗೇ ಇರಲಿ. ಮಹಡಿಯ ಮೆಟ್ಟಿಲುಗಳನ್ನೇ ಹತ್ತಬಾರದೆಂದಾಗ ಬೆಟ್ಟ ಗುಡ್ಡಗಳನ್ನೇರುವುದು ಬರೇ ಕನಸಿನ ಮಾತೇ! ನನ್ನ ಅಂತಃಪುರವಿರುವುದೇ ಮೊದಲ ಮಹಡಿಯಲ್ಲಿ ಅಲ್ಲಿ ನಿರಾಳವಾಗಿ ಕಾಲು ಚಾಚಿ ಕುಳಿತು ರಚಿಸಬೇಕೆಂದಿರುವ ರಮ್ಯ ಕಥೆಗಳು, ಬಾಲ್ಯದ ಬದುಕಿನ ಪ್ರಬಂಧಗಳು, ನಿರುಮ್ಮಳವಾಗಿ ಮಂಚದ ಮೇಲೆ ಮಲಗಿ, ಓದಿ ಸುಖಿಸಬೇಕೆಂದುಕೊಂಡಿಟ್ಟಿರುವ ಹಲವಾರು ಪುಸ್ತಕಗಳು, ಹೀಗೆ ಸಾಹಿತ್ಯದ ಗೀಳು ಹಂಚಿಕೊಂಡ ನಾನು ಇವೆಲ್ಲಕ್ಕೂ ಮಂಗಳ ಹಾಡಲೇ?

''ಏಣಿ ಹತ್ತಬಾರದು...!''

ಎಲ್ಲ ಸಾಹಿತ್ಯದ ಪುಸ್ತಕಗಳನ್ನು ಕೈಗೆಟುಕುವಂತೆ ಇಟ್ಟುಕೊಳ್ಳಲಾಗದೆ ತುಂಬಿಟ್ಟ ಬೀರುವಿನಿಂದ ಏಣಿ ಹತ್ತಿದರೇ ನನ್ನ ಸಂಗ್ರಹದಲ್ಲಿರುವ ಕೆಲವು ಪುಸ್ತಕಗಳನ್ನು ಕೆಳಗಿಳಿಸಲಿಕ್ಕಾಗುವುದು! ಈ ನನ್ನ ಸಂಕಟ ಡಾಕ್ಟರಿಗೆ ಅರ್ಥವಾಗುವುದಾದರೂ ಹೇಗೆ?

ಏಣಿ ಹತ್ತದೆ ಮಹಡಿಯ ಮೇಲಿರುದ ನೀರಿನ ರೊಟ್ಟಿಯನ್ನು ತೊಳೆಯುವುದಾದರೂ

ಹೇಗೆ? ಶುಚಿತ್ವದ ಬಗ್ಗೆ ಪುಟಗಟ್ಟಳೆ ಪಾಠ ಹೇಳುವ ಈ ಡಾಕ್ಟರಿಗೆ ಇವೆಲ್ಲ ಅರ್ಥವಾಗುವುದಿಲ್ಲವೇ?

ನಾವಿರುವುದು ಹೊಸ ಬಡಾವಣೆ, ಕೆಲಸಗಾರರು ಸಿಕ್ಕುವುದು ದುರ್ಲಭ. ಕೆಲವು ಸಾರಿ ಕಟ್ಟಡ ಕಟ್ಟುವ ಕೆಲಸಗಾರರ ಚಿಕ್ಕ ಹುಡುಗರು 'ಏನಾದ್ರೂ ಕೆಲಸ ಇದ್ರೆ ಹೇಳಿ ಸಾರ್' ಎಂದು ಬಂದಾಗ, ಅವರನ್ನು ಮಹಡಿಯ ಮೇಲಿದ್ದ ನೀರಿನ ತೊಟ್ಟಿಗೆ ಇಳಿಸಿ ಶುಚಿಗೊಳಿಸುವುದು ವಾಡಿಕೆ. ಅಂದು ಒಂದು ದಿನ ಒಬ್ಬ ಹುಡುಗ ಬಂದ, ಸರಿ ಮಹಡಿಯ ಮೇಲೆ ಕರೆದೊಯ್ದು ಅವನನ್ನು ಏಣಿ ಹತ್ತಿಸಿ, ನಾನೂ ಹತ್ತತೊಡಗಿದೆ. ಅದೆಲ್ಲಿದ್ದಳೋ ನನ್ನ ಶ್ರೀಮತಿ, ಅವಳು ಅಡಿಗೆಮನೆಯಲ್ಲಿದ್ದರೂ ಕೆಲವು ಸಾರೆ ಅವಳ ಆರನೆಯ ಇಂದ್ರಿಯ ಬಹಳ ಚುರುಕಾಗಿರುತ್ತೆ. ಇಲ್ಲವೇ ಟೆಲಿಪತಿಯ ಮೂಲಕ ಕಂಡುಕೊಳ್ಳುತ್ತಾಳೆ. ಅಂದು ಆದದ್ದೂ ಹಾಗೇ ಮಹಡಿಯ ಮೇಲೆ ಬಂದವಳು 'ಅಯ್ಯೋ, ಅಯ್ಯೋ, ಬೀಳ್ತೀರಿ ಇಳೀರಿ, ಸೊಂಟ ಹಿಡ್ಕೊಳ್ಳುತ್ತೆ' ಎಂದು ಒಂದೇ ಸಮನೆ ಕೂಗಿಕೊಂಡಾಗ ಕೆಳಮನೆಯಿಂದ ನಮ್ಮ ಹುಡುಗರು ಬರುವುದು ಹಾಗಿರಲಿ, ಅಕ್ಕಪಕ್ಕದ ಮನೆಯವರೂ ಕೂಡಾ ರಾವ್‌ಗೆ ಏನೋ ಆಗಿಬಿಟ್ಟಿದೆ ಎಂದು ಅವರವರ ಮಹಡಿಯ ಮೇಲಕ್ಕೆ ದೌಡಾಯಿಸಿ ಬಂದು ನೋಡತೊಡಗಿದರು. ಮಕ್ಕಳಿಬ್ಬರು ಮೇಲೆ ಬಂದವರು 'ನೋಡಿ ನಿಮ್ಗೆ ವಯಸ್ಸಾಗಿದೆ, ಇಂಥ ಕೆಲ್ಸ ಎಲ್ಲ ಮಾಡ್ಬೇಡಿ ಎಂದು ಡಾಕ್ಟರು ಹೇಳಿಲ್ವಾ' ಎಂದು ನನ್ನನ್ನು ಏಣಿಯಿಂದ ಕೆಳಕ್ಕೆ ಇಳಿಸೇಬಿಟ್ಟರು.

''ಅಲ್ಲಯ್ಯಾ, ನಂಗೆ ಇಂಥ ಕೆಲ್ಸಗಳೇನು ಹೊಸದಾ? ಇಷ್ಟು ದಿವಸ ನೀವೇನಾದ್ರೂ ಮಾಡಿದ್ರಾ? ಮನೆಯಲ್ಲಿ ಟ್ಯಾಂಕ್ ಕ್ಲೀನಿಂಗು, ರೂಫ್ ಕ್ಲೀನಿಂಗು ಎಲ್ಲಾ ಮಾಡ್ತಾ ಇದ್ದವನು ನಾನೇ ಅಲ್ವಾ?''

''ನೋಡಿ ನೀವು ಮಾಡುತ್ತಿದ್ದ ಕಾಲ ಆಗೋಯ್ತು, ವಯಸ್ಸಿದ್ದಾಗ ಮಾಡಿದ್ರಿ, ವಯಸ್ಸು ಅನ್ನೋದು ಹಾಗೇ ಕೂತಿರುತ್ತಾ, ಅವೆಲ್ಲ ಒಂದು ವಯಸ್ಸಿನ ವರ್ಗೆ ಸರಿ, ನೀವೇನು ನಿಮ್ಮ ವಯಸ್ಸೇನು? ನಿಮ್ಗೇನು ಕಡಿಮೆ ವಯಸ್ಸಾಗಿದೆ ಅಂತ ತಿಳ್ಕೊಂಡಿದ್ದೀರಾ? ಇಂಥದ್ದೆಲ್ಲ ಮಾಡೋಕೆ ಹೋಗ್ಬೇಡಿ'' ಎಂದಳು ನನ್ನ ಹೆಂಡತಿ.

ಹುಡುಗನ ಕೈಲಿ ಟ್ಯಾಂಕ್ ತೊಳೆಸಿ ಕೆಲಸ ಪೂರ್ತಿ ಮಾಡಿದ್ದಾಯಿತು.

''ಮರ ಹತ್ತಬಾರದು....!''

ಹೋಗಲಿ ಬಿಡಿ, ಇದು ಮರ ಹತ್ತುವ ವಯಸ್ಸಲ್ಲ, ಒಪ್ಪಿಕೊಳ್ಳುತ್ತೇನೆ. ಇಡೀ ಜೀವನಕ್ಕಾಗುವಷ್ಟು ಮರಹತ್ತಿ ಮರಕೋತಿ ಆಟ ಆಡಿದ್ದಾಗಿದೆ, ಇದೊಂದೇ ನನ್ನ ಬದುಕಿನಲ್ಲಿ ಸಂಪೂರ್ಣ ಅನುಭವಿಸಿದ ಸುಖ ಅನ್ನಬಹುದು.

ಹಳ್ಳಿಯಿಂದ ಮೂರು ಮೈಲಿ ದೂರದ ಯಳಂದೂರಿನ ಮುನಿಸಿಪಲ್ ಹೈಸ್ಕೂಲಿಗೆ ನಡೆದುಕೊಂಡು ಹೋಗಿ ಹಿಂದಿರುಗುವಾಗ ಕೃಷ್ಣಾಪುರದ ಬಳಿಯ ರಸ್ತೆ ಬದಿಯ ರಂಗಣ್ಣನ ತೋಪಿನಲ್ಲಿ ತೋತಾಪುರಿ ಮಾವಿನ ಕಾಯಿ ಮರದ ಮೇಲೆ ಕೋತಿ ಆಟ ಆಡದೆ ಬಂದ ದಿನವೇ ಇಲ್ಲವೆನ್ನಬಹುದು. ರಂಗಣ್ಣ ಒಬ್ಬ ಅತಿ ಬುದ್ಧಿಯುಳ್ಳವನನ್ನು ಮರ ಕಾಯುವ ಕೆಲಸಕ್ಕೆ ಹಚ್ಚಿದ್ದ, ಅವನಿಗೆ ಆಟವಾಡಿಸಿ ಮರಕೋತಿ ಆಟ ಆಡಿದಾಗಲೇ ನಮಗೆ ತೃಪ್ತಿ.

ಮರಹತ್ತುವುದು, ಆಡುವುದು ಇದೊಂದು ವಂಶಪಾರಂಪರ್ಯವಾಗಿ ಮಾನವನಿಗೆ ಬಂದ

ಕ್ರಿಯೆಯಲ್ಲವೇ ನಮ್ಮ ಪೂರ್ವಜರೆಲ್ಲ ಮರದಲ್ಲೇ ಹುಟ್ಟಿ ಬೆಳೆದು ಮರವನ್ನಾಶ್ರಯಿಸಿದವರೇ. ಹೀಗೆ ಬದುಕು ಕೊಟ್ಟಿದ್ದೇ ಮರಲ್ಲವೇ, ಹೀಗಿರುವಾಗ ಮರವನ್ನೇ ಹತ್ತಬೇಡವೆಂದರೆ? ಬಹುಶಃ ಡಾಕ್ಟರು ಈ ಸತ್ಯ ಸಂಗತಿಯನ್ನು ಮರೆತುಬಿಟ್ಟಿದ್ದಾರೆ ಎನಿಸುತ್ತದೆ. ಇಂದಿನ ಪೀಳಿಗೆ ಸುಧಾರಿಸಿರಬಹುದು. ಹಾಗೆಂದು ಹಿಂದಿನ ಸತ್ಯವನ್ನೆಲ್ಲ ಮರೆಮಾಚಿ ಸೋಗು ಹಾಕಲಾದೀತೇ? ಹಿಂದಿನದನ್ನು ನೆನಪಿಸಿಕೊಳ್ಳುವ ಕನಿಷ್ಟ ಸೌಜನ್ಯವನ್ನಾದರೂ ಡಾಕ್ಟರು ರೂಢಿಸಿಕೊಳ್ಳುವುದು ಬೇಡವೇ?

''ಇನ್ನು ಸ್ಕೂಟರ್ ಓಡಿಸಬೇಡಿ ಎಂದರೆ...!''

ಸ್ಕೂಟರಿನ ಮೇಲೆ ಕುಳಿತು ಓಡಿಸಿದರೆ ಸೊಂಟ ಹಿಡಿದುಕೊಳ್ಳುತ್ತೆ, ಇರಬಹುದು. ಮನುಷ್ಯ ತನಗೆ ದೊರೆತ ಎಲ್ಲ ಅವಕಾಶಗಳನ್ನುಪಯೋಗಿಸಿಕೊಂಡು ಬದುಕನ್ನು ಅನುಭವಿಸುವುದು ಬೆಡವೇ? ಸೊಂಟ ಅಪ್ಪಿ ಕುಳಿತ ಹುಡುಗಿಯರನ್ನು ನೋಡುವುದೇ ಒಂದು ಚೆಂದ.

ಬಹುಶಃ ಈ ಡಾಕ್ಟರು ವಿಘ್ನ ಸಂತೋಷಿಯಿರಬೇಕು, ಇಲ್ಲ ಇವರ ಯೌವನದಲ್ಲಿ ಇಂತಹ ಅವಕಾಶಗಳು ದೊರೆಯಲಿಲ್ಲವೆ. ಅದು ತನಗೆ ದೊರೆಯದ್ದು ಯಾರಿಗೂ ದೊರೆಯಬಾರದೆಂಬ ಕಠೋರ ಮನಸ್ಸಿನವರಿರಬೇಕು.

ಹೋಗಲಿ ಬಿಡಿ ಈ ವಯಸ್ಸಿನಲ್ಲಿ ನನ್ನ ಸೊಂಟ ಹಿಡಿದು ಕೂರದಿದ್ದರೆ ಬೇಡ, ಅದೇ ಹಿಡಿದುಕೊಳ್ಳದಿದ್ದರೆ ಸಾಕಾಗಿದೆ.

ಇತ್ತೀಚಿನ ಈ ಸೊಂಟಕ್ಕಂಟಿದ ತೊಂದರೆಯಿಂದ ಸಾಹಿತ್ಯದ ಕಾರ್ಯಕ್ರಮಗಳಿಗೆ ಹೋಗದೆ ಮನೆಯಲ್ಲಿಯೇ ಕುಳಿತು ಬೇಸರ ತರಿಸಿತ್ತು. ಅಂದು ಬೆಳಿಗ್ಗೆ ಯಾವುದೋ ಪುಸ್ತಕ ಬಿಡುಗಡೆ ಕಾರ್ಯಕ್ರಮ ಇದ್ದುದರಿಂದ ಸಿದ್ಧನಾಗತೊಡಗಿದೆ.

'ಹೇಗ್ಹೋಗ್ತೀರಾ?'' ಎಂದಳು.

ಇನ್ನು ಹೆಂಗೆ ಹೊಗೋದು? ಸ್ಕೂಟರ್ ಓಡಿಸಬೇಡಿ ಅಂತಾ ಹೇಳಿಬಿಟ್ಟಿದ್ದಾರಲ್ಲ! ಇನ್ನು ಬಸ್ಸೇ ಗತಿ. ಸಮಾರಂಭವಿರುವ ಸ್ಥಳ, ಬಸ್ಟಾಪಿನಿಂದ ಐದು ನಿಮಿಷಗಳ ನಡಿಗೆ ಅಷ್ಟೆ ಎಂದು ಸಮಜಾಯಿಷಿ ನೀಡಿದೆ.

''ನೋಡಿ ಬಸ್ಸಿನಲ್ಲಿ ಬಹಳ ಗದ್ದಲವಿರುತ್ತೆ – ನೀವು ನೇತಾಡಿಕೊಂಡು ಹೋಗೋದು, ಹಂಪ್‌ನಲ್ಲಿ ಎತ್ತಿ ಹಾಕಿದರೆ ನಡು ಮೂಳೆಗೆ ಏಟು ಬೀಳೋದು, ಆಸ್ಪತ್ರೆಗೆ ಓಡಾಡೋದು ಇವೆಲ್ಲ ಯಾಕಪ್ಪ, ಇವೆಲ್ಲ ಈ ವಯಸ್ಸಿನಲ್ಲಿ ಬೇಕಾ?'' ಎಂದರು ಮಕ್ಕಳಿಬ್ಬರು.

''ನೋಡಿ ನಿಮ್ಮ ಒಳ್ಳೆಯದಕ್ಕೆ ಹುಡುಗರು ಹೇಳ್ತಾಯಿರೋದು. ಅಲ್ಲ, ನಿಮ್ಗೆ ವಯಸ್ಸೇನು ಕಮ್ಮಿ ಅಂತಾ ತಿಳ್ಕೊಂಡಿದ್ದೀರಾ'' ಎಂದು ಒಗ್ಗರಣೆ ಹಾಕಿದಳು ನನ್ನವಳು.

''ಈ ವಯಸ್ಸಿನಲ್ಲಿ ರಾಮಾಕೃಷ್ಣಾಂತ ಮನೇಲಿ ಆರಾಮವಾಗಿರುವುದು ಬಿಟ್ಟು ಯಾಕಪ್ಪ ಸುಮ್ನೆ ಶ್ರಮ'' ಎಂದು ತಬಲ ಬಾರಿಸಿದರು ಮಕ್ಕಳು.

''ಅಲ್ಲ ಏನ್ ವಯಸ್ಸಾಗಿದೆ ಅಂತ ಹೀಗೆ ಹೆದರಿಸ್ತಾಯಿದ್ದೀರಾ, ಸಿಟಿ ಬಸ್‌ನಲ್ಲಿ ನಾನೇನು

ಓಡಾಡೆ ಇಲ್ವಾ, ಬಸ್ಸು ಬಂದ ತಕ್ಷಣ ಅದ್ಯಾವ ಪಡ್ಡೆ ಹುಡುಗರಿಗೂ ಮುಂದೆ ಹೋಗಲು ಬಿಡದೆ ಎಲ್ಲರನ್ನೂ ನೂಕಿಕೊಂಡು ಹೋಗಿ ಮನೆಮಂದಿಗೆಲ್ಲಾ ಸೀಟು ಹಿಡಿದು ಕೊಡ್ತಾ ಇರಲಿಲ್ಲವಾ?'' ಎಂದು ದಬಾಯಿಸಿದೆ.

''ನೋಡಿಪ್ಪ, ಡಾಕ್ಟರು ಹೇಳಿದ ಹಾಗೆ ಕೇಳೋದೇ ಒಳ್ಳೆಯದು, ಅದರಿಂದ ನಿಮ್ಗೂ ಒಳ್ಳೆಯದು, ನಮ್ಗೂ ಒಳ್ಳೆಯದು'' ಎಂದ ವೆಂಕಟೇಶ.

ಇವರ ಹಿತವಚನದ ಹಿಂದಿನ ಮರ್ಮ ನನಗೆ ಅರ್ಥವಾಗದಿದ್ದೀತೆ? ಎದ್ದು ಬಿದ್ದು ಸೊಂಟಕ್ಕೆ ಪೆಟ್ಟು ಮಾಡ್ಕೊಂಡ್ರೆ ಆಸ್ಪತ್ರೆಗೆ ಓಡಾಡಲು ರಜಾ ಹಾಕಬೇಕಾದೀತೆಂಬುದೇ ಈ ಹುಡುಗರ ಯೋಚನೆ.

ಸರಿಹೋಯ್ತು, ದಾರಿಯಲ್ಲಿ ಎಡವಿ ಬೀಳುತ್ತೇವೆಂದು ನಡೆಯದೆ ಒಂದೆಡೆ ಕುಳಿತಿರುವುದಕ್ಕಾಗುತ್ತದೆಯೇ, ವಾಹನ ಓಡಿಸಿದರೆ ಅಪಘಾತವಾಗಿಬಿಡುತ್ತದೆಂದು ವಾಹನ ಓಡಿಸುವುದನ್ನೇ ಬಿಟ್ಟು ಬಿಡುವುದಕ್ಕಾಗುತ್ತದೆಯೇ? ಹೀಗೆ ಕುಳಿತಿದ್ದರೆ ಹೊತ್ತು ಕಳೆಯುವುದಾದರೂ ಹೇಗೆ? ಇಷ್ಟಕ್ಕೂ ಹಣೆ ಬರಹವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ, ಆಗುವುದು ಆಗೇ ತೀರುತ್ತದೆ ಎಂದು ಅವರ ವಾದಕ್ಕೆ ಮಂಗಳ ಹಾಡಿದೆ.

ಅಂದು ರಾತ್ರಿ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ 'ದೃಢ ಮನಸ್ಸು - ದೃಢದೇಹ' ಕಾರ್ಯಕ್ರಮವನ್ನು ಎಲ್ಲರೂ ವೀಕ್ಷಿಸುತ್ತಾ ಕುಳಿತಿದ್ದೆವು. ಇತ್ತೀಚೆಗೆ ಮನೆಯ ಎಲ್ಲರೂ ಈ ಕಾರ್ಯಕ್ರಮವನ್ನು ನೋಡುವುದನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಅಂದು ಪ್ರಸಾರವಾದುದರಲ್ಲಿ 'ಬೆಂಗಳೂರಿನಲ್ಲಿ ಕಾರಕೂನನಾಗಿದ್ದು, ನಿವೃತ್ತಿಯ ನಂತರ ಹಳ್ಳಿಯಲ್ಲಿ ಜಮೀನು ಕೊಂಡು, ಕಬ್ಬು ಬೆಳೆದ, ಗಾಣ ಹಾಕಿದ, ಆಲೆಮನೆಯಲ್ಲಿ ಬೆಲ್ಲ ತಯಾರಿಸಿದ, ಹೂ ಬೆಳೆದ, ತರಕಾರಿ ಬೆಳೆದ, ಇಷ್ಟೆಲ್ಲಾ ಮಾಡಿರುವ ಇವರ ವಯಸ್ಸನ್ನು ನೀವು ಊಹಿಸಬಲ್ಲಿರಾ ವೀಕ್ಷಕರೇ' ಎಂದ ಸಂದರ್ಶಕ.

ನಮ್ಮ ಹುಡುಗರು ಅರವತ್ತು, ಎಪ್ಪತ್ತು ಎಂದು ತೋಚಿದ್ದು ಹೇಳಿದರು.

ಆದರೆ ಸಂದರ್ಶಕ ಹೇಳಿದ್ದು ಕೇಳಿ ಎಲ್ಲರೂ ದಂಗಾದರು. ''ವಯಸ್ಸು ಎಂಬತ್ತು....!'' ಎಂದು ಹೇಳಿ ಹೂ ಗುಚ್ಛ ನೀಡಿದ ಸಂದರ್ಶಕ, ಎಲ್ಲರಿಗೂ ಆಶ್ಚರ್ಯವಾಗಿತ್ತು.

ಹೆಂಡತಿ ಮಕ್ಕಳ ಮುಖ ನೋಡಿದೆ.

''ಮಾತು ಮಾತಿಗೂ ನೀವೇನು ನಿಮ್ಮ ವಯಸ್ಸೇನು.... ನಿಮ್ಗೆ ಕಡಿಮೆ ವಯಸ್ಸಾ....?'' ಎಂದು ಹೀಯಾಳಿಸುತ್ತಿದ್ದ ಬಾಯಿಗಳು ಬಂದಾಗಿದ್ದುವು.

ಮಾರನೆಯ ದಿನ ಎದ್ದಿದ್ದೇ ತಡ, ನಡುವಿಗೆ ಸುತ್ತಿದ್ದ ಒಡ್ಯಾಣವನ್ನು ಕಿತ್ತೊಗೆದು, ರಿಬಾಕ್ ಶೂ ಧರಿಸಿ ರಸ್ತೆಗಿಳಿದೆ.

ಹೆಂಡತಿ ಮಕ್ಕಳು ಮುಖ ಮುಖ ನೋಡತೊಡಗಿದರು.

ಮಗನೇ, ಏನಾಗಬಯಸುವೆ?

• ಸೂರಿ ಹಾರ್ದಳ್ಳಿ

ನಾನೊಂದು ಹೊಸ ಕವನ ಬರೆದಿದ್ದೆ. ಅದು ಕಲಿಯುಗದಲಿ ಹರಿನಾಮವ ನೆನೆದರೆ... ಎಂಬ ಹಾಡಿನ ದಾಟಿಯಲ್ಲಿದೆ. ಬರಿಯುದರದಿ ಕರಿ ಕಾಫಿಯ ಕುಡಿದರೆ ಉರಿಯುರಿಗಳು ಏಳುವವ್ರೋ ರಂಗ. ಉರಿತಣಿಸುವ ಪರಿ, ಸುಲಭವೆಂದೆಣಿಸುವೆ ಜಲಪಾನದ ಪರಿ ತಿಳಿ ಮನುಜಾ... ಎಂಬುದಾಗಿತ್ತು. ನನ್ನ ಹೆಂಡತಿಗೆ ಕವನ ಎಂದರೆ ಮೈ ತುರಿಕೆಯಾಗುತ್ತದೆ. ಅದು ನನಗೆ ಗೊತ್ತು. ನನ್ನನ್ನು ನನ್ನ ಭಾವೀ ಮಾವನಿಗೆ ಪರಿಚಯಿಸುವಾಗ ನನ್ನ ಗೆಳೆಯನೊಬ್ಬ ಹೇಳಿದ್ದ, ಒಳ್ಳೆ ಹುಡುಗ. ಕುಡಿಯೋಲ್ಲ, ರೇಸಿಲ್ಲ, ಹೆಣ್ಣುಗಳ ಸಹವಾಸ ಇಲ್ಲ, ಸಿಗರೇಟು, ಬೀಡಿ... ಉಹೂಂ.. ಮೈಲಿ ದೂರ. ಆಗಾಗ ಕವನ ಬರೀತಾನೆ ಅಷ್ಟೇ, ಎಂದು.

ನನ್ನ ಭಾವೀ ಪತ್ನಿ ಏನಾದರೂ ಹಾಳು-ಮೂಳು ಬರ್ಕೊಂಡು ಹೋಗಿ, ನನಗೇನೂ ಪರವಾಗಿಲ್ಲ. ಆದರೆ ಅದನ್ನು ನನ್ನ ಎದುರು ಕೊರೆಯಬೇಡಿ, ಎಂದು ಹೇಳಿದ್ದಳು.

ಹಾಗಾಗಿ ಬರೆದುದೆಲ್ಲವನ್ನೂ ಕಾಶೀಪತಿಯ ಎದುರು ಕಕ್ಕುವುದು ನನ್ನ ಕ್ರಮವಾಗಿತ್ತು.

ಅನಪೇಕ್ಷಿತ ಅತಿಥಿಗಳು ಬಂದು ಹೋಗುವ ಸೂಚನೆ ನೀಡಿದಾಗ ನಾನು ಅನುಸರಿಸುವ ಕ್ರಮವನ್ನು ನಿಮಗೆ ತಿಳಿಹೇಳುವೆ. ಅವರೆದುರು ನನ್ನ ಕುರ್ಚಿಯನ್ನು ಎಳೆದುಕೊಂಡು, ದಪ್ಪದ ಪುಸ್ತಕವನ್ನು ತೆಗೆದುಕೊಂಡು, ಕೇಳಿ, ಹೊಸ ಕವನ ಓದ್ತೀನಿ, ಮೊನ್ನೆ ಮೊನ್ನೆ ಬರೆದುದು... ಎಂದು ಆರಂಭಿಸುತ್ತೇನೆ. ಕುಳಿತಿರುವ ಪರಿ ಹೇಗಿರುತ್ತದೆಯೆಂದರೆ ನಾನು ನೂರೋ ಸಾವಿರವ್ರೋ ಕವನಗಳನ್ನು ಈಗಲೇ ಕಕ್ಕುವಂತಿರುತ್ತದೆ.

ಮರುಕ್ಷಣವೇ ಅವರು ಮನೆಯಿಂದ ಹೊರಡುವ ಸೂಚನೆ ಕೊಡುತ್ತಾರೆ. ಇದು ಸ್ವಂತ ಅನುಭವ. ಕಾಪಿ ರೈಟ್ ಇಲ್ಲದ್ದರಿಂದ ನೀವೂ ಈ ಟ್ರಿಕ್ ಅನ್ನು ಬಳಸಬಹುದು.

ಬೇಡದ ಅತಿಥಿಗಳನ್ನು ದೂರಮಾಡಲು ಇದು ಒಳ್ಳೆಯ ಉಪಾಯ. ಅಂತೆಯೇ ಮನೆಗೆ ಬರುವವರ ಸಂಖ್ಯೆಯೂ ತುಂಬಾ ತುಂಬಾ ಕಡಿಮೆಯಾಗಿದೆ. ಹಾಗಂತ ನನಗೆ ಅತಿಥಿಗಳೆಂದರೆ ಗೌರವವಿಲ್ಲ ಎಂದು ಭಾವಿಸಬೇಡಿ. ಬೇಕಿದ್ದರೆ ನಮ್ಮ ಮನೆಗೆ ಬಂದು ನೋಡಿ, ಮನೆಯ ತುಂಬಾ ನಾನು ಬೋರ್ಡ್ ಹಾಕಿದ್ದೇನೆ, ಅತಿಥಿ ದೇವ್ರೋಭವ ಎಂದು.

ಕಾಶಿಯ ಮನೆಯಿಂದ ಸುಮಾರು ನೂರು ಮೀಟರ್ ದೂರದಲ್ಲಿ ಇರುವಾಗಲೇ ರಾಜುವಿನ ಅಳು ಕೇಳಿಸುತ್ತಿತ್ತು. ರಾಜು ಏನೋ ತಪ್ಪು ಮಾಡಿರಬೇಕು. ಮಕ್ಕಳೇ ಹಾಗೆ,

ಹೇಳಿದ್ದನ್ನು ಕೇಳುವುದಿಲ್ಲ. ಅವರಲ್ಲಿಯೂ ಹೆತ್ತವರ ಓದಿಯ ಮಕ್ಕಳಂತೂ ಮತ್ತೂ ದರಿದ್ರ. ಹಾಗಾಗಿ ಮಕ್ಕಳಿರದ ತಂದೆ-ತಾಯಿಯರೇ ಅದೃಷ್ಟವಂತರು, ಹೆತ್ತರೂ ಓದಿಯ ಮಕ್ಕಳನ್ನು ಹೆರಬಾರದು ಎಂಬುದು ನನ್ನ ಅಭಿಪ್ರಾಯ.

ಬಾಗಿಲಿನ ಹೊರಗೇ ನಿಂತು ಕೇಳಿಸಿಕೊಂಡೆ: ಕಾಶಿ ಒದರುತ್ತಿದ್ದ. ಶಾಲೆಗೆ ಹೋಗ್ತಾನಂತೆ, ಶಾಲೆಗೆ. ಓದಿ ಓದಿ ದೊಡ್ಡ ಪ್ರೊಫೆಸರ್ ಆಗುತ್ತಾನಂತೆ. ನಮಗೆ ನೀನು ಯಾವ ಜನ್ಮದ ಶತ್ರುವೋ... ನಿನಗೆ ಬುದ್ಧಿ ಬರೋಲ್ಲ. ಹಾಳಾಗಿ ಹೋಗುವುದನ್ನು ನಾವು ನೋಡೋದಾದರೂ ಹೇಗೆ?

ರಪರಪ ಹೊಡೆದ ಸದ್ದು. ರಾಜು ಅಳೋದು..

ಇತ್ತೀಚೆಗೆ ಕಾಶೀಪತಿಯ ಅಭಿಪ್ರಾಯಗಳೇ ವಿಭಿನ್ನವಾಗುತ್ತಿವೆ. ಯಾವ ಯಾವುದೋ ವಿಷಯ ತೆಗೆದುಕೊಂಡು ತಲೆ ಬಿಸಿ ಮಾಡಿಕೊಳ್ಳುತ್ತಾನೆ. ಜಾರ್ಜ್ ಬುಷ್ ಅಭಿಪ್ರಾಯಕ್ಕೆ ಇಲ್ಲಸಲ್ಲದ ಮನ್ನಣೆ ಕೊಟ್ಟು ಊಟ-ತಿಂಡಿಗಳ ಸೇವನೆಯನ್ನೇ ಕಡಿಮೆ ಮಾಡಿದ್ದಾನೆ. ಬುಷ್ ಹೇಳಿರಬಹುದು, ವಿಶ್ವದ ಆಹಾರ ಕೊರತೆಗೆ ಭಾರತ ದೇಶವೇ ಕಾರಣ ಎಂದು. ಆದರೆ ಅದನ್ನು ಸೀರಿಯಸ್ ಆಗಿ ಪರಿಗಣಿಸಬೇಕಿಲ್ಲ ಎಂಬುದು ನನ್ನ ಅಭಿಪ್ರಾಯ.

ಟಿವಿಗಳಲ್ಲಿ ಹಾಡುವ ಸ್ಪರ್ಧೆಗಳು ಪುಂಖಾನುಪುಂಖವಾಗಿ ಬರುತ್ತಿವೆ. ಮೊದಲು ಅದರ ಹೆಸರು ಸರಿಗಮ ಎಂದಿತ್ತು, ನಂತರ ಸರಿಗಮಪ ಎಂದಾಯಿತು, ಮುಂದೆ ಸರಿಗಮಪದ ಎಂದಾಯಿತು. ಈ ಸ್ವರಗಳ ಸಾಲು ಮುಗಿದ ನಂತರ ಏನು ಹೆಸರಿಡಬಹುದು, ಎಂದು ತಲೆ ಕೆಡಿಸಿಕೊಂಡಿದ್ದ.

ಅದೇ ಟಿವಿಗಳಲ್ಲಿ ಬರುವ ನೃತ್ಯ ಸ್ಪರ್ಧೆಗಳ ಬಗ್ಗೆ ಕೂಡಾ ತುಂಬಾ ಚಿಂತಿತನಾಗಿದ್ದ. ಒಬ್ಬರೇ ನರ್ತಿಸುವ ಸ್ಪರ್ಧೆ ಮುಗಿಯಿತು, ಇಬ್ಬರದ್ದಾಯಿತು, ತಾಯಿ-ಮಕ್ಕಳದ್ದಾಯಿತು, ಕುಟುಂಬದ್ದಾಯಿತು. ನಂತರ ಏನು ಎಂಬುದು ಅದು. ಬಿಡಯ್ಯ, ನಂತರದ ಸರಣಿಗಳಲ್ಲಿ ಅಕ್ಕಪಕ್ಕದ ಮನೆಯವರ ನರ್ತನ, ನಂತರ ಪ್ರೇಮಿಗಳ ನರ್ತನ, ಅದಾದ ಮೇಲೆ ವೈರಿಗಳ ಜೊತೆ ಕುಣಿಯುವ ಸ್ಪರ್ಧೆ, ಹೀಗೆ ಸರಣಿ ಮುಂದುವರಿಸಬಹುದು, ಎಂದು ಸಮಾಧಾನಿಸಿದ್ದೆ. ಆವತ್ತು ಅವನು ನಿದ್ರಿಸಿರಬಹುದು.

ನಾನು ಅವನ ಮನೆಯ ಹತ್ತಿರ ಬರುವಾಗಲೂ ಬಾಲದಂಡನ ಕ್ರಿಯೆ ನಡೆಯುತ್ತಿತ್ತು. ಕಾಶಿ ಗದರುತ್ತಿದ್ದ, ರಾಜು ಅರಚುತ್ತಿದ್ದ.

ಮನೆಯ ಬಾಗಿಲು ತಟ್ಟಿದೆ. ಯಾಕೋ ಮಗನ್ನ ಹಾಗೆ ಹೊಡಿತಿ? ಕೌಟುಂಬಿಕ ಹಿಂಸೆಯ ಕಾರಣದಿಂದ ನೀನು ಶಿಕ್ಷೆಗೆ ಒಳಗಾಗಬಹುದು, ಎಂದೆ.

ಅದೇ ವಾಸಿ, ಜೈಲಿನಲ್ಲಿರೋದು. ಈ ನನ್ನ ಮಗ ತುಂಬಾ ಓದ್ತೀನಿ, ಬುದ್ಧಿಜೀವಿಯಾಗ್ತೀನಿ, ವಿಜ್ಞಾನಿಯಾಗ್ತೀನಿ, ಎಂತೆಲ್ಲಾ ಹೇಳ್ತಾನೆ. ನನ್ನ ಮಾತು ಕೇಳೋಲ್ಲ ಎಂದ.

ನನಗೆ ನಂಬಲು ಆಗಲಿಲ್ಲ. ಈಗಿನ ಮಕ್ಕಳು ಪುಸ್ತಕ ಓದ್ತಾರೆ, ಜಾಣರಾಗ್ತಾರೆ ಎಂದರೆ

ಅದು ನಿಜವಿರಲಿಕ್ಕಿಲ್ಲ ಎಂಬುವವನು ನಾನು. ಹಾಗಿರುವಾಗ ರಾಜು ಜಾಣನಾಗ್ತೀನಿ ಎಂದರೆ ಅವನಪ್ಪ ಒದೆಯೋದೇ ಕತ್ತೆಯ ಥರ?

ನಿನ್ನ ಮಗ ಒಳ್ಳೆಯವನಾಗ್ತೀನಿ ಎಂದರೆ ಯಾಕೋ ಬೇಡ ಅಂತಿ? ತಿಳಿದುಕೋ, ಎಲ್ಲರೂ ಕ್ರಿಕೆಟ್ ಆಟಗಾರರೋ, ಸಿನೆಮ ಹೀರೋಗಳೋ ಆಗೋದು ಸಾಧ್ಯವಿಲ್ಲ. ಚೆನ್ನಾಗಿ ಓದಿ, ಒಳ್ಳೆ ಮಾರ್ಕು ತೆಗೆದುಕೊಂಡರೆ ನಮ್ಮ ದೇಶದಲ್ಲಿ ಕೆಲಸ ಸಿಗದಿದ್ದರೂ ವಿದೇಶಗಳಲ್ಲಿ ಕರೆಕರೆದು ಕೆಲಸ ಕೊಡ್ತಾರೆ, ಎಂದು ಕಾಶಿಗೆ ಬುದ್ಧಿ ಹೇಳಿದೆ.

ಅದು ನಿನ್ನ ಕಾಲದಲ್ಲಿ ಕಣೋ. ಇದು ಸೈಂಟಿಸ್ಟ್‌ಗಳು, ಪಂಡಿತರಿಗೆ ಕಾಲವಲ್ಲ. ಇರೋ ಒಬ್ಬ ಮಗ ಟೆರರಿಸ್ಟ್‌ಗಳಿಗೆ ಬಲಿಯಾಗಿ ಕಣ್ಣೆದುರೇ ಸತ್ತರೆ ನಾವು ನೋಡಿ ಜೀವಂತ ಇರೋಕೆ ಆಗುತ್ತೆಯೇ? ಸುಮ್ಮನೆ ಕ್ರಿಕೆಟ್ ಆಡು, ಕೂಲಿ-ನಾಲಿ ಮಾಡಿ ಜೀವನ ಸಾಗಿಸು ಎಂದರೆ ಕೇಳೋಲ್ಲ. ಪ್ರಾಣಕ್ಕಿಂತ ಮಿಗಿಲಾದುದು ಯಾವುದಿದೆ, ಎಂದ.

ನಾನು ತಲೆ ಕೆರೆದುಕೊಂಡೆ. ಬುದ್ಧಿವಂತರು ಟೆರರಿಸ್ಟ್‌ಗಳಿಗೆ ಬಲಿಯಾಗುತ್ತಾರೆಯ? ಮಗನೇ ಹಾಳಾಗು ಎನ್ನುವ ಅಪ್ಪನನ್ನು ಇಂದೇ ನಾನು ನೋಡಿದ್ದು.

ಅಷ್ಟರಲ್ಲಿ ಅಲ್ಲಿ ಇದ್ದ ದಿನಪತ್ರಿಕೆಯ ಶೀರ್ಷಿಕೆಯ ಮೇಲೆ ಕಣ್ಣಾಡಿಸಿದೆ. ಅಲ್ಲಿ ದೊಡ್ಡದಾಗಿ ಬರೆದಿತ್ತು, ಭಯೋತ್ಪಾದಕರ ಉದ್ದೇಶ ಭಾರತದಲ್ಲಿರುವ ಬುದ್ಧಿಜೀವಿಗಳು, ವಿಜ್ಞಾನಿಗಳನ್ನು ಕೊಲ್ಲುವುದೇ ಆಗಿದೆ..... ಎಂದು.

ಪಾಪ, ರಾಜು ತನ್ನ ಪ್ರಾಣವನ್ನು ಇಷ್ಟೊಂದು ಲಘುವಾಗಿ ಪರಿಗಣಿಸಬಾರದು.

ಕಾರಣ

ನೀವು ಪ್ರಮೋಷನ್‌ಗೆ ಅರ್ಹರು. ಆದರೆ ಪ್ರಮೋಟ್ ಮಾಡಲು ಕೆಲವು ತಾಂತ್ರಿಕ ಅಡಚಣೆ ಇದೆ ಬಾಸ್ ಅವನಿಗೆ ಹೇಳಿದರು.

ತಾಂತ್ರಿಕ ಅಡಚಣೆಯೆ? ಏನದು? ಇವನು ಕೇಳಿದ.

ನಮ್ಮ ಜ್ಯೋತಿಷಿ ಪ್ರಕಾರ ನಿಮ್ಮ ಜಾತಕದಲ್ಲಿ ಪ್ರಮೋಷನ್ ಯೋಗ ಈಗಿಲ್ಲ. ಆದುದರಿಂದ ಈ ವರ್ಷ ನಿಮಗೆ ಪ್ರಮೋಷನ್ ಕೊಡ್ತಿಲ್ಲ.

- ಧೃತರಾಷ್ಟ್ರ

ರಂಗ ಸ್ವಾರಸ್ಯ

• ಸಂಗ್ರಹ : ಬೇಲೂರು ರಾಮಮೂರ್ತಿ

(ಶ್ರೀ ಎಚ್.ಕೆ. ರಂಗನಾಥರು ದಾಖಲಿಸಿರುವ ಅವರ ಕೆಲವು ಅನುಭವಗಳು)

ಒಂದು ಸಾರಿ ರಂಗನಾಥ್ ಅವರು ರೇಡಿಯೋ ನಾಟಕವೊಂದರ ರಿಹರ್ಸಲ್ ನಡೆಸಿದ್ದರು. ಅದರಲ್ಲಿ ಹೆಂಡತಿಯೊಂದಿಗೆ ಪಿಸುಗುಡುವ ಸಂಭಾಷಣೆಯೊಂದು ಬರುತ್ತದೆ. ಕಲಾವಿದ ಎಷ್ಟು ಹೇಳಿಕೊಟ್ಟರೂ ಪಿಸುಗುಡುವುದರ ಬದಲು ಜೋರಾಗಿಯೇ ಮಾತಾಡುತ್ತಿದ್ದರು. ರಂಗನಾಥರು ಕಲಾವಿದರನ್ನು ನಿಮಗೆ ಮದುವೆಯಾಗಿದೆಯೇ ಅಂತ ಕೇಳಿದರು. ಅದಕ್ಕೆ ಅವರು ಇಲ್ಲ ಅಂದರು. ಅದಕ್ಕೆ ಮತ್ತೆ ನಿಮಗೆ ಗೊತ್ತಿಲ್ಲ. ಹೆಂಡತಿಯೊಂದಿಗೆ ರಾತ್ರಿ ಹೊತ್ತು ಕಿವೀಲಿ ಪಿಸುಗುಡೋದು ಬಿಟ್ಟು ಎಲ್ರಿಗೂ ಕೇಳೋ ಹಾಗೆ ಹೇಳ್ತಾರೇನ್ರೀ. ಪಕ್ಕದಲ್ಲಿ ಮಕ್ಕಳು ಮಲಗಿರುತ್ವೆ. ಪಕ್ಕದ ಕೋಣೇಲಿ ತಮ್ಮ ತಮ್ಮನ ಹೆಂಡತಿ ಮಲಗಿರ್ತಾರೆ, ಯಾರಿಗೂ ಕೇಳದ ಹಾಗೆ ಆದ್ರೆ ಇಬ್ಬರಿಗೇ ಕೇಳೋ ಹಾಗೆ ಪಿಸುಗುಡ್ರೀ ಅಂದ್ರು.

ರಂಗನಾಥರು ಧಾರವಾಡದ ಆಕಾಶವಾಣಿಯಲ್ಲಿದ್ದಾಗ ಒಂದು ಸಾರಿ ನಾಟಕ ರಿಹರ್ಸಲ್‌ಗೆ ಸಾದರ ಜೋಶಿಯವರು ಚಕ್ಕರ್. ಲಕ್ಷ್ಮಣ ಅನ್ನೋರ ಜೊತೆ ಜೋಶಿ ಮನೆಗೆ ಹೋದರು. ಏನಾಗಿದೆ ಅಂದ್ರೆ ಕುರು ಸಾರ್ ಕುರು ಅಂತ ನರಳಿದರು ಜೋಶಿ. ಆಗ ರಂಗನಾಥರು ಲಕ್ಷ್ಮಣ ಇವನನ್ನು ಆಟೋದಲ್ಲಿ ಹಾಕ್ಕೊ ಆಕಾಶವಾಣೀಲಿ ಪ್ರಾಕ್ಟೀಸ್ ಮಾಡ್ತಾ ನರಳ್ಲಿ. ಹೇಗೂ ನಾಟಕ ಕುರುಕ್ಷೇತ್ರ, ಮನೆ ಯಜಮಾನ ಕುರುಬಾಧೆಯಿಂದ ನರಳೋ ಸಂಗತಿ ಬರುತ್ತೆ. ಅಭಿನಯ ಸಹಜವಾಗಿರುತ್ತೆ ಅಂದು ಜೋಶಿಯವರನ್ನು ಆಟೋದಲ್ಲಿ ಹಾಕ್ಕೊಂಡೇ ಹೋದರಂತೆ.

ಬೇಂದ್ರೆ ಮಾತಿನ ಮೋಡಿಗೆ ಒಳಗಾಗದವರೇ ಇಲ್ಲ. ಅವರು ಆಗಾಗ ಆಕಾಶವಾಣಿಗೆ ಬಂದು ರಂಗನಾಥರನ್ನು ಭೇಟಿಯಾಗಿ ಮಾತುಕತೆಯಾಡುತ್ತಾ ಕೂತಿರುತ್ತಿದ್ದರು. ಇದು ಮೊದಮೊದಲು ಚೆನ್ನಾಗಿತ್ತು. ಆದರೆ ಬರುಬರುತ್ತಾ ರಂಗನಾಥರಿಗೆ ಕೆಲಸ ಪೆಂಡಿಂಗ್ ಆಗುತ್ತಾ ಬಂತು. ಆದರೆ ಬೇಂದ್ರೆಯವರನ್ನು ದಿನಾ ಬರಬೇಡಿ ಅಂತ ಹೇಳೋದು ಹೇಗೆ, ಬಂದವರನ್ನು ಬೇಗ ಹೋಗಿ ಅಂತ ಹೇಳೋದು ಹೇಗೆ. ಅದಕ್ಕೆ ಒಂದು ಉಪಾಯ ಮಾಡಿ ಬೇಂದ್ರೆಯವರು ಬಂದು ಅರ್ಧಗಂಟೆಯಾದ ನಂತರ ನೀನು ಬಂದು ನನಗೆ ನಿಮ್ಮನ್ನ ಸಾಹೇಬರು ಕರೀತಿದಾರೆ ಅಂತ ಹೇಳು ಅಂತ ಜವಾನನಿಗೆ ಹೇಳಿಕೊಟ್ಟರು. ಇದೂ ಆಯ್ತು. ಬೇಂದ್ರೆಯವರು ಮಾತಾಡ್ತಾ ಕೂತಿರೋದು, ಅರ್ಧಗಂಟೆಯಾದ ನಂತರ ಜವಾನ ಬಂದು

ಹಾಗೆ ಹೇಳೋದು, ಬೇಂದ್ರೆಯವರು ಎದ್ದು ಹೋಗೋದು ನಡೆದಿತ್ತು. ಒಂದು ದಿನ ಜವಾನ ಈ ಕೆಲಸ ಮರೆತ. ಅವತ್ತು ಬೇಂದ್ರೆಯವರು ರಂಗನಾಥರಿಗೆ ನಾನು ಬಂದು ಕೂತು ಅರ್ಧತಾಸಾಯ್ತು, ಇವತ್ತು ಇನ್ನೂ ನಿಮ್ಮ ಸಾಹೇಬರು ನಿಮಗೆ ಹೇಳಿಕಳಿಸಲೇ ಇಲ್ಲ ಅಂದರಂತೆ.

ರಂಗನಾಥರಿಗೆ ಒಬ್ಬ ಮರೆಗುಳಿ ಬಾಸ್ ಇದ್ದರಂತೆ. ಒಂದು ಸಾರಿ ಆಕಾಶವಾಣಿಗೆ ಹೊಸದಾಗಿ ವಾರ್ತಾ ವಾಚಕರ ನೇಮಕಾತಿಯಾಯಿತು. ರಂಗನಾಥರು ಅವರನ್ನು ಕರೆದುಕೊಂಡು ಹೋಗಿ ಬಾಸ್‌ಗೆ ಪರಿಚಯ ಮಾಡಿಕೊಡುತ್ತಾ ಸಾರ್. ಇವರು ಹೊಸದಾಗಿ ನೇಮಕವಾಗಿರುವ ವಾರ್ತಾವಾಚಕರು. ಪರಸ್ಪರ ಕೈ ಕುಲುಕುವಿಕೆ ಆಯ್ತು. ಆಗ ಬಾಸ್ ರಂಗನಾಥರ ಕಡೆ ನೋಡಿ ಅವರ ಪರಿಚಯವೇನೋ ಆಯಿತು ಆದರೆ ನೀವು ಯಾರು ಅಂತ ಹೇಳಲೇ ಇಲ್ಲ ಅಂದ್ರಂತೆ.

ಒಂದು ಸಾರಿ ರಂಗನಾಥರ ನಾದಿನಿ (ಪ್ರೊ. ನಂಜುಂಡಸ್ವಾಮಿಯವರ ಪತ್ನಿ) ರಂಗನಾಥರಿಗೆ ನಿಮ್ಮ ತಮ್ಮ ಮನೆಯಲ್ಲಿ ಮೂರುಕಾಸಿನ ಕೆಲಸವನ್ನೂ ಮಾಡೋದಿಲ್ಲ ಅಂತ ದೂರಿದರಂತೆ. ಆಗ ರಂಗನಾಥರು ಹೌದೇ, ನನಗೆ ಹಾಗನಿಸಲಿಲ್ವಲ್ಲ ಅಂದ್ರಂತೆ. ಆಗ ನಾದಿನಿ ನೀವು ಸುಮ್ನೆ ನಿಮ್ಮ ತಮ್ಮನನ್ನು ವಹಿಸಿಕೊಂಡು ಮಾತಾಡಬೇಡಿ ಸ್ವಲ್ಪ ಅವರ ಕಡೆ ಗಮನ ಕೊಟ್ರೆ ಗೊತ್ತಾಗುತ್ತೆ ಅಂದಾಗ ರಂಗನಾಥರು ನಾನೂ ಅವನನ್ನು ಬೆಳಗ್ಗೆಯಿಂದ ನೋಡ್ತಾನೇ ಇದೀನಿ. ಅವನೇ ಹಾಸಿಗೆಯಿಂದ ಎದ್ದ, ಅವನೇ ಹಲ್ಲುಜ್ಜಿಕೊಂಡ ಅವನೇ ಷೇವ್ ಮಾಡಿಕೊಂಡ ಅವನೇ ಪೇಪರ್ ಓದಿದ. ಅವನೇ ಸ್ನಾನ ಮಾಡಿದ ಅವನೇ ತಿಂಡಿ ತಿಂದ ಅಂತೆಲ್ಲ ಹೇಳ್ತಾ ಇದ್ದಾಗ ನಾದಿನಿ ಮುಸಿಮುಸಿ ನಗುತ್ತಾ ಒಳಗೆ ಹೋದರಂತೆ.

ರಂಗನಾಥರು ಯಾರನ್ನಾದರೂ ಹೊಗಳಬೇಕೆಂದರೆ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಇದು ಕೆಲವರಿಗೆ ಹಿಡಿಸುತ್ತಿರಲಿಲ್ಲ. ಅಂಥಾ ಒಂದು ಸಂದರ್ಭದಲ್ಲಿ ರಂಗನಾಥರು ಹೇಳಿದ್ದೇನೊಂದ್ರೆ, ಇನ್ನೊಬ್ಬರಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿ ಹೊಗಳಿದರೆ ದೊಡ್ಡೋರಾಗೋದು ಅವರಲ್ಲ, ನಾವು ಅಂತ.

ಬಹಳ ವರ್ಷಗಳ ನಂತರ ಡಿವಿಜಿಯವರನ್ನು ಕಾಣಲು ಅವರ ಮನೆಗೆ ರಂಗನಾಥ್ ಅವರು ಹೋದಾಗ ಡಿವಿಜಿಯವರು ರಂಗನಾಥರನ್ನು ಕಂಡು ಓಹೋ ಲಕ್ಷ್ಮಿದೇವಮ್ಮ ಬರಬೇಕು ಅಂದರಂತೆ. ರಂಗನಾಥ್ ಅವರು ತಬ್ಬಿಬ್ಬಾಗಿ ಅಕ್ಕಪಕ್ಕ ನೋಡಿದರಂತೆ. ಮಗಳು ಹೇಗಿದ್ದಾಳೊ ಅನ್ನೋದು ಡಿವಿಜಿಯವರ ಪ್ರಶ್ನೆ. ನನಗೆ ಇಬ್ಬರು ಮಕ್ಕಳು ಅಂದವರು ರಂಗನಾಥ್. ನಾನು ಕಂಡಾಗ ಪಾತು ಒಬ್ಬಳೇ ಇದ್ದಳಲ್ವೆ ಅಂತ ಡಿವಿಜಿಯವರು ಅಂದಾಗ ರಂಗನಾಥ್ ಗೊಂದಲದಲ್ಲಿ ಬಿದ್ದರು. ಪಾತು ಅಲ್ಲ ಸಾರ್. ನನ್ನ ಮೊದಲ ಮಗಳ ಹೆಸರು ಅಂಜನ ಅಂದಾಗ ಮತ್ತೆ ಡಿವಿಜಿಯವರು ಇದೇನು ಹೀಗೆ ಹೇಳುತ್ತಿದ್ದೀರಿ ಲಕ್ಷ್ಮಿದೇವಿ ಅಂದಾಗಲಂತೂ ರಂಗನಾಥರಿಗೆ ಇವತ್ತು ಯಾಕೋ ದಿನ ಸರಿಯಿಲ್ಲ ಅನಿಸಿತ್ತು. ಡಿವಿಜಿಯವರು ರಂಗನಾಥರ ಕಡೆ ನೋಡಿ ನಗುತ್ತಾ ಯಾಕೆ ಗಾಬರಿಯಾಯಿತೇ. ಈಗ ಹತ್ತು ಹದಿನೈದು ವರ್ಷಗಳ ಕೆಳಗೆ ಕೈಲಾಸಂ ಅವರ ಪಾತು ತವರ್ಮನೆಯಲ್ಲಿ ನೀವು

ಲಕ್ಷ್ಮಿದೇವಿ ಪಾರ್ಟಿ ಮಾಡಿರಲಿಲ್ಲವೇ ಆಗ ಪಾತು ತಾನೆ ನಿಮ್ಮ ಮಗಳು ಅಂದಾಗ ರಂಗನಾಥ್ ಅವರು ನಕ್ಕಿದ್ದೇ ನಕ್ಕಿದ್ದು.

ಒಂದು ಸಾರಿ ಡಿವಿಜಿಯವರು ಆಕಾಶವಾಣಿಗೆ ಬಂದಿದ್ದಾಗ ರಂಗನಾಥರ ಕುಶಲೋಪರಿ ವಿಚಾರಿಸಿದರು. ಕುಟುಂಬ ಯೋಜನಾಧಿಕಾರಿ ಎಸ್. ಕೃಷ್ಣಮೂರ್ತಿ ಯವರು ನಿಮಗೆ ಮೊದಲನೆಯದು ಹೆಣ್ಣು ಅದಕ್ಕೆ ಏನು ಹೆಸರು ಇಟ್ಟಿದ್ದೀರ ಅಂತ ಕೇಳಿದಾಗ ರಂಗನಾಥರು ಅಂಜನ ಅಂದರು. ನಂತರ ಎರಡನೆಯದೂ ಹೆಣ್ಣಾದರೆ ಅಂದಾಗ ಅದಕ್ಕೆ ಅಭ್ಯಂಜನ ಅಂತ ಇಡ್ತೀನಿ ಅಂದ್ರಂತೆ. ಮೂರನೆಯದೂ ಹೆಣ್ಣಾದರೆ ಅಂದಾಗ ರಂಗನಾಥರು ಅಮೃತಾಂಜನ ಅಂತ ಇಡ್ತಿನಿ ಅಂದ್ರಂತೆ. ಆಗ ಡಿವಿಜಿ ನಗುತ್ತಾ ಅದ್ಯಾಕೆ ಹಾಗಂತೀರಿ ಇದು ಪೂರ್ವಜನ್ಮದ ಸುಕೃತ ಅಂದ್ಕೊಳಿ ಅಂದ್ರಂತೆ.

ಎಲ್ಲರೊಂದಿಗೆ ಆತ್ಮೀಯತೆ, ನಗು, ತಮಾಷೆಯೊಂದಿಗೆ ತೊಡಗಿಕೊಳ್ಳುವುದು ರಂಗನಾಥರಿಗೆ ಮೊದಲಿಂದ ಬಂದ ಆಸ್ತಿ. ಎಲ್ಲೇ ಇರಲಿ ಹೇಗೇ ಇರಲಿ ಸುತ್ತಲೂ ನಗು ಹೊಮ್ಮುತ್ತಿರಲಿ ಎನ್ನುವುದೇ ಅವರ ಜಾಯಮಾನವಾಗಿತ್ತು. ಸಂಗೀತ ವಿದುಷಿ ಶ್ಯಾಮಲಾ ಭಾವೆಯವರೊಂದಿಗೆ ಅವರು ಸ್ನೇಹಪರರಾಗಿದ್ದರು. ಒಂದು ಸಮಾರಂಭದಲ್ಲೋ ಏನೋ ಶ್ಯಾಮಲಾ ಭಾವೆಯವರು ಅಲ್ಲಿ ನೆರೆದಿದ್ದವರನ್ನು ಕುರಿತು ಅಣ್ಣಾ ಚೆನ್ನಾಗಿದೀರಾ, ಅಣ್ಣ ಕಾಫಿ ತಗೊಳಿ ಅಂತ ಮಾತಿಗೆ ಮೊದಲು ಅಣ್ಣ ಅಣ್ಣ ಅಂತ ಸಂಭೋಧಿಸಿ ಮಾತಾಡ್ತಾ ಇದ್ದಾಗ ರಂಗನಾಥರು ಶ್ಯಾಮಲಾ ಭಾವೆಯವರನ್ನು ಹತ್ತಿರ ಕರೆದು. ನೋಡು ನೀನು ಹೀಗೆ ಕಂಡವರನ್ನೆಲ್ಲ ಅಣ್ಣ ಅಣ್ಣ ಅಂತ ಕರೀತಾ ಇದ್ರೆ ನಾವು ನಿನಗೆ ಎಲ್ಲಿಂದ ಗಂಡು ತರೋದು ಅಂದರಂತೆ.

ರಂಗನಾಥರ ಮದುವೆಯ ದಿನಗಳು. ಆಗಲೇ ತಂದೆ ತಾಯಿಯರು ಹೆಣ್ಣು ನೋಡಲು ಪ್ರಾರಂಭಿಸಿದ್ದೇ ಅಲ್ಲದೇ ರಂಗನಾಥರನ್ನೂ ಹೋಗಿ ಹುಡುಗಿ ನೋಡ್ಕೊಂಡು ಬಾ ನಿನಗೆ ಒಪ್ಪಿಗೆಯಾದರೆ ಮುಂದಿನ ಮಾತು ಅಂತ ಹೇಳ್ತಾ ಇದ್ದರು. ಹಾಗೊಮ್ಮೆ ರಂಗನಾಥರು ಹುಡುಗಿ ನೋಡಲು ಹೋದಾಗ ಅವರ ಜೊತೆ ಅವರ ಸ್ನೇಹಿತ ಜೋಶಿಯೂ ಇದ್ದರು. ಅಲ್ಲಿ ಹುಡುಗಿ ನೋಡಿದ ಮೇಲೆ ಜೋಶಿ ಮಾಡಿದ ಕಾಮೆಂಟು ಹೇಗಿತ್ತು ಎಂದರೆ, ಈಗ ನೋಡಿದ ಹುಡುಗಿ ಡೆಂಟಲಿ ಫಾರ್ವರ್ಡ್, ಮೆಂಟಲಿ ಬ್ಯಾಕ್‌ವರ್ಡ್, ಫಿಸಿಕಲಿ ಆಕ್‌ವರ್ಡ್. ಇದು ನಿನಗೆ ಸರಿಹೋಗಲ್ಲ ಬಿಡು.

ರಂಗನಾಥರ ಬಳಿ ಹಳೇ ಮಾಡೆಲ್ ಕಾರೊಂದಿತ್ತು. ಅದನ್ನು ಅವರು ಜೋಪಾನವಾಗಿ ಓಡಿಸುತ್ತಿದ್ದರು. ಹೆಚ್ಚಿನ ಸ್ಪೀಡು ಯಾವತ್ತೂ ಇರಲಿಲ್ಲ, ಇದನ್ನು ಕಂಡು ಒಬ್ಬೊಬ್ಬರು ಒಂದೊಂದು ರೀತಿ ತಮಾಷೆ ಮಾಡುತ್ತಿದ್ದರು. ಒಂದು ಸಾರಿ ವೆಂಕಟಾಚಲ ಅವರು ಎಲ್ಲಿಗೋ ಆತುರಾತುರವಾಗಿ ಹೊರಟಿದ್ದರು. ಅದನ್ನು ಕಂಡು ರಂಗನಾಥರು ಬನ್ನಿ ನನ್ನ ಕಾರಲ್ಲೇ ನಾನೂ ಆ ಕಡೇನೇ ಹೋಗ್ತಿದೀನಿ ಅಂದಾಗ ವೆಂಕಟಾಚಲ ಬೇಡ ನಾನು ಸ್ವಲ್ಪ ಅರ್ಜಂಟಾಗಿ ಹೋಗ್ಬೇಕಾಗಿದೆ. ನಡೆದೇ ಹೋಗ್ತಿನಿ ಅಂದ್ರಂತೆ.

ಅ. ಭಾ. ಪು. ಶೋ. ವಿ. ಸಂ.

• ಜಯದೇವ ಪ್ರಸಾದ ಮೊಳೆಯಾರ

ಈ ಬಾರಿ ಶಂಭು ಸುಮ್ಮ ಕೂರಲಿಲ್ಲ. ಅದೇ ಶನಿವಾರದ ಸಂಜೆ ವಠಾರದಲ್ಲಿರುವ ಎಲ್ಲಾ ಗಂಡಂದಿರನ್ನು ಒಟ್ಟು ಹಾಕಿ ಸೀರಿಯಸ್ಸಾಗಿ ವಿಚಾರ ಮಂಡಿಸಿಯೇ ಬಿಟ್ಟ.

ವಿಷಯ ಏನೆಂದರೆ ಸ್ತ್ರೀ ವಿಮೋಚನೆ ಅತಿರೇಕಕ್ಕೆ ಹೋಗಿದ್ದು. ಪತ್ನಿಯರು ತಮ್ಮ ಸ್ವಾತಂತ್ರ್ಯವನ್ನು ತುಸು ಜಾಸ್ತಿಯೇ ಚಲಾಯಿಸಲು ಹೊರಟು ಪತಿಪೀಡಕರಾಗತೊಡಗಿದ್ದು. ಆಫೀಸಿನಲ್ಲಿ ಕತ್ತೆ ಹಾಗೆ ದುಡಿದು ಮನೆಗೂ ಬಂದು ಕೆಲ್ಸ ಶೇರ್ ಮಾಡಬೇಕು ಅಂದ್ರೆ ಶಂಭುಗೆ ಪುರುಷ ಶೋಷಣೆಯೆಂದು ಕಾಣುತ್ತಿತ್ತು. ತಂಪಾಗಿ ಟಿವಿ ರಿಮೋಟ್ ಅದುಮುತ್ತಾ ಸೋಫಾದಲ್ಲಿ ಹೆಬ್ಬಾವಿನಂತೆ ಬಿದ್ದಿರಬಹುದಾಗಿದ್ದ ವೇಳೆಯಲ್ಲಿ ಅಂಗ್ಡಿಗೆ ಹೋಗಿ ತರಕಾರಿ, ಅಕ್ಕಿ, ಬೇಳೆ ವಗೈರೆಗಳನ್ನು ತರಬೇಕೆಂದಾದರೆ, ಕಿಚನ್ ಒಳಗಿನ ಕೆಲಸ ಕಾರ್ಯಗಳಲ್ಲಿ ಕೈ ಸೇರಿಸಬೇಕೆಂದಾದರೆ ಅದು ಪತಿ ಪೀಡನೆಯೇ ಸರಿ ಎಂದು ಅವನ ಧೋರಣೆಯಾಗಿತ್ತು. ಹಾಗೆ ತುರ್ತಾಗಿ ಒಂದು ದಿನ ವಠಾರದ ಪತಿಗಳನ್ನೆಲ್ಲ ಒಟ್ಟು ಹಾಕಿ ಮನೆ ಮನೆಗಳಲ್ಲಿ ನಡೆಯುವ ಪುರುಷಶೋಷಣೆಯ ವಿರುದ್ಧ ದನಿ ಎತ್ತಬೇಕೆಂದು ತೀವ್ರವಾಗಿ ವಿಚಾರ ಮಂಡಿಸಿದ. ವಿಷಯ ಹೌದು ಎಂದು ಎಲ್ಲ ಗಂಡಂದಿರೂ ಒಪ್ಪಿಗೆ ಸೂಚಿಸಿದರು. ಎಲ್ಲರನ್ನೂ ಸೇರಿಸಿ ಪುರುಷ ಶೋಷಣೆಯ ವಿರುದ್ಧ ರಣ ಕಹಳೆ ಊದಿಯೇ ಬಿಟ್ಟ ಶಂಭು.

ವಠಾರದ ಎದುರುಗಡೆಯೇ ಇರುವ ಖಾಲಿ ಮೈದಾನದಲ್ಲಿ ವಠಾರದ ಸಕಲ ಸ್ತ್ರೀ ಸಂಕುಲಕ್ಕೆ ಕಾಣಿಸುವಂತೆ ಒಂದು ಟೆಂಟ್ ಹೂಡಿ ಮುಷ್ಕರ ಆರಂಭಿಸಿಯೇ ಬಿಟ್ಟರು. ನಮ್ಮ ಬೇಡಿಕೆಗಳು ಈಡೇರುವವರೆಗೂ ನಾವುಗಳು ಮನೆಯ ಹೊಸ್ತಿಲು ತುಳಿಯುವುದಿಲ್ಲ ಎಂಬುದಾಗಿ ಜೋರಾಗಿ ಮೈಕಿನಲ್ಲಿ ಕೂಗಾಡಿದ್ದಾಯಿತು. ಅಲ್ಲೇ ರಾತ್ರಿಗಳನ್ನು ಕಳೆಯುವುದೆಂದೂ ತೀರ್ಮಾನವಾಯಿತು.

ವಠಾರದ ಕೆಲ ಹೆಂಗಸರು ಇನ್ನು ಏನೇನು ನಡೆಯುತ್ತೋ ಎಂದು ಆತಂಕಗೊಂಡರೆ ಇನ್ನು ಕೆಲ ಹೆಂಗಸರು ಕಿಟಕಿ ಕರ್ಟನ್ ಸರಿಸಿ ನಡೆಯುವ ವಿದ್ಯಮಾನಗಳನ್ನು ನೋಡುತ್ತಾ ಮುಸಿ ಮುಸಿ ನಗುತ್ತಿದ್ದರು. ಶಂಭುವಿನ ಹೆಂಡತಿ ಎದುರಿನ ಖಾಲಿ ಮೈದಾನಿನಲ್ಲಿ ನಡೆಯುತ್ತಿರುವ ನಾಟಕವನ್ನು ತುಸು ಅನಾದರದಿಂದಲೇ ಸ್ವಲ್ಪ ಹೊತ್ತು ವೀಕ್ಷಿಸಿ ಕೊನೆಗೆ ಅಲ್ಲೇ ಕಾರ್ಟೂನ್ ನೋಡಿಕೊಂಡು ಮೈಮರೆಯುತ್ತಿದ್ದ ಮಗನ ಕೈಯಲ್ಲಿ ಅಪ್ಪನಿಗೆ

ಮೆಸೇಜ್ ಹೇಳಿಕಳುಹಿಸಿದಳು. ಮಗ ಬಂದು ಅಪ್ಪಾಗೆ ಅದನ್ನು ಎಲ್ಲರ ಎದುರೇ ಗಟ್ಟಿಯಾಗಿ ಹೇಳಿಬಿಟ್ಟ. ಅಪ್ಪ ಅಪ್ಪ.., ಅಮ್ಮ ಹೇಳಿದ್ದು ಹೇಳ್ಲಿಕ್ಕೆ...., ಮೊದ್ಲು ಡಿಮ್ಯಾಂಡ್ಸ್ ಏನು ಅಂತ ಒಂದು ಪಟ್ಟಿ ಮಾಡ್ಬೇಕಂತೆ. ಶಂಭುವಿಗೆ ಮುಜುಗರವಾದರೂ ತೋರ್ಪಡಿಸದೆ ಮಗನ ಹತ್ತಿರ ಈಗ ಅದೇ ಮಾಡುವವನಿದ್ದೆ, ಅವ್ಳ ಸಲಹೆಬೇಕಾಗಿಲ್ಲ ಅಂತ ಹೇಳುಹೋಗು ಅಂತ ಜೋರು ಮಾಡಿ ಅಲ್ಲಿಂದ ಓಡಿಸಿ ಇತರ ಪೀಡಿತ ಮಿತ್ರರೊಡಗೂಡಿ ಬೇಡಿಕೆಗಳ ಒಂದು ಯಾದಿ ತಯಾರಿಸಲು ಆರಂಭಿಸಿದ.

ಮೊತ್ತ ಮೊದಲನೆಯದಾಗಿ ಬರ್ಕೊಂಡ, ಅ. ಭಾ. ಪು. ಶೋ. ವಿ. ಸಂ. ಅಂತ. ಕೆಳಗೆರಡು ಗೀಟು ಎಳೆದ. ಸಹಚರರೆಲ್ಲರು ಅರ್ಥವಾಗದೆ ಕಣ್ಣು ಬಾಯಿ ಬಿಟ್ಟರು. ಅಂದ್ರೆ, ಅಖಿಲ ಭಾರತ ಪುರುಷ ಶೋಷಣೆ ವಿರೋಧಿ ಸಂಘಟನೆ ಅಂತ. ಸಮಜಾಯಿಸಿ ನೀಡಿ ಎಲ್ಲರ ಮುಖಾವಲೋಕನ ಮಾಡಿದ ಶಂಭು. ಎಲ್ಲರೂ ಅವನ ಔಚಿತ್ಯಪೂರ್ಣ ಹೆಸರಿಗೆ ಭಳಿರೇ ಎಂದು ತಲೆದೂಗಿದರು. ಇದಕ್ಕೊಂದು ಧ್ಯೇಯವಾಕ್ಯವೂ ಬೇಕು ಎಂದು ಪಕ್ಕದ ಮನೆಯ ಮೇಷ್ಟ್ರು ಶ್ರೀಪತಿರಾಯರು ಸಜೆಸ್ಟಿಸಿದರು. ಅಹುದಹುದು ಎಂದು ಉಳಿದವರೂ ದನಿಗೂಡಿಸಿದರು. ಶಂಭು ತುಸುಹೊತ್ತು ತಲೆಕೆರೆದು ಲಿಬರ್ಟಿ, ಇಕ್ವಾಲಿಟಿ, ಫ್ರಾಟರ್ನಿಟಿ ಎಂದು ಇಂಗ್ಲಿಷಿನಲ್ಲಿಯೇ ಬರೆದ. ಯೆಂಕ್ಟು ಪಂಕ್ಟುಗಳೆಲ್ಲಾ ಇಂಗ್ಲಿಷ್ ಬರಹದಲ್ಲಿ ಏನೋ ಕಂಡಾಕ್ಷಣವೇ ಗುಡ್ ಗುಡ್ ಎಂಬುದಾಗಿ ತಮ್ಮ ಅನುಮೋದನೆ ಸೂಚಿಸಿದರು. ಶ್ರೀಪತಿರಾಯರು ಏನೋ ಹೇಳಲು ಬಾಯಿ ತೆರೆದರೂ ಮಂಜು ಪಂಜುಗಳಾದಿ ಎಲ್ಲರೂ ಒಪ್ಪಿಗೆಯ ನಗೆ ಸೂಸಿದ್ದನ್ನು ನೋಡಿ ಸುಮ್ಮನಾದರು.

ಕಾಫಿ-ಟಿ, ಸಿಗರೇಟುಗಳ ನಡುವೆ ನಡೆದ ಮುಂದಿನ ಮೂರು ಘಂಟೆಗಳ ಸುದೀರ್ಘ ಚರ್ಚೆಯ ಬಳಿಕ ಒಂದು ಲಿಸ್ಟ್ ತಯಾರಾಯಿತು. ಅದು ಹೀಗಿತ್ತು:

1. ಪತ್ನಿಯರು ಯಾವುದೇ ರೀತಿಯಲ್ಲಿ ಪತಿಯರ ಮೇಲೆ ದೌರ್ಜನ್ಯ ಮಾಡಕೂಡದು.
2. ಪತಿಗಳು ಆಫೀಸಿನಿಂದ ಬಂದ ಕೂಡಲೇ ಕಾಫಿ/ ಚಾದೊಂದಿಗೆ ಪತ್ನಿಯರು ಪತಿಯರನ್ನು ಸ್ವಾಗತಿಸಬೇಕು.
3. ಟಿವಿಯ ಮೇಲಿನ ಪ್ರೈಮರಿ ಹಕ್ಕು ಗಂಡಂದಿರದ್ದಾಗಿರುತ್ತದೆ ಮತ್ತು ಗಂಡಂದಿರದ್ದು ಮಾತ್ರವೇ ಆಗಿರುತ್ತದೆ.
4. ಪತಿಗಳು ಇಷ್ಟವಿಲ್ಲದ ಕೆಲಸವನ್ನು ಅವರು ಮಾಡುವಂತೆ ಪತ್ನಿಯರು ಯಾವುದೇ ರೀತಿಯ ಒತ್ತಡ ಹೇರುವಂತಿಲ್ಲ.
5. ಪತಿಗಳಿಗೆ ಹಸಿವಾದಾಗ ಉಣಬಡಿಸುವುದು ಪತ್ನಿಯರ ಕರ್ತವ್ಯವಾಗಿರುತ್ತದೆ. (ಹಾಗೂ ಇದು ಸನಾತನ ಧರ್ಮ)
6. ಮೇಲಿನ ಹೇಳಿಕೆ ಎಲ್ಲಾ ರೀತಿಯ ಹಸಿವಿಗೂ ಅನ್ವಯಿಸುತ್ತದೆ.

ಸಹಿ-

ಶೋ. ಪುಗಳು (ಶೋಷಿತ ಪುರುಷರು)

ಫಾರ್, ಅ. ಭಾ. ಪು. ಶೋ. ವಿ. ಸಂ

ಇವತ್ತಿಗೆ ಮೀಟಿಂಗ್ ಇಲ್ಲಿಗೆ ಸಾಕು. ನಾಳೆ ಹೇಗೂ ಭಾನುವಾರ. ಮುಂದಿನ ಕಾರ್ಯಸೂಚಿ ನಾಳೆ ಚರ್ಚಿಸುವುದು ಎಂದು ನಿರ್ಧರಿಸಲಾಯಿತು. ಎಲ್ಲರೂ ಪಕ್ಕದ ಹೋಟೆಲಿನಿಂದ ಪಾರ್ಸೆಲ್ ತರಿಸಿದ ಊಟಮಾಡಿ ಟೆಂಟ್ ಒಳಗಡೆ ಅಲ್ಲಲ್ಲೇ ಅಡ್ಡಾಗಿ ನಿದ್ದೆ ಹೋದರು.

ಹೊಸಜಾಗ, ನುಸಿಕಾಟ ಬೇರೆ. ಮೈದಾನಿನ ತಣ್ಣನೆ ಗಾಳಿಗೆ ಚಳಿಯೂ ಶುರುವಾಯಿತು. ನಡುರಾತ್ರಿ ಶ್ರೀಪತಿರಾಯರಿಗೆ ಎಚ್ಚರವಾಯಿತು. ಅಭ್ಯಾಸ ಬಲದಿಂದ ಬಲಗೈ ಚಾಚಿ ಮಗ್ಗುಲು ಬದಲಿಸಿದರೆ ಪಕ್ಕದಲ್ಲಿ ಮಲಗಿದ್ದ ಸೋಮಣ್ಣನ ಗಡ್ಡಕ್ಕೆ ಕೈ ತಗಲಿ ಮುಳ್ಳು ಹಂದಿಯ ಸ್ಪರ್ಶದ ಅನುಭವವಾಯಿತು. ಕೂಡಲೇ ಹೇಸಿಗೆಪಟ್ಟುಕೊಂಡು ಕೈ ಹಿಂದಕ್ಕೆಳೆದರು ರಾಯರು.

ಸೋಮಣ್ಣನೂ ಕೂಡಾ ನಿದ್ದೆ ಬಾರದೆ ಹೊರಳಾಡುತ್ತಿದ್ದ. ಮನದಲ್ಲಿ ಏನೇನೋ ತೊಳಲಾಟ. ಮನದ ಪಟಲದಲ್ಲಿ ಮನೆಯ ಬೆಚ್ಚಗಿನ ರಾತ್ರಿಗಳ ಸೀನ್ ನುಸುಳಿ ಹಿಂಸೆ ಕೊಡುತ್ತಿತ್ತು.

''ಏನು ಶ್ರೀಪತಿಯವರೇ, ನಿದ್ದೆ ಬರ್ಲಿಲ್ವಾ?'' ಅಂತ ಮೆಲ್ಲಗೆ ಶ್ರೀಪತಿರಾಯರನ್ನು ಮಾತಿಗೆಳೆದ.

''ಹಾಗೇನಿಲ್ಲ, ಹೀಗೆ ಸ್ವಲ್ಪ, ನುಸಿ ಕಾಟ ಅಲ್ವ?''

''ಹ್ಞೂಂ. ಮನೇನಲ್ಲಿ ಆದ್ರೆ ಆರಾಮ ಇರ್ತಿತ್ತು ಅಲ್ವ? ಒಳ್ಳೆ ಮೆತ್ತಗಿನ ಬೆಡ್, ದಪ್ಪ ಹೊದಿಕೆ, ಎಲ್ಲಾ ಇರ್ತಾ ಇತ್ತು.'' ಸೋಮಣ್ಣ ಮನೆಯ ಸುಪ್ಪತ್ತಿಗೆಯನ್ನು ನೆನಪಿಸಿಕೊಂಡ.

''ಹೌದು, ಏನು ಮಾಡೋದು. ಸಂಘಟನೆ ಅಂದ್ರೆ ಕಷ್ಟ ಬರ್ಲೇ ಬೇಕಲ್ವ?'' ರಾಯರು ತತ್ವಶಾಸ್ತ್ರ ನುಡಿದರು.

''ಹ್ಞೂ...'' ನೀರಸವಾಗಿ ಸೋಮಣ್ಣ ಉಸುರಿದ. ದನಿಯಲ್ಲಿ ಉತ್ಸಾಹ ಧ್ವನಿಸಲಿಲ್ಲ.

ಸ್ವಲ್ಪ ಹೊತ್ತು ಹಾಗೇ ಕಳೆಯಿತು. ಅಚಾನಕ್ಕಾಗಿ ಸೋಮಣ್ಣ ಧಿಗ್ಗನೆ ಎದ್ದು ಕುಳಿತ. ರಾಯರು 'ಏನು' ಎಂಬಂತೆ ತಲೆಯೆತ್ತಿದರು.

''ಹಸಿವೆ, ಜೋರು ಹಸಿವೆ!'' ಸೋಮಣ್ಣ ಬಡಬಡಿಸಿದ. ''ಮನೆಗೆ ಹೋಗಿ ಸ್ವಲ್ಪ ಏನಾದ್ರು ತಿಂದು ಬರ್ತೇನೆ. ಇಲ್ಲಿ ಹೇಗೂ ಈ ಹೊತ್ತಿನಲ್ಲಿ ಏನೂ ಸಿಗೋದಿಲ್ಲ.'' ಅಂತ ಹೇಳ್ಕೊಂಡು ಮಲಗಿದ್ದಲ್ಲಿಂದ ಎದ್ದು ಹೊರಟೇ ಬಿಟ್ಟ. ''ಈಗ ಬರ್ತೇನೆ, ರಾಯರೆ.'' ಅಂತ ಕೊನೇ ಡೈಲಾಗ್ ಹೊಡೆದು ಟೆಂಟ್ ಹೊರಗಿನ ಕತ್ತಲಲ್ಲಿ ಕರಗಿಹೋದ.

ಶ್ರೀಪತಿರಾಯರು ಮಗ್ಗಲು ಬದಲಿಸಿ ನಿದ್ರಿಸಲು ಪ್ರಯತ್ನಿಸಿದರು. ಎಷ್ಟು ಹೊತ್ತಾದರೂ ನಿದ್ದೆ ಬರಲಿಲ್ಲ. ಅವರಿಗೂ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ಹುಟ್ಟತೊಡಗಿದವು. ಏನೋ ಒಂಥರಾ ಮಧುರ ಯಾತನೆಯ ಅನುಭವ ಅವರಿಗೂ ಆಗತೊಡಗಿತು. ಯೋಚನೆಗಳನ್ನು ಹತ್ತಿಕ್ಕಿ, ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿ ಸೋಮಣ್ಣನ ಆಗಮನಕ್ಕಾಗಿ ಕಾಯುತ್ತಾ ನಿದ್ರಿಸಲು ಪ್ರಯತ್ನಿಸಿದರು.

ರಾತ್ರಿ ಇನ್ನೂ ಗಾಢವಾಗತೊಡಗಿತು. ಸೋಮಣ್ಣನ ಸುಳಿವೇ ಇಲ್ಲ. ರಾಯರು ಯೋಚನೆಗೆ ಬಿದ್ದರು. 'ಸೋಮಣ್ಣ ಎಲ್ಲಿ ಹೋದ?' ಈಗ ಏನು ಮಾಡುತ್ತಿರಬಹುದು ಎಂದು ಬೇರೆ ಬೇರೆ ಸಾಧ್ಯತೆಗಳ ಬಗ್ಗೆ ಊಹನೆ ಹರಿಸಿದರು.

ಇನ್ನೂ ಒಂದು ಕಾಲು-ಅರ್ಧ ಘಂಟೆ ಕಳೆದಿರಬಹುದು. ಮಧುರಯಾತನೆ ಜೋರಾಯಿತು. ಈಗ ಸೋಮಣ್ಣನ ಹಸಿವೆ ಅವರನ್ನೂ ಜೋರಾಗಿ ಕಾಡತೊಡಗಿತು. ತಡೆಯಲಾರದೆ ಒಮ್ಮೆಗೇ ಎದ್ದು ಕುಳಿತರು ಮತ್ತು ಕುಳಿತಲ್ಲಿಂದ ಎದ್ದು ಹೊರಟೇ ಬಿಟ್ಟರು, ಸೋಮಣ್ಣನಂತೆ ಹೋಗುವಾಗ ಯಾರ್ಯಾರನ್ನೋ ತುಳಿದುಕೊಂಡು ಹೋಗಿ ಟೆಂಟಿನಿಂದ ಹೊರಬಿದ್ದರು.

ಅವರ ತುಳಿತಕ್ಕೆ ಎಚ್ಚೆತ್ತ ಒಂದಿಬ್ಬರಿಗೆ ಮತ್ತೆ ನಿದ್ದೆ ಹತ್ತಲಿಲ್ಲ. ''ನಮಗೆ ಮನೆಯಲ್ಲಿ ಪತ್ನಿ ಜೊತೆ ಅಂತಹ ಹೇಳಿಕೊಳ್ಳುವಂತಹ ಸಮಸ್ಯೆ ಏನೂ ಇಲ್ಲ. ನಾವು ಈ ಸಂಘಟನೆಗೆ ಸೇರ್ಲೇಬೇಕು ಅಂತ ಏನೂ ಇರ್ಲಿಲ್ಲ. ಸುಮ್ನೆ ಶಂಭುವಿನ ಒತ್ತಾಯಕ್ಕೆ ಯಾಕಾದ್ರೂ ಸೆರ್ಕೊಂಡ್ವೋ, ಇಲ್ಲಿ ನಿದ್ದೆ ಬೇರೆ ಬರುವುದಿಲ್ಲ. ಅಂತೆಲ್ಲ ಶಂಭುವಿಗೆ ಮನದಲ್ಲೇ ಶಾಪ ಹಾಕುತ್ತಾ ನಿದ್ದೆಮಾಡಲು ಪ್ರಯತ್ನಿಸುತ್ತಾ ಇದ್ದರು.

ಶಂಭುವಿಗೆ ಗಾಢ ನಿದ್ದೆ. ಆತನಿಗೆ ಇದಾವುದರ ಅರಿವೂ ಇಲ್ಲ. ಶೋಷಣೆಯ ವಿರುದ್ಧ ಕಹಳೆ ಊದಿದ ತೃಪ್ತ ಮನೋಭಾವದಲ್ಲಿ ಚೆನ್ನಾಗಿ ನಿದ್ದೆ ಬಂದಿತ್ತು. ರಾತ್ರಿ ಟೆಂಟ್ ಒಳಗೆ ಆಗಾಗ್ಗೆ ಕೇಳುತ್ತಿದ್ದ ನಿದ್ದೆ ಬಾರದ ಗಂಡಂದಿರ ಹೊರಳಾಟ, ನರಳಾಟ, ಸರ ಸರ ಸದ್ದುಗಳೊಂದೂ ಆತನ ಗಮನಕ್ಕೆ ಬಂದಿರಲಿಲ್ಲ.

ಅಂತೂ ಇಂತೂ ರಾತ್ರಿ ಕಳೆಯಿತು. ಒಂದು ದಿನದ ಯಶಸ್ವಿ ಹೋರಾಟ ನಡೆಸಿದ ನಾಯಕ ಶಂಭು ವಿಜಯೀ ಭಾವದೊಂದಿಗೆ ಕಣ್ಣು ತೆರೆದು ನೋಡುತ್ತಾನೆ...... ಹೋರಾಟಗಾರರಲ್ಲಿ ಯಾರೊಬ್ಬನೂ ಅಲ್ಲಿ ಇರಲಿಲ್ಲ!! ಟೆಂಟ್ ಖಾಲಿ ಹೊಡೀತಾ ಇತ್ತು !!

ಸೋಜಿಗ

ದೊಡ್ಡ ಮರ
ಸಣ್ಣ ಬೀಜದಲ್ಲಿ!
ಅಖಂಡ ಬ್ರಹ್ಮಾಂಡ
ಬಿಂದು - ಮನದಲ್ಲಿ!
ಅನಂತ ಕಾಲ
ಕ್ಷಣದ ಬಸಿರಲ್ಲಿ!

- ಎನ್. ಪ್ರಕಾಶ್

Mailing Date
5th of every month
Mailled at Rajajinagar - PO

CPMG/KA/BGW-544/2009-2011
RNI-KAR-KAN / 2005/ 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 58/2, 2nd Main Road, Industrial Town, Rajajinagar, Bangalore - 560 010. PH : 4088 9999. Editor: M. SHIVAKUMAR